ಸ್ಥಾಪನೆ : ೧೮೯೩

ಜೀವನ ಶಿಕ್ಷಣ ಪತ್ರಿಕೆಯು

ಶತಮಾನೋತ್ಸವ ಬೆಳ್ಳಿ ಹಬ್ಬದ

ಪುಸ್ತಕ ಪ್ರದರ್ಶನ ೧೯೮೮



ಶತಮಾನೋತ್ಸವ ಬೆಳ್ಳಿ ಹಬ್ಬ

(ಎಸ್ಸೆಲ್ಸಿ ಬ್ಯಾಚ್ ೧೯೮೮)

ಪಿ. ಚನ್ನಬಸಪ್ಪನವರು.

(ಗುಬ್ಬಿ-ಗಲಗ)

ಸೇವಾ ಸಂಸ್ಥೆ

ಮಾರ್ಚ್ 1893

ಕನ್ನಡ ಶಾಲಾ ಪತ್ರಿಕೆ



ಶಿಕ್ಷಣ ಸಂತಸ

ಸರಕಾರಿ ಉಪಾಧ್ಯಾಯರ ತರಬೇತಿ ವಿದ್ಯಾಲಯ

ಡಿಪ್ಯೂಟಿ ಚನ್ನಬಸಪ್ಪ ವೃತ್ತ. ರೂಪ್ಸಿರೆಸ್ಟ್. ಧಾರವಾಡ

ಶ್ರೀ ಲಲಿ[illegible]ಚನ ಮಂದಿ
ಪತ್ರಿಂ. ಮೊರಬ. ಜಿ. ಧಾರವಾಡ.

ಪ್ರಯವಿದ್ಯಾಗುದುಪಯಸೆ[illegible]
ಬಯಸುತ್ತಂ ಪ್ರತಿವಸದಾವಿಗೊಲವಿಂವಿಚಿತ್ರಮಂ ಮುಸಿ॥
ನಯದಿಂದಿತ್ತಪಿಪ್ಪೋದುವರ್ಗೆಸಗುಣಂ ತೋರಲ್ಕೆಕೈಕೊಂಬುನೈ।
ದಯೆಯಿಂದೋಷವತಿದ್ದ ಪೇಳ್ವುದುಬುಧರ್ಜ್ಞಾನಾಭಿವೃದ್ಧಿಪ್ರದುರ್॥೧॥

ಪುಸ್ತಕ ೩ಲ.] ಜಾನೆವರಿ ೧೮೮೯. [ಸಂಚಿಕೆ ೧.

EDUCATIONAL INTELLIGENCE AND USEFUL NOTES.

ವಿದ್ಯಾಸುಧಾರಣಾ ಸಂಬಂಧವ ವೃತ್ತಾಂತಗಳು.

ಡಿಸಂಬರ ೧೯ೇ ತಾರೀಖಿನ ದಿವಸ ಸೆಂಟ ಮೇರೀ ಕಾಲೇಜಿನ ಬಕ್ಷಿಸ ಸಮಾರಂಭವಾಯಿತು. ಆ ವೇಳೆಗೆ ನಾವು ದಾವಜಸ್ಟೀಸ ಜೀಲಿ ದೊರೆಗಳು ಅಧ್ಯಕ್ಷಸ್ಥಾನವನ್ನು ಸ್ವೀಕರಿಸಿದ್ದರು. ಅವರು ಆ ಹೊತ್ತಿಗೆ ವಿದ್ಯಾರ್ಥಿಗಳಿಗೆ ಮಾಡಿದಂಥ ಉಪದೇಶದೊಳಗಿನ ಬಂದೆರಡು ಬಹು ಗಾಂಭೀರವನ ಮಾತುಗಳನ್ನು ಇಲ್ಲಿ ಹೇಳುತ್ತೇವೆ.

"ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿ ಇನಾಮುಗಳನ್ನು ಪೊರಿಕೆಸಿದಂಥ ವಿದ್ಯಾರ್ಥಿಗಳನ್ನು ನೋಡಿ ನಮಗೆ ಸಂತೋಷವಾಗುತ್ತಲಿದೆ. ಪರೀಕ್ಷೆಯಲ್ಲಿ ಪಾಸಾಗದೆ ಇದ್ದದ್ದರಿಂದ ಕೆಲವು ವಿದ್ಯಾರ್ಥಿಗಳಿಗೆ ಇನಾಮುಗಳು ಸಿಗಲಿಲ್ಲ. ಇಷ್ಟರಿಂದಲೇ ಅವರು ಅಸಂತೋಷ ಪಡುವ ಕಾರಣವಿಲ್ಲ. ಯಾಕಂದರೆ, ಅವರು ಮುಂದೆ ಸವ್ಯಕ್ಕೆ ಇನಾಮುಗಳನ್ನು ಹೊಂದಿರುವದಕ್ಕಿಂತ ಹೆಚ್ಚಿಗೆ ಕೀರ್ತಿಯನ್ನು ಪಡೆಯುವರೆಂಬ ನಂಬಿಗೆಯು ನಮಗುಂಟು. ಈ ಮಾತು ನಾವು ಸುಮ್ಮನೇ ಹೇಳುತ್ತೇವೆಂದು ಭಾವಿಸಬಾರದು. ಇದಕ್ಕೆ ಅನೇಕ ದೃಷ್ಟಾಂತಗಳನ್ನು ಕೊಡಬಹುದು. ಆವುಗಳಲ್ಲಿ ಬಂದೆರಡನ್ನು ಮಾತ್ರ ಈಗ ಹೇಳುತ್ತೇವೆ. ಇಂಗ್ಲಂಡದ ಈಗಿನ ಪ್ರಧಾನರಾದ ನಾಮದಾರ ಮಿ. ಗ್ಲ್ಯಾಡಸ್ಟನ್ನನ ಹೊ

ರೆಗಳು ಸರ್ ಎಲ್ಜಿನೇ ವರ್ಷ ಶಾಲೆಯಲ್ಲಿ ಅಭ್ಯಾಸ ಮಾಡುತ್ತಿರುವಾಗ್ಗೆ, ಅವರು ಬಹಳವಾಗಿ ತಮ್ಮ ವರ್ಗದಲ್ಲಿ ಎನೇ ನಂಬರು ಕಾದ್ದುಕೊಳ್ಳುತ್ತಿದ್ದರು. ಆದೇ ಹೊತ್ತಿಗೆ ಬೇರೆ ಇಬ್ಬರು ವಿದ್ಯಾರ್ಥಿಗಳು ಯಾವಾಗಲು ವರ್ಗದಲ್ಲಿ ಕೆಳಗೆಯೇ ಇರುತ್ತಿದ್ದರು. ಅವರಲ್ಲಿ ಒಬ್ಬನು ನಾಮದಾರ ಬ್ರೂಸನು. ಅಂದರೆ ಎಲ್ಜಿನ್ ಪ್ರಭುವು, ಇನ್ನೊಬ್ಬನು ಮಿ. ಹೋಪಸ್ಕಟನು. ಕೆಲವು ವರ್ಷಗಳ ತರುವಾಯ ಅವರು ಪರೀಕ್ಷೆಗೆ ಹೋದಾಗ್ಗೆ ಮಿ. ಬ್ರೂಸನು ಭಾಷಾವಿಷಯದಲ್ಲಿ ಎನೇ ನಂಬರೂ ಪಡೆದು ಇನಾಮು ದೊರಿಸಿಸಿದನು. ಆದೇ ಮೇರೆಗೆ ಮಿ. ಹೋಪಸ್ಕಟನು ಸಹ ಬ್ಯಾರಿಸ್ಟರ ಪರೀಕ್ಷೆಯಲ್ಲಿ ಎಲ್ಲರಿಗಿಂತ ಹೆಚ್ಚು ಗುಣಗಳನ್ನು ಪಡೆದು ಹೆಸರಾದನು. ಆಕ್ಸ್‌ಫರ್ಡ ಪಾಠಶಾಲೆಯಲ್ಲಿ ಅಭ್ಯಾಸ ಮಾಡುತ್ತಿದ್ದ ಮಿ. ಕ್ಯಾನಿಂಗನು ತನ್ನ ವರ್ಗದಲ್ಲಿ ನಡುಹಿನ ನಂಬರವನ್ನು ಬಿಟ್ಟು ಎಂದೂ ಮೇಲಕ್ಕೇರದೆ ಇದ್ದರೂ ಅವನು ಸಹ ಪರೀಕ್ಷೆಯ ಕಾಲಕ್ಕೆ ಭಾಷಾವಿಷಯಗಳ ಸಂಬಂಧವಾದ ಇನಾಮನ್ನು ಪಡೆದನು. ಮುಂದೆ ಇದೇ ಎಲ್ಜಿನ್ ಮತ್ತು ಕ್ಯಾನಿಂಗ ಪ್ರಭುಗಳು ಹಿಂದುಸ್ತಾನದ ಸರ್ವಾಧಿಪತಿಗಳಾಗಿ ನೇಮಿಸಲ್ಪಟ್ಟರು. ಇದರಿಂದ ತಿಳಿಯುವದೇನಂದರೆ:— ವಿದ್ಯಾರ್ಥಿಗಳು ಬಂದು ಮೇಳೆ ಪರೀಕ್ಷೆಯಲ್ಲಿ ತೇರ್ಗಡೆ ಹೊಂದದಿದ್ದರೆ ಅವೈರ್ಯ ಪಡುವದು ತಕ್ಕದ್ದಲ್ಲ. ಅವರು ಶಾಲೆಯಲ್ಲಿ ಮೇಲಿನ ನಂಬರು ಪಡೆಯದೆ ಇದ್ದರೂ, ತಮ್ಮ ಅಭ್ಯಾಸಕ್ರಮವನ್ನು ಮುಗಿಸಿದ ಮೇಲೆ ಕೈಕೊಂಡ ಉದ್ಯೋಗಗಳನ್ನು ಪ್ರಾಮಾಣಿಕತನದಿಂದಲೂ, ಸರಳ ವರ್ತನೆಯಿಂದಲೂ, ಆಸ್ಥೆಯಿಂದಲೂ ನಡಿಸಿದರೆ, ಅವರು ಬರಬರುತ್ತಾ ನಿಶ್ಚಯವಾಗಿ ಘನತೆಗೇರುವರು.” ಈ ಉಪದೇಶವನ್ನು ಪ್ರತಿಯೊಬ್ಬ ಮಾಸ್ತರನು ಲಕ್ಷದಲ್ಲಿಡಲಿಕ್ಕೆ ತಕ್ಕ ಹಾಗಿದೆ. ವಿದ್ಯಾರ್ಥಿ ದಶೆಯಲ್ಲಿ ಬಹಳ ಪ್ರಯಾಸವನ್ನು ಹೊಂದವಿದ್ದಾಗ್ಯೂ ಮುಂಚೆ ಕೆಲಸ ಕೈಕೊಂಡು ಆಸ್ಥೆಯಿಂ

ವಲೂ, ಚಾತುರ್ಯದಿಂದಲೂ, ದಕ್ಷತೆಯಿಂದಲೂ ತಮ್ಮ ಕೆಲಸವನ್ನು ಸಾಗಿಸಿದರೆ ಅವರು ಜನರಿಗೆ ಬರುವರು.

ಆರಿವೆಗಳ ಮೇಲೆ ಬಿದ್ದ ಮಸಿಯನ್ನು ತೆಗೆಯುವ ಉಪಾಯವು—ಈ ಕೆಲಸಕ್ಕೆ ಬತ್ತಿ ಕಾಗದಗಳಿಂದ ಬಹು ಪ್ರಯೋಜನವಾಗುತ್ತದೆ. ಇವು ಬಿಳಿಯವು ಇದ್ದರೆ ಮತ್ತೂ ಚೆನ್ನ ಬಳ್ಳೀದು. ಮಸಿಯು ಜಮುಖಾನೆ, ಛೋತರ, ಅಂಗಿ, ರುಮಾಲ ಮುಂತಾವುಗಳ ಮೇಲೆ ಬಿದ್ದ ಕೂಡಲೆ ಬತ್ತಿ ಕಾಗದಗಳಿಂದ ಅವನ್ನು ತಿರುತಿರುಗಿ ಬತ್ತಿ ಬರಿಸಬೇಕು. ಇತರಿಂದ ಮಸಿಯು ಬಹುಶಃ ಹೋಗುವದು. ಬಂದುಹೇಳೆ ತುಸು ಕಲೆಯುಳಿದರೆ, ಆ ಕಲೆಯ ಮೇಲೆ ತಿಳಿನೀರಿನ ಕೆಲವು ಹನಿಗಳನ್ನು ಬಿಟ್ಟು ಆ ಸ್ಥಳವನ್ನು ಒದ್ದೆ ಮಾಡಿ, ಪುನಃ ಮೊದಲಿನಂತೆ ಬತ್ತಿ ಕಾಗದಗಳಿಂದ ಬತ್ತಿ ಬರಿಸಬೇಕು. ಈ ಪ್ರಕಾರೆಗೆ ಎರಡು ಮೂರು ಸಾರಿ ಮಾಡಿದರೆ ಆ ಕಲೆಯು ಪೂರ್ಣವಾಗಿ ಹೋಗಿ ಆ ಸ್ಥಲವು ಮೊದಲು ಇದ್ದಂತೆ ಆಗುವದು.

ಈ ಭಾಗದ ಮುಲಶೀ ಪರೀಕ್ಷೆಯ ಪರಿಣಾಮವನ್ನು ಕೆಳಗೆ ಕಾಣಿಸಿರುತ್ತೇವೆ.

ಸೆಂಟರುಗಳು.	ಪರೀಕ್ಷೆಗೆ ಕೂತ ಸಂಖ್ಯೆ.		ಪಾಸಾದ ಸಂಖ್ಯೆ.		ಕೇಕಡಾ.	
	ಹಾಗ್ರೇ	ಹೀಗ್ರೇ	ಹಾಗ್ರೇ	ಹೀಗ್ರೇ	ಹಾಗೇ	ಹೀಗೇ
ಧಾರವಾಡ.	೨	೪೨೩	೧	೪೪	೫೦	೭೯
ಬೆಳಗಾಂವ.	೧೬	೬೯೪	೬	೪೪	೧೨	೧೬
ವಿಜಾಪುರ.	೩	೬೩೧	೩	೨೪	೪೦೪	೧೫
ಕ್ಯಾನರಾ.	೨೬	೧೫೪	೫	೪೪	೧೯೪	೨೨

ಈ ಪರೀಕ್ಷೆಯ ಸಂಬಂಧವಿಂದ ಕೆಲವು ಸೂಚನೆಗಳನ್ನು ಮುಂದಿನ ಸಂಚಿಕೆಯಲ್ಲಿ ಮಾಡುವೆವು.

ಮುಂಬಯಿಯಾ ಗ್ಯಾಝೆಟ್ಟಿನ ಕರ್ತರು ನಿಶಂಬರ ೫ನೇ ತಾರೀಖಿನ ಪತ್ರವಳ್ಳಿ ನಾಮದಾರ ಗವರ್ನರ ಸಾಹೇಬರು ಯುವಿಯರ್ಸ ಕಾಲೇಜಿನ ಬಕ್ಷಿಸ ಸಮಾರಂಭದ ಕಾಲಕ್ಕೆ ಮಾಡಿದ ಭಾಷಣವನ್ನು ಕುರಿತು ಬರೆಯುವದೇನಂದರೆ:—

ಯುವಿಯರ್ಸ ಕಾಲೇಜಿದ ವಿದ್ಯಾರ್ಥಿಗಳು ಸಮಾರಂಭಕ್ಕೆ ಬಂದ ಜನರ ಮುಂದೆ "ಜ್ಯೂಲಿಯಸ ಸೀಝರ" ಎಂಬ ನಾಟಕದ ಪ್ರವೇಶಗಳನ್ನು ಆಡಿ ತೋರಿಸಿದರು. ಅವರ ಭಾಷಣವನ್ನೂ ಅಭಿನಯಗಳನ್ನೂ ನೋಡಿ ಪ್ರೇಕ್ಷಕ ಸಮುದಾಯವು ಅನಂದ ಪಟ್ಟದ್ದಲ್ಲದೆ ನಾಮದಾರರು ಆ ವಿದ್ಯಾರ್ಥಿಗಳಿಗೆ ತಕ್ಕ ಪ್ರೋತ್ಸಾಹನವನ್ನು ಕೊಟ್ಟರು ಶುದ್ಧವಾಗಿಯೂ ಮತ್ತು ಸ್ಪಷ್ಟವಾಗಿಯೂ ಉಚ್ಚಾರಗಳೂ, ಉದ್ದವಾದ ಭಾಷಣಗಳನ್ನು ತಪ್ಪದಂತೆ ಸರಿಯಾಗಿ ನುಡಿಯುವ ಕ್ರಮವೂ ಉದಾಹರಣೀಯವಾಗಿರುತ್ತವೆಂತಲೂ ಹೇಳಿದರು. ಇಷ್ಟು ಪ್ರಶಂಸೆ ಹೊಂದಬೇಕಾದರೆ, ಮುಂಬಯಿ ವಿದ್ಯಾರ್ಥಿಗಳಿಗೆ ಬಂದಷ್ಟಿಂತ ಹೆಚ್ಚು ಭಾಷೆಗಳನ್ನು ಕಲಿಯುವನಕ್ಕಿರುವ ಅನುಕೂಲವು ಬಹು ಮೇಲಾದ ಕಾರಣವಾಗಿರುತ್ತದೆ. ಗವರ್ನರ ಈ ಅಭಿಪ್ರಾಯವು ಸರಿಯಾಗಿದ್ದಂತೆ ತೋರುತ್ತದೆ. ಬಂದಷ್ಟಿಂತ ಹೆಚ್ಚು ಭಾಷೆಗಳನ್ನು ಕಲಿಯುವ ಅನುಕೂಲವಿದ್ದ ಜನರು ಈ ಮಾತನ್ನು ಮರಿಯಲಾಗದು.

ನಾಮದಾರರು ಮಾಡಿದ ಉಪದೇಶವೂ ಗೌರವದ್ದದಿ. ಅದನ್ನು ಮುಂದಿನ ಸಂಚಿಕೆಯಲ್ಲಿ ಕೊಡುವೆವು.

ಅಭ್ಯಾಸಾತೆಯು ಇನಸ್ಪೆಕ್ಟರ ಜನರಲ್ಲರು ತಿಳಿಸುವದೇನಂದರೆ:—ಮಳೆಗಾಳಿಗಳನ್ನು ತಡೆಯುವ ಗುಣವೂ ಚಟುವಟಿಕೆಯೂ ಹುಡುಗರೆಗಳಲ್ಲಿ ಎತ್ತುಗಳಿಗಿಂತ ವಿಶೇಷವಾಗಿರುವದಲ್ಲ

ಪೆ ಅವು ಬೇಗನೆ ಬೆಳೆಯುತ್ತವೆ. ಅದನ್ನರಿಂದ ಅವು ಎತ್ತು ಕೋಣಗಳಿಗಿಂತ ಕೃಷಿಕರ್ಮಕ್ಕೆ ಹೆಚ್ಚು ಪ್ರಯೋಜನವಾಗಿಸಿ. ಎತ್ತುಗಳನ್ನು ಹೊಲದ ಕೆಲಸಕ್ಕೆ ಹಚ್ಚಲೇ ಬಾರದೆಂಬ ಅಭಿಪ್ರಾಯವಿಲ್ಲ; ಅವರೆ ಕುದುರೆಗಳು ಬಹಳವಾಗಿರುವ ಜಿಲ್ಲೆಗಳಲ್ಲಿ ಜನರು ಅವನ್ನು ಕೆಲಸಕ್ಕೆ ಹಚ್ಚಿದರೆ ಬಹಳ ಲಾಭವಾಗುವದು. ವಾಯವ್ಯಪ್ರಾಂತಕ್ಕೆ ಸೇರಿದ ಮಾತನ್ಪುರದ ಪತ್ತರವಿರುವ ಬಾಬೂಗಢವೆಂಬ ಡಿಪೋದಲ್ಲಿ ಯಾನತ್ತು ಹೊಲದ ಕೆಲಸಗಳು ಕುದುರೆ ದೇಸರಗತ್ತಿ ಕತ್ತಿಗಳಿಂದ ಮಾಡಿಸಲ್ಪಡುತ್ತವೆ. ಇಲ್ಲಿ ಈ ಸಂಬಂಧದ ಯಾವತ್ತು ಮಾಹಿತಿಯು ಸಿಗುವದು. ನಮ್ಮಲ್ಲಿ ಬಿಕ್ಕಲಿಗರು ಬಹುದಿವಸದಿಂದ ನಡೆಯುತ್ತ ಬಂದಂಥ ಸಂಪ್ರದಾಯವೇ ಮೇಲಾದರೆಂದು ತಿಳಿದು ಅವನ್ನೇ ಹಿಡುಕೊಂಡು ಕೂಡುವದು ಸರಿಯಲ್ಲ. ಅವರು ತಮ್ಮ ಬೇಸಾಯದ ಕೆಲಸದಲ್ಲಿ ಎದಷ್ಟು ಸುಧಾರಣೆ ಮಾಡುತ್ತಾ ಹೋಗಬೇಕು. ಬಹುಶಃ ಅವರ ಪ್ರಯತ್ನಕ್ಕೆ ಯಶ ಬರದಿದ್ದರೆ ಅವನ್ನು ಆಮೇಲೆ ಬಿಡುವದು ತಪ್ಪದಿಲ್ಲ.

ಗಂಗಾನದಿಯ ಪ್ರವಾಹವು ತನ್ನ ದಿಕ್ಕನ್ನು ಬಹಳಷ್ಟು ಬದಲಿಸಿದ್ದರಿಂದ, ಹಿಂದುಸ್ಥಾನ ಸರಕಾರದ ಅಲ್ಲಹಾಬಾದ ಮೇರೆಗ ವಾಯವ್ಯ ಪ್ರಾಂತಕ್ಕೆ ಸೇರಿದ ಗಾಜಿಪುರ ಜಿಲ್ಲೆಯ ೨೧ ಹಳ್ಳಿಗಳು ಬಂಗಾಲ ಇಲಾಖೆಯ ಪಟಾಬಾದ ಜಿಲ್ಲೆಗೆ ಸೇರಿಸಲ್ಪಟ್ಟವು.

ಲಾರ್ಡ ಅಲಿಂಗಟನನೆಂಬವನೊಬ್ಬ ಇಂಗ್ಲಂಡಿನ ಧನಿಕನು ಬಾಮು ಉಪವನದೊಳಗೆ ಅನೇಕ ಬಿಳಿಯ ಪ್ರಾಣಿಗಳನ್ನೇ ಇಟ್ಟಿರುತ್ತಾನೆ. ಬಿಳಿಯ ಅಲಿಗಳೂ, ಹಾರಿಣಗಳೂ, ಅಪುಗಳೂ, ಮಿಕ್ಕ ಪ್ರಾಣಿಗಳೂ ಅಲ್ಲಿ ಇರುತ್ತವೆ.

ಆ ಕಾರಣ ಅವಕ್ಕೆ "ಶ್ವೇತಕ್ಷೇತ್ರ" (white farm) ಎಂಬ ಹೆಸರು ಬಂದಿದೆ. ಮುಡ್ಡು ಹೆಚ್ಚಾಯಿತೆಂದರೆ ಇಂಥ ಆಟಗಳು ನಡೆಯುತ್ತವೆ. ಉದ್ಯೋಗ, ಸಾಹಸ, ಮುಂತಾದ ಗುಣಗಳೇ ಐಶ್ವರ್ಯಕ್ಕೆ ಕಾರಣವಾಗಿರುತ್ತವೆ. ನಮ್ಮ ಜನರು ಈ ಗುಣಗಳನ್ನು ಎಂದು ಪಡೆಯುವರು?

ಬಂಗಾಲ ಇಲಾಖೆಗೆ ಸೇರಿದ 'ಬಾಲಿ' ಎಂಬ ಊರಿನಲ್ಲಿ ಒಬ್ಬ ತೋಟಿಗನಿದ್ದಾನೆ. ಅವನಿಗೆ ಆರು ತಿಂಗಳ ಹಿಂದೆ ಹೊಗೆಬಂಡಿಯ ಮಾರ್ಗದಲ್ಲಿ ೫೦೦ ರೂಪಾಯಿಗಳ ಎರಡು ನೋಟುಗಳು ಸಿಕ್ಕಿದ್ದವು. ಕೂಡಲೆ ಅವನು ಅವುಗಳನ್ನು ಪೋಲೀಸರ ವಶಕ್ಕೆ ಕೊಟ್ಟನು. ಆರು ತಿಂಗಳಾದರೂ ಅವುಗಳ ಒಡೆಯನು ಗೊತ್ತು ಹತ್ತದ್ದರಿಂದ, ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ಅವನನ್ನು ಆ ಪ್ರಮಾಣಿಕನಾದ ತೋಟಿಗನಿಗೆ ಉಚಿತವಾಗಿ ಕೊಟ್ಟರು.

ಜಪಾನ ದೇಶದಲ್ಲಿ ಹುಡುಗರಿಗೆ ಎರಡೂ ಕೈಗಳಿಂದ ಬರೆಯಲಿಕ್ಕೆ ಕಲಿಸುತ್ತಾರೆ. ಈ ನಡತೆಯು ಮೇಲಾದದ್ದೆಂದು ಹೇಳುವ ಪ್ರಯೋಜನವಿಲ್ಲ.

ಉನೆಮುನ್ನೆನೆಂಬ ಒಬ್ಬ ವಿದ್ವಾಂಸನು ಕೆಲವು ದಿವಸಗಳ ಹಿಂದೆ 'ಜಪಮಾಲೆಯ' ಮೇಲೆ ತಾನು ಬರೆದಂಥ ಒಂದು ನಿಬಂಧವನ್ನು 'ಓರಿಯಂಟಲ್ ಕಾಂಗ್ರೆಸ' ಎಂಬ ಸಭೆಯ ಮುಂದೆ ಓದಿದನು. ಅದರಲ್ಲಿ ಅವನು ಜಪಮಾಲೆಗಳು ಕ್ರಿ. ಮು. ೨೦೦ ವರ್ಷಗಳ ಹಿಂದೆ ಹುಟ್ಟಿದವೆಂತಲೂ, ಸನ್ಯಾಸಿಗಳ ಗ್ರೀಕ ಮತ್ತು ರೋಮನ ದೇವಾಲಯಗಳಲ್ಲಿ ಉಪಯೋಗಿಸಲ್ಪಡುವ ಜಪಮಾಲೆಗಳು ಹಿಂದೂ ಜನರ ಜಪಮಾಲೆಗಳ ಅನುಕರಣವಾಗಿರುತ್ತವೆಂತಲೂ, ಯುರೋಪ

ಖಂಡದ ಜನರು ಪವಿತ್ರ ಯುದ್ಧಗಳ ಬೆನೆಯಿಂದ ಆಸಿಯಾ ಖಂಡಕ್ಕೆ ಹೋಗಿ ತಿರುಗಿ ಬರುವಾಗ್ಗೆ ಇವುಗಳನ್ನು ತಂದ ರೆಂತಲೂ ಹೇಳುತ್ತಾನೆ. ಪ್ರಚಾರದಲ್ಲಿರುವ ಸಂಗತಿಗಳ ಉತ್ಪತ್ತಿಯ ಬಗ್ಗೆ ಸೂಕ್ಷ್ಮ ವಿಚಾರ ಮಾಡಿ ನೋಡಿದರೆ, ಎಷ್ಟೋ ಗೌರವದ ಸಂಗತಿಗಳು ಹೊವಲು ಪೂರ್ವ ದೇಶಗಳಲ್ಲಿ ಹುಟ್ಟಿ ಬಳಿಕ ಪಶ್ಚಿಮ ದೇಶಗಳಿಗೆ ಬಯ್ಯಲ್ಪಟ್ಟರುತ್ತವೆಂದು ಕಂಡುಬರುತ್ತದೆ.

ಹೋವರ ಮತ್ತು ಕ್ಯಾಲೇ ಬಂದರಗಳ ನಡುವೆ ನಡೆಯುತ್ತಿರುವ ಬಂದು ಆಗಬೋಟಿನಲ್ಲಿ ಹೊನ್ನೆ ಹೊನ್ನೆ ವರ್ತಿಸಿದ ಬಂದು ಹೋಸವು ಪ್ರಸಿದ್ಧವಾಗಿರುತ್ತದೆ. ಅದು ಹ್ಯಾಗಂದರೆ:—ಆ ಪ್ರವಾಸಿಗಳಲ್ಲಿ ಬಳ್ಳೇ ಉಪತೊಡಿಗೆಗಳನ್ನು ಧರಿಸಿಕೊಂಡಂಥ ಬಬ್ಬ ಪ್ರಾಯದ ಸುಂದರಿಯು ಇದ್ದಳು. ಅವಳಿಗೆ ಜಲಪರ್ಯಟನವು ತಡೆಯುವಂತೆ ಆಗಿ, ಅವಳು ಬಮ್ಮಿಂದೊಮ್ಮೆ ಗಾಬರಿಗೊಂಡು ಸಂಕಟ ಪಡಲಿಕ್ಕೂ ನೆರಳುವವಕ್ಕೂ ಹತ್ತಿದಳು. ಅಷ್ಟರಲ್ಲಿ ಬಬ್ಬ ಪ್ರವಾಸಿಯು ಅವಳ ಹತ್ತರ ಬಂದು ಈ ಅಸ್ವಸ್ಥಿಗೆ ನನ್ನ ಹತ್ತರ ಬಂದು ಔಷಧವಿರುತ್ತದೆ, ಅದನ್ನು ನೀನು ತೆಗೆದುಕೊಂಡರೆ ಬೇಗನೆ ಗುಣವಾಗುವದು ಎಂದು ಹೇಳಿದನು. ಅದಕ್ಕೆ ಅವಳು ತುಸು ಸಂಶಯಪಟ್ಟು ಕಟ್ಟಕಡೆಗೆ ಆ ಔಷಧವನ್ನು ತೆಗೆದುಕೊಂಡಳು. ಆ ಔಷಧವು ಅವಳ ಗಂಟಲಿನಲ್ಲಿ ಇಳಿಯಿತೋ ಇಲ್ಲವೋ ಅಷ್ಟರಲ್ಲಿಯೇ ವರ್ತಿಸಿದ ಸೋಜಿಗದ ಸಂಗತಿ ಏನೆಂದರೆ:—ಅವಳು ಪೂರ್ಣ ಗುಣ ಹೊಂದಿ ಹೊವಲಿನಂತೆ ಮಾತಾಡಲೂ ನಗಲೂ ಹತ್ತಿದಳು. ಇವನ್ನು ಕಂಡು ಎಲ್ಲ ಪ್ರವಾಸಿಗಳು ಆ ಔಷಧದ ಗುಣಕ್ಕೆ ಆಶ್ಚರ್ಯಪಟ್ಟು, ಆ ಔಷಧವನ್ನು ಆ ಗೃಹಸ್ಥನಿಂದ ಕೊಂಡುಕೊಂಡರು. ತುಸು ಹೊತ್ತಿನಲ್ಲಿ ಅವನು ತನ್ನ ಬಳಿಯಲ್ಲಿದ್ದ ಎಲ್ಲ ಔಷಧ

ವನ್ನು ಮೊರಿಬಿಟ್ಟನು. ಆಗಬೋಟು ಜೋಪರಕ್ಕೆ ಹೋಗಿ ಮುಟ್ಟಿದ ಮೇಲೆ ಆ ಯುವತಿಯೂ ಆ ವೈದ್ಯನೂ ಬಂದರದ ಮೇಲೆ ಇಳಿದು ಬಬ್ಬರಕೈಯೊಬ್ಬರು ಹಿಡುಕೊಂಡು ಸಂತೋಷದಿಂದ ಮಾತಾಡುತ್ತ ಹೊರಟು ಹೋದರು. ಇದು ಗೌರಕಾಯಸ್ಥರ ಮೋಸವ ಬಂದು ಮಾದರಿಯು !!

SIR RAYMOND WEST ON HIGHER EDUCATION IN INDIA.

ಹಿಂದುಸ್ತಾನದೊಳಗಿನ ವರಿಷ್ಠ ಶಿಕ್ಷಣದ ಬಗ್ಗೆ ಸರ ರೇಮಂಡ ವೆಸ್ಟ ದೊರೆಗಳ ಅಭಿಪ್ರಾಯವು.

ಕಳೆದ ಸಪ್ಟಂಬರ ತಿಂಗಳಿನಲ್ಲಿ ಪ್ರಾಚ್ಯಭಾಷಾ ಕೋವಿದರ ಸಭೆಯು ಲಂಡನ ಪಟ್ಟಣದಲ್ಲಿ ನೆರೆದಿತ್ತು. ಆ ಸಭೆಯಲ್ಲಿ ನಾಮದಾರ ಸರ್ ರೇಮಂಡ ವೆಸ್ಟ ದೊರೆಗಳು "ಹಿಂದುಸ್ತಾನದೊಳಗಿನ "ವರಿಷ್ಠ ಶಿಕ್ಷಣವನ್ನು" ಕುರಿತು ತಾವು ಬರೆದಂಥ ಬಂದು ಮಹತ್ವದ ನಿಬಂಧವನ್ನು ಓದಿದರು. ಅವರೊಳಗಿನ ಮುಖ್ಯ ಮುಖ್ಯ ಮಾತುಗಳನ್ನು ಸಂಗ್ರಹಿಸಿ ನಮ್ಮ ಪಾಚಕರ ಸಲುವಾಗಿ ಇಲ್ಲಿ ಬರೆಯುತ್ತೇವೆ.—

"ಯಾವ ಜನರ ಪ್ರಾಚೀನ ಇತಿಹಾಸವೂ ಯಾವ ಜನರ ಗ್ರಂಥ ಸಮೂಹವೂ ನಿಮ್ಮ ಲಕ್ಷವನ್ನು ಬಹುವರ್ಷಗಳಿಂದ ಆಕರ್ಷಿಸಿಕೊಂಡಿರುವವೋ, ಯಾವ ಜನರಲ್ಲಿ ನೀವು ಕ್ರಿಯೋಜನಕರವಾದಂಥ ಯಥಾರ್ಥವಾದಂಥ ಜ್ಞಾನವನ್ನು ಹಬ್ಬುಗೊಳಿಸುವದಕ್ಕೆ ಮನಃಪೂರ್ವಕವಾಗಿ ಪ್ರಯತ್ನಪಡುತ್ತಿರುವಿರೋ, ಅಂಥ ಜನರ ವರಿಷ್ಠ ಶಿಕ್ಷಣದ ಸ್ಥಿತಿಯು ಹ್ಯಾಗಿದೆ ಎಂಬದನ್ನು ನಿಮಗೆ ತಿಳಿಸಿದರೆ, ಅದು ಅಪ್ರಾಸಂಗಿಕವಾದೀತೆಂದು ನಾನು ನೆನಸುವದಿಲ್ಲ. ಮನುಷ್ಯಜಾತಿಯ ವಿಚಾರಗಳಲ್ಲಿ ಇಂದಿನವರೆಗೆ ಆದಂಥ ತಿರ್ವುಪಾಟಿಗೆ ಜಂಬುದ್ವೀಪದ ನಿವಾಸಿಗಳಿಂದ ಬಹಳ ಸಹಾಯವಾಗಿರುವದಲ್ಲದೆ,

ಮಾನವನ ಅಯುಷ್ಯಕ್ರಮವೆಂಬ ಇವೊತ್ತಿಗೆ ಅಧಾರಭೂತವಾದ ಕಲ್ಪನೆ, ಮನೋವೃತ್ತಿ, ಇಚ್ಛೆ, ಸ್ನೇಹಪ್ರವೃತ್ತಿ ಮುಂತಾದವುಗಳ ತಿಳುವಳಿಕೆಗಳಿಗೆ ಸಹ ಇನ್ನು ಮುಂದೆ ಅವರಿಂದ ತಕ್ಕಮಟ್ಟಿಗೆ ಸಹಾಯವಾಗುವದೆಂಬ ಮಾತು ಅಸಂಭವನೀಯವಾದದ್ದಲ್ಲ. ಆ ದೇಶದೊಳಗಿನ ಜನರ ಬುದ್ಧಿಯನ್ನು ಊರ್ಜಿತ ಸ್ಥಿತಿಗೆ ತರುವದೂ ಅದಕ್ಕೆ ತಕ್ಕ ಮಾರ್ಗ ತೋರಿಸುವದೂ ಎಲ್ಲ ಜನರ ಕರ್ತವ್ಯವಾಗಿರುತ್ತದೆ. ಅದರಲ್ಲಿ ಆ ವಿಸ್ತೃತವಾದ ದೇಶದ ಕಲ್ಯಾಣಕ್ಕೂ ಕೀರ್ತಿಗೂ ಹೊಣೆಗಾರರಾಗಿರುವ ವಿಕ್ಟೋರಿಯಾ ಚಕ್ರವರ್ತಿನಿಯವರ ಪ್ರಜೆಗಳಿಗಂತು ಅದು ಬಿಡದ ಕೆಲಸ; ಅವರಾದರೂ ಈ ಕೆಲಸವನ್ನು ನಡಿಸೇ ಇರುತ್ತಾರೆ. ಅವರು ಈ ಕೆಲಸದಲ್ಲಿ ಈ ಹೊತ್ತಿನವರೆಗೆ ಹಟ್ಟಿದ ಪ್ರಯತ್ನಗಳ ಸಲುವಾಗಿ ಅವರನ್ನು ಹೊಗಳಿ, ಸವ್ಯಕ್ಕೆ ನಡೆಯುತ್ತಿರುವ ಶಿಕ್ಷಣ ಪದ್ಧತಿಯಲ್ಲಿ ಇರುವ ವ್ಯಂಗಗಳನ್ನು ತೋರಿಸಿ ಕೊಟ್ಟು, ಅವುಗಳನ್ನು ದೂರ ಮಾಡುವ ಇಚ್ಛೆಯನ್ನೂ ವಿದ್ಯಾಪ್ರಸಾರವನ್ನು ಸರಿಯಾಗಿಯೂ ನಿರಂತರವಾಗಿಯೂ ನಡಿಸುವ ಲವಲವಿಕೆಯನ್ನು ಜನರಲ್ಲಿ ಹುಟ್ಟಿಸುವದೇ ಮೇಲಾದ ಕೆಲಸವೆಂದು ಗ್ರಹಿಸಿ, ನಾನು ಈ ವಿಷಯವನ್ನು ಕೈಕೊಂಡಿರುತ್ತೇನೆ.

ನಾನು ಆರಿಸಿಕೊಂಡ ವಿಷಯಕ್ಕೂ ಹಿಂದುಸ್ತಾನದ ಸವ್ಯದ ಸ್ಥಿತಿಗೂ ಹೆಚ್ಚು ಸಂಬಂಧವಿರುತ್ತದೆ. ಪ್ರಾಚೀನ ಕಾಲದಲ್ಲಿ ವಿದ್ಯಾಪ್ರಸಾರದ ಸ್ಥಿತಿಯು ಅಲ್ಲಿ ಹ್ಯಾಗಿತ್ತು ಎಂಬುವನ್ನು ಹೇಳುವದು ಈಗಿನ ಕೆಲಸವಲ್ಲದಿದ್ದರೂ, ಮುಂದೆ ನಾನು ಪ್ರಸ್ತಾಪಿಸುವ ಮಾತುಗಳು ನಿಮಗೆ ಚನ್ನಾಗಿ ತಿಳಿಯಬೇಕೆಂಬ ಹೇತುವಿನಿಂದ ಆ ಸಂಬಂಧದ ಬಂದೆರಡು ಮಾತುಗಳನ್ನಷ್ಟೇ ಇಲ್ಲಿ ವಿವರಿಸುತ್ತೇನೆ.

ಹಿಂದುಸ್ತಾನದಲ್ಲಿ ಇಂತಿಂಥವರು ಇಂತಿಂಥ ಕೆಲಸಗಳನ್ನು ಮಾಡತಕ್ಕದ್ದೆಂಬ ವಿಷಯವಾಗಿ ಇರುವ ಶ್ರಮ ವಿಭಾಗದ ಕಟ್ಟಳೆಗಳು ಈಶ್ವರಪ್ರಣೀತವಾದವುಗಳೆಂದು ಬ್ರಾಹ್ಮಣ ಧರ್ಮಾನುಯಾಯಿಗಳು ಪ್ರಾಚೀನಕಾಲದಿಂದ ನಂಬುತ್ತಬಂದಿದ್ದಾರೆ. ಆರಂಭದಲ್ಲಿ ಈ ಕಟ್ಟಳೆಗಳು ಬಲು ಅನುಕೂಲತೆಯು ಸಲುವಾಗಿ ಮಾಡಲ್ಪಟ್ಟವು; ಆವರೆ ಬ್ರಾಹ್ಮಣರು ಅವಕ್ಕೆ ಬರಬರುತ್ತ ಧರ್ಮದ ಸ್ವರೂಪವನ್ನು ಕೊಟ್ಟರು. ವಿಶಿಷ್ಟ ಗುಣ ಧರ್ಮಗಳು ವಿಶಿಷ್ಟ ವ್ಯವಸಾಯಗಳಿಗೆ ಸಂಬಂಧವಾಗಿರುತ್ತವೆಂಬವಿಷ್ಟೇ ವಿಚಾರದಿಂದ ಬ್ರಾಹ್ಮಣರು, ಸದ್ಗುಣ ಮತ್ತು ಬುದ್ಧಿಯ ಪಕ್ವತೆ ಇವೆರಡೂ ಬ್ರಾಹ್ಮಣ ಜಾತಿಯಲ್ಲಿ ಹುಟ್ಟಿದವನಿಗೆಮಾತ್ರ ದೊರಕುತ್ತವೆಂದು ಗ್ರಹಿಸಿದರೇಹೊರ್ತು, ಅವು ಮನಸಿಗೆ ಅಗುವಂಥ ಸಂಸ್ಕಾರಗಳ ಫಲಗಳಾಗಿರುತ್ತವೆಂದು ತಮ್ಮ ಕನಸು ಮನಸುಗಳಲ್ಲಿ ಸಹ ನೆನಸಲಿಲ್ಲ. ಯುರೋಪ ಖಂಡದಲ್ಲಿ ಪ್ರತಿಯೊಬ್ಬನ ಬುದ್ಧಿಯನ್ನೂ ಕರ್ತೃತ್ವಶಕ್ತಿಯನ್ನೂ ಅತಂಕವಿಲ್ಲದೆ ಬೆಳೆಯಗೊಟ್ಟದ್ದರಿಂದ ಆಚಾರವಿಚಾರಗಳು ಸ್ವತಂತ್ರವಾಗಿ ಬೆಳೆದು ಬಲಗೊಂಡವು; ಆದರೆ ಹಿಂದುಸ್ತಾನದಲ್ಲಿ ವಿಚಾರ ಸ್ವಾತಂತ್ರ್ಯ ಮತ್ತು ಆಚಾರ ಸ್ವಾತಂತ್ರ್ಯ ಇವುಗಳು ಜಾತಿ ನಿಯಮಗಳೆಂಬ ಹಗ್ಗಗಳಿಂದ ಹತ್ತೆಯಾಗಿ ಕಟ್ಟಲ್ಪಟ್ಟದ್ದರಿಂದ, ಅವುಗಳಲ್ಲಿ ಸಂಕುಚಿತತ್ವವೂ ಅಪೈರ್ಯವೂ ಸೇರಿ, ಅವುಗಳ ಬೆಳವಣಿಗೆಯು ಕಟ್ಟಾಯಿತು.

ಪ್ರಾಚೀನಕಾಲದಲ್ಲಿ ವರಿಷ್ಠ ಶಿಕ್ಷಣವನ್ನು ಪಡೆಯತಕ್ಕವರು ಬ್ರಾಹ್ಮಣರೇ. ಉನ್ನತ ವಿಚಾರಗಳಿಗೂ ಶ್ರೇಷ್ಠವಾದ ನೀತಿಗೂ ಆಶ್ರಯಸ್ಥಾನವಾದರೂ ಅವರೇ. ಕನಿಷ್ಠ ಜ್ಞಾತಿಯ ಜನರು ಜ್ಞಾನ ಪರ್ವತಾರೋಹಣ ಮಾಡಲು ಪ್ರಯತ್ನಿಸಿದರೆ, ಅದು ಬಂದು ಹೊಡ್ಡ ತಪ್ಪುವಷ್ಟಕ್ಕಲ್ಲ

ಅನ್ನು ಬಯಸುವದು ಸಹ ಮಹತ್ಪಾಪವೆಂದು ಎಣಿಸಲ್ಪಟ್ಟಿತು. ಕಲಿತನ ತೋರಿಸುವದೂ ರಾಜ್ಯಭಾರ ಹಿಂಸಾದ ದೂ, ತಮ್ಮ ಕರ್ತವ್ಯಗಳಿಗೆ ಪ್ರತಿಕೂಲವಾದವುಗಳೆಂದು ಎಣಿಸಿ, ಬ್ರಾಹ್ಮಣರು ಅವುಗಳಿಗೆ ಕೈಹಾಕಲಿಲ್ಲ. ಆದದರಿಂದ ಕ್ಷತ್ರಿಯರಿಗೂ ಬ್ರಾಹ್ಮಣರಿಗೂ ವೈಮನಸ್ಸು ಬರಲಿಕ್ಕೆ ಮಾರ್ಗವೇ ಉಳಿಯಲಿಲ್ಲ; ಇಷ್ಟೇ ಅಲ್ಲ ಕ್ಷತ್ರಿಯರು ಈ ವಿದ್ಯಾಸಂಪನ್ನ ಬ್ರಾಹ್ಮಣರ ಶಿಷ್ಯರೂ, ಯಜಮಾನರೂ ಆಗುವದು ಭೂಷಣವೆಂದು ತಿಳಿಯುತ್ತಿದರು. ಅಧಿಕಾರ, ಮರ್ಯಾದೆ, ಐಶ್ವರ್ಯ ಮುಂತಾದವುಗಳ ಲವಲವಿಕೆಯು ಸಮ್ಯಕ್ಕೆ ಅನ್ಯಜ್ಞಾತಿಯವರಂತೆ ಬ್ರಾಹ್ಮಣರಲ್ಲಿ ಸಹ ತಲೆದೋರಿದರೂ, ಪೂರ್ವ ಕಾಲದಲ್ಲಿ ಅದು ಅವರಲ್ಲಿ ತೋರುತ್ತಿದ್ದಿಲ್ಲ. ಜ್ಞಾನಾರ್ಜನೆಯೇ ಅವರ ಮನೋಭೀಷ್ಟವಾಗಿತ್ತು. ಮನುಷ್ಯ ಸ್ವಭಾವದ ಅನುಭವವಾದರೂ ಅವರಿಗೆ ತಕ್ಕಷ್ಟು ಇದ್ದಿಲ್ಲ. ಆ ಕಾಲಕ್ಕೆ ರಾಜದಾಡಳಿತವು ರಾಜ್ಯದೊಳಗಿನ ಬಲಿಷ್ಠನಾದ ಪುರುಷನ ಇಚ್ಛೆಯಂತೆ ಸಾಗುತ್ತಿತ್ತೇ ಹೊರ್ತು ರಾಜ್ಯದೊಳಗೆ ಬೇರೆ ಬೇರೆ ಪಕ್ಷಗಳೂ, ಆಯಾ ಪಕ್ಷಕ್ಕೆ ಸೇರಿದ ಜನರ ರಾಜ್ಯದಾಡಳಿತದ ಬೇರೆ ಬೇರೆ ಕಲ್ಪನೆಗಳೂ, ಮೇಲಾಗುವ ಲವಲವಿಕೆಯಿಂದ ಅವರವರು ನಡಿಸುವ ಹಂಚಿಕೆಗಳೂ, ಇವೇ ಮೊದಲಾದ ಸಂಗತಿಗಳ ಸುದ್ದಿಯೇ ಆಗ್ಗೆ ಇದ್ದಿಲ್ಲ. ಆದದ್ದರಿಂದ ಇತಿಹಾಸಲೇಖನಕ್ಕೆ ಅವರ ಮನಸು ಹೋಗಲೇ ಇಲ್ಲ. ಅವರು ತಮ್ಮ ಕಾಲವೆನ್ನೆಲ್ಲ ಗಣಿತ, ತತ್ವಜ್ಞಾನ, ಕಾವ್ಯ ಮುಂತಾದ ಗಹನ ವಿಷಯಗಳಲ್ಲಿ ಕಳೆದು ತಮ್ಮ ಸಮಕಾಲೀನರಾದ ಯುರೋಪ ಖಂಡದ ಬಂಧುಗಳಿಗಿಂತ ಮೇಲಾದರು. ಪಾಠ ಮಾಡುವ ಮತ್ತು ಶಬ್ದಗಳನ್ನು ಕುರಿತು ದೀರ್ಘವಿಚಾರ ಮಾಡುವ ಅವರ ಬಹುವಿವಸದ ಸ್ವಭಾವದಿಂದ ಅವರಿಗೆ ಪ್ರಾಚೀನ

ವಿಚಾರಗಳ ಪರಿಚಯವಾಗದ್ದಿಲ್ಲದೆ ಹೆಚ್ಚಿಗೇನೂ ಫಲವಾಗಲಿಲ್ಲ. ಅವರ ಜ್ಞಾನಜ್ಯೋತಿಯು ಬಲಪಟ್ಟು ಬೆಳೆಯಲಿಲ್ಲ; ಅವರೂ ನಿಯಮಿತ ಪ್ರದೇಶದಲ್ಲಿ ತಕ್ಕಮಟ್ಟಿಗೆ ಹೊಳೆಯುತ್ತಿತ್ತು. ಆ ಕಾಲದ ಆರ್ಯ ವಿದ್ವಾಂಸರಿಗೂ ಯುರೋಪಿನ ಖಂಡದ ಸ್ಕೂಲಮೆನರಿಗೂ ಬಹಳ ಸಾಮ್ಯ ಉಂಟು. ಆರ್ಯ ಜ್ಞಾನದ ಹಬ್ಬುವಿಕೆಯು ಮುಸಲ್ಮಾನರು ಹಿಂದುಸ್ತಾನವನ್ನು ಅಭಿಯೋಗಿಸುವದಕ್ಕಿಂತ ಮೊದಲೇ ಕಟ್ಟಾಗಿತ್ತು, ಮತ್ತು ಈ ಯವನರ ಪ್ರಾಬಲ್ಯವಾದಂದಿನಿಂದಂತು ಅಪ್ಪಿತಪ್ಪಿ ಉತ್ಪನ್ನವಾದ ಪಂಡಿತನ ಬುದ್ಧಿವಿಕಾಸಕ್ಕೆ ಮಾರ್ಗವು ಉಳಿಯಲೇ ಇಲ್ಲ. ಬಂದು ಮೇಳೆ ಮಾರ್ಗ ಉಳಿದಿದ್ದರೂ ಪುರಾಣ ವಿಚಾರಗಳನ್ನು ತಿದ್ದಿ, ಮೂಢ ಶ್ರದ್ಧೆಯಿಂದ ಪುರಾಣಮಿತ್ಯೇವ ಸಾಧು ಸರ್ವಮ್ ಎಂಬ ಮಾಯೆಗೆ ಬಳಗಾದಂಥ ತಮ್ಮ ಜನರನ್ನು ಹೊಸ ಮಾರ್ಗಕ್ಕೆ ತರಲಿಕ್ಕೆ ಯೋಗ್ಯನಾದ ಗ್ಯಾಲಿಲಿಯೋ ಬೇಕನ್ನರಂಥ ವಿದ್ವನ್ಮಣಿಯು ಹುಟ್ಟುವ ಸಂಭವವು ಇದ್ದಿಲ್ಲ.

ಮುಸಲ್ಮಾನರ ಆಳಿಕೆಯಲ್ಲಿ ಮತ್ತು ಅದರ ತರುವಾಯದಲ್ಲಿ ಇದ್ದ ಆರ್ಯ ವಿದ್ಯೆಯ ಸ್ಥಿತಿಯು ರೋಮನ್ ರಾಜ್ಯದೊಳಗಿನ ಗ್ರೀಕವಿದ್ಯೆಯ ಸ್ಥಿತಿಗೆ ಸರಿಯಾಗಿ ಹೋಲುತ್ತದೆ. ಆ ಕಾಲಕ್ಕೆ ಪ್ರಾಚೀನ ವಿದ್ಯೆಯು ಅಭಿವೃದ್ಧಿ ಹೊಂದದೆ ಇದ್ದಕ್ಕಿದ್ದ ಹಾಗೆಯೇ ಉಳಿಯಿತು. ಪ್ರಾಚೀನ ಗ್ರಂಥಗಳನ್ನು ಟೀಕಿಸುವದೇ ವಿದ್ವತ್ತೆಯ ಕುರುಹು ಎಂದು ಆಗಿನವರು ಎಣಿಸುವರು. ಅವರು ವಿದ್ಯಾರ್ಜನ ಮಾಡಿದರೂ ಗತಾನುಗತಿಕತ್ವವನ್ನು ಬಿಟ್ಟು ಬೇರೆ ಬೇರೆ ಕೆಲಸಗಳಿಗೆ ಯಾರೂ ಕೈ ಹಾಕಲಿಲ್ಲ. ಹೊಸ ಕಲ್ಪನೆಗಳನ್ನು ಹುಟ್ಟಿಸುವ ಮತ್ತು ಪೂರ್ವ ಕಲ್ಪನೆಗಳನ್ನು ಸೂಕ್ಷ್ಮ ದೃಷ್ಟಿಯಿಂದ ವಿಚಾರಮಾಡುವ ಗೋಜಿಗೆ ಯಾರೂ ಹೋಗಲಿಲ್ಲ. ಇಷ್ಟಾದರೂ ಪೂರ್ವ

ಪರಂಪರಾಗತವಾದ ಬುದ್ಧಿವ್ಯಾಪಾರಲ್ಲಿ ವ್ಯವು ಮಾತ್ರ ಲಯ ಹೊಂದಲಿಲ್ಲ. ಅದು ಆಕುಂಚಿತವಾಗಿ ಪುನಃ ಭರದಿಂದ ಬೆಳೆಯಲಿಕ್ಕೆ ಸತ್ವವುಳ್ಳಂಥ ಹೊಸಜ್ಞಾನವೆಂಬ ನೀರಿನ ಪೂರೈಕೆಯು ಅದಕ್ಕೆ ಬೇಕಾಗಿತ್ತು. ಮನುಷ್ಯನ ವಿಷಯವಾಗಿಯೂ ಅವನ ಆಯುಷ್ಕ್ರಮದ ವಿಷಯವಾಗಿಯೂ ತಕ್ಕ ರೀತಿಯಿಂದ ವಿಚಾರ ಮಾಡುವ ಶಕ್ತಿಯು ಆರ್ಯ ವಿದ್ಯದಲ್ಲಿ ಉಳಿದಿದ್ದಿಲ್ಲ. ಎತ್ತ ನೋಡಿದರೂ ಸತ್ವವಿಲ್ಲದ ಧರ್ಮಗ್ರಂಥಗಳ ಮತ್ತು ವೈದ್ಯಾಚಾರಗಳ ಸಾಮ್ರಾಜ್ಯವೇ ಹಬ್ಬಿತ್ತು. ಈ ಪಾಶಗಳನ್ನು ಕಡಿದುಹಾಕಲಿಕ್ಕೆ ಬಂದು ಬಲವಾದ ಶಸ್ತ್ರವು ಬೇಕಾಗಿತ್ತು. ಅಂಥ ಶಸ್ತ್ರವು ಇಂಗ್ಲಿಷರಾಜ್ಯದಿಂದ ಮಾತ್ರ ಪ್ರಾಪ್ತವಾಯಿತು. ಇಂಗ್ಲಿಷಜನರ ಸಂಸರ್ಗವಾದ ಕೂಡಲೆ ವಿದ್ವಾಂಸರೂ ವಿಚಾರಿಗಳೂ ಆದ ಹಿಂದೂ ಜನರು ತಮ್ಮ ದೃಷ್ಟಿಯನ್ನು ಪಾಶ್ಚಿಮಾತ್ಯರ ವಿದ್ಯದಕಡೆಗೆ ತಿರುಗಿಸಿದರು. ಯುರೋಪಖಂಡದಲ್ಲಿ ವಿದ್ಯದ ಪುನರುಜ್ಜೀವನವಾದ ಕೂಡಲೆ ಅಲ್ಲಿಯ ಜನರು ಹೊಸ ಜ್ಞಾನವನ್ನು ಸ್ವೀಕರಿಸಿದಂತೆ ಹಿಂದೂ ಜನರು ಸಹ ಪಾಶ್ಚಿಮಾತ್ಯರ ಜ್ಞಾನವನ್ನು ಅಂಗೀಕರಿಸಿದ್ದರೆ, ಅವರ ಬುದ್ಧಿಯು ಬಂಧಮುಕ್ತವಾಗಿ ವಿಕಾಸ ಹೊಂದುತ್ತಿತ್ತು; ಆದರೆ ಆ ಕಾಲದ ಯುರೋಪದ ಸ್ಥಿತಿಗೂ ಇಂಗ್ಲಿಷ ಸಾಮ್ರಾಜ್ಯಾರಂಭಕಾಲದ ಹಿಂದುಸ್ಥಾನದ ಸ್ಥಿತಿಗೂ ಮಹದಂತರವಿತ್ತು. ವಿದ್ಯದ ಪುನರುಜ್ಜೀವನದ ಕಾಲಕ್ಕೆ ಯುರೋಪದೊಳಗಿನ ಜನರು ಇತ್ತಂಡಾಗಿ ಆಚಾರ ವಿಚಾರ ಮತ್ತು ಸ್ವಾತಂತ್ರ್ಯ ಇವುಗಳಿಗಾಗಿಯೇ ಒಬ್ಬರಿಗೊಬ್ಬರು ಬಡದಾಡುತ್ತಿದ್ದರು. ಕಲ್ಪನಾವೈಚಿತ್ರ್ಯವೇ ಈ ಕಲಹಗಳಿಗೆ ಕಾರಣವಾಗಿತ್ತು, ಆದ್ದರಿಂದ ಹಳೆ ಮತ್ತು ಹೊಸ ವಿದ್ಯಗಳನ್ನು ಒಟ್ಟುಗೂಡಿಸಿ ಅವುಗಳಿಂದ ತಮ್ಮ ಹಿತ ಸಾಧಿಸಿಕೊಳ್ಳುವದು ಅವರಿಗೆ ಸುಲಭವಾಯಿತು. ಆದರೆ ಹಿಂದುಸ್ತಾನದಲ್ಲಿ ಉನ್ನತ ಆಚಾರ ವಿಚಾರಗಳಿಗೂ ನಿತ್ಯದ ವ್ಯವ

ಹಾರಗಳಿಗೂ ಸಂಬಂಧವೇ ಕಡಿದು ಹೋಗಿತ್ತು. ಪ್ರಾಚೀನ ವಿದ್ಯೆಯಲ್ಲಿ ಅನ್ಯ ಜ್ಞಾತಿಯವರ ಪ್ರವೇಶವಾಗಬಾರದೆಂತಲೂ, ಅವನ್ನು ಪರೀಕ್ಷಿಸಿ ತಕ್ಕ ಏರ್ಪಾಡುಗಳನ್ನು ಮಾಡುವ ಮನಸು ಯಾರಿಗೂ ಆಗಬಾರದೆಂತಲೂ ಆ ವಿದ್ಯೆಯ ಮೇಲೆ ಧರ್ಮದ ಸೂಕ್ಷ್ಮಕಾವಲವನ್ನು ಇಟ್ಟಿದ್ದರು. ಆಕಾರಣ ಜನರು ಪಾಶ್ಚಿಮಾತ್ಯ ವಿದ್ಯೆಯನ್ನು ಇಂಗ್ಲಿಷ ಸಾಮ್ರಾಜ್ಯಾರಂಭವಲ್ಲಿ ಸಂತೋಷದಿಂದ ಸ್ವೀಕರಿಸಲಿಲ್ಲ. ಜೀರ್ಣದೆಶೆಯನ್ನು ಹೊಂದಿದ ಹಿಂದೂ ಶಾಸ್ತ್ರಗಳಿಂದಲೇ ತಮ್ಮ ಆತ್ಮಿಕ ಸಂಬಂಧವಾದ ಕೋರಿಕೆಯು ತೃಪ್ತಿ ಹೊಂದುವದೆಂದು ಗ್ರಹಿಸುವ ಅನೇಕ ಜನರನ್ನು ಈಗ್ಗೆ ಸಹಾ ಹಿಂದುಸ್ತಾನವಲ್ಲಿ ಕಾಣಬಹುದು. ಅವರಲ್ಲಿ ಅನೇಕರು ಸುಶಿಕ್ಷಿತರೂ ಇರುತ್ತಾರೆ. ಹಿಂದೂಜನರ ವಿಚಾರಗಳು ಈಗ್ಗೆ ಮೆಲ್ಲ ಮೆಲ್ಲಗೆ ಬದಲಾಗುತ್ತ ನಡೆದಿರುತ್ತವೆ; ಆದರೆ ಅವು ಪೂರ್ಣವಾಗಿ ಬದಲಾಗಬೇಕಾದರೆ, ಆರ್ವಾಚೀನ ವಿಚಾರ ರಹಸ್ಯವನ್ನು ಜನರು ಸಂತೋಷದಿಂದ ಸ್ವೀಕರಿಸುವ ಹಾಗೆ ಅನೇಕ ಉಪಾಯಗಳನ್ನು ಯೋಚಿಸಿ, ಮನಃಪೂರ್ವಕವಾಗಿ ಪ್ರಯತ್ನ ಪಡುವ ಸಾವಿರಾರು ಹಿಂದೂಜನರು ಹುಟ್ಟಲಿಕ್ಕೆ ಬೇಕು, ಹಳೆ ನುತ್ತು ಹೊಸ ವಿಚಾರಗಳನ್ನು ಸರಿಯಾಗಿ ಬುಟ್ಟುಗೂಡಿಸಲಿಕ್ಕೆ ಬೇಕು, ಅಂದರೆ ಅದರಿಂದ ಭಾವೀ ಸುಧಾರಣೆಗೆ ಯೋಗ್ಯವಾದಂಥ ಶಕ್ತಿಯು ಹುಟ್ಟುವದು.

METHODS OF TEACHING.

ಕಲಿಸುವ ಪದ್ಧತಿಗಳು.

(ಒರೆದು ಬಂದದ್ದು.)

ವ್ಯವಹಾರೀ ಅಪೂರ್ಣಾಂಕ.

ಅಧ್ಯಾಪಕನು—(ತನ್ನ ಕೈಯಲ್ಲಿ ಬಂದು ಲಿಂಬೀ ಹಣ್ಣನ್ನು ಹಿಡಿದು) ತಮ್ಮಾ, ನನ್ನ ಕೈಯೊಳಗೆ ನಿನದೆ ನೋಡು.

ವಿದ್ಯಾರ್ಥಿ—ಯು—ಲಿಂಬೀ ಹಣ್ಣು.

ಅಧ್ಯಾಪಕ—ಇವನ್ನು ನಾನು ಹೆಚ್ಚಿ ಹೋಳು ಮಾಡುತ್ತೇನೆ, ಎಷ್ಟು ಹೋಳು (ಭಾಗ) ಗಳಾಗುವವು?

ವಿದ್ಯಾರ್ಥಿ—ಎರಡು.

ಅಧ್ಯಾಪಕ—ಇವುಗಳಲ್ಲಿ ಯಾವ ಹೋಳು ದೊಡ್ಡದು ಕಾಣಿಸುತ್ತದೆ?

ವಿದ್ಯಾರ್ಥಿ—ಯಾವ ಹೋಳೂ ದೊಡ್ಡದಿಲ್ಲ, ಎರಡೂ ಅಷ್ಟಷ್ಟೇ ಅವೆ.

ಅಧ್ಯಾಪಕ—ಹಾಗಾದರೆ ಲಿಂಬೀ ಹಣ್ಣಿನಲ್ಲಿ ನಾನು ಎರಡು ಎಂಥ ಭಾಗಗಳನ್ನು ಮಾಡಿದೆನು?

ವಿದ್ಯಾರ್ಥಿ—ಸಮಭಾಗಗಳನ್ನು ಮಾಡಿದಿರಿ.

ಅಧ್ಯಾಪಕ—ಬಳ್ಳೀದು, ಇವುಗಳಲ್ಲಿ ಪ್ರತಿಯೊಂದು ಭಾಗಕ್ಕೆ ಏನು ಹೆಸರು?

ವಿದ್ಯಾರ್ಥಿ—ಅರ್ಧ ಭಾಗ ಎಂಬ ಹೆಸರು.

ಅಧ್ಯಾಪಕ—ಇವೆರಡೂ ಅರ್ಧ ಭಾಗಗಳನ್ನು ಕೂಡಿಸುತ್ತೇನೆ, ನೋಡು ಏನಾಗುವದು?

ವಿದ್ಯಾರ್ಥಿ—ಇಡಿ ಲಿಂಬೀ ಹಣ್ಣಾಗುವದು.

ಅಧ್ಯಾಪಕ—ಹಾಗಾದರೆ ಎಷ್ಟು ಅರ್ಧಗಳೆಂದರೆ ಒಂದು ಇಡೀ ವಸ್ತು?

ವಿದ್ಯಾರ್ಥಿ—ಎರಡು ಅರ್ಧಗಳೆಂದರೆ ಒಂದು ಇಡೀ ವಸ್ತು.

ಅಧ್ಯಾಪಕ—ಇವೆರಡೂ ಹೋಳುಗಳನ್ನು ಮತ್ತೆ ಹಚ್ಚು*

---

* ಇದಿ ಲಿಂಬೀ ಹಣ್ಣಿನಲ್ಲಿ ಹೀಗೇ ಬೇಕಾದಷ್ಟು ಸಮ ಭಾಗಗಳನ್ನು ಮಾಡುತ್ತಾ ಹೋಗ ಬಹುದೆಂದು ವಿದ್ಯಾರ್ಥಿಗಳಿಗೆ ಚನ್ನಾಗಿ ತಿಳಿಸಿ ಹೇಳಬೇಕು.

ತ್ತೀನಿ, ಈಗ ನೋಡು ಎಷ್ಟು ಹೋಳುಗಳಾ ದವು?

ವಿದ್ಯಾರ್ಥಿ—ನಾಲ್ಕು ಹೋಳುಗಳು.

ಅಧ್ಯಾಪಕ—ಇವುಗಳಲ್ಲಿ ಯಾವ ಹೋಳು ದೊಡ್ಡದದೆ?

ವಿದ್ಯಾರ್ಥಿ—ಯಾವದೂ ದೊಡ್ಡದಿಲ್ಲ, ನಾಲ್ಕೂ ಹೋಳು ಅಷ್ಟಷ್ಟೇ ಅವೆ.

ಅಧ್ಯಾಪಕ—ಹಾಗಾದರೆ ನಾನು ಲಿಂಬೀ ಹಣ್ಣಿನಲ್ಲಿ ನಾಲ್ಕು ಎಂಥ ಭಾಗಗಳನ್ನು ಮಾಡಿದೆನು?

ವಿದ್ಯಾರ್ಥಿ—ಸಮಭಾಗಗಳನ್ನು ಮಾಡಿದಿರಿ.

ಅಧ್ಯಾಪಕ—ಇವುಗಳಲ್ಲಿ ಪ್ರತಿಯೊಂದು ಭಾಗಕ್ಕೆ (ಹೋಳಿಗೆ) ಏನು ಹೆಸರು?

ವಿದ್ಯಾರ್ಥಿ—ಪಾವು, ಕಾಲು, ಗಿರ್ಧಾ, ಅಥವಾ ನಾಲ್ಕನೇ ಪಾಲು.

ಅಧ್ಯಾಪಕ—ಇವುಗಳಲ್ಲಿ ಎರಡು ಹೋಳುಗಳನ್ನು ಕೂಡಿಸುತ್ತೇನೆ, ಏನಾಯಿತು?

ವಿದ್ಯಾರ್ಥಿ—ಅರ್ಧ ಲಿಂಬೀ ಹಣ್ಣಾಯಿತು?

ಅಧ್ಯಾಪಕ—ಎಷ್ಟು ಗಿರ್ಧಗಳೆಂದರೆ ಬಂದು ಅರ್ಧ?

ವಿದ್ಯಾರ್ಥಿ—ಎರಡು ಗಿರ್ಧಗಳೆಂದರೆ ಬಂದು ಅರ್ಧ.

ಅಧ್ಯಾಪಕ—ಈಗ ಈ ನಾಲ್ಕೂ ಹೋಳುಗಳನ್ನು ಕೂಡಿಸುವೆನು, ಏನಾಯಿತು?

ವಿದ್ಯಾರ್ಥಿ—ಪುನಃ ಇಡೀ ಲಿಂಬೀ ಹಣ್ಣಾಯಿತು.

ಅಧ್ಯಾಪಕ—ಅಂದಬಳಿಕ ಎಷ್ಟು ಗಿರ್ಧಗಳೆಂದರೆ ಬಂದು ಇಡಿ ವಸ್ತು ಹೇಳು?

ವಿದ್ಯಾರ್ಥಿ—ನಾಲ್ಕು ಗಿರ್ಧಗಳೆಂದರೆ ಬಂದು ಇಡೀ ವಸ್ತು.

ಅಧ್ಯಾಪಕ—(ಆ ನಾಲ್ಕೂ ಹೋಳುಗಳನ್ನು ಮೇಜಿನಮೇಲಿಟ್ಟು, ಆ ಮೇಲೆ ಅವುಗಳಲ್ಲಿ ಬಂವನ್ನು

ತನ್ನ ಕೈಯಲ್ಲಿ ಹಿಡಿದು) ನನ್ನ ಕೈಯಲ್ಲಿ ಎಷ್ಟು ಹೋಳು ಆವೆ?

ವಿದ್ಯಾರ್ಥಿ—ಬಂದು ಹೋಳು.

ಅಧ್ಯಾಪಕ—ಇದು ಇಡೀ ಲಿಂಬೀ ಹಣ್ಣಲ್ಲವೋ?

ವಿದ್ಯಾರ್ಥಿ—ಇಡಿ ಲಿಂಬೀಹಣ್ಣು ಹ್ಯಾಗಾದೀತು?

ಅಧ್ಯಾಪಕ—ಹಾಗಾವರೆ ಮತ್ತೆಷ್ಟು ಆದೆ?

ವಿದ್ಯಾರ್ಥಿ—ಇಡೀ ಲಿಂಬೀಹಣ್ಣಿನ ನಾಲ್ಕನೇ ಪಾಲು ಅಂದರೆ ಗಿರ್ದವದೆ.

ಅಧ್ಯಾಪಕ—(ಇಡಿ ಅಲ್ಲದ ವಸ್ತುವಿಗೆ ಅಪೂರ್ಣ ವಸ್ತು ಅನ್ನುವರೆಂದು ಹೇಳಿಕೊಟ್ಟು) ನನ್ನ ಕೈಯಲ್ಲಿರುವ ಈ ಬಂದು ಹೋಳಿಗೇನೆನ್ನಬೇಕು?

ವಿದ್ಯಾರ್ಥಿ—ಅಪೂರ್ಣ ವಸ್ತು ಅನ್ನಬೇಕು.

ಅಧ್ಯಾಪಕ—ಅದ್ಯಾಕೆ?

ವಿದ್ಯಾರ್ಥಿ—ಅಮ ಇಡಿ ಅಲ್ಲವ್ದರಿಂದ.

ಅಧ್ಯಾಪಕ—ಈ ಪೋಜಿನ ಮೇಲಿನ ಇನ್ನೊಂದು ಹೋಳನ್ನು ತೆಗೆದುಕೊಳ್ಳುವೆನು, ಈಗ ನನ್ನ ಕೈಯಲ್ಲಿ ಎಷ್ಟು ಹೋಳುಗಳಾದವು ಹೇಳು?

ವಿದ್ಯಾರ್ಥಿ—ಎರಡು ಹೋಳುಗಳು.

ಅಧ್ಯಾಪಕ-ಇವೆರಡೂ ಹೋಳುಗಳನ್ನು ಕೂಡಿಸಿ ಹಿಡಿಯುತ್ತೇನೆ, ಈಗ ಇಡೀ ಲಿಂಬೀಹಣ್ಣಾಯಿತೋ?

ವಿದ್ಯಾರ್ಥಿ—ಆಗಲಿಲ್ಲ.

ಅಧ್ಯಾಪಕ—ಹಾಗಾದರೆ ಏನಾಯಿತು?

ವಿದ್ಯಾರ್ಥಿ—ಅರ್ಧ ಲಿಂಬೀಹಣ್ಣಾಯಿತು.

ಅಧ್ಯಾಪಕ—ಅರ್ಧ ಲಿಂಬೀ ಹಣ್ಣಿಗೆ ಅಥವಾ ಎರಡು ಹೋಳು ಕೂಡಿ ಆದ ಈ ವಸ್ತುವಿಗೆ ಎಂಥ ವಸ್ತು ಅನ್ನಬೇಕು?

ವಿದ್ಯಾರ್ಥಿ—ಅಪೂರ್ಣ ವಸ್ತುವೆಂದೆನ್ನಬೇಕು.

ಅಧ್ಯಾಪಕ—ಅದ್ಯಾಕೆ?

ವಿದ್ಯಾರ್ಥಿ—ಅವೆರಡೂ ಹೋಳು ಕೂಡಿಸುವದರಿಂದ ಇಡೀ ಲಿಂಬೇಹಣ್ಣಾಗಲಿಲ್ಲ.

ಅಧ್ಯಾಪಕ—ಇವೆರಡೂ ಹೋಳುಗಳಲ್ಲಿ ಇನ್ನೊಂದು ಹೋಳನ್ನು ಕೂಡಿಸುತ್ತೇನೆ, ಈಗ ಇಡೀ ಲಿಂಬೇಹಣ್ಣಾಯಿತೋ?

ವಿದ್ಯಾರ್ಥಿ—ಈಗಾವರೂ ಆಗಲಿಲ್ಲ.

ಅಧ್ಯಾಪಕ—ಹಾಗಾದರೆ ಮೂರು ಹೋಳು ಕೂಡಿ ಅದಂಥ ಈ ವಸ್ತುವಿಗೆ ಎಂಥ ವಸ್ತು ಅನ್ನಬೇಕು?

ವಿದ್ಯಾರ್ಥಿ—ಇವಕ್ಕೂ ಅಪೂರ್ಣ ವಸ್ತುವೆಂದೆನ್ನಬೇಕು.

ಅಧ್ಯಾಪಕ—ಅದ್ಯಾಕೆ?

ವಿದ್ಯಾರ್ಥಿ—ಈ ಮೂರೂ ಹೋಳು ಕೂಡಿ ಇಡೀ ಲಿಂಬೇಹಣ್ಣಾಗಲಿಲ್ಲ.

ಅಧ್ಯಾಪಕ—ಅಂದಬಳಿಕ ಅಪೂರ್ಣವಸ್ತು ಯಾತಕ್ಕೆ ಅನ್ನಬೇಕೆಂಬದು ನಿನಗೆ ಗೊತ್ತಾಯಿತೋ?

ವಿದ್ಯಾರ್ಥಿ—ಹೌದು, ಗೊತ್ತಾಯಿತು.

ಅಧ್ಯಾಪಕ—ಹಾಗಾದರೆ ಯಾತಕ್ಕೆ ಅನ್ನಬೇಕು ಹೇಳು.

ವಿದ್ಯಾರ್ಥಿ—ಇಡಿ (ಪೂರ್ಣ) ವಸ್ತುವಿನ ಬಂದು ಭಾಗಕ್ಕಾಗಲಿ, ಅಂಥ ಹಲವು ಭಾಗಗಳಿಗಾಗಲಿ ಇಲ್ಲವೆ ಸ್ವಲ್ಪದರಲ್ಲಿ ಹೇಳಬೇಕಾದರೆ ಇಡೀ ಅಲ್ಲದ ವಸ್ತುವಿಗೆ ಅಪೂರ್ಣ ವಸ್ತು ಎಂಬ ಹೆಸರು.

ಅಧ್ಯಾಪಕ—ಬಳ್ಳೀದು, ಮೇಜಿನ ಮೇಲೆ ಇನ್ನೊಂದು ಹೋಳು ಉಳಿದದೆ, ಅದನ್ನೂ ತೆಗೆದು

ಕೊಳ್ಳುತ್ತೇನೆ. ಈಗ ನನ್ನ ಕೈಯಲ್ಲಿ ಬಟ್ಟಗೆ ಎಷ್ಟು ಹೋಳುಗಳಾದವು?

ವಿದ್ಯಾರ್ಥಿ—ನಾಲ್ಕು ಹೋಳುಗಳು.

ಅಧ್ಯಾಪಕ—ಈ ನಾಲ್ಕೂ ಹೋಳುಗಳನ್ನು ಕೂಡಿಸುತ್ತೇನೆ, ಇನ್ನಾವರೂ ಇಡಿ ಲಿಂಬೀಹಣ್ಣಾಯಿತೋ ಇಲ್ಲವೋ?

ವಿದ್ಯಾರ್ಥಿ—ಈಗ ಮಾತ್ರ ಆಯಿತು.

ಅಧ್ಯಾಪಕ—ಇಡಿ ಲಿಂಬೀಹಣ್ಣಿಗೆ (ಪದಾರ್ಥಕ್ಕೆ) ಎಂಥ ವಸ್ತು ಅನ್ನಬೇಕೆಂಬುವದು ನಿನಗೆ ಗೊತ್ತಿರಬಹುದು.

ವಿದ್ಯಾರ್ಥಿ—ಸೈ, ಅಂಥ ಪದಾರ್ಥಕ್ಕೆ ಪೂರ್ಣವಸ್ತು ಅನ್ನುವರು.

ಅಧ್ಯಾಪಕ—ಅಂದಮೇಲೆ ನನ್ನ ಕೈಯೊಳಗಿರುವ ಈ ಇಡೀ ಲಿಂಬೀಹಣ್ಣಿಗೆ ಏನು ಅನ್ನಬೇಕು?

ವಿದ್ಯಾರ್ಥಿ—ಪೂರ್ಣ ವಸ್ತುವೆಂದೆನ್ನಬೇಕು.

ಅಧ್ಯಾಪಕ—ಪೂರ್ಣ ವಸ್ತುಗಳನ್ನು ಅಂಕಿಗಳಿಂದ ಬರೆಯುವ ತೋರಿಸಲಿಕ್ಕೆ ನೀನು ಬಲ್ಲಿಯಾ?

ವಿದ್ಯಾರ್ಥಿ—ಹೌದು, ಬಲ್ಲೆನು.

ಅಧ್ಯಾಪಕ—ಹಾಗಾದರೆ ನಾನು ಬಂದೆರಡು ಪ್ರಶ್ನೆಗಳನ್ನು ಮಾಡುತ್ತೇನೆ, ಹೇಳು ನೋಡುವ.

ವಿದ್ಯಾರ್ಥಿ—ಒಳ್ಳೇದು, ಮಾಡಿರಿ.

ಅಧ್ಯಾಪಕ—(ತನ್ನ ಕೈಯಲ್ಲಿ ಬಂದು ಲಿಂಬೀಹಣ್ಣನ್ನು ಹಿಡಿದು) ನನ್ನ ಕೈಯಲ್ಲಿ ಎಷ್ಟು ಲಿಂಬೀಹಣ್ಣುಗಳಿವೆಂಬುವನ್ನು ಅಂಕಿಯಿಂದ ಬರೆದು ತೋರಿಸು.

ವಿದ್ಯಾರ್ಥಿ—ಕರೀ ಹಲಿಗೆಯ ಮೇಲೆ (೧) ಬಂದು ಅಂಕೆಯನ್ನು ಬರೆಯುತ್ತಾನೆ.

ಅಧ್ಯಾಪಕ—ಈ ಅಂಕೆಯು ಏನು ಸೂಚಿಸುತ್ತದೆ?

ವಿದ್ಯಾರ್ಥಿ—ನಿಮ್ಮ ಕೈಯಲ್ಲಿ ಬಂದು ಇಡೀ ಲಿಂಬೀ ಹಣ್ಣು ಆದೆ ಎಂದು ಸೂಚಿಸುತ್ತದೆ.

ಅಧ್ಯಾಪಕ—(ಆ ಮೇಲೆ ತನ್ನ ಕೈಯಲ್ಲಿ ನಾಲ್ಕು ಲಿಂಬೀಹಣ್ಣುಗಳನ್ನು ತಕ್ಕೊಂಡು) ಈಗ ನನ್ನ ಕೈಯಲ್ಲಿ ಎಷ್ಟು ಲಿಂಬೀಹಣ್ಣುಗಳವೆ? ಅಂಕೆಯಿಂದ ಬರೆದು ತೋರಿಸು.

ವಿದ್ಯಾರ್ಥಿ—(೪) ನಾಲ್ಕು ಅಂಕೆಯನ್ನು ಬರೆಯುತ್ತಾನೆ.

ಅಧ್ಯಾಪಕ—ಈ ಅಂಕೆಯು ಏನು ತಿಳಿಸುತ್ತದೆ?

ವಿದ್ಯಾರ್ಥಿ—ನಿಮ್ಮ ಕೈಯಲ್ಲಿ ನಾಲ್ಕು ಲಿಂಬೀಹಣ್ಣು ಆದೆ ಎಂದು ತಿಳಿಸುತ್ತದೆ.

ಮುಂದಕ್ಕೆ ನಡೆಯಲಿ.

CORRESPONDENCE.

ಪತ್ರ ವ್ಯವಹಾರವು.

ರಾವ ಸಾ. ಕನ್ನಡ ಶಾಲಾಪತ್ರಿಕೆಯ ಎಡಿಟರ ಧೊರೆಗಳವರ ಸನ್ನಿಧಿಗೆ. ವಿ. ವಿ. ಪ್ರಭುಗಳೇ, ವಿದ್ಯಾಖಾತೆಯು ಮಾಡಿಸಿ ಕನ್ನಡ ತ್ರೈವಲ್ಲೇಟರರಾದ ರಾವ ಸಾ. ರಾ. ಬ. ಕರಂಬೀಕರರವರು ಬಹು ಸರಸವಾಗಿ ಹೊಸದಾಗಿ ಭಾಷಾಂತರಿಸಿದ "ತಿಮ್ಮವಿಕೆಯೂ ಶಿಷ್ಟಣವೂ" ಎಂಬ ಗಂಭೀರವಾದ ಗ್ರಂಥವು ವಿರಾಜಿಸುತ್ತಿರುವದಷ್ಟೇ; ಆ ಗ್ರಂಥದ ಕ್ರಮವಿಧಿಯು, ಯಾವ ಮೂಲತತ್ವವನ್ನೂ ಗಾಢ್ಯವಿಷಯವನ್ನೂ ಬಿಡದೆ, ನನ್ನಿಂದಾದಷ್ಟು ಸುಬೋಧವಾಗಿ, ಮೂಲ ಗ್ರಂಥವಲ್ಲಿ ಪ್ರಯೋಗಿಸಲ್ಪಟ್ಟ ಸಾಂಕೇತಿಕ ಶಬ್ದಗಳನ್ನೇ ಬಹುಶಃ ಪ್ರಯೋಗಿಸಿ, ಪವ್ಯರೂಪದಿಂದ ಕನ್ನಡದಲ್ಲಿ ರಚಿ

ಸಲಿತ್ಸ ಮಾಡಿರುವೆನು. ಆ ಪದ್ಯಗಳನ್ನು ಕ್ರಮದಿಂದ ನಮ್ಮ ದೇಶ ಬಾಂಧವರಾದ ಬಾಲಾ ಗುರುಗಳ ಎದುರಿಗೆ ಹಾಕುವದಕ್ಕಾಗಿ ತಮ್ಮ ಸನ್ನಿಧಿಗೆ ಕಳಿಸಿದ್ದೀನೆ. ಆವು ಅವಲೋಕನದಲ್ಲಿ ಬಂದು, ಶಿಕ್ಷಕರಿಗೆ ಉಪಯೋಗವಾಗ ಬಹುದೆಂಬ ನನ್ನ ಉದ್ದೇಶವು ಪ್ರಭುಗಳವರ ಚಿತ್ತಕ್ಕೆ ಸಾರ್ಥಕವಾಗಿ ತೋರಿದರೆ, ದಯಮಾಡಿ ಬಾಲಪತ್ರದಲ್ಲಿ ಸ್ಥಳ ಕೊಡುವಿರೆಂದು ಪೂರ್ಣ ಆಶೆಯುಳ್ಳವನಾಗಿದ್ದೇನೆ.

ಪ್ರಸ್ತಾವನೆ—ಮತ್ತೇಭವಿ.॥ ಧರೆಯೊಳ್ ಶಿಕ್ಷಣಕಾ ರ್ಯವಲ್ಲವೆಯತಿಸ್ತುತ್ಯಾಸ್ಪದಂ ಪುಣ್ಯದಾ । ಗರಮಾಕಾರ ಣದಿಂ ಸುಶಿಕ್ಷಕಜನಂ ತತ್ಕಾರ್ಯಸ್ಯಪುಣ್ಯಮುಂ ॥ ನರೆ ಸಂಪಾದಿಪ ಮಾರ್ಗಮುಂ ಗುರುವರರ್ ತೋರ್ದರ್ಕರಂದೀ ಕರರ್ । ವರ ಕನ್ನಾಟಕದಲ್ಲಿ ರೂಪಿಸಿ ವಿಶಾಲ ಗ್ರಂಥಮಂ ಗುಂಪಿನಿಂ ॥ ೧ ॥ ಕಂ. ॥ ವಿದ್ಯಾಗುರು ನಿರ್ಮಿತಮುದು । ಪದ್ಯಾತ್ಮಕಮೆನಿಪುಮತ್ತೆ ಶಿಕ್ಷಕರವರ ॥ ಹೃದ್ಯ ಸುತತ್ವವ ಪರಿಸಲ್ । ಪದ್ಯಾತ್ಮಕವೂದಿವನ್ನು ಪೇಳಲ್ಬರಮಂ ॥ ೨ ॥.

ಲಗತಿರುವ ಕವಿತ್ವಗಳನ್ನು ಮೂಡಿದ ಕ್ರಮ.

(ಶಿಕ್ಷಣ ಪದ್ಧತಿ.)

೧ನೇ ಅಧ್ಯಾಯ.

(೧) ಪ್ರಾರಂಭದ ಅಭಿಪ್ರಾಯವು ಮಾಸ್ತರನಿಗೆ ಬಹು ಗಾ ರವವುಳ್ಳದ್ದು.

(೨) ಅದು (ಭಾವನೆಯು) ಬಹುಶಃ ಅಲ್ಪ ಸಂಗತಿಗಳಿಂದ ಉಂಟಾಗುತ್ತದೆ.

(೩) ವಿದ್ಯಾರ್ಥಿಗಳು ಅನುಕೂಲರಾಗಿ ನಡೆಯುವಂತೆ ಮಾ ಸ್ತರನು ಯಾವಾಗಲೂ ಯತ್ನಿಸತಕ್ಕದ್ದು.

(೪) ಬಳ್ಳೇ ತಿಳುವಳಿಕೆ, ವಿವೇಕ, ವ್ಯವಹಾರಜ್ಞಾನ, ನಿ

ರ್ಯ, ಸ್ಥಿರತ್ವ ಈ ಗುಣಗಳಿಂದ ಹುಡುಗರು ಮಾಸ್ತರನಿಗೆ ಹೊಕ್ಕು ವರು.

(೫) ಸಚ್ಛಿಷ್ಯಕರು ದಯಾಳುಗಳಾಗಿ ದೊಡ್ಡ ಮನಸ್ಸಿನಿಂದ ನಡಿಯಬೇಕು.

(೬) ವೃಥನಿಶ್ಚಯವವರೂ ಅಪರಾಧಿಗಳ ದಾಕ್ಷಿಣ್ಯವನ್ನು ಇಡವವರೂ ಎಂಬ ಭಾವವನ್ನು ವಿದ್ಯಾರ್ಥಿಗಳಲ್ಲಿ ಹುಟ್ಟಿಸಬೇಕು.

(೭) ಹುಡುಗರಿಗೆ ಸಂತೋಷವಾಗುವಂತೆ ವಿಚಾರದಿಂದ ವ್ಯವಸ್ಥೆಯನ್ನು ಊಟು ಮಾಡುತ್ತ ಹೋಗಬೇಕು. ಶಿಷ್ಯರತನ, ಸಿಡುಕತನಗಳನ್ನು ಎಷ್ಟ ಮಾತ್ರವೂ ವ್ಯಕ್ತ ಪಡಿಸಬಾರದು.

(೮) ಚಪಲವಟಿಕೆ, ಸ್ಥಿರತ್ವ ಎಂಬ ಗುಣಗಳು ಕಾರ್ಯಸಿದ್ಧಿಯನ್ನುಂಟು ಮಾಡಿ ಶಿಷ್ಯಕನನ್ನು ಹೆಸರಿಗೆ ತರುವವು.

(೯) ಶಿಷ್ಯಕರು ಬಣಿತೌಲು ತೋರಿಸದೆ ಸರಳಮಾರ್ಗದಿಂದಲೂ ಸ್ವಾಭಾವಿಕ ವೃತ್ತಿಯಿಂದಲೂ ಜನರ ಕೂಡ ಹಾಗೂ ಹುಡುಗರ ಕೂಡ ನಡಕೊಳ್ಳಬೇಕು.

(೧೦) ಡಾಂಭಿಕತನದಿಂದ ತನ್ನಲ್ಲಿಲ್ಲದ ಸದ್ಗುಣಗಳು ವ್ಯರ್ಥವಾಗಿ ಹೋಗುತ್ತವೆ. ಮತ್ತು ಇಂಥ ಮನುಷ್ಯನಲ್ಲಿ ನಿಜವಾದ ಸದ್ಗುಣಗಳು ಇರಲಾರವೆಂದು ಜನರು ಎಣಿಸುವರು.

(೧೧) ಅಕೃತ್ರಿಮಪ್ರೀತಿ, ಸ್ಥಿರತ್ವ, ತನ್ನಲ್ಲಿ ತನ್ನ ನಂಬಿಕೆ ಈ ಗುಣಗಳಿಂದ ಹುಡುಗರ ಮನಸ್ಸಿನಲ್ಲಿದ್ದ ಪ್ರಾಣಾಟವು ಅಡುಗುತ್ತದೆ.

ಎನೇ ಅಧ್ಯಾಯ.

(೧೨) ಯಾವ ಶಾಲೆಯಲ್ಲಿ ವ್ಯವಸ್ಥೆಯು ನೆಟ್ಟಗಿರುವದೋ, ಹುಡುಗರು ವೇಳೆಗೆ ಸರಿಯಾಗಿ ತಪ್ಪದೆ ತಮ್ಮ ತಮ್ಮ ಕೆಲಸಗಳನ್ನು ಮಾಡುವರೋ, ಅಭ್ಯಾಸದ

ವರ್ಗವು ಉಟಕ್ಕಿಂತ ಗೌರವವುಳ್ಳದ್ದಿಂದು ಎಣಿಸುವರೋ, ಸ್ವಚ್ಛಂದ ವೃತ್ತಿಗೆ ಅವಕಾಶವಿರದೆ ಕೆಲವು ನಿಬಂಧನೆಗಳು ಉಂಟೋ, ಪ್ರತಿಒಬ್ಬನು ತನ್ನ ಕೆಲಸವನ್ನು ತಾನೇ ಮಾಡುವನೋ, ಆ ಶಾಲೆಯಲ್ಲಿ ಸಂಪಾದಿಸಿದ ಜ್ಞಾನವು ಹುಡುಗರ ಸ್ವಂತದ್ದಾಗಿರುವದು.

(೧೩) ಟೀಚರ್ಸ ಮ್ಯಾನುಅಲ್—"ನಿಯಮಿತತನ, ಸರಲವರ್ತನ, ಸೃಷ್ಟಿ ನಿಯಮಾನುವೃತ್ತಿ, ಶಾಂತವಾದ ಪ್ರಯತ್ನ, ಪ್ರೀತಿ, ನ್ಯಾಯ, ಸದ್ಬುದ್ಧಿ ಸದುದ್ದೇಶಗಳ ಪ್ರೋತ್ಸಾಹನ, ಎಂಬ ಗುಣಗಳು ಶಾಲಾ ವ್ಯವಸ್ಥೆಯನ್ನು ಕಾಯುವವರಲ್ಲಿ ಸಾಧನಗಳಾಗಿವೆ.

(೧೪) ವಿದ್ಯಾರ್ಥಿಗಳಿಗೂ ಮಾಸ್ತರನಿಗೂ ಪ್ರೀತಿಯ ಬಳಕೆ ಇರಲಿಕ್ಕೇ ಬೇಕು.

(೧೫) ಯಾವನು ಸ್ವಕೀಯರ ಅಭಿಪ್ರಾಯಗಳನ್ನು ಎದುರಿಸಲರಿಯನೋ, ಯಾವನು ಸ್ವಪಕ್ಷದ ಹಾಳು ಭಿಡೆಯನ್ನು ಮೀರಲರಿಯನೋ, ಯಾವನು ತನ್ನ ಕೈಲಾಗದಿದ್ದರೂ ಬಣ್ಣ ಡಂಭಾಚಾರಕ್ಕಾಗಿ ಹೆಚ್ಚು ಹಣವನ್ನು ಖರ್ಚು ಮಾಡುವನೋ, ಯಾವನು ತನ್ನ ವ್ಯಾಪಾರ ಉದ್ಯೋಗಗಳ ಲಕ್ಷುಂಚಿತವಾದ ಸ್ವಾರ್ಥವುಳ್ಳ ಕಟ್ಟಳೆಗಳನ್ನು ಮುರಿದು ಸ್ವಾತಂತ್ರ್ಯವನ್ನು ಪಡೆಯಲಾರನೋ ಅವನಿಗೆ ಗೌರವವನ್ನು ಯಾರೂ ಕೊಡುವದಿಲ್ಲ.—ಫಿಚ್.

(೧೬) ಲಿಖಿತೆಯ ಸಾಮರ್ಥ್ಯವು ಸಚ್ಛಿಕ್ಷಕರ ಲಕ್ಷಣವಿರುತ್ತದೆ. ಇದರ ಅಂಕುರ ಮಾತ್ರ ಇದ್ದವರು ಅದನ್ನು ಅಭ್ಯಾಸದಿಂದ ಕೆಲಮಟ್ಟಿಗೆ ಕಲಿತುಕೊಳ್ಳಬಹುದು. ಆದರೆ ಈ ನೈಪುಣ್ಯಕ್ಕೆ ಏನೂ ಉಪಾಯವಿಲ್ಲೆಂದು

ಕ್ಕೈಮುಚ್ಚಿ ಕೊಂಡು ಕೂತರೆ, ಪೀಡಿತನವು ಮಾತ್ರ ವ್ಯಕ್ತವಾಗುವದು.

(೧೬) ತಮ್ಮ ತಪ್ಪುಗಳನ್ನು ಲಕ್ಷ್ಯದಲ್ಲಿಟ್ಟು ಪುನಃ ಅಂಥ ತಪ್ಪುಗಳಾಗದಂತೆ ಎಚ್ಚರಪಡುವದೇ ಕೀರ್ತಿಯನ್ನು ಹೊಂದುವ ರಾಜಮಾರ್ಗವು.

(೧೭) ಕಲಿಸುವ ಮೇಲಾವ ಪದ್ಧತಿಗಳನ್ನು ಯುಕ್ತವಾದ ದೃಷ್ಟಾಂತಗಳನ್ನು ವಿದ್ಯಾರ್ಥಿಗಳ ಮನಸ್ಸಿಗೆ ಸೊಗಸಾಗಿ ತಿಳಿಯುವಂತೆ ವಿಷಯಗಳ ವಿವರಿಸುವ ಬಳ್ಳೀ ಕ್ರಮಗಳನ್ನು ಶೋಧಿಸುತ್ತ ತಮ್ಮ ಕೆಲಸದಲ್ಲಿ ನಿಪುಣತೆಯನ್ನು ಸಂಪಾದಿಸಲಿಕ್ಕೆ ಎಷ್ಟು ಶ್ರೀಳೆಯನ್ನು ಕಳೆದರೂ ಅಡ್ಡಿಯಿಲ್ಲ.

(೧೯) ವರ್ಗದಲ್ಲಿ ಅವ್ಯವಸ್ಥೆಯಾದರೆ ತಕ್ಷಣಕ್ಕೆ ಪಾಠನಿಲಿಸಿ, ವ್ಯವಸ್ಥೆಯಾಗುವವರೆಗೆ ಪಾಠ ಬಂದ ಮಾಡಬೇಕು. ಅಂದರೆ ಕೂಡಲೆ ಹುಡುಗರು ಎಚ್ಚರಗೊಳ್ಳುವರು.

(೨೦) ತನ್ನಲ್ಲಿ ತನ್ನ ನಂಬಿಗೆ ಇರಬೇಕು.

(೨೧) ಗೊತ್ತು ಹಿಡಿ, ಹಿಂಬಾಲಿಸು, ಮುಂದಕ್ಕೆ ಬಯ್ಯಿ ಎಂಬ ಶಬ್ದಗಳಿಂದ ಹುಡುಗರನ್ನು ನಡಿಸಿಕೊಳ್ಳುವ ಕ್ರಮವು ಬಹು ಸುಲಭವಾಗಿ ತಿಳಿಯುತ್ತದೆ.

(೨೨) ಹಿಡಿದ ಕೆಲಸವನ್ನು ಕೊನೆಗಾಣಿಸುವೆನೆಂಬ ದೃಢವಾದ ನಂಬಿಗೆಯು ಆ ಕೆಲಸವನ್ನು ನಿಶ್ಚಯವಾಗಿ ಕೊನೆಗಾಣಿಸುತ್ತದೆ. ಇಲ್ಲದಿದ್ದರೆ ಇಲ್ಲ. ಸಂಶಯಾತ್ಮಾ ವಿನಶ್ಯತಿ.

(೨೩) ಫಲದ ಆಶೆ ಇರುವ ಮಟ್ಟಿಗೂ ಎಷ್ಟು ಧಾವತಿ ಪಡಿದರೂ ಶ್ರಮವೆನಿಸುವದಿಲ್ಲ. "ಕ್ಲೇಶಃ ಫಲೇನ ಪುನರ್ನವತಾಂ ವಿಧತ್ತೇ"

(ಮುಂದಕ್ಕೆ ನೋಡುವದು.)

ಶಾಲಾಪತ್ರಿಕೆ.

ಪದ್ಯಂ.

ಪ್ರಿಯವಿದ್ಯಾಗುರುವರ್ಯರುನ್ನತಿಕೆಯುಂ ಸಚ್ಛಿಕ್ಷಣೋತ್ಕರ್ಷಮುಂ ।
ಬಯಸುತ್ತುಂ ಪ್ರತಿವಾಸದಾದಿಗೊಲವಿಂದೀಪತ್ರಮಂ ಮುದ್ರಿಸಿ ॥
ನಯದಿಂದಿತ್ತಪೆವೋದುವರ್ಗಸುಗುಣಂ ತೋರಲ್ಕೆ ಕೈಕೊಂಬುದೈ ।
ದಯೆಯಿಂದೋಷವತಿದ್ದವೇಳ್ವುದುಬುಧರ್ಜ್ಞಾನಾಭಿವೃದ್ಧಿಪ್ರಿಯರ್॥೧॥

ಪುಸ್ತಕ ೨೮.] ಫೆಬ್ರುವರಿ ೧೮೮೩. [ಸಂಚಿಕೆ ೨.

EDUCATIONAL INTELLIGENCE AND USEFUL, NCTES.

ವಿದ್ಯಾಸುಧಾರಣಾ ಸಂಬಂಧದ ವೃತ್ತಾಂತಗಳು.

ಮುಂಬಯಿ ಇಲಾಖೆಯ ಹೋದವರ್ಷದ (೧೮೮೧-೮೨) ವಿದ್ಯಾಖಾತೆಯ ರಿಪೋರ್ಟು ಮೊನ್ನೆ ಮೊನ್ನೆ ಪ್ರಸಿದ್ಧವಾಗಿದೆ. ಅದರಿಂದ ತಿಳಿಯುವ ಮುಖ್ಯ ಮುಖ್ಯ ಸಂಗತಿಗಳು ಯಾವವೆಂದರೆ— ನಮ್ಮ ಇಲಾಖೆಯೊಳಗಿನ ಶಾಲೆಗಳಲ್ಲಿ, ಅಭ್ಯಾಸ ಮಾಡುವ ಗಂಡು ಹುಡುಗರ ಸಂಖ್ಯೆಯು ಹೋದ ವರ್ಷ ೪,೮೯,೧೮೩ ಇತ್ತು. ಈ ವರ್ಷ ೪,೯೯,೧೭೪ ಆಗಿರುತ್ತದೆ; ಮತ್ತು ಹೆಣ್ಣು ಮಕ್ಕಳ ಸಂಖ್ಯೆಯು ಹಿಂದಿನ ವರ್ಷ ೬೩,೯೦ ಇತ್ತು, ಈ ವರ್ಷ ೬೭,೪೩೦ ಆಗಿರುತ್ತದೆ. ಈ ಇಲಾಖೆಯಲ್ಲಿ ಯಾವತ್ತು ಪ್ರಕಾರದ ಸರಕಾರಿ ಖಾಸಗೀ ಶಾಲೆಗಳು ಕೂಡಿ ಹಿಂದಿನ ವರ್ಷ ೧೧,೯೬೭ ಇದ್ದವು, ಈ ವರ್ಷ ೧೦,೮೭೦ ಆಗಿರುತ್ತವೆ. ಸರಕಾರೀ ಶಾಲೆಗಳು ಹಿಂದಿನ ವರ್ಷ ೯,೩೦೪ ಖಾಸಗೀ ಶಾಲೆಗಳು ೨,೬೫೩ ಇದ್ದವು. ಈ ವರ್ಷ ಸರಕಾರೀ ಶಾಲೆಗಳು ೯,೫೦೧, ಖಾಸಗೀ ಶಾಲೆಗಳು ೨,೩೭೧ ಆಗಿರುತ್ತವೆ. ಹಿಂ

ದಿನೆ ವರ್ಷ ಕನಷ್ಠ ಪ್ರತಿಯು ದೇಶಭಾಷೆಯು ಸರಕಾರೀ ಶಾಲೆಗಳು ೪,೪೬೪ ವಿದ್ಯಾರ್ಥಿಗಳು ೩೫,೦೬೬ರಂ ಇದ್ದರು, ಈ ವರ್ಷ ಅನುಕ್ರಮವಾಗಿ ೯,೦೩೧ ಮತ್ತು ೩೫,೧೪,೮೪೩ ಇದ್ದಾರೆ.

ಈ ಇಲಾಖೆಯು ದಕ್ಷಿಣ ಭಾಗದಲ್ಲಿ ಜನಸಂಖ್ಯೆಯು ೬೯,೮೦,೩೫೩ ಇರುತ್ತದೆ. ಮತ್ತು ಯಾವತ್ತು ಪ್ರಕಾರದ ಶಾಲೆಗಳು ೭೩೪೧, ವಿದ್ಯಾರ್ಥಿಗಳು ೧೪೪೪೯೭೦ ಇರುವರು. ಕನಿಷ್ಠ ಪ್ರತಿಯು ಗಂಡು ಹುಡುಗರ ಶಾಲೆಗಳು ೨,೭೪೧ ಮತ್ತು ವಿದ್ಯಾರ್ಥಿಗಳೂ ವಿದ್ಯಾರ್ಥಿನಿಯರೂ ಕೂಡಿ ೧,೮೯,೪೬೬ ಇದ್ದಾರೆ. ಹೆಣ್ಣು ಮಕ್ಕಳ ಶಾಲೆಗಳು ೧೩೫, ವಿದ್ಯಾರ್ಥಿನಿಯರು ೩,೬೭೯ ಇರುವರು. ಗಂಡು ಹುಡುಗರ ಶಾಲೆಗಳಿಗೆ ಹೋಗುವ ಹೆಣ್ಣು ಮಕ್ಕಳ ಸಂಖ್ಯೆಯು ೩,೫೧೫ ಇರುವದು. ಈ ವರ್ಷ ನಮ್ಮ ದಕ್ಷಿಣ ಭಾಗದಲ್ಲಿ ಒಟ್ಟಿಗೆ ೭೧ ಶಾಲೆಗಳು ಕಡಿಮೆಯಾದಾಗ್ಯೂ ವಿದ್ಯಾರ್ಥಿಗಳ ಸಂಖ್ಯೆಯು ಕಡಿಮೆಯಾಗಿಲ್ಲ. ೧೦ರಿಂದ ಹೆಚ್ಚೇ ಆಗಿರುತ್ತದೆ.

ಮುಂಬಯಿ ಇಲಾಖೆಯೊಳಗೆ ವಿದ್ಯಾಖಾತೆಯ ಒಟ್ಟು ಖರ್ಚು* ೬೨,೪೦, ೭೦೪ ರೂಪಾಯಿ ಆಗಿರುತ್ತವೆ. ಈ ರಕಮಿನೊಳಗಿಂದ ಫೀ ಹಣ ೧೪,೩೬,೦೯೦ ರೂಪಾಯಿ. ಮ

---

* ಸರಕಾರದ ಖರ್ಚಿನಿಂದಲೇ ನಡೆಯುವ ಶಾಲೆಗಳ ಬಗ್ಗೆ ೪,೭೧,೧೦೩ ರೂ. ಲೋಕಲ್‌ಬೋರ್ಡ ಶಾಲೆಗಳ ಬಗ್ಗೆ ೧೪,೧೨,೦೭೪ ರೂ. ಮ್ಯುನಿಸಿಪಲ್ ಬೋರ್ಡ ಶಾಲೆಗಳ ಬಗ್ಗೆ ೬,೩೦,೮೪೧ ರೂ. ಸಂಸ್ಥಾನದೊಳಗಿನ ಶಾಲೆಗಳ ಬಗ್ಗೆ ೯,೬೬,೩೬೯ ರೂ. ಗ್ರಾಂಟ್. ಇನ್. ಏಡ್. ಶಾಲೆಗಳ ಬಗ್ಗೆ ೧೬,೪೯,೬೪೬ ರೂ. ಅನ್ ಏಡೇಡ್ ಶಾಲೆಗಳ ಬಗ್ಗೆ ೨,೦೩,೬೦೦ ಮತ್ತು ಇತರ ೪,೩೭,೮೦೩ ರೂಪಾಯಿ. ಒಂದೂ ಒಟ್ಟು ಖರ್ಚು ೬೨ ೮೦,೭೦೪.

ತ್ತು ವರ್ಗಣಿ ಮುಂತಾದ ಬಾಬುಗಳಿಂದ ಆಗುವ ಉತ್ಪನ್ನ ೧೩,೪೩,೬೧೬ ರೂಪಾಯಿ ವಜಾ ಹೋಗಲಾಗಿ, ಉಳಿದ ಖರ್ಚಿನಲ್ಲಿ ಸರಕಾರಕ್ಕೆ ೧೯,೬೫,೬೩೦ ರೂಪಾಯಿ. ಲೋಕಲ್‌ಫಂಡಿಗೆ ೪,೬೩,೬೯೫ ರೂಪಾಯಿ, ಮ್ಯುನಿಸಿಪಾಲಿಟಿಗಳಿಗೆ ೩೩೩೩೪ ರೂಪಾಯಿ ಬಿತ್ತು. ಕನಿಷ್ಠ ಪ್ರತಿಯ ಶಿಕ್ಷಣಕ್ಕೆ ೨೩,೪೩,೦೪೪ ರೂಪಾಯಿ ಖರ್ಚು ಆಯಿತು. ಇದರೊಳಗೆಫೀ ಉತ್ಪನ್ನ ೩,೫೩,೬೬೪ ರೂಪಾಯಿ ಮತ್ತು ಇತರ ಬಾಬುಗಳಿಂದ ಆಗುವ ಉತ್ಪನ್ನ ೩,೩೫,೨೬೪ ರೂಪಾಯಿ ವಜಾ ಹೋಗಲಾಗಿ ಉಳಿದದ್ದರಲ್ಲಿ ಸರಕಾರಕ್ಕೆ ೬,೫೪,೪೪೧ ರೂಪಾಯಿ ಲೊಕಲ್ ಫಂಡಿಗೆ ೩,೪೦,೨೯೯ ರೂಪಾಯಿ, ಮ್ಯುನಿಸಿಪಾಲಿಟಿಗಳಿಗೆ ೨,೬೪,೯೨೬ ರೂಪಾಯಿ ಖರ್ಚು ಬಿತ್ತು.

ಮುಲಕೀ ಪರೀಕ್ಷೆಯ ಸಂಬಂಧದಿಂದ ಕೆಲವು ಸೂಚನೆಗಳನ್ನು ಈ ಸಂಚಿಕೆಯಲ್ಲಿ ಮಾಡುವೆವೆಂದು ಹೋದ ತಿಂಗಳಲ್ಲಿ ಬರೆದಿರುತ್ತೇವೆ. ಆ ಮೇರೆಗೆ ಇದರಡಿಯಲ್ಲಿ ವಿದ್ಯಾರ್ಥಿಗಳು ಮಾಡುವ ದೋಷಗಳನ್ನು ವಿವರಿಸುತ್ತೇವೆ. ಆ ದೋಷಗಳನ್ನು ತಿದ್ದಿ, ಹೋದ ಮೇ ತಿಂಗಳ ಸಂಚಿಕೆಯಲ್ಲಿ ಪರೀಕ್ಷೆಗಳ ವಿಷಯವಾಗಿ ಮಾಡಿದ ಸೂಚನೆಗಳನ್ನು ಲಕ್ಷದಲ್ಲಿಟ್ಟು, ಮಾರ್ಚ ತಿಂಗಳಲ್ಲಿ ಮುದ್ರಿಸಿದ ಮೇಷರ್ಸ್ ಎ. ಇನಸ್ಪೇಕ್ಟರವರ ನೋಟಿಸಿನಂತೆ ಅಭ್ಯಾಸವನ್ನು ಸ್ಥಿರಪಡಿಸುವ ತಕ್ಕ ಏರ್ಪಾಡನ್ನು ಮಾಡಿದರೆ ವಿದ್ಯಾರ್ಥಿಗಳಲ್ಲಿ ಚುರುಕುತನವೂ, ಸುಧಾರಣೆಯೂ, ನಲಿಗೊಳ್ಳುವದಲ್ಲದೆ ಮಾಸ್ತರ ಜನರ ಶ್ರಮಕ್ಕೆ ತಕ್ಕ ಫಲವೂ ಅವರ ಪಾಲಿಗೆ ಕೀರ್ತಿಯೂ ಬರುವವು.

ವ್ಯಾಕರಣದ ಉತ್ತರದ ಕಾಗದಗಳಲ್ಲಿ ಕಂಡು ಬಂದ ದೋಷಗಳು.

೧. ಯಾವದೊಂದು ಮಾತು ಮುಗಿಯುವದಕ್ಕೆ ಕ್ರಿಯಾಪದವೆಂಬ ಹೆಸರು.

೬. ಅದೇ ವಸ್ತುವಿನ ವಿಷಯಕ್ಕೆ ಹೇಳುವಂಥವು ಸೂಚಿತ ಉಪವಾಕ್ಯಗಳು ಉ. ಸೂರ್ಯನು ಪ್ರಕಾಶಿಸುತ್ತಾನೆ. ಅವನ ಕಿರಣಗಳು ಭೂಮಿಯ ಮೇಲೆ ಬೀಳುತ್ತವೆ. ಅವರಿಂದ ಬಂಡೆಗಳು ಕಾಯುತ್ತವೆ.

೩. ವಾಕ್ಯದಲ್ಲಿ ನಾಮಪದಗಳ ಸ್ಥಳದಲ್ಲಿ ಪ್ರತಿಯಾಗಿ ಬರುವದಕ್ಕೆ ಕಾರಕವೆನ್ನುತ್ತಾರೆ.

೪. ಧಾತುಗಳಿಗೆ ಓಣ, ಉವಧು, ಈಕೆ ಪ್ರತ್ಯಯಗಳು ಹತ್ತಿಸುವದರಿಂದ ಕ್ರಿಯಾಪದ.

೫. ಇರು ಧಾತುವಿನ ಸಂಶಯಾರ್ಥ ಇರಸಣಿ.

೬. ವಾಕ್ಯದಲ್ಲಿ ಸ್ಪಷ್ಟವಾಗಿ ಹೇಳುವ ಪದಗಳಿಗೆಲ್ಲ ಕಾರಕವೆಂಬ ಹೆಸರು.

೭. ಸಂಧಿ ಮಾಡದೆ ಶಬ್ದಗಳನ್ನು ಬಿಡಿಯುವದಕ್ಕೆ ಪ್ರಕೃತಿಯುಂಬ ಹೆಸರು.

೮. ನಾಮಗಳಿಗೆ ವಿಭಕ್ತಿ ಪ್ರತ್ಯಯಗಳು ಸೇರವಾಗ ಸೇರುವವರ್ಣಗಳಿಗೆ ಕಾರಕವೆನ್ನುವರು. ಉ. (ಉ.) (ಎನ.) (ಅ ಅನ್ನು) (ಇಂದಾ.)

೯. ಸಾಮಾನ್ಯ ಸಂಖ್ಯಾವಾಚಕ ಅಂದರೆ, ಬೇರೆ ಮತ್ತು ಇನ್ನು ಎಂಬ ಅವ್ಯಯ ಶಬ್ದವು.

೧೦. ಸಮುಚಿಸತಕ್ಕ ಪದಗಳಿಗೆ ಸಂಗ್ರಹಣಿ ಅನ್ನುತ್ತಾರೆ. ಒನೇ ಪುಸ್ತಕದ ಉತ್ತರದ ಕಾಗದಗಳಲ್ಲಿ ಕಂಡು ಬಂದ ದೋಷಗಳು.

೧. ತಲೆಪೋಗಿಗಳ ಗೋಪುರಗಳಲ್ಲಿ ಮಿದುಳು ಇರುತ್ತದೆ. ಮಿದುಳು ಜ್ಞಾನಕ್ಕೆ ಬಲಕಾರಿಯಾಗಿರುವದು.

ಸೂಕ್ಷ್ಮವಾಗಿದ್ದರೆ ನೆನಪು ಶಕ್ತಿಯು ಬೆಳೆಯುವದು. ಜ್ಞಾನದಿಂದ ಸರ್ವಕೆಲಸವನ್ನು ಜೇಕಾವಹಾಗೆ ಮಾಡಿಕೊಳ್ಳುತ್ತೀವಿ. ಮಿದುಳಿನಿಂದ ಯಾವತ್ತು ಇಂದ್ರಿಯಗಳಿಗೆ ಬಲವುಂಟಾಗಿದೆ. ಕಾರಣಾ ಬೆಚ್ಚನ್ನ ಟೊಪ್ಪಿಗೆ ವಗೈರೆ ಹಾಕಿಕೊಂಡು ಜ್ವಾಪಾನ ಮಾಡಬೇಕಾಗುವದು.

೬. ತಲೆಚೋಗಿಗಳ ಗೋಪುರಾ:—ಮನುಷ್ಯನ ತಲೆಚೋಗಿಗಳಲ್ಲಿ ಅಲ್ಲಲ್ಲಿ ಮಾಂಸಗಳು ಎಲುಬುಗಳು ಇರುತ್ತವೆ. ಇವರಲ್ಲಿ ಮಾಂಸ ಮುಂತಾದವುಗಳು ಕೆಟ್ಟರೆ ಅವನ್ನು ತೆಗೆದು ಬೇರೆ ಮಾಂಸವನ್ನು ಹಾಕಿ ಮುಂಚಿ ಇದ್ದಹಾಗೆ ಮಾಡಲಿಕ್ಕೆ ಬರುತ್ತವೆ.

೫. ತಲೆಚೋಗಿಗಳ ಗೋಪುರ ಪಟ್ಟಣದಲ್ಲಿ ಆಕಳುಗಳು ತಲೆಯನ್ನು ಜೊಗ್ಗಿಸಿಕೊಂಡು ಹೋಗುತ್ತವೆ.

೪. ಕಾನ್‌ಸರ್ವೇಟಫ್ಲಸ್=ಕಿವಿಗೆ ಪಚ್ಚ ತಕ್ಕಂಥಾದ್ದು.

೩. ಕಾನ್‌ಸರ್ವೇಟಫ್ಲಸ್=ನೈಲ ನದಿಯನ್ನು ಗೊತ್ತು ಪಚ್ಚಿದನು.

೬. ಯುನೈತೆದ ಕಿಂಗದಮ್=ಯುನೈತೆದವೆಂಬ ಪರ್ವತವು.

೩. ಬೆಳೆದತ್ತೀ ಜನರಮು=ಬೆಳೆದತ್ತೀ ಜನರಲ್ಲಿ ಮಾರ್ಕನವು ಉಂಟು.

೮. ಬೆಳೆದತ್ತೀ ಜನರಲ್ಲಿ=ಬೆಳೆದು ಕೊಟ್ಟ ಈ ಜನರಲ್ಲಿ.

೯. ಬೆಳೆದತ್ತೀ ಜನರಲ್ಲಿ=ಶ್ರೇಷ್ಠವಾದ ಜನರಲ್ಲಿ.

೧೦. ನ್ಯಸ್ತಾವಶೇಷ=ವಕ್ಕ ಹರಿಯುವ ಮುಖ್ಯಮಾರ್ಗ.

೧೧. ನ್ಯಸ್ತಾವಶೇಷ=ಹೊಂದಿದ.

೧೨. ಮಯೆರಮ ಸಹ್ಯಂ=ಮನನವನ್ನು ತನ್ನ ಸ್ವಾಧೀನದಲ್ಲಿ ಇಟ್ಟುಕೊಳ್ಳೋಣ (೨) ಕಟ್ಟಕೀರ್ತಿಯು

ಸಲುವಾಗಿ ದೃಢಪಡೋಣ; ಪರರಿಗೆ ಉಪದ್ರವ ವಗೈರೆ ಕೊಡುವದಕ್ಕಾಗಿ ಪ್ರಯತ್ನ ಮಾಡೋಣ ಇತ್ಯಾದಿ. (೩) ಕೆಟ್ಟಮನಸ್ಸು. (೪) ಶೂರನ ಬಳಿಯಲ್ಲಿ.

೧೩. ಕೊಳಿವೆಯ ಪೂಲು=ಸರೋವರದ ಪೂಲು.

೧೪. ಸೌರಸುರಾಲಯದ ರಾಕ್ಷಸ ಮಧ್ಯವಾಸ=ಭಯಂಕರ ದೇವತೆಗಳ ಮನೆಯ ರಾಕ್ಷಸನು ನಟ್ಟನಡುವೆ ತಿರುಗ್ಯಾಡೋಣ.

೧೫. ಮಧ್ಯವಾಸಂ=ಶರೆಕುಡಿಯೋಣ.

ನಿಬಂಧವಲ್ಲಿ ತೋರುವ ದೋಷಗಳು.

೧. ನಿಬಂಧದ ವಿಷಯವು ವಿದ್ಯಾರ್ಥಿಗಳಿಗೆ ತಿಳಿಯುವದೇ ಇಲ್ಲ. ತಿಳಿದರೂ ಬಹ್ಮೊಮ್ಮೆ ವಿಚಾರ ಮಾಡದೆ ಅಸಂಬದ್ಧ ವಾಕ್ಯಗಳನ್ನು ಬರೆಯುತ್ತಾರೆ. ಅವರು ಬರೆದ ವಾಕ್ಯಗಳಲ್ಲಿ ವಿಷಯ-ವ್ಯಾಕರಣಗಳ ಅಜ್ಞಾನವು ಸ್ಪಷ್ಟವಾಗಿ ತೋರುತ್ತದೆ; ಹ್ಯಾಗಂದರೆ :—

೧. ಟಪಾಲ ಖಾತೆ ಅಂದರೆ ಜನರ ಹಿತದ ಕೆಲಸವು.

೨. ಅಣ್ಣತಮ್ಮಂದಿರಿಗೆ ದೂರ ದೇಶದಲ್ಲಿ ಇರುತ್ತಾರೆ.

೩. ಅದು ಮುಂದವಾಗಿ ಬಹಳ ಸೋಯಿ ಪ್ರಕಾರ ಮಾಡಿ ಮೂರಿ ಪಣಾ ತಕ್ಕೊಂಡು ಬರಬೇಕಾಗುತ್ತಿತ್ತು

೪ ನಾವು ನಮ್ಮ ಬೆರೂರಲ್ಲಿದ್ದ ಪಣವಿನ ಸಂಬಂಧ ಅಡಚಣಿ ಬಂದರೆ ಅವಪ್ಪ ಬೇಗನೇ ನೆರವಾಗಲಿಕ್ಕೆ ಆಗುತ್ತಿದ್ದಿಲ್ಲ.

೫. ಯಾವನೊಬ್ಬನು ತನ್ನಲ್ಲಿದ್ದ ಪಣವನ್ನು ಯಾರಾವರೂ ಕದ್ದು ಬಯ್ಯುವ ಇಲ್ಲವೇ ಬೇರೂರಿಗೆ

ಹಣ ತೆಗೆದುಕೊಂಡು ಹೋಗುವಾಗ್ಗೆ ಆಗುವ ಸುಲಿಗೆ ಭೀತಿ ಇದ್ದರೆ ಇಡುವದಕ್ಕೆ ಉಪಾಯವೇ ಇದ್ದಿಲ್ಲ.

೬. ನಾಕ್ಕೈದು ದಿವಸಗಳು.

೭. ಟಪಾಲ ಖಾತೆಗೆ ಸಹಿ ತೆಗೆದುಕೊಂಡು ಬರುವ ಖಾತೆಯನ್ನು ತ್ತಾರೆ. ಇತ್ಯಾದಿ.

W. A. RUSSELL ESQUIRE.

(Communicated.)

ರಸೆಲ್ ದೊರೆಗಳು.

(ಬರೆದು ಬಂದದ್ದು.)

ಮೇಹಬ್ಬಾನ ಉಯಿಲ್ಯಮ್ ಅಲನ್ ರಸೆಲ್ ದೊರೆಗಳು ಳೆದ ದಶಂಬರ ತಿಂಗಳಿನಲ್ಲಿ ಜರ್ಮನೀ ದೇಶದಲ್ಲಿ ಕಾಲಾ ನೆವಾದರೆಂಬ ಸುದ್ದಿಯನ್ನು ತಿಳಿಸುವದಕ್ಕೆ ನಾವು ಖೇದ ತ್ತೇವೆ. ಇವರು ೧೮೪೦ರಲ್ಲಿ ಹುಟ್ಟಿದರು. ಇವರು ಪರ ಶಸ್ಥರಾದದ್ದರಿಂದ ಇವರ ಬಾಲ್ಯಾವಸ್ಥೆಯಬಗ್ಗೆ ನಮಗೆ ೀಷವಾದ ಯಾವ ಸಂಗತಿಯೂ ಗೊತ್ತಿಲ್ಲ. ಇವರು ಆಕ್ಸ್ ರ್ಡದ ಹೆಸರಾದ ವಿಶ್ವವಿದ್ಯಾಲಯದಲ್ಲಿ ಅಭ್ಯಾಸ ಮಾಡಿ ಎ. ಎ. ಎಂಬ ಗೌರವದ ಪದವಿಯನ್ನು ದೊರಕಿಸಿದರು. ಡಿಕೆಯಾಗಿ ಸೆಕ್ರೆಟರಿ ಆಫ್ ಸ್ಟೇಟ ದೊರೆಗಳು ಪಾಶ್ಚಿ ತ್ಯ ಪಂಡಿತರಿಗೆ ವಿದ್ಯಾಖಾತೆಯಲ್ಲಿ ಕೆಲಸ ಕೊಡು ಗ ಅವರೊಡನೆ ವಿಶೇಷವಾದ ಕರಾರು ಮಾಡುವರು ತ್ತಿತ್ತಲಾಗಿ ಆ ಪ್ರಕಾರದ ಕರಾರು ಮಾಡುವದಿಲ್ಲ.) ಆ ೀರೆಗೆ ಹಿಂದುಸ್ಥಾನದ ಸೆಕ್ರೆಟರಿಯವರು ಇಂತಿಷ್ಟು ಸಂ ಳವನ್ನೂ ಇಂತಿಷ್ಟು ವರ್ಷಗಳ ನೌಕರಿಯಾದ ಮೇಲೆ ತಿಷ್ಟು ಪೆನಶನ್ನೂ ಕೊಡುವೆವು ಎಂಬುಬಗ್ಗೆ ವಚನಕೊ

ಟ್ಟ ರಸೆಲ್ ಧೊರೆಗಳನ್ನು ಈ ದೇಶದಲ್ಲಿ ಕೆಲಸ ಮಾ
ಲಿಕ್ಕೆ ಒಡಂಬಡಿಸಿ ಕಳುಹಿದರು.

ಇವರು ಸ್ ೧೮೬೦ ರಲ್ಲಿ ಪೂನೆಯಲ್ಲಿದ್ದ ಡೆಕ್ಕನ ಕ
ಲೇಜಿನ ಮುಖ್ಯಸ್ಥ (ಪ್ರಿನ್ಸಿಪಾಲ) ರಾದರು. ಈ ಕೆಲ
ವನ್ನು ಎರಡು ವರುಷಗಳವರೆಗೆ ನೋಡಿದ ಬಳಿಕ ಸ
ರ್ಕಾರದವರು ಇವರನ್ನು ಮಧ್ಯಭಾಗದ ಎಜ್ಯುಕೇಶನಲ್ ಇ
ನಸ್ಪೇಕ್ಟರರನ್ನು ಮಾಡಿದರು. ಮುಂದೆ ಸ್ ೧೮೬೪ ರಲ್ಲಿ
ಇವರನ್ನು ಉತ್ತರ ಭಾಗಕ್ಕೆ ನೇಮಿಸಿದರು. ಅಲ್ಲಿಯೂ
ರೂ ಇವರು ಬಹಳ ದಿವಸ ಇರದೆ ಮರುವರುಷ ಅಂದರೆ
ಸ್ ೧೮೬೫ನೆಯ ಮೇ ತಿಂಗಳಿನಲ್ಲಿ ಈ ಕರ್ನಾಟಕದ
ಭಾಗಕ್ಕೆ ಎಜ್ಯುಕೇಶನಲ್ ಇನಸ್ಪೆಕ್ಟರರಾಗಿ ಬಂದರು. ಇಲ್ಲಿ
ಮುಂದೆ ಇಪ್ಪತ್ತು ವರುಷ ಕೆಲಸ ಮಾಡಿ ಸ್ ೧೮೮೫ನೆಯ
ಮಾರ್ಚ್ ತಿಂಗಳಿನಲ್ಲಿ ಪೆನ್‌ಶನ್ ಪಡೆದು ಸ್ವದೇಶಕ್ಕೆ ತೆರಳಿ
ಹೆಂಬ ಸಂಗತಿಯು ಎಲ್ಲರಿಗೂ ಗೊತ್ತಿರುತ್ತದೆ.

ಮಿ. ರಸೆಲ್ ಸಾಹೇಬರನ್ನು ಮಧ್ಯಭಾಗದಲ್ಲಿಯೂ ಉ
ತ್ತರ ಭಾಗದಲ್ಲಿಯೂ ಬಹಳ ದಿವಸ ಇಡದೆ ಈ ಭಾಗಕ್ಕೆ
ತಂದ ಕಾರಣವು ಬಹುಶಃ ಆ ಕಾಲದಲ್ಲಿದ್ದ ಈ ಕರ್ನಾಟಕ
ದ ಅವ್ಯವಸ್ಥಿತ ಸ್ಥಿತಿಯೇ ಇರಬಹುದೆಂದು ತೋರುತ್ತದೆ.
ಸ್ ೧೮೬೩ ರಲ್ಲಿ ಕಾನೆಡಾ ಬೆಲ್ಹೊಯನ್ನು ಮದ್ರಾಸದಿಂದ
ಇಸಕೊಂಡು ಮುಂಬಯಿ ಸರಕಾರದವರು ಈ ದಕ್ಷಿಣ
ಭಾಗವನ್ನು ಮಾಡಿದರು. ಈ ದಕ್ಷಿಣ ಭಾಗದ ಮೊದಲನೇ
ಎಜ್ಯುಕೇಶನಲ್ ಇನಸ್ಪೇಕ್ಟರರು ಕ್ಯಾಪ್ಟನ್ ವಾಡಿಂಗ್ಟನ್
ಸಾಹೇಬರೇ ಸರಿ. ಅವರು ೧೮೬೪ರ ದಶಂಬರದಲ್ಲಿ ವರ್ಗ
ವಾಗಿ ಹೋದವರ್ದಿಂದ ಬೆಳಗಾಂವಿಯ ಆ|| ಕಲೇಕ್ಟರರಾದ
ಮೇಬ್ಯಾನ ಲಿಟಲ್ ಸಾಹೇಬರು ವಿದ್ಯಾಖಾತೆಯ ಇನಸ್ಪೇ

ರರ ಕೆಲಸವನ್ನು ಕೆಲವು ದಿವಸ ನಡಿಸಿದರು. ತರುವಾಯ
ಹೊಸ ಭಾಗದಲ್ಲಿ ಸುವ್ಯವಸ್ಥೆಯನ್ನು ಮಾಡಲಿಕ್ಕೆ ಸರ
ರದವರು ಈ ದೊರೆಗಳನ್ನು ಇಲ್ಲಿಗೆ ಕಳಿಸಿದರು.

ಮಿ. ರಸೆಲ್ ಸಾಹೇಬರು ಈ ಭಾಗದ ಎಜ್ಯುಕೇಶನಲ್
ನಸ್ಪೇಕ್ಟರರಾದಾಗ ಸರಕಾರದ ಕಾಗದ ಪತ್ರಗಳು ಕನ್ನ
ನಲ್ಲಿರಬೇಕೆಂದು ಠರಾವು ಇದ್ದಾಗ್ಯೂ ವಿದ್ಯಾಖಾತೆಯ ಕಾ
ದ ಪತ್ರಗಳು ಮೊದಲಿನಂತೆ ಮರಾಠಿಯಲ್ಲಿಯೇ ನಡೆಯು
ದ್ದವು. ಡಿಪ್ಪುಟಿ ಇನಸ್ಪೇಕ್ಟರರೂ ಸೂಲೆಗಳ ಮಾಸ್ತರ
ಳು ಮರಾಠಿ ಬಲ್ಲವರೇ ಇದ್ದರು. ಕನ್ನಡಿಗರಿಗೆ ಸೂಲೆಗಳ
ವಿಶೇಷ ಅಭಿರುಚಿ ಇದ್ದಿಲ್ಲ; ಖಾಲಾಖಾತೆಯಲ್ಲಿ ಕೆಲಸ
ಮಾಡಲಿಕ್ಕೆ ತಕ್ಕಂಥ ಜನರೂ ಇದ್ದಿಲ್ಲ. ಸರಕಾರದ ಉ
ದ್ಯೋಗಸ್ಥರ ಹೊರತು ಉಳಿದವರು ತಮ್ಮ ಮಕ್ಕಳನ್ನು
ಲೆಗೆ ಕಳುಹುತ್ತಿದ್ದಿಲ್ಲ. ಆದದ್ದರಿಂದ ಮಿ. ರಸೆಲ್ ಸಾಹೇ
ರು ಈ ಭಾಗಕ್ಕೆ ಬಂದಾಗ ಇಲ್ಲಿ ೧೪೮ ಮಾತ್ರ ಸರಕಾ
ರ ಸೂಲೆಗಳು ಇದ್ದವು.

ಬಂದ ಹೊಸದಾಗಿ ಮೇಹಬ್ಬಾನೆ ರಸೆಲ್ ಸಾಹೇಬರು
ಕಳ ಶ್ರಮತಕ್ಕೊಂಡು ಹಳ್ಳಿಪಳ್ಳಿಗಳಿಗೆ ಹೋಗಿ ಜನರ
ತಿಗತಿಯನ್ನು ತಿಳಕೊಂಡು, ಈ ಭಾಗಕ್ಕೆ ದಕ್ಷಿಣ ಮ
ರಾಷ್ಟ್ರವೆಂಬ ಹೆಸರು ಬಿದ್ದಾಗ್ಯೂ ಇದು ನಿಜವಾಗಿ ಕ
ರ್ನಾಟಕ ವಿರುತ್ತದೆಂದು ಅರಿತುಕೊಂಡರು. ಬಳಿಕ ರಾ
ಜ್ಯಕರ್ತರಿಗೆ ಪ್ರಜೆಗಳ ಹಿತವನ್ನು ಮಾಡುವದೇ ಕರ್ತ
ವ್ಯವೆಂಬ ಪಾಶ್ಚಿಮಾತ್ಯ ಇತಿಹಾಸಗಳಿಂದ ಸಿದ್ಧವಾದ ರಾಜ
ನ ತತ್ವವನ್ನು ಎಡೆಬಿಡದೆ ಲಕ್ಷದಲ್ಲಿಟ್ಟು ಕರ್ನಾಟಕದಲ್ಲಿ
ನ್ನಡವನ್ನೇ ಕಲಿಸಬೇಕೆಂತಲೂ ಈ ಭಾಗದ ದೊಡ್ಡ ದೊ
ಡ್ಡ ಅಧಿಕಾರದ ಕೆಲಸಗಳನ್ನು ಯೋಗ್ಯರಾದ ಕನ್ನಡಿಗರಿಗೆ

ಕೊಡಬೇಕೆಂತಲೂ ನಿಶ್ಚಯಿಸಿ ಹಾಗೆ ಮಾಡಲಿಕ್ಕೆ ಉದ್ಯು
ಕ್ತರಾದರು. ಮರಾಠಿ ಡಿಪುಟಿ ಇನಸ್ಪೇಕ್ಟರರನ್ನು ಕನ್ನಡ
ದಲ್ಲಿ ಪರೀಕ್ಷೆಯನ್ನು ಕೊಡಲಿಕ್ಕೆ ಹಚ್ಚಿ ಕೆಲವರನ್ನು ಮರಾಠಿ
ಭಾಗಕ್ಕೆ ವರ್ಗ ಮಾಡಿಸಿ ಅವರ ಸ್ಥಳದಲ್ಲಿ ಕೈಲಾಸವಾಸಿ
ಚನಬಸಪ್ಪ ಅಂಣಾ ಮುಂತಾದ ಯೋಗ್ಯರಾದ ಕನ್ನಡಿಗ
ರನ್ನು ನೇಮಿಸಿದರು. ಮಧ್ಯಭಾಗ ಉತ್ತರ ಭಾಗಗಳಲ್ಲಿ
ದ್ದಂತೆ ಈ ಭಾಗದಲ್ಲಿಯಾದರೂ ಬಂದು ಕರ್ನಾಟಕ ಶಿಕ್ಷ
ಣಾಲಯವಿರಬೇಕೆಂದು ಸರಕಾರಕ್ಕೆ ಸೂಚಿಸಿ ಮಂಜೂರಿ
ಪಡಕೊಂಡು ವಿದ್ವಾಂಸದಾದ ಕನ್ನಡಿಗರನ್ನು ಅದರಲ್ಲಿ ಶಿಕ್ಷಣ
ಕೊಡುವ ಕೆಲಸದ ಮೇಲೆ ಇರಿಸಿದರು. ಕನ್ನಡ ಸಾಲೆಗಳ
ಬಗ್ಗೆ ಕ್ರಮಿಕ ಪುಸ್ತಕಗಳನ್ನು ಬರೆಯುವದಕ್ಕೆ ೨೦೦ ರೂ
ಪಾಯಿ ತಲಬುಳ್ಳ ಬುಬ್ಬ ತ್ರಾನ್ಸಲೇಟರನನ್ನೂ ೭೫ ರೂ
ಪಾಯಿ ತಲಬುಳ್ಳ ಬುಬ್ಬ ಎಗ್ಜಿಬಿಶನರನನ್ನೂ ನೇಮಿಸಿ
ಕನ್ನಡ ಪುಸ್ತಕಗಳನ್ನು ಸಿದ್ಧ ಮಾಡಿಸಿದರು. ಕನ್ನಡ ಗ್ರಂ
ಥಗಳನ್ನು ಓದಿದ ಗೃಹಸ್ಥರನ್ನು ಆರಿಸಿ ಪರೀಕ್ಷಿಸಿ ಅವ
ರಿಗೆ ದೊಡ್ಡ ದೊಡ್ಡ ಕೆಲಸಗಳನ್ನು ಕೊಟ್ಟರು. ಈ ಪರ
ದೇಶಸ್ಥರು ಈ ದಿಕ್ಕಿಲ್ಲದ ಕನ್ನಡಿಗರಿಗೆ ಮಾಡಿದ ಉಪ
ಕಾರವನ್ನು ಎಷ್ಟು ಕೊಂಡಾಡಿದರೂ ತೀರದು.

ಮೆ. ರಸೆಲ್ ಸಾಹೇಬರು ಕನ್ನಡಿಗರನ್ನು ಮುಂದಕ್ಕೆ
ತಂದರು ಇಷ್ಟೇ ಅಲ್ಲ; ಕನ್ನಡ ನುಡಿಯ ಗೌರವವನ್ನು
ಅರಿತುಕೊಳ್ಳಲಿಕ್ಕೆ ಸ್ವತಃ ಪ್ರಯತ್ನ ಮಾಡಿದರು. ಅವರು
ತಿಂಗಳಿಗೆ ೨೦೦೫೦ ರೂಪಾಯಿ ಸಂಬಳ ಕೊಟ್ಟು ಬುಬ್ಬ
ಪಂಡಿತನನ್ನು ತಮ್ಮ ಹತ್ತರ ಇಟ್ಟುಕೊಂಡು ಸ್ವತಃ ಕನ್ನ
ಡವನ್ನು ಕಲಿತರು. ಕನ್ನಡ ನುಡಿಯಷ್ಟು ವೀರಾವೇಶದ
ಭಾಷೆಯು ಎಲ್ಲಿಯೂ ಇಲ್ಲೆಂದು ಅವರು ಬಾರಿಬಾರಿಗೆ

ನ್ನುತ್ತಿದ್ದರು. ಕನ್ನಡ ಕವಿತೆಗಳ ಮೇಲೆ ಅವರ ಪ್ರೀತಿ ಯು ಬಹಳೇ ಇತ್ತು

ಕರ್ನಾಟಕ ಭಾಗದ ಎಜ್ಯುಕೇಶನಲ್ ಇನಸ್ಪೇಕ್ಟರರಾ ದುದಿನಿಂದ ಮೆ. ರಸೆಲ್ ಸಾಹೇಬರು ಕನ್ನಡಿಗರನ್ನು ಮುಂ ದಕ್ಕೆ ತರುವವರಲ್ಲಿಯೂ ಕನ್ನಡ ಪಂಡಿತರನ್ನು ಪ್ರೋತ್ಸಾ ಹ ಪಡಿಸುವವರಲ್ಲಿಯೂ ತಮ್ಮ ಕರ್ತವ್ಯವನ್ನು ಮಾತ್ರ ಮಾಡಿದರೆಂದು ಕೆಲವರು ಅನ್ನಬಹುದು. ಆದರೆ ಇದು ಸರಿ ಯಾದ ಮಾತಲ್ಲ. ಕರ್ತವ್ಯವನ್ನು ಮನಮುಟ್ಟಿ ಮಾಡುವ ದೇವಮನುಷ್ಯನ ಮುಖ್ಯ ಕೆಲಸವಾದರೂ ಅದನ್ನು ಸರಿಯಾಗಿ ಮಾಡವವರ ಸಂಖ್ಯೆಯು ಈ ಜಗತ್ತಿನಲ್ಲಿ ಹೆಚ್ಚಿರುವದರಿಂದ ಕರ್ತವ್ಯ ಮಾಡುವವರು ಸ್ತುತಿಗೆ ಪಾತ್ರರೇ ಸರಿ.

ಮೆ. ರಸೆಲ್ ಸಾಹೇಬರು ಸರಕಾರದಿಂದ ಆಗುವಷ್ಟೇ ಕ ನ್ನಡಿಗರಿಗೆ ಉತ್ತೇಜನ ಕೊಟ್ಟರಂತಲ್ಲ. ಅವರು ತಮ್ಮ ಸ್ವಂತ ಹಣದಲ್ಲಿ ಬಂದು ಸಾವಿರ ರೂಪಾಯಿಗಳನ್ನು ಸರಕಾ ರದಲ್ಲಿಟ್ಟು ಅದರ ಬಡ್ಡಿಯಿಂದ ಪ್ರತಿವರ್ಷ ಒಂದು ಇನಾ ಮನ್ನು ಕನ್ನಡದಲ್ಲಿ ಹೆಚ್ಚು ಪರಿಶ್ರಮ ಪಟ್ಟವರಿಗೆ ಕೊಡ

---

* ಈ ಅಭಿಪ್ರಾಯವನ್ನು ಅವರು ರಾವ ಸಾ. ವೆಂಕಟರಾವ ಕಟ್ಟಿ ಇವರಿಗೆ ಅನೇಕ ಸಾರಿ ತಿಳುಹಿಸಿರುವರಂತೆ.

† ಈ ಇನಾಮಿನ ವ್ಯವಸ್ಥೆಯನ್ನು ಚನ್ನಾಗಿ ಮಾಡಿದ್ದರ ಶ್ರೇಯಸ್ಸು ನಮ್ಮ ಈಗಿನ ಇನಸ್ಪೇಕ್ಟರರಿಗೆ ಉಂಟು. ಪರೀಕ್ಷೆಗೆ ಜನರು ಬಾರ ದ್ದರಿಂದ ಉಳಿದ ಹಣವನ್ನು ಸರಕಾರದಲ್ಲಿ ಹಾಗೆಯೇ ಕೊಳೆಯುಗೊಡ ದೆ ತಿರುಗಿ ಬಡ್ಡಿಗೆ ಹಚ್ಚಿ ಬಂದು ಇನಾಮಿನ ಬದಲಾಗಿ ೪೦ ರೂಪಾಯಿ ಗಳ ಮೂಲ ಇನಾಮು, ೬೦ ರೂಪಾಯಿಗಳ ಹೊಸ ಇನಾಮು, ಹೀಗೆ ಎರಡು ಇನಾಮುಗಳನ್ನು ಕೊಡುವ ವ್ಯವಸ್ಥೆಯನ್ನು ಮೇಹರ್ಬಾನ ಪ ಟವರ್ಧನ ಸಾ॥ ರು ಮಾಡಿರುವರು.

ಬೇಕೆಂದು ಗೊತ್ತು ಮಾಡಿದರು. ಈ ಇನಾಮಿಗೆ ಕನ್ನಡ ಗ್ರಂಥಗಳನ್ನು ಮುದ್ರಿಸಿ ಪ್ರಸಿದ್ಧ ಮಾಡಿದ ತಮ್ಮ ಗೆಳೆಯರಾದ ವರ್ಥ ಸಾಹೇಬರ ಹೆಸರನ್ನು ಕೊಟ್ಟರು.

ಈ ದೊರೆಗಳು ತಮ್ಮ ಅಧಿಕಾರದಿಂದಲೇ ಜನರಿಗೆ ಪ್ರಿಯರಾದರೆನ್ನ ಕೂಡದು. ಯಾಕಂದರೆ ಅವರಿಗೀತ ಹೆಚ್ಚಿನ ಅಧಿಕಾರಿಗಳು ಜನರಿಗೆ ಅಪ್ರಿಯರಾಗಿ ಹೋದ ಉದಾಹರಣಗಳು ಎಷ್ಟೋ ಇರುತ್ತವೆ. ಒಳ್ಳೇ ಅಧಿಕಾರಿಗಳು, ದುಷ್ಟ ಅಧಿಕಾರಿಗಳಿಗಿಂತ ಹೆಚ್ಚು ಕೆಲಸವನ್ನು ಮಾಡುವವಲ್ಲದೆ ಜನರ ಮನಸ್ಸಿನಲ್ಲಿ ಸರಕಾರದಬಗ್ಗೆ ಪೂಜ್ಯ ಬುದ್ಧಿಯನ್ನು ಹುಟ್ಟಿಸುತ್ತಾರೆ. ದುಷ್ಟರಾದ ಅಧಿಕಾರಿಗಳು ಜನರ ಸ್ವಭಾವವನ್ನೂ ಬಲವನ್ನೂ ಲೆಕ್ಕಿಸದೆ ತಮ್ಮಲ್ಲಿ ಅಧಿಕಾರ ಉಂಟೆಂಬವನ್ನು ತೋರಿಸಲಿಕ್ಕೆ ಹವಣಿಸಿ ಅಡ್ಡ ಮಾರ್ಗವನ್ನು ಹಿಡಿದು ಜನರನ್ನು ನೋಯಿಸಲಿಕ್ಕೆ ಹಾತೊರಿಯುತ್ತಾರೆ. ಇಂತಹರು ಜನರನ್ನು ಮೆಚ್ಚಿಸಲರಿಯರು.

ಮೆ. ರಸೆಲ್ ಸಾಹೇಬರು ದಯೆಯುಳ್ಳವರಾದದ್ದರಿಂದ ಜನರ ಸುಖದುಃಖಗಳನ್ನು ವಿಚಾರಿಸಿ ಸರಕಾರದ ನಿಯಮಗಳನ್ನು ಮುರಿಯದೆ ಜನರ ಅನುಕೂಲತೆಯನ್ನು ನೋಡುತ್ತಿದ್ದರು. ಅವರು ಸ್ವತಃ ಪಂಡಿತರೂ ಕವಿಗಳೂ ಇದ್ದರು. (ಅವರು ಮಾಡಿದ ಫಾಯರ ಫ್ಲ್ಲಾಯಿರ್ಸ್ ಇನ್ ಇಂಡಿಯಾ ಎಂಬ ಚಿಕ್ಕಕಾವ್ಯವು ಸರಸವಾಗಿರುವದು) ಆ ಕಾರಣ ಅವರು ಗ್ರಂಥಕರ್ತರನ್ನು ಪ್ರೀತಿಸುತ್ತಿದ್ದರು; ವಿದ್ವಾಂಸರನ್ನು ಮನ್ನಿಸುತ್ತಿದ್ದರು; ಬಡವರಿಗೆ ನೆರವಾಗುತ್ತಿದ್ದರು; ಕರ್ತವ್ಯವನ್ನು ಹುರುಪಿನಿಂದ ಮಾಡುವವರಿಗೆ ಪ್ರೋತ್ಸಾಹ ಗೊಡುತ್ತಿದ್ದರು. ಸಾರಾಂಶ ಅವರು ಹಿಂದೆ ಬಿದ್ದ ಕನ್ನ

ಡಿಗರನ್ನು ಮುಂದಕ್ಕೆ ತರುವದು ತಮ್ಮ ಕರ್ತವ್ಯವೆಂದು ತಿಳಿದು ಆಕೆಲಸಕ್ಕೆ ಬೇಕಾದ ಎಲ್ಲ ತಕ್ಕ ಸಾಧನಗಳನ್ನು ಕಯ್ಕೊಳ್ಳುತ್ತಿದ್ದರು.

ಎಜ್ಯುಕೇಶನಲ್ ಇನಸ್ಪೇಕ್ಟರರ ಕರ್ತವ್ಯಗಳು ನಾಲ್ಕು ಇರುತ್ತವೆ. ೧ ಸರಕಾರದ ಹುಕುಮುಗಳನ್ನು ಆಮಲಿನ ಲ್ಲಿ ತರುವದು. ೨ ಕಯ್ಕೆಳಗಿನ ಜನರಿಂದ ಕೆಲಸಗಳನ್ನು ತೆಗೆದುಕೊಳ್ಳುವದು. ೩ ಸಾಲೆಗಳನ್ನು ಪರೀಕ್ಷಿಸುವದು. ೪ ಪ್ರಜೆಗಳಲ್ಲಿ ಪೂಜ್ಯ ಬುದ್ಧಿಯನ್ನು ಹುಟ್ಟಿಸಿ ಅವರಿಂದ ತಕ್ಕ ಸಹಾಯವನ್ನು ಪಡೆದುಕೊಳ್ಳುವದು. ಮೊದಲನೆಯ ಕರ್ತವ್ಯವನ್ನು ಅವರು ಚನ್ನಾಗಿ ಮಾಡಿದರೆನ್ನಲಿಕ್ಕೆ ೧೫೦೦ರೂ. ಗಳ ವರೆಗೆ ಸರಕಾರದವರು ಅವರ ಸಂಬಳ ವನ್ನೇರಿಸಿ ಅವರಿಗೆ ಅನುಕೂಲವಾದ ಸ್ಥಳದಲ್ಲಿ (ಬೆಳಗಾಂ ವಿಯಲ್ಲಿ)ರಲಿಕ್ಕೆ ಅಪ್ಪಣೆಯನ್ನಿತ್ತ ಉದಾಹರಣವೇ ಸಾಕು. ಎರಡನೆಯ ಕರ್ತವ್ಯದ ಸಂಬಂಧದಿಂದ ಅವರನ್ನು ಹೊಗ ಳಬಹುದು. ಮನುಷ್ಯನ ಮೋರೆ ನೋಡಿ ಅವನು ಈತ ಹನೆಂದು ಅವರು ಕೂಡಲೇ ತಿಳಿಯುತ್ತಿದ್ದರು. ರಿಪಿರಿಪಿ ಮಾಡಿ ಕಯ್ಕೆಳಗಿನವರ ಮನಸನ್ನು ನೋಯಿಸಿ ಅವರನ್ನು ಉದಾಸೀನರನ್ನು ಮಾಡುತ್ತಿದ್ದಿಲ್ಲ. ಕಯ್ಕೆಳಗಿನವರ ಕೆಲ ಸವಲ್ಲಿ ಅವರು ಎಂದೂ ಕಯ್ಯಾಕುತ್ತಿದ್ದಿಲ್ಲ. ಮತ್ತು ತಪ್ಪು ಮಾಡಿದರೆ ಅವರನ್ನು ಬಿಡುತ್ತಿದ್ದಿಲ್ಲ. ಮಯ್ಗಳ್ಳರಿಗೆ ಸ್ವಾ ತಂತ್ರ್ಯ ಕೊಡುತ್ತಿದ್ದಿಲ್ಲ; ಉಜ್ಜುಗಿಗಳನ್ನು ಪರತಂತ್ರರ ನ್ನು ಮಾಡುತ್ತಿದ್ದಿಲ್ಲ; ಗುಣಕ್ಕೆ ಮತ್ಸರ ಮಾಡುತ್ತಿದ್ದಿಲ್ಲ. ಮೂರನೆಯ ಕರ್ತವ್ಯದ ಸಂಬಂಧದಿಂದ ಮಾತ್ರ ಅವರಿಗೆ ಕೆಲವರು ಸೋಮಾರಿಗಳೆಂದು ದೋಷ ಕೊಡುತ್ತಿದ್ದರು.

* ಅವರ ಗ್ರೇಡಿಗೆ ಇಗತಕ್ಕ ತಲಬಿಗಿಂತ ೧೦೦ ರೂ. ತಲಬು ಹೆಚ್ಚಿಗೆ ಇಗುತ್ತಿತ್ತು.

ಈ ಲೋಕಾಪವಾದದಲ್ಲಿ ತುಸು ಸತ್ಯಾಂಶವಾದರೂ ತೋರುತ್ತಿತ್ತು. ರಸೆಲ್ ಸಾಹೇಬರು ಈ ಭಾಗಕ್ಕೆ ಬಂದ ಹೊಸತಾಗಿ ಬಹಳ ಚಪಲತೆಯನ್ನು ತೋರಿಸಿದರು. ಬಳಿಕ ಅತ್ತಿತ್ತಲಾಗಿ ಮುಪ್ಪಿನಿಂದಾಗಲಿ ವಿಶೇಷವಾದ ಓದುವ ಲಕ್ಕಿನಿಂದಾಗಲಿ ಅವರು ತಕ್ಕಷ್ಟು ತಿರುಗುತ್ತಿದ್ದಿಲ್ಲ. ಆದರೆ ಅವರು ತಮ್ಮ ಸ್ವಸಮಾನವಾದ ಅನುಭವದಿಂದಲೂ ಹೆಚ್ಚಿನ ವಿದ್ಯದಿಂದಲೂ ಸಾಲಿಗಳ ನಿಜಸ್ಥಿತಿಯನ್ನು ಶಿಕ್ಷಕರ ಯೋಗ್ಯತೆಯನ್ನು ಬಂದು ನಿಮಿಷದಲ್ಲಿ ಪರೀಕ್ಷಿಸುತ್ತಿದ್ದರು. ೪ ನೆಯ ಕರ್ತವ್ಯದಬಗ್ಗೆ ಹೆಚ್ಚಿಗೆ ಬರೆಯುವದ್ದು ಅವಶ್ಯವಿಲ್ಲ. ಅವರ ಇಡೀ ಚರಿತ್ರವು ಈ ಕರ್ತವ್ಯದ ಉದಾಹರಣವೆಂದರೂ ಸಲ್ಲುವದು. ಅವರು ಆಂಗ್ಲರೊಡನೆ ನಡೆದಂತೆ ದೇಶೀಯರೊಡನೆಯೂ ನಡೆಯುತ್ತಿದ್ದರು. ಮೂಲಿಗೆ ಬಿದ್ದ ಕನ್ನಡಿಗರನ್ನು ಮುಂದಕ್ಕೆ ತಂದು ಕನ್ನಡ ನುಡಿಯ ವೈಭವವನ್ನು ಬೆಳಸಿ, ಕನ್ನಡಿಗರ ಅಜ್ಞಾನಾಂಧಕಾರವನ್ನು ದೂರೋಡಿಸಿ ತಮ್ಮ ಸ್ವಂತ ಹಣ ವೆಚ್ಚ ಮಾಡಿ ಕನ್ನಡ ನುಡಿಯಲ್ಲಿ ಪಾಂಡಿತ್ಯ ಹೊಂದಿದವರಿಗೆ ಪ್ರತಿವರ್ಷ ಇನಾಮು ದೊರೆಯುವಂತೆ ವ್ಯವಸ್ಥೆಯನ್ನು ಮಾಡಿ ಈ ದೇಶವನ್ನು ಬಿಟ್ಟು ಮರಳಿ ಸ್ವದೇಶಕ್ಕೆ ಹೋದ ಮಹಾತ್ಮರನ್ನು ನಮ್ಮ ದೇಶದವರು ಮರೆಯಲಾರರು. ಅವರು ಸ್ವರ್ಗಸ್ಥರಾದ ಸುದ್ದಿಯು ಇಲ್ಲಿಗೆ ಬಂದ ಕೂಡಲೆ ಧಾರವಾಡದ ಜನರು ಈ ತಿಂಗಳ ೧೫ನೆಯ ತಾರೀಖಿನ ದಿವಸ ಕಿಲ್ಲೆಯ ಬೈಲಲ್ಲಿ ಸಭೆಗೂಡಿ ತಮ್ಮ ಅತ್ಯಂತ ದುಃಖ ತೋರಿಸಿ ಅವರ ಸ್ಮಾರಕವಾಗಿ ಏನಾದರೂ ಮಾಡಬೇಕೆಂದು ಗೊತ್ತು ಮಾಡಿದ ಸಂಗತಿಯಿಂದ ಅವರು ಜನರಿಗೆ ಎಷ್ಟು ಬೇಕಾಗಿದ್ದರೆಂಬದು ಸ್ಪಷ್ಟವಾಗುತ್ತದೆ. ಈ ದೊಡ್ಡ ಮನಸ್ಸಿನವರೂ ಪ್ರಜಾ ಕಲ್ಯಾಣ ತತ್ಪರರೂ ಆದ ರಸಲ್ ಸಾಹೇಬರರಿಗೆ ಜಗದೊಡೆಯನಾದ ಪರಮಾತ್ಮನು ಉತ್ತಮ ಗತಿಯನ್ನು ಕೊಡಲೆಂದು ಬೇಡಿಕೊಂಡು ಈ ಚಿಕ್ಕ ಚರಿತ್ರವನ್ನು ಮುಗಿಸುತ್ತೇವೆ.

METHODS OF TEACHING.

ಕಲಿಸುವ ಪದ್ಧತಿಗಳು.

ಅಧ್ಯಾಪಕ—೧, ೪ ಮುಂತಾದ ಅಂಕಿಗಳು ಎಂಥ ವ
ಸ್ತುಗಳನ್ನು ತೋರಿಸುತ್ತವೆ?

ವಿದ್ಯಾರ್ಥಿ—ಪೂರ್ಣ ವಸ್ತುಗಳನ್ನು ತೋರಿಸುತ್ತವೆ.

ಅಧ್ಯಾಪಕ—ಪೂರ್ಣ ವಸ್ತುವನ್ನು ತೋರಿಸುವ ಅಂ
ಕಿಗಳಿಗೆ ಏನು ಅನ್ನುವರು?

ವಿದ್ಯಾರ್ಥಿ—ಪೂರ್ಣಾಂಕಿಗಳೆಂದೆನ್ನುವರು.

ಅಧ್ಯಾಪಕ—ಇನ್ನು ಅಪೂರ್ಣ ವಸ್ತುಗಳನ್ನು ಅಂಕಿ
ಗಳಿಂದ ಹ್ಯಾಗೆ ಬರೆದು ತೋರಿಸಬೇಕೆಂ
ಬದು ನಿನಗೇನಾದರೂ ಗೊತ್ತುಂಟೋ?

ವಿದ್ಯಾರ್ಥಿ—ಇಲ್ಲ ಸ್ವಾಮಿ.

ಅಧ್ಯಾಪಕ—(ಹಾಗಾದರೆ ಇತ್ತ ನೋಡು ಎಂದು ಹೇಳಿ
ಲಿಂಬೀಹಣ್ಣಿನ ನಾಲ್ಕು ತುಂಡುಗಳ
ನ್ನು ಮುರಳಿ ಮೇಜಿನ ಮೇಲಿಟ್ಟು, ಅವು
ಗಳಲ್ಲಿ ಬಂದನ್ನು ಕೈಯಲ್ಲಿ ತಕ್ಕೊಂಡು),
ಬಾಲಕಾ ನನ್ನ ಕೈಯಲ್ಲಿ ಏನದೆ?

ವಿದ್ಯಾರ್ಥಿ—ಲಿಂಬೀಹಣ್ಣಿನ ಒಂದು ತುಂಡು.

ಅಧ್ಯಾಪಕ—ನಾನು ಇಡೀ ಲಿಂಬೀಹಣ್ಣಿನಲ್ಲಿ ಎಷ್ಟು
ಸಮ ತುಂಡುಗಳನ್ನು ಮಾಡಿರುವೆನೆಂಬ
ದು ನಿನಗೆ ಗೊತ್ತಾದಷ್ಟೇ?

ವಿದ್ಯಾರ್ಥಿ—ಹೌದು, ನಾಲ್ಕು ಸಮ ತುಂಡುಗಳನ್ನು
ಮಾಡಿರುವಿರಿ.

ಅಧ್ಯಾಪಕ—ಬಳ್ಳೀನು, ಕರೇ ಹಲಿಗೆಯ ಮೇಲೆ
ಭೀದನ ಸೂಚಕವಾದದ್ದೊಂದು ತಕ್ಕಷ್ಟು

ಅಡ್ಡ ಗೆರೆಯನ್ನೆಳೆದು, ಆ ಗೆರೆಯು ಕೆಳಗೆ ಇಡೀ ವಸ್ತುವಿನಲ್ಲಿ ಮೂಡಿದಷ್ಟು ಸಮ ತುಂಡುಗಳನ್ನು ಸೂಚಿಸುವ ಅಂಕಿಯನ್ನು ಬರಿ?

ವಿದ್ಯಾರ್ಥಿ—(೪) ನಾಲ್ಕು ಅಂಕಿಯನ್ನು ಬರೆಯುತ್ತಾನೆ.

ಅಧ್ಯಾಪಕ—ಇನ್ನು ಗೆರೆಯ ಮೇಲ್ಬದಿಯಲ್ಲಿ ನಾನು ತೆಗೆದುಕೊಂಡಷ್ಟು ತುಂಡುಗಳನ್ನು ಸೂಚಿಸುವ ಅಂಕಿಯನ್ನು ಬರಿ.

ವಿದ್ಯಾರ್ಥಿ—(೧) ಒಂದು ಅಂಕಿಯನ್ನು ಬರೆಯುತ್ತಾನೆ.

ಅಧ್ಯಾಪಕ—ಈಗ ಗೆರೆಯ ಮೇಲಿನ ಅಂಕಿಯು ನಾವು ತಕ್ಕೊಂಡ ಭಾಗ (ಅಂಶ) ಗಳನ್ನು ಸೂಚಿಸುತ್ತದೆಂತಲೂ, ನಡುವಿನ ಗೆರೆಯು ಇಡೀ ವಸ್ತುವನ್ನು ಛೇದಿಸಿರುತ್ತದೆಂತಲೂ ಕೆಳಗಿನ ಅಂಕಿಯು ಇಡೀ ವಸ್ತುವಿನಲ್ಲಿ ಮೂಡಿದ ಸಮಭಾಗ (ಛೇದ)ಗಳನ್ನು ಸೂಚಿಸುತ್ತದೆಂತಲೂ ಚನ್ನಾಗಿ ಲಕ್ಷದಲ್ಲಿಡು.

ವಿದ್ಯಾರ್ಥಿ—ಬಳ್ಳೀದು ಸ್ವಾಮಿ.

ಅಧ್ಯಾಪಕ—ನೀನು ಬರೆದಿರುವ ಎರಡು ಅಂಕಿಗಳಲ್ಲಿ ಅಂಶ ಛೇದಗಳ್ಯಾವವು ಹೇಳು ನೋಡುವ?

ವಿದ್ಯಾರ್ಥಿ—ಗೆರೆಯ ಮೇಲಿನ (೧) ಒಂದು ಅಂಕಿ ಅಂಶವು; ಕೆಳಗಿನ (೪) ನಾಲ್ಕು ಅಂಕಿ ಛೇದವು.

ಅಧ್ಯಾಪಕ—(ಆ ಮೇಲೆ ಹೀಗೆ ಬರೆವ ಅಂಕಿಯನ್ನು ಹ್ಯಾಗೆ ಓದಬೇಕೆಂಬುದನ್ನು ಹೇಳಿಕೊಟ್ಟು) ಈ ಕರೀ ಹಲಿಗೆಯ ಮೇಲೆ ಬರೆದಿರುವ ಅಂಕಿಯನ್ನು ಓದು.

ವಿದ್ಯಾರ್ಥಿ—ಬಂದು ನಾಲ್ಕನೇ ಅಂಶವೆಂದು ಓದುತ್ತಾನೆ.

ಅಧ್ಯಾಪಕ—ಈ ಲಂಕಿಯು ಯಾವ ವಸ್ತುವನ್ನು ತೋರಿಸುತ್ತದೆ?

ವಿದ್ಯಾರ್ಥಿ—ನೀವು ಕೈಯೊಳಗೆ ಹಿಡಿದಿರುವ ಲಿಂಬೀಹಣ್ಣಿನ ಬಂದು ತುಂಡನ್ನು ಅಂದರೆ ಅಪೂರ್ಣ* ವಸ್ತುವನ್ನು ತೋರಿಸುತ್ತದೆ.

ಅಧ್ಯಾಪಕ—(ಪೂರ್ಣ ವಸ್ತುವನ್ನು ತೋರಿಸುವ ಅಂಕಿಗೆ ಪೂರ್ಣಾಂಕಿ ಎಂದು ಹ್ಯಾಗೆ ಅನ್ನುವರೋ ಹಾಗೆಯೇ ಈ ಅಪೂರ್ಣ ವಸ್ತುವನ್ನು ತೋರಿಸುವ ಅಂಕಿಗೆ ಅಪೂರ್ಣಾಂಕಿ ಅನ್ನುವರೆಂದು ಹೇಳಿ ಕೊಟ್ಟ್ಟ), ಈ (೩) ಬಂದು ನಾಲ್ಕನೇ ಅಂಶ ಅಂಕಿಗೆ ಎಂಥ ಅಂಕಿ ಅನ್ನಬೇಕು.

ವಿದ್ಯಾರ್ಥಿ—ಅಪೂರ್ಣಾಂಕಿ ಅನ್ನಬೇಕು.

ಅಧ್ಯಾಪಕ—ಅದ್ಯಾಕೆ?

ವಿದ್ಯಾರ್ಥಿ—ಅದು ಅಪೂರ್ಣ ವಸ್ತುವನ್ನು ತೋರಿಸುವದು.

ಅಧ್ಯಾಪಕ—ಲಿಂಬೀಹಣ್ಣಿನ ಇನ್ನೊಂದು ತುಂಡನ್ನು ತೆಗೆದುಕೊಳ್ಳುತ್ತೇನೆ, ಈಗ ನನ್ನ ಕೈಯಲ್ಲಿ ಎಷ್ಟು ತುಂಡುಗಳಾದವು?

ವಿದ್ಯಾರ್ಥಿ—ಎರಡು ತುಂಡುಗಳು.

---

* ಈ ಅಪೂರ್ಣ ವಸ್ತುಗಳನ್ನು ತೋರಿಸಲಿಕ್ಕೆ .।. .॥. .॥. ಈ ತರಹ ಗೀಟುಗಳನ್ನು ಸಹ ಉಪಯೋಗಿಸುವದುಂಟು.

ಅಧ್ಯಾಪಕ—ಈ ಎರಡು ತುಂಡುಗಳನ್ನು ನಾನು ಮೇಲೆ ಹೇಳಿದಂತೆ ಅಂಕಿಯಿಂದ ಬರೆದು ತೋರಿಸುವಿಯಾ?

ವಿದ್ಯಾರ್ಥಿ—ಕರೇ ಹಲಿಗೆಯ ಮೇಲೆ (*) ಈ ಅಂಕಿಯನ್ನು ಬರೆಯುತ್ತಾನೆ.

ಅಧ್ಯಾಪಕ—ಈ ಅಂಕಿಯನ್ನು ಓದು.

ವಿದ್ಯಾರ್ಥಿ—ಎರಡು ನಾಲ್ಕನೇ ಅಂಶವೆಂದು ಓದುತ್ತಾನೆ.

ಅಧ್ಯಾಪಕ—ಈ ಅಂಕಿಗೆ ಎಂಥ ಅಂಕಿ ಅನ್ನಬೇಕು.

ವಿದ್ಯಾರ್ಥಿ—ಅಪೂರ್ಣಾಂಕಿ ಅನ್ನಬೇಕು.

ಅಧ್ಯಾಪಕ—ಅದ್ಯಾಕೆ?

ವಿದ್ಯಾರ್ಥಿ—ಅದು ಎರಡು ಹೋಳುಗಳನ್ನು ಅಂದರೆ ಅಪೂರ್ಣ ವಸ್ತುವನ್ನು ತೋರಿಸುತ್ತದೆ.

ಅಧ್ಯಾಪಕ—ಮೇಜಿನ ಮೇಲಿನ ಇನ್ನೊಂದು ಹೋಳನ್ನು ನನ್ನ ಕೈಯಲ್ಲಿ ತೆಗೆದುಕೊಳ್ಳುವೆನು; ಈಗ ಎಷ್ಟು ಹೋಳುಗಳುಂಡವು?

ವಿದ್ಯಾರ್ಥಿ—ಮೂರು ಹೋಳುಗಳು.

ಅಧ್ಯಾಪಕ—ಈ ಮೂರು ಹೋಳುಗಳನ್ನು ಅಂಕಿಯಿಂದ ಬರೆದು ತೋರಿಸು?

ವಿದ್ಯಾರ್ಥಿ—(*) ಈ ಅಂಕಿಯನ್ನು ಬರೆಯುತ್ತಾನೆ.

ಅಧ್ಯಾಪಕ—ಈ ಅಂಕಿಯನ್ನು ಓದು?

ವಿದ್ಯಾರ್ಥಿ—ಮೂರು ನಾಲ್ಕನೇ ಅಂಶವೆಂದು ಓದುತ್ತಾನೆ.

ಅಧ್ಯಾಪಕ—ಈ ಅಂಕಿಗೆ ಎಂಥ ಅಂಕಿ ಅನ್ನಬೇಕು?

ವಿದ್ಯಾರ್ಥಿ—ಅಪೂರ್ಣಾಂಕಿ ಅನ್ನಬೇಕು.

---

* ಅಂದರೆ $\frac{3}{4}$ ಎಂಬುದನ್ನು ತಿಳಿಸಿ ಕೊಡಬೇಕು.

CORRESPONDENCE.

ಪತ್ರ ವ್ಯವಹಾರವು.

ತಿದ್ದುವಿಕೆಯೂ ಶಿಕ್ಷಣವೂ.

೧೦ನೇ ಅಧ್ಯಾಯ.

ವಸಂ.॥ ಪ್ರಾರಂಭದೊಳ್ ಪಡೆದ ಭಾವನೆತಾಂ ಗರಿಜ್ಜಂ।
ೀರುತ್ತುದ್ಯೆಯದನು ತಾಂ ಲಘುಕಾರಣಂ ದಲ್ ॥ ಪೂರ್ಯೆಸೆ
ುತ್ಸಯಿಪ್ರುದ್ಯೆ ನಿಜಶಿಷ್ಯವರ್ಗಂ । ಕೋರುತ್ತ ನಿತ್ಯಮು
ಕೂಲಿಸುವಂತೆ ನಿಂಗೆ ॥ ೧ ॥ ಚಂಪ. ॥ ಅರಿವಿನಬಲ್ಪು
ರ್ಯವು ಸ್ಥೈರ್ಯ ವಿವೇಕ ಗುಣಂಗಳಲ್ಲದೆ । ವರವ್ಯ
ಹಾರದೊಳ್ ಪಡೆವ ಜ್ಞಾನಮಿವಿರ್ದೊಡೆ ಪೂಜ್ಯ ಬುದ್ಧಿ
ಂ ॥ ತ್ವರಮುವರ್ಯೆದೆ ಮೆಚ್ಚುವರು ಶಿಕ್ಷಕವರ್ಯನಿಗಂ
ಕಂ ದಯಾ । ಭರಿತನು ಮೇಣ್ ವಿಶಾಲಮನನಾಗಲವಂ
ದದಿಂ ಸುಶಿಕ್ಷಕಂ ॥ ೨ ॥ ಕಂ.॥ ಅತಿದೃಢ ನಿಶ್ಚಯ ಮನ
ಂ । ಕೃತಾಪರಾಧರೊಳು ತಾನು ನಿದರ್ಶಿಣ್ಯಂ ॥
ತತಂ ನಿಜಶಿಕ್ಷಕನೆಂ । ಬತಿದೃಢ ಭಾವನೆಯನೊರು ನೀಂ
ರ್ಯರೊಳಾಂ ॥ ೩ ॥ ಶಾ. ವಿ.॥ ಸಂತೋಷಂ ಸಲೆಪೆಜ್ಜು
ಂತ ನಿಜಶಿಷ್ಯವರ್ಗಂ ವಿಚಾರಾಂತದಿಂ । ಸಂತಂ ಮಾಡು
ವ್ಯವಸ್ಥೆಯುಂ ಸಿಡುಕನೊಲ್ ಸ್ಥೈರ್ಯ ವೃತ್ತಿಸ್ಥನೊಲ್ ॥
ೀಂ ತೋರುತ್ತಿರಲಾಗದೈ ಚಪಲತಾ ಸ್ಥೈರ್ಯಂಗಳಿಂ
ಕ್ಷಕಂ । ತಾಂ ತಾಳ್ವಂ ಸಲೆಖ್ಯಾತಿಯುಂ ಪಡೆವುತಂ ಕಾ
ರ್ಯಾಂತ ಪರ್ಯಂತ ಸಿದ್ಧಿಯುಂ ॥ ೪ ॥ ಕಂ.॥ ಜನರೊಳ್ ಶಿಷ್ಯ
ುಳೆಂಮುಂ । ನಿನಗಿಲ್ಲದ ಗುಣವ ದಂಭದಿಂ ಬಳಯಿಸಬೇ ॥
ನುವಿವು ಮೆಚ್ಚಿಕೆಗೈ ಕೇಳ್ । ನಿನುತ ಸ್ವಾಭಾವಿಕತ್ವ
ರಳ ಸುಮಾರ್ಗಂ ॥ ೫ ॥ ನಿಜಮಾಗಿ ತನಗೆ ಸುಗುಣ।
ನಿಜಮಿರ್ದೊಡಮಳಿವುವಕಟ ದಾಂಭಿಕತೆಯೊಳಾಂ ॥ ನಿಜ

ಮಿಂತಿರ್ದರೊಳಂ ತಾಂ । ನಿಜಸದ್ಗುಣಮಿರವೆನುತ್ತೆ ಜನರೆ
ಣಿಸುವರೈ ॥ ೬ ॥ ಅಡೆಗುಗುಮದು ಪುಂಡಾಟಂ । ಗಡಕ್ಕೃ
ತ್ರಿಮವಲ್ಲದಿರ್ದ ಪ್ರೀತಿಯೊಳಂ ಸಂ॥ ಗಡಿಸಿದ ಸ್ಥಿರತ್ವದಿಂ
ಕೇಳ್ । ತಡಮಿಲ್ಲದೆ ಶಿಷ್ಯಮನವು ತಿರ್ದಲ್ಪಡುಗುಂ ॥ ೭ ॥

೨೦ನೇ ಅಧ್ಯಾಯ.

ವಾರ್ಧಿ.॥ ಅವ ಕಾಲೆಯು ವ್ಯವಸ್ಥೆಯು ತಾನು ಸವು
ವಿಹುವ । ದಾವಕಾಲೆಯು ಶಿಷ್ಯರೆಣಿಕೆ ಮೀರವ ತೆರದೆ । ಸ್ವಾ
ವಲಂಬನದಿಂದೆ ಮಾಡುವರೊ ನಿಯಮಿಸಿದ ಕ್ರಿಯೆಗಳನ್ನಾ
ಸ್ಥೆಯಿಂದೆ ॥ ಅವ ಕಾಲೆಯು ಶಿಕ್ಷಣ ಕ್ರಮದ ಗೌರವವು ।
ಭಾವಿಸಲ್ಪಟ್ಟಿಹುದೊ ಪಿರಿದೆಂದು ಕೇಳಿಯಿಂ । ಭಾವಿಸಲ್ಕೀ
ಯುದೊ ಸ್ವೀಕೃತಿಯನ್ನಾ ಕಾಲೆ ಜ್ಞಾನಮಂ ನೆಲೆಮಾಳ್ಪುದು॥
೮॥ ತ್ರಿಪದಿ ॥ ಸರಲನೈತ್ತಿಯು ನಿಯಮಿತತ್ವಂ ಶಾಂತ
ವಾದ ಪ್ರಯತ್ನವು । ಪರಮ ಸದ್ಬುದ್ಧಿಯ ಸಮುದ್ದೇಶಂ
ಗಳಾ ಪ್ರೊತ್ಸಾಹವು ॥ ಸರಸ ಸೃಷ್ಟಿಯ ನಿಯಮವನುವರ್ತ
ನವು ನ್ಯಾಯವು ಪ್ರೀತಿಯು । ಕರಣಮಿವು ಕಾಲಾವ್ಯವಸ್ಥೆಯ
ಕಾವುವಕೆ ನಿಜಮಾರ್ಗವು ॥ ೯ ॥ ಕಂ.॥ ನಿಜಶಿಷ್ಯರ್ಗಲ್ಲಿ
ಪ್ರೇಮದ । ಧ್ವಜಮುಂ ನಿಲಿಸಲ್ಕೆ ತನ್ನ ಮನದೆಣಿಕೆಯು
ತಾಂ ॥ ವಿಜಯದ ಪತಿವುದು ಶಿಷ್ಯರ್ । ಧ್ವಜಮುಂ ನಿಲಿಸು
ವರು ತನ್ನೊಳುಂ ಪೂಜ್ಯತೆಯಾ ॥ ೧೦ ॥ ವಾರ್ಧಿಕ॥ ಅವ
ಮನುಜನು ಸ್ವಜನ ಮತಮನೆಮರಿಸಲರಿಯ । ನಾವನೆಂ
ತ್ಪಾಯಮುಂ ಮೀರಲರಿಯಂ ವ್ಯಯನು । ನಾವಮನುಜಂ
ಮಾಳ್ಪನೋ ಪಣವ ತಾನಾರದಿರ್ದೊಡಂ ದಂಭದಿಂದಾ ॥
ಅವಮನುಜಂ ಸ್ವಹಿತವಲ್ಪಾವರ್ಥವ । ನ್ನೀವ ವ್ಯವಹಾರ
ದೊಳ್ ಕಟ್ಟಳೆಯ ಮುರಿಮ ತಾ । ನೋವಲಾರನೊ ಸ್ವಸ್ವ
ತಂತ್ರತೆಯ ನಾತಂಗೆ ಗೌರವವ ನೀವರಾರ್ಸ್ ॥ ೧೧

ಕಂ. ॥ ಆಳಿಕೆಯ ಶಕ್ತಿಯೆನಿಪ್ಪುದು । ಕೇಳ್ಕೈ ಸಚ್ಛಿಷ್ಯಕರ್ಗೆ ಲಕ್ಷಣವೆನಿಕುಂ ॥ ತಾಳಲ್ಬಹುದಿರದಿರೆಯದು। ಕಾಳಕ್ರಮ ರೂಢಿಯಿಂದೆ ಬಹುಲಾಂಶದೊಳುಂ ॥ ೧೨ ॥ ಊನತೆಯಿದು ಸ್ವಾಭಾವಿಕ । ಮಾನೇವೆಂ ಯತ್ನಮಿಲ್ಲವೆಂದೆನುತಂ ತಾಂ॥ ಮೌನದೆ ಕುಳ್ಳಿರೆ ಚಿಂತಿಸಿ । ತಾನೇ ಪ್ರಕಟಿಸನೆ ತನ್ನ ಪೇಡಿತನವನೇಂ ॥ ೧೩ ॥ ತಮ್ಮಯ ತಪ್ಪಂ ಮನದೊಳ್ । ಸಮ್ಮತಿಸುತೆ ನೆನಪುಗೊಂಡು ಮುಂದೆಂದು ಮದು ॥ ತಮ್ಮಂ ದಾಗದ ತೆರದಿಂ । ನೆಮ್ಮುತೆ ನಿಶ್ಚಯಿಪ್ಪುದುನ್ನತಿಯು ಗನ್ಮಾರ್ಗಂ ॥ ೧೪ ॥ ಭಾವಿ. ॥ ಕಲಿಪುದರ ಪೋಲಾದ ಮಾರ್ಗವ । ಸುಲಭ ಯುಕ್ತೋದಾಹೃತಿಯ ಮುಂ । ಜಾಬತರಂ ತಿಳಿವಂತೆ ವಿಷಯುವ ವಿವರಿಸುವ ಕ್ರಮವಾ ॥ ಪಲಬಗೆಯೊಳಂ ಕೋಧಿಸುತ ನೀಂ । ಸಲೆ ನಿಪುಣತೆಯ ನೆಯ್ದೆ ದೊರಕಿಪ । ಕೆಲಸದೊಳ್ ಪೇಳೆಯ ವ್ಯಯವದೆನಿತಾದೊಡಂ ಸಮಮೈ ॥೧೫॥ ಕಂ.॥ ನೀನಿಸಗುತ್ತಿರೆ ಶಿಷ್ಷಣ । ಪೇ ನಾನು ಮದೊದಗಲ ವ್ಯವಸ್ಥೆಯು ನೀನನು ॥ ಮಾನಿಸದೆ ಪಾಠಮಂ ತಪೆ । ತಾನಾಗಿಯೆ ನಿಲ್ವುದವ್ಯವಸ್ಥೆಯು ತಿಳಿನೀಂ ॥೧೬॥ ತನ್ನೊಳ್ ತನ್ನೆಯ ನೆಂಬುಗೆ । ಯುನ್ನತಿ ಯಿರದಿರೆ ಯದರದೆ ಸಚ್ಛಿಷ್ಷಕನುಂ ॥ ಮುನ್ನಮೆ ಕೆಡುವಂ ನಿಶ್ಚಯ । ಮನ್ನತಿಯೆ ರದೀಸುವವನ । ತೆರದಿಂದಂ ಕೇಳ್ ॥ ೧೭ ॥ “ಗೊತ್ತಂ ಪಿಡಿ, ಹಿಂಬಾಲಿಸು । ಮತ್ತಲ್ಲಿಂ ಮುಂದಕೊಯ್ಯ್ಯೆ’, ಯೆಂಬೀ ಶಬ್ದವ ॥ ಪೊತ್ತಂ ಹುಡುಗರ ನಡಿಯಿಪ । ಚಿತ್ತಂ ಬಹು ಸರಸಮಾಗಿ ಬೋಧಿಸಿದಪುದೈ ॥ ೧೮ ॥ ವಸಂ.॥ ತಾಂ ಕೊಂಡ ಕಾರ್ಯವನು ಪೂರಿಪೆನೆಂಬ ಸತ್ಯ । ಸಂಕಲ್ಪದಿಂದೆ ಕೊನೆಗಾಣ್ಬದು ತನ್ನ ಕಾರ್ಯಂ ॥ ಸಂಕಲ್ಪಕಂ ಮನದೆ

ವ್ಯತ್ಯಯ ಮೆಯ್ದಲಾಗಳ್ । ತಾಂ ಕೆಟ್ಟು ಪೋಗನೆ “ವಿ
ಶ್ಯತಿ ಸಂಶಯೊತ್ಮಾ” ॥ ೧೯ ॥ ಆಶಾಪ್ರಬದ್ಧತೆ ಮನಕ್ಕ
ರುವನ್ನೆಗಂ ತಾಂ । ಕ್ಲೇಶಂ ಸ್ವಕಾರ್ಯಕೆರಡೈ ಯೆನಿಪುಂ
ಪ್ರಮುಕ್ಕಾ ॥ ವೇಶಕ್ಕೆ ಕಾರಣಮದಲ್ತಿ ಫಲಂ ಮನಕ್ಕೆ
ಕ್ಲೇಶಾಫಲೇನಹಿಪುನರ್ನವತಾಂವಿಧತ್ತೇ ॥ ೨೦ ॥

[ಮುಂದೆ ನಾಗುವದು.]

ಅದರಗುಂಚಿ, ತಾ. ಹುಬ್ಬಳ್ಳಿ. } ಭೀಮಾಜಿ ವಿರೂಪಾಕ್ಷ,
ತಾ. ೧೩ನೇ ನವಂಬರ, ೯೩. } ಜನಪನಹಳ್ಳಿ ಸ್ಕೂಲ ಮಾಸ್ತರ

NOTICE.

ಸನ್ ೧೮೯೩ ಇಸವಿಯ ಸಪ್ಟಂಬರ ತಿಂಗಳಲ್ಲಿ ಆದ ಧ
ರವಾಡ ಟ್ರೇನಿಂಗ ಕಾಲೇಜಿನ ಸರಟಿಫಿಕೇಟಿನ ಪರೀಕ್ಷೆಯ
ಲ್ಲಿ ಪಾಸಾದ ೨೦ನೆಯ ವರ್ಷದ ವಿದ್ಯಾರ್ಥಿಗಳ ಹೆಸರುಗಳು

(೧೮೮೬ನೇ ಪುಟದಿಂದ ಮುಂದೆ ನಾಗಿದ್ದು.)

ನಂಬರು.	ಹೆಸರು.	೧೦೦೦ ಗುಣಗಳಲ್ಲಿ ಪಡೆದ ಗುಣಗಳು.	ಸರ್ಟಿಫಿಕೇಟು
೧	ವಲ್ಲಭ ಮಹಾಲಿಂಗ ತಟ್ಟಿ	೬೪೫೨	೧೫ ರೂ.
೨	ಗೋವಾಳ ಧೋಂಡದೇವ ಚಿಟ್ಟೀನ	೬೨೦	೧೫ ರೂ.
೩	ಬಾಳಕೃಷ್ಣ ಸರ್ಜೆರಾವ ಕುಲಕರ್ಣಿ	೬೦೫೪	೧೫ ರೂ.
೪	ಗೋವಿಂದ ಕೇಶೋ ಹೊಣವುಂತಗಪ	೬೦೧೨	೧೫ ರೂ.
೫	ಬಸವರುದ್ರ ಸೋಮಪ್ಪ ಕುಲಕರ್ಣಿ	೬೦೪	೧೫ ರೂ.
೬	ಮಹಮ್ಮದಸಾಬ ಖು. ಖತೇಬ	೫೯೪	೬೦ ರೂ.

ಬಟ್ಟಿ ಅಜ್ಜೇಜ ವಿಠಾಬಟ್ಟ ನ್ಯಾಪತರಗಿ	೫೪೩೨	೧೦ ರೂ.
ಕೃಷ್ಣಾಜಿ ಕೂಸೊ ಕುಲಕರ್ಣಿ	೫೬೯೨	೧೦ ರೂ. †
ಂಕ್ರಯ್ಯಾ ಚನಬಸಯ್ಯ ಚರಂತಿಮಠ	೫೬೫೪	೧೦ ರೂ. †
ಾಪುಚಂದ್ರ ನಾರಾಯಣ ಅಡಕೋಳಿ	೫೬೦	೧೦ ರೂ. †
ಹಣವಂತ ಭೀಮಾಜಿ ಕುಲಕರ್ಣಿ	೫೬೬	೧೦ ರೂ. †
ೀಮಾಜಿ ಲಕ್ಷ್ಮಣ ಕುಲಕರ್ಣಿ	೫೬೫೨	೧೦ ರೂ. †
ರಭಪ್ಪ ರಾಚಪ್ಪ ಅಳಗವಾಡಿ	೫೫೬	೧೦ ರೂ. †
ಂಪೋ ಗೋನಾಳ ತಟ್ಟಿ	೫೫೬೨	೧೦ ರೂ. †
ೀವಾಜಿ ಶೇಷೋ ಹಣವಂತಗಡ	೫೪೯	೧೦ ರೂ.
ಂಗಾಧರ ವಿಠಾಜಿ ಕುಲಕರ್ಣಿ	೫೪೪೨	೧೦ ರೂ. †
ಾಸೋ ಅಣ್ಣಾ ಚಾರ್ಯ ಅಧ್ಯಾಪಕ	೫೪೪	೧೦ ರೂ.
ೀತಾರಾಮ ವೇದವ್ಯಾಸ ಖ್ಯಾತನಹಾಳ	೫೦೬೨	೧೦ ರೂ.
ಂಗಾಧರ ಮುರಲೀಧರ ಕುಲ್ಕರ್ಣಿ	೫೦೬	೧೦ ರೂ.
ಬ್ಬಾಜಿ ಗೋವಿಂದ ಜೋಕಾಡೆ	೫೦೨	೧೦ ರೂ. †
ಾಸುದೇವ ಕೃಷ್ಣ ಕುಲಕರ್ಣಿ	೫೦೯	೧೦ ರೂ.
ನಂತ ಕೃಷ್ಣ ಬಾನಿ	೫೦೯	೧೦ ರೂ. †
ರಾಯಣ ಭೀಮಾಜಿ ಯರಡುಂರವಿ	೫೦೧೦	೧೦ ರೂ.
ರವೀರಯ್ಯ ವೀರಯ್ಯ ಗಣಾಚಾರಿ	೫೦೮೨	೧೦ ರೂ. †
ೀಷೋ ಲಕ್ಷ್ಮಣ ಜೋಯಿಸ	೫೦೫೨	೧೦ ರೂ.
ಾಳಾಜಿ ನರಸಿಂಹ ಪಾಟೀಲ	೫೦೪	೧೦ ರೂ. †
ಂಬಾಜಿ ಮಹಾದೇವ ಜೋಯಿಸ	೫೦೦೨	೧೦ ರೂ.
ಾಮಚಂದ್ರ ಮಂಜುನಾಥ ಧೋಪಳೆ	೫೦೦೨	೧೦ ರೂ. †

೬೯	ಬಸಯ್ಯಾ ಅಯ್ಯಪ್ಪ ಕುಲಕರ್ಣಿ	೪೯೫	೧೮ ೭
೭೦	ಜಕ್ಕಪ್ಪಾ ಲಿಂಗಪ್ಪಾ ಪಿಡ್ಡನಾಯಿಕ	೪೯೬	೧೮ ೭
೭೧	ಸಿದ್ರಾಮಪ್ಪಾ ಮುದಕಪ್ಪ ಅಬ್ಬಾಯಿ	೪೯೭	೧೮ ೭
೭೨	ಗಣಪತ ಸುಬ್ಬರಾವ ನಿಲೇಶ್ವರ	೪೯೮	೧೮ ೭
೭೩	ಶೇಷೋಸುಬ್ಬಾಜಿ ಪುರೋಹಿತ	೪೯೯	೧೮ ೭
೭೪	ವೀರಯ್ಯಾ ಬಸಯ್ಯಾ ಪಸ್ತಪದ	೫೦೦	೧೮ ೭
೭೫	ಭೀಮಾಜಿಸ್ವಾಮಿರಾಯಾಜಾಶ್ಯಮೋಳಿ	೫೦೧	೧೮ ೭
೭೬	ಮಲ್ಲಾರ ಶ್ರೀಗಿರ ಕುಲಕರ್ಣಿ	೫೦೨	೧೮ ೭
೭೭	ಕೃಷ್ಣ ಗಣಪ್ಪ ಹೆಗಡೆ	೫೦೩	೧೮ ೭
೭೮	ಗಣೇಶ ದಾಮೋದರ ಹಲಸಂಗಿ	೫೦೪	೧೮ ೭
೭೯	ಭೀಮಾಜಿ ಗೋಪಾಳ ಕುಲಕರ್ಣಿ	೫೦೫	೧೮ ೭
	ಹೊರಗಿನಿಂದ ಪರೀಕ್ಷೆಗೆ ಬಂದವರು.		
೮೦	ರಾಮಚಂದ್ರ ಬಾಳಾಜಿ ಕೊಣ್ಣೂರ	೫೦೬	೧೮ ೭
೮೧	ತಿರಕೋ ಕಲ್ಲೋ ಕುಲಕರ್ಣಿ	೫೦೭	೧೮ ೭
೮೨	ಲಾಡ ಅಪಪ್ಪಾ ಕರೀಮು ಸಾ. ತಾಳಿಕೋಟಿ.	೫೦೮	೧೮ ೭

(ಸಶೇಷ.)

† ಇವರನ್ನು ಮೂರನೇ ವರ್ಷದ ಅಭ್ಯಾಸಕ್ಕಾಗಿ ಲೀಜವಲ್ಲಿ ಇಟ್ಟುಕೊಂಡಿರುತ್ತದೆ.—

ಶಾಲಾಪತ್ರಕ.

ಪದ್ಯಂ.

ಪ್ರಿಯವಿದ್ಯಾಗುರುವರ್ಯರುನ್ನತಿಕೆಯಂ ಸಚ್ಛಿಕ್ಷಣೋತ್ಕರ್ಷಮಂ।
ಬಯಸುತ್ತಂ ಪ್ರತಿವಾಸವಾದಿಗೊಲವಿಂದೀಪತ್ರಮಂ ಮುದ್ರಿಸಿ ॥
ನಯದಿಂದಿತ್ತಪೆವೋದುವರ್ಗೆಸುಗುಣಂ ತೋರಲ್ಕೆಕೈಕೊಂಬುದೈ।
ದಯೆಯಿಂದೋಷವತಿದ್ದವೇಳ್ವುದುಬುಧರ್ಜ್ಞಾನಾಭಿವೃದ್ಧಿಪ್ರಿಯರ್॥೧

EDUCATIONAL INTELLIGENCE AND USEFUL, NOTES.

ವಿದ್ಯಾಸುಧಾರಣಾ ಸಂಬಂಧದ ವೃತ್ತಾಂತಗಳು.

ಯೋವಿಯರ್ಸ ಕಾಲೇಜದ ಬಕ್ಷಿಸ ಸಮಾರಂಭದ ಕಾ
ಕ್ಕೆ ಆ ಸಾಲಿಯಲ್ಲಿ ಕಲಿಯುತ್ತಿರುವ ೧೦೦೦ಕ್ಕಿಂತ ಹೆಚ್ಚು
ವಿದ್ಯಾರ್ಥಿಗಳ ಸಂಖ್ಯೆಯನ್ನೂ ಅವರ ಜಾತಿವೈಚಿತ್ರ್ಯ
ನ್ನೂ ಭಿನ್ನ ಜಾತಿಯವರಾದಾಗ್ಯೂ ವಿದ್ಯಾರ್ಥಿಗಳನ್ನು
ತೃಪ್ರೇಮದಿಂದ ನಡಿಸಿಕೊಳ್ಳುವ ಕಾಲೇಜಾಧ್ಯಾಪಕ
ವರ್ಯವನ್ನೂ ಕಾಲೇಜದಲ್ಲಿ ನಡಿಯುತ್ತಿರುವ ಆ್ಯಂ
ನ ಭಾಷೆಯ ಅಭ್ಯಾಸವನ್ನೂ ಸ್ವತಂತ್ರೋದ್ಯೋಗಕ್ಕೆ ಅ
ನುಕೂಲವಾದ ರನಾಯನೆಶಾಸ್ತ್ರ ಲಘುಲಿಪಿಗಳ ಅಧ್ಯಯನ
ವನ್ನೂ ವಿದ್ಯಾರ್ಥಿಗಳಲ್ಲಿ ಅಭ್ಯಾಸದ ಸಂಬಂಧದಿಂದ ಪ್ರತಿ
ವರ್ಷದ ಮೇಲಾಟವನ್ನೂ ಕಾಲೇಜವು ಪಡೆದ ೧೧೦೦ ರೂ
ಪಾಯಿ ಇನಾಮನ್ನೂ ಫೀಜಿಂದ ಕೂಡಿದ ೬೫೦೦ ರೂ
ಪಾಯಿಗಳ ಪೊಬಲಗನ್ನೂ ಪರೀಕ್ಷೆಗಳಲ್ಲಿ ಪಾಸಾದ ವಿ
ದ್ಯಾರ್ಥಿಗಳ ಪೆಟ್ಟಿ ಸಂಖ್ಯೆಯನ್ನೂ ಕುರಿತು ಕಾಲೇಜಾ
ಧ್ಯಕ್ಷಸ್ಥಾಪಕರನ್ನೂ ನೇಕ ನಾಮುದಾರ ಗವರ್ನರ ಮೊದ

ಗಳು ಕೊಂಡಾಡಿ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಎರಡ
ಬುದ್ಧಿಯ ಮಾತುಗಳನ್ನು ಹೇಳಿದರು. ಆವು ಗೌರ
ವುಳ್ಳವುಗಳಾಗಿರುವವರಿಂದ ಆವುಗಳನ್ನು ನಮ್ಮ ವಾಚಕ
ಸಲುವಾಗಿ ಕೆಳಗೆ ಬರೆಯುತ್ತೇವೆ.

ನಮ್ಮ ಚಿಕ್ಕ ಮಿತ್ರರೇ ನೀವು ಮುತ್ತು ಬೇರೆ ಸಾಲಿಗಳ
ಳಗಿನ ನಿಮ್ಮ ಸಹವ್ಯವಸಾಯಿಗಳು ಲೋಕಸಮಾಜದ ಒ
ದು ದೊಡ್ಡ ಭಾಗವಾಗಿರುವದರಿಂದ ನಿಮಗೆ ಎರಡು ಬುದ್ಧಿ
ಯ ಮಾತುಗಳನ್ನು ಹೇಳುತ್ತೇವೆ. ಅವನ್ನು ಲಕ್ಷವಲ್ಲಿಡಿ
" ಭಾವಿರಾಷ್ಟ್ರದ ಆಚಾರ ವಿಚಾರಗಳಿಗೂ ನಡೆನುಡಿಗ
ಗೂ ತಕ್ಕ ಮಾರ್ಗವನ್ನು ತೋರಿಸುವ ಭಾರವು ನಿಮ
ಮೇಲೆ ಉಂಟು. ನಿಮ್ಮ ಶುದ್ಧ ವರ್ತನದಿಂದ ನಿಮ
ಕುಟುಂಬವ ಕಿರಿಯ ಜನರಿಗಿಷ್ಟೇ ಅಲ್ಲ, ನಿಮ್ಮ ಬಂಧು
ಳಿಗವವರಿಗೂ ಇಷ್ಟ ಮಿತ್ರರಿಗೂ ಕಿಂಬಹುನಾ ನಿಮ
ಊರ ಜನರಿಗೂ ಉತ್ತಮ ಕಿತ್ತೆಯನ್ನು ಪಾಕಿಕೊಡು
ಫನವಾದ ಕಾರ್ಯವನ್ನು ನೀವು ಮಾಡುವದಿರುತ್ತದೆ. ನಿ
ವು ಪ್ರಾಮಾಣಿಕರೂ, ಸತ್ಯವಂತರೂ, ನೀತಿವಂತರೂ
ದೊಡ್ಡ ಮನಸ್ಸಿನವರೂ, ಭೂತದಯೆಯುಳ್ಳವರೂ, ಕ
ರ್ಯನಿಷ್ಠರೂ ಆಗಿರಲಿಕ್ಕೆಬೇಕು. ನಿಮ್ಮೊಳಗಿನ ಹಲ
ಜನರಿಗೆ ಈ ಮಾತಿನ ಗೌರವವು ತಿಳಿದಿರಲಿಕ್ಕಿಲ್ಲ. ಅವ
ಇದು ಸುಟಿಯೂ ಅಲ್ಲ; ಸುಲಭವೂ ಅಲ್ಲ. ನೀವು ಕಾರ್ಯ
ಷ್ಠರಾಗಲಿಕ್ಕೆ ಯತ್ನಿಸುವದು ಅತ್ಯವಶ್ಯವಾದದ್ದು. ಆಟ
ಲ್ಲಿಯೇ ಆಗಲಿ ಅಭ್ಯಾಸವಲ್ಲಿಯೇ ಆಗಲಿ ಈ ಗುಣವು ಬಹ
ಪ್ರಯೋಜನಕರವಾದದ್ದು. ಇದರಿಂದ ಸಂಸಾರವಲ್ಲಿ ತಲೆ
ವ ಅನೇಕ ತೊಂದರೆಗಳನ್ನು ನೀಗುವ ಸಾಮರ್ಥ್ಯವು
ಬರುವದಲ್ಲದೆ ಬಹುತರ ಯಾವತ್ತು ಸುಗುಣಗಳು ನೆಲೆಗೆ

ುವವು. ಮೇಲೆ ವಿವರಿಸಿದ ಗುಣಗಳನ್ನು ಸಂಪಾದಿಸಲಿ
ನೀವು ತ್ರಿಕರಣಪೂರ್ವಕವಾಗಿ ಯತ್ನಿಸತಕ್ಕದ್ದು.
ದರೆ ಆ ಕೆಲಸದಲ್ಲಿ ಕಾರ್ಯನಿಷ್ಠೆ ಎಂಬ ಗುಣವು ನಿಮಗೆ
ಹಳ ಅನುಕೂಲಿಸುವದು. ಪ್ರಸಂಗೋಪಾತ್ತಾಗಿ ಆಣ
ಂಗದ ಮೂಲಕವಾಗಿಯಾಗಲಿ ಅವಿಶ್ವಾಸದ ಮೂಲಕವಾ
ಯಾಗಲಿ ಕಾರ್ಯನಿಷ್ಠೆಯು ನಿಜವಾದ ಬೆಲೆಯು ಸರಿಯಾ
ತಿಳಿಯಲಿಕ್ಕಿಲ್ಲ. ಅಂಥ ಸಮಯಕ್ಕೆ ಎದೆಗುಂದದೆ ಕೆಲಸ
ಾಗಿಸಿರಿ. ಅಂದರೆ ನಿಮಗೆ ತಟ್ಟಿದ ತೊಂದರೆಗಳು ಸೂ
ರ್ಯಕಿರಣಗಳ ಮುಂದೆ ತೊಲಗುವ ತಮೋರಾಸಿಯಂತೆ
ಲಾಗುವವು. ಈ ಗುಣವನ್ನು ಸಂಪಾದಿಸುವದಕ್ಕೆ ಇದೇ
ಕ್ಕ ಕಾಲವು. ನಿಮ್ಮ ಮಾನಸಿಕ ಶಕ್ತಿಗಳು ಬೆಳೆಯು
ಿವೆ. ಮನಃಪ್ರವೃತ್ತಿಗಳು ಬಲಗೊಳ್ಳುತ್ತಲಿವೆ. ಇಂ
ಸಮಯದಲ್ಲಿ ನೀವು ಅನಾಸ್ಥೆಯನ್ನು ಬಿಸಾಟು ಲಟಿವ
ಾಗಲಿ ಅಭ್ಯಾಸವನ್ನಾಗಲಿ ನಿಷ್ಠೆಯಿಂದ ಸಾಗಿಸಿರಿ. ನಿಮ್ಮ
ಿಯು ಅಭಿಮಾನವು ನಿಮಗೆ ಯಾವಾಗಲೂ ಇರಲಿ.
ೀಹಕೊಳ್ಳಾಗಿ ನಿಮ್ಮ ಸಾಲಿಗೆ ಅಪಮಾನಕರವಾದ
ವ ಕೆಲಸವನ್ನು ಮಾಡಬೇಡರಿ. ಮತ್ತೊಂದು ಮಾ
ಏನೆಂದರೆ, ನಿಮಗಾಗಿ ತಮ್ಮ ಆಯುಷ್ಯವನ್ನೂ, ಸಾ
ಸೌಖ್ಯವನ್ನೂ ವೆಚ್ಚ ಮಾಡುವ ನಿಮ್ಮ ಗುರುಗಳ ಉಪ
ಾರವನ್ನು ಮರಿಯಬೇಡರಿ."

ಕಾಲೇಜಿನೊಳಗಿನ ವಿದ್ಯಾರ್ಥಿಗಳ ನಡಾವಳಿಯು.

ಪುಣೆಯಲ್ಲಿಯ ಡೆಕ್ಕನ್ ಕಾಲೇಜದ ಪ್ರಿನ್ಸಿಪಾಲರಾದ
ುಸ್ತರ ಸೆಲಬಿ ಇವರು ತಮ್ಮ ವಿದ್ಯಾರ್ಥಿಗಳಿಗೆ ಕೆಲವು
ಿೋಧಪರವಾದ ಮಾತುಗಳನ್ನು ಹೇಳಿದರು. ಆ ಮಾತು
ಳು ವಿಶೇಷತಃ ಕಾಲೇಜದಲ್ಲಿ ಅಭ್ಯಾಸ ಮಾಡುವ ವಿದ್ಯಾ

ರ್ಥಿಗಳಿಗೆ ಉಪಯುಕ್ತವಾಗಿರುವದರಿಂದಲೂ ಸರ್ವಸಾಧ
ರಣವಾಗಿ ಎಲ್ಲ ವಿದ್ಯಾರ್ಥಿಗಳಿಗೂ ಮಾಸ್ತರರಿಗೂ ಬೋಧಕ
ವಾಗಿರುವದರಿಂದಲೂ ಅವುಗಳನ್ನು ಕೆಳಗೆ ವಿವರಿಸಿದ್ದೇವೆ

೧. ಹಿಂದುಸ್ಥಾನದೊಳಗಿನ ಶಾಲೆಯ ವಿದ್ಯಾರ್ಥಿಗಳ
ಬತ್ತಟ್ಟಿಗೆ ಯಾವಾಗಲೂ ಕೂಡಿರದೆ ಅಭ್ಯಾಸ ನಡೆಯುವ
ಕೀಳೆಯುಲ್ಲಿವಾತ್ರ ಕೂಡಿ ಇರುತ್ತಾರೆ. ಆದರೆ ಇಂಗ್ಲ
ತದಲ್ಲಿ ಇದಕ್ಕೂ ಸ್ವಲ್ಪ ಭಿನ್ನಸ್ಥಿತಿಯುಂಟು. ಅಲ್ಲಿ ವಿದ್ಯಾ
ರ್ಥಿಗಳು ಯಾವಾಗಲೂ ಒತ್ತಟ್ಟಿಗೆ ಕೂಡಿ ಇರುತ್ತಾರೆ.
ಅಂದೇ ಸ್ಥಳದಲ್ಲಿ ಭೋಜನಪಾನಾದಿಗಳನ್ನೂ ಅಭ್ಯಾಸವ
ನ್ನೂ ಮಾಡುತ್ತಿರುವದರಿಂದ ಬಂಧುಪ್ರೀತಿಯೂ ಶಾಲಾಭಿ
ಮಾನವೂ ನೆಲೆಗೊಳ್ಳುತ್ತವೆ. ಆ ಕಾರಣ ಯಾವನಾದರೂ
ನೂವದೊಂದು ಕೆಲಸವನ್ನು ಕೈಕೊಂಡರೆ, ಎಲ್ಲರು ಅದಕ್ಕೆ
ಮನಃಪೂರ್ವಕವಾಗಿ ಸಹಾಯ ಮಾಡುವದರಿಂದ ಅದು ಕೂ
ಡಿಗಾಣುತ್ತದೆ.

೨. ಮೇಲೆ ಹೇಳಿದ ಕಾರಣದಿಂದ ವಿದ್ಯಾರ್ಥಿಯು ಕಾ
ಲೇಜವನ್ನು ಸೇರಿದ ಕೂಡಲೆ ಕಾಲೇಜದ ಪೂರ್ಣಾಭಿಮಾ
ನವನ್ನು ತಾಳಿ ಕಾಲೇಜದ ಉಚ್ಚ್ರಾಯವೇ ತನ್ನ ಘನವಾ
ದ ಕರ್ತವ್ಯವೆಂದು ನಿರೆನಂಬಿ ತ್ರಿಕರಣಪೂರ್ವಕವಾಗಿ ಆ
ಕರ್ತವ್ಯವನ್ನು ಜರಗಿಸಲಿಕ್ಕೆ ಯತ್ನ ಮಾಡತಕ್ಕದ್ದು.

೩. ವಿದ್ಯಾರ್ಥಿಯು ಕಾಲೇಜವನ್ನು ಸೇರಿದ ಬಳಿಕ ಆಪ
ತ್ತು ಉಳಿದ ವಿದ್ಯಾರ್ಥಿಗಳ ಗುಣಸ್ವಭಾವಗಳನ್ನು ಅರಿತು
ಕೊಂಡು ಅವುಗಳನ್ನು ತನ್ನಿಂದಾದಷ್ಟು ತಿದ್ದಲಿಕ್ಕೆ ಪ್ರಯತ್ನಿಸ
ಬೇಕು. ಸಾರಾಂಶ ಪ್ರತಿಯೊಬ್ಬ ವಿದ್ಯಾರ್ಥಿಯು ತನ್ನಿಂ
ದಾದ ಮಟ್ಟಿಗೆ ಕಾಲೇಜದ ಕೀರ್ತಿಯನ್ನು ಸ್ಥಿರಪಡಿಸುವ
ದೇ ತನ್ನ ಮುಖ್ಯ ಕೆಲಸವೆಂದು ತಿಳುಕೊಳ್ಳತಕ್ಕದ್ದು.

೪. ವಿದ್ಯಾರ್ಥಿಗಳು ದೊಡ್ಡ ದೊಡ್ಡ ಪರೀಕ್ಷೆಗಳಲ್ಲಿ ಪಾ
ಗುವಂಥ ಕಾಲೇಜದಿಂದ ಮತ್ತು ದೊಡ್ಡ ದೊಡ್ಡ ವಿದ್ಯಾಬಾ
ಧಂಪನ್ನರಾದ ಗೃಹಸ್ಥರು ಹೊರಬೀಳುತ್ತ ಹೋದರೆ ಆ
ಕಾಲೇಜಿನ ಕೀರ್ತಿಯು ಹಬ್ಬುವದು. ಅಂಥ ವಿದ್ಯಾರ್ಥಿಗಳು
ಹೊರಬೀಳದೆ ಹೋದರೆ ಕಾಲೇಜಕ್ಕೆ ಕುಂದು ತಪ್ಪದು.
ಈ ಮಾತನ್ನು ಎಲ್ಲ ವಿದ್ಯಾರ್ಥಿಗಳು ಲಕ್ಷದಲ್ಲಿಡತಕ್ಕದ್ದು.

೫. ಕೆಳಗಿನ ವರ್ಗದ ವಿದ್ಯಾರ್ಥಿಗಳು ಮೇಲಿನ ವರ್ಗದ
ವಿದ್ಯಾರ್ಥಿಗಳಿಗೆ ಯೋಗ್ಯ ಮಾನವನ್ನು ಕೊಡತಕ್ಕದ್ದು.
ಹಾಗು ವರಿಷ್ಠ ವರ್ಗದ ವಿದ್ಯಾರ್ಥಿಗಳು ಕೆಳಗಿನ ವರ್ಗದ
ವಿದ್ಯಾರ್ಥಿಗಳನ್ನು ತಕ್ಕ ಮರ್ಯಾದೆಯಿಂದ ನಡಿಸಿಕೊಳ್ಳ
ಬೇಕ್ಕದ್ದು.

೬. ಮಾತ್ಸರ್ಯ ಸಿಡುಕುತನ ಮುಂತಾದ ಕೀಳು
ಗುಣಗಳ ಸೊಂಕು ಸಹ ಕಾಲೇಜಕ್ಕೆ ತಗಲಕೂಡದು.
ಯಾವನಾದರೂ ವಿದ್ಯಾರ್ಥಿಯು ಬಂದು ಕೆಲಸ ಮಾಡಿದರೆ
ಇದರಿಂದ ಯಾರೂ ಸಿಟ್ಟಗೇಳದೆ ಅವನು ಆ ಕೆಲಸವನ್ನು
ಒಳ್ಳೇ ಉದ್ದೇಶದಿಂದಲೇ ಮಾಡಿರುವನೆಂದು ತಿಳುಕೊಳ್ಳು
ತ್ತಿರಬೇಕು. ತಮ್ಮ ಮಿತ್ರರಲ್ಲಿ ಯಾವನಿಗಾದರೂ ಜಾಸ್ತಿ
ಮಾನಗಳುಂಟಾದರೆ ಅಬಗ್ಗೆ ಮತ್ಸರಪಡದೆ ಅವನಲ್ಲಿರುವ
ಗುಣಗಳಿಗಾಗಿ ಅನಂದಪಡಬೇಕು. ಯಾಕಂದರೆ ಸ್ಮಾಯಿಲ್ಸ
ಸಾಹೇಬರು ಹೇಳುವಂತೆ, "ಪರರ ಗುಣಗಳನ್ನು ನೋಡಿ
ಸಿಡುವ ಅನಂದವು ಆ ಒಳ್ಳೇ ಗುಣಗಳನ್ನು ಸಂಪಾದಿಸುವ
ಬುದ್ಧಿಯನ್ನು ನಿಲ್ಲಿಸುತ್ತದೆ."

೭. ನಿಯಮಿತತನವನ್ನೂ ಸಮಯನಿಷ್ಠೆಯನ್ನೂ ಎ
ಲ್ಲರೂ ಬಮ್ಮನದಿಂದ ಕಾಯ್ದುಕೊಳ್ಳತಕ್ಕದ್ದು.

೮. ಸಣ್ಣ ಸಂಗತಿಗಳಲ್ಲಿಯೂ, ದೊಡ್ಡ ಸಂಗತಿಗಳಲ್ಲಿ
ಯೂ ಸರಿಯಾಗಿ ನೀತಿಯಿಂದ ನಡಿಯತಕ್ಕದ್ದು.

[illegible]

[illegible]

[illegible] ಹೆಸರು ಪಡೆದ ನಾಕೆಶ್ರೀನೆಂಬ ತ
ತ್ವಜ್ಞಾನಿಯ [illegible] ಯು ಸೂಲಗಿತ್ತಿಯ ಕೆಲಸವನ್ನು ಮಾ
ಡುತ್ತಿದ್ದಳು. [illegible] ಪ್ರು ಕೀಳು ಮನಸಿನ ಜನರು ಆ ತತ್ವ
ಜ್ಞಾನಿಗೆ 'ನೀನು ಸೂಲಗಿತ್ತಿಯ ಮಗನಂದು' ಹಾಸ್ಯ ಮಾ
ಡಿದರು. ಅದಕ್ಕೆ ಆ ಮಹಾ ಪುರುಷನು ಪ್ರತ್ಯುತ್ತರವಾಗಿ
ಹೇಳಿದ್ದೇನಂದರೆ:—ನನ್ನ ತಾಯಿಯು ಉದ್ಯೋಗವನ್ನು
ನೋಡಿ ನನಗೆ ನಾಚಿಕೆ ಬರುವದಿಲ್ಲ; ಅವರೆ ಆ ಉದ್ಯೋ
ಗವು ಗೌರವವುಳ್ಳದ್ದಾಗಿರುವದರಿಂದ ನಾನೂ ಅದೇ ಉ
ದ್ಯೋಗವನ್ನು ಕೈಕೊಂಡಿದ್ದೇನೆ. ನನ್ನ ತಾಯಿಯು
ಕೂಸು ಆಡ್ಡ ಬಂದಂಥ ಸ್ತ್ರೀಯರನ್ನು ಸಂಕಟದಿಂದ ಪು
ಕ್ತ ಮಾಡುವದಲ್ಲದೆ ತನ್ನ ಬುದ್ಧಿಬಲದಿಂದ ಗರ್ಭಾಶಯಸ್ಥ
ಪಿಂಡವು ಕ್ಷೇಮದಿಂದ ಹೊರಗೆ ಬರುವಂತೆ ಮಾಡುತ್ತಾಳೆ.
ನಾನು ಮೂರ್ಖರಪ್ಪಿದ ಜನರನ್ನು ದಾರಿಗೆ ತರುತ್ತೇನೆ;
ಮತ್ತು ನನ್ನ ಪ್ರಯತ್ನದಿಂದ ಜನರ ತಲೆಯೊಳಗಿನ ವಿಚಾ
[illegible]

ಸ್ವೀಡನ ನಾರ್ವೆ ದೇಶಗಳನ್ನಾಳುವ ಅರಸರು "ಸೈ
ಕವ್ಯಾಕರಣ" ಈ ವಿಷಯದ ಮೇಲೆ ನಿಬಂಧ ಬರೆದವರಿಗ
ಚಿನ್ನದ್ದೊಂದು ಪದಕವನ್ನು ಬಕ್ಷಿಸ ಕೊಡುವ ಗೊತ್ತು
ಮಾಡಿದ್ದಾರೆ. ನಿಬಂಧ ಬರೆದವರು ತಮ್ಮ ನಿಬಂಧವನ್ನು
ತಾರೀಖು ೧ನೆಯ ಮಾರ್ಚ ೧೮೭೪ ಇಸವಿಯ ಒಳಗಾಗಿ
ಪ್ರೊ. ಮೆಕ್ಸಮುಲ್ಲರ ದೊರೆಗಳವರ ಕಡೆಗೆ ಕಳುಹಿಸ
ತಕ್ಕದ್ದು. ಅತ್ಯುತ್ತಮವಾವದ್ದೆಂದು ನಿರ್ಣಯಿಸಲ್ಪಟ್ಟ ನಿಬಂ
ಧಕ್ಕಾಗಿ ಅದೇ ವರ್ಷ ಸಪ್ಟೆಂಬರ ತಿಂಗಳಲ್ಲಿ ಕೂಡುವ
ಓ. ಕಾಂಗ್ರೆಸವೆಂಬ ಮಹಾಸಭೆಯಲ್ಲಿ, ಆ ಪದಕವು ಉಚಿ
ತವಾಗಿ ಕೊಡಲ್ಪಡುವದು.

ಗ್ರೀಸ ದೇಶವಲ್ಲಿ ಹೆಸರು ಪಡೆದ ಸಾಕ್ರೆತೀಸನೆಂಬ ತ
ತ್ವಜ್ಞಾನಿಯ ತಾಯಿಯು ಸೂಲಗಿತ್ತಿಯ ಕೆಲಸವನ್ನು ಮಾ
ಡುತ್ತಿದ್ದಳು. ಕೆಲವು ಕೀಳು ಮನಸಿನ ಜನರು ಆ ತತ್ವ
ಜ್ಞಾನಿಗೆ 'ನೀನು ಸೂಲಗಿತ್ತಿಯ ಮಗನೆಂದು' ಹಾಸ್ಯ ಮಾ
ಡಿದರು. ಅವಕ್ಕೆ ಆ ಮಹಾ ಪುರುಷನು ಪ್ರತ್ಯುತ್ತರವಾಗಿ
ಹೇಳಿದ್ದೇನಂದರೆ:—ನನ್ನ ತಾಯಿಯ ಉದ್ಯೋಗವನ್ನು
ನೋಡಿ ನನಗೆ ನಾಚಿಕೆ ಬರುವದಿಲ್ಲ; ಆದರೆ ಆ ಉದ್ಯೋ
ಗವು ಗೌರವವುಳ್ಳದ್ದಾಗಿರುವದರಿಂದ ನಾನೂ ಅದೇ ಉ
ದ್ಯೋಗವನ್ನು ಕೈಕೊಂಡಿದ್ದೇನೆ. ನನ್ನ ತಾಯಿಯು
ಕೂಸು ಆಡ್ಡ ಬಂದಂಥ ಸ್ತ್ರೀಯರನ್ನು ಸಂಕಟದಿಂದ ಮು
ಕ್ತ ಮಾಡುವದಲ್ಲದೆ ತನ್ನ ಬುದ್ಧಿಬಲದಿಂದ ಗರ್ಭಾಶಯಸ್ಥ
ಪಿಂಡವು ಕ್ಷೇಮದಿಂದ ಹೊರಗೆ ಬರುವಂತೆ ಮಾಡುತ್ತಾಳೆ.
ನಾನು ಮೂರ್ಖದಪ್ಪಿವ ಜನರನ್ನು ಹಾದಿಗೆ ತರುತ್ತೇನೆ
ಮತ್ತು ನನ್ನ ಪ್ರಯತ್ನದಿಂದ ಜನರ ತಲೆಯೊಳಗಿನ ವಿಚಾ
ರಗಳನ್ನು ಸುಲಭವಾಗಿ ಹೊರಗೆಡಹುತ್ತೇನೆ. ಇಷ್ಟೇ

ನಮ್ಮಿಬ್ಬರ ಉದ್ಯೋಗಗಳಲ್ಲಿರುವ ಹೆಚ್ಚು ಕಡಿಮೆಯು. ತಾತ್ಪರ್ಯವೇನೆಂದರೆ:—ತಾನು ಕೈಕೊಂಡ ಉದ್ಯೋಗಕ್ಕೆ ಜನರು ಹೆಸರಿಡುವರೋ ಏನೋ ಎಂದು ಸಂಶಯಪಟ್ಟು ಹಿಂದೆ ಮುಂದೆ ನೋಡುವದು ತಕ್ಕದ್ದಲ್ಲ. ತನ್ನ ಉದ್ಯೋಗದಿಂದ ಪರರಿಗೆ ಹಿತವಾಗುವದೆಂಬ ಭರವಸವು ಇದ್ದಮೇಲೆ, ಯಾರು ಏನು ಅಂದರೂ ಚಿಂತೆ ಇಲ್ಲ, ಅದನ್ನು ಏಕನಿಷ್ಠೆಯಿಂದಲೂ ಧೈರ್ಯದಿಂದಲೂ ಸಾಗಿಸುವದು ಪ್ರತಿಯೊಬ್ಬನ ಕರ್ತವ್ಯವಾಗಿದೆ.

ನಾಗಪುರದಲ್ಲಿರುವ ಹೆಣ್ಣುಮಕ್ಕಳ ಶಾಲೆಯು ವಾರ್ಷಿಕ ಬಕ್ಷಿಸ ಸಮಾರಂಭವು ಕಳೆದ ಜಾನುವರಿ ತಿಂಗಳಿನಲ್ಲಿ ಯಾವತ್ತೇ ತಾರೀಖಿನ ದಿವಸ ಆಯಿತು. ಈ ವೇಳೆಯಲ್ಲಿ ಅಧ್ಯಕ್ಷಸ್ಥಾನವನ್ನು ಆ ಶಾಲೆಯ ಪುರಸ್ಕರ್ತೃಯರಾದ ಶ್ರೀಮತೀರಾಣೀ ಲಕ್ಷ್ಮೀಬಾಯಿ ಸಾಹೇಬ ಭೋಸಲೆ ಇವರು ಸ್ವೀಕರಿಸಿದ್ದರು. ಈ ಸಮಾರಂಭಕ್ಕೆ ನೆರೆದಂಥ ಎಲ್ಲ ಜನರು ಸ್ತ್ರೀಯರೇ ಇದ್ದರು. ಈ ಶಾಲೆಯು ಸ್ಥಾಪನೆಯಾಗಿ ಹತ್ತು ವರ್ಷವಾಯಿತು. ಸದ್ಯಕ್ಕೆ ಶಾಲೆಯಲ್ಲಿ ೫೦ ಜನ ವಿದ್ಯಾರ್ಥಿನಿಗಳು ಅಭ್ಯಾಸ ಮಾಡುತ್ತಾರೆ. ಈ ಶಾಲೆಯು ಸುಪ್ರಿಂಟೆಂಡೆಂಟಳು ಸೌಭಾಗ್ಯವತೀ ಯಮುನಾಬಾಯಿ ಗೋಖಲೇ ಎಂಬವಳು ಇರುತ್ತಾಳೆ. ಈ ಶಾಲೆಯು ಕ್ರಮೇಣ ಊರ್ಜಿತ ಸ್ಥಿತಿಯನ್ನೈದುವದನ್ನೂ ನಾಗಪುರದ ಜನರು ಸ್ತ್ರೀ ಶಿಕ್ಷಣಕ್ಕೆ ಮನಮುಟ್ಟಿ ಲಕ್ಷ್ಯಗೊಡುತ್ತಿರುವದನ್ನೂ ನೋಡಿ ನಾವು ಸಂತೋಷಪಡುತ್ತೇವೆ.

SIR RAYMOND WEST ON HIGHER EDUCATION IN INDIA.

ಹಿಂದುಸ್ತಾನದೊಳಗಿನ ವರಿಷ್ಠ ಶಿಕ್ಷಣದ ಬಗ್ಗೆ ಸರ ! ರೇಮಂಡ ವೆಸ್ಟ ದೊರೆಗಳ ಅಭಿಪ್ರಾಯವು.

[ಗತನೇ ಪುಟದಿಂದ ಮುಂದೆ ಸಾಗಿದ್ದು.]

ನಾವು ಹಿಂದೆ ಹೇಳಿದಂತೆ ಹಳೆ ಮತ್ತು ಹೊಸ ವಿಚಾರಗಳು ಕೂಡಿ ಬಂದಾಗಿ, ಅದರಿಂದ ಭಾವೀ ಸುಧಾರಣೆಗೆ ಯೋಗ್ಯವಾದ ಶಕ್ತಿಯು ಹುಟ್ಟಬೇಕಾದರೆ, ಸದ್ಯಕ್ಕೆ ನಡೆಯುತ್ತಿರುವ ಶಿಕ್ಷಣದ ಕ್ರಮವು ಬದಲಾಗಲಿಕ್ಕೆ ಬೇಕು.

ಪ್ರಾಚೀನ ಕಾಲದಲ್ಲಿ ಸಮಾಜದ ವಿಚಾರಗಳನ್ನು ಯೋಗ್ಯ ಮಾರ್ಗಕ್ಕೆ ಹಚ್ಚುವ ಕೆಲಸವು ಋಷಿಗಳ ಕೈಯಲ್ಲಿತ್ತು. ಆದರೆ ಅದು ಈಗ್ಗೆ ಬುದ್ಧಿವಂತರಾದ ದೇಶೀಯ ಜನರ ಕೈ ಸೇರುತ್ತದೆ. ಆದಕ್ಕಿಂತ ಅವರ ಮನಸ್ಸನ್ನು ತಿದ್ದುವದೂ ಅವರ ಬುದ್ಧಿಯನ್ನು ಪ್ರಗಲ್ಭದೆಶೆಗೆ ತರುವದೂ ಗೌರವದ ಕೆಲಸವಾಗಿದೆ. ಈ ಕೆಲಸವನ್ನು ಕೈಕೊಂಡು ಅದನ್ನು ಸರಿಯಾಗಿ ಮಾಡುವವರಿಂದ ಇಂಗ್ಲಿಷ ಪ್ರಭುಗಳಿಗೆ ಬರುವಷ್ಟು ಕೀರ್ತಿಯು ಮತ್ತಾರಿಂದಲೂ ಬರಲಾರದು. ಪ್ರಾಥಮಿಕ ಶಿಕ್ಷಣವನ್ನು ಹಬ್ಬುಗೊಳಿಸುವದರಿಂದ ಬಹಳ ಅಪಾಯವಾಗುವದೆಂಬ ಮಾತಿನಲ್ಲಿ ಏನೂ ಸಂಶಯವಿಲ್ಲದಿದ್ದರೂ ಬೇರೆ ಬೇರೆ ರಾಷ್ಟ್ರಗಳೊಳಗಿನ ಶ್ರೇಷ್ಠವಾದ ಬುದ್ಧಿ ಮತ್ತೆಗಳನ್ನು ಒಟ್ಟುಗೂಡಿಸುವಂಥ ಬಂಧನಗಳು ಆ ಶಿಕ್ಷಣದಿಂದ ಹುಟ್ಟಲಾರವು. ಉಚ್ಚ ಶಿಕ್ಷಣದಿಂದಲೇ ಈ ಮಾತು ಸಂಭವನೀಯವಾಗಿರುತ್ತದೆ. ಆದದ್ದರಿಂದ ಭಿನ್ನವಾಗಿ ಬೆಳೆದ ಪೂರ್ವ ಪಶ್ಚಿಮ ರಾಷ್ಟ್ರಗಳ ವಿಚಾರಗಳನ್ನು ಸರಿಯಾಗಿ ತಿಳಕೊಂಡು ಅವುಗಳನ್ನು ತಿಳಿಸಿಕೊಡುವ ಸಾಮರ್ಥ್ಯವು ಬರಬೇಕಾದರೆ ಹಿಂದುಸ್ತಾನದ ಜನರಿಗೆ ಹಳೆ ಮತ್ತು ಹೊಸ ವಿಚಾರಗಳ ಪೂರ್ಣಾಭ್ಯಾಸವೂ ಜ್ಞಾನವೂ ಆಗಲಿಕ್ಕೆ ಬೇಕು.

ಹಿಂದುಸ್ತಾನದಲ್ಲಿ ವಿದ್ಯಾ ಖಾತೆಯನ್ನು ಮೊದಲು ಸ್ಥಾಪಿಸಿದವರ ಮನಸಿನಲ್ಲಿ ಪೂರ್ವ ಪಶ್ಚಿಮ ರಾಷ್ಟ್ರಗಳ ಸಮ್ಮೇ

ನವೆಂಬ ವಿದ್ಯೆಯ ಗೌರವದ ಪರಿಣಾಮವು ಬಂದಿತ್ತೇದು
ಗುರುತಿಸುವದು ಸರಿಯಾದದ್ದಲ್ಲ. ಆದರೆ ಅವರು ವಿದ್ಯಾಭ್ಯಾ
ಸದಿಂದ ಅನೇಕ ಲಾಭಗಳನ್ನು ಪಡೆದವರಾದ್ದರಿಂದ,
ಆ ಲಾಭಗಳನ್ನು ಅನ್ಯರಿಗೆ ಮಾಡಿ ಕೊಡಬೇಕೆಂಬ ಕುತೂ
ಹಲದಿಂದಲೇ ಈ ಉದ್ಯೋಗವನ್ನು ಆರಂಭಿಸಿದರೆಂದು
ಕೀಳ ಬಹುದು. ಅವರ ಲಕ್ಷವು ಸಹಜವಾಗಿ ವರಿಷ್ಠ
ಶಿಕ್ಷಣವ ಕಡೆಗೆ ತಿರುಗಿರುವದರಿಂದ ಅವರು ಪ್ರಾಥಮಿಕ
ಶಿಕ್ಷಣವನ್ನು ಉಪಕ್ರಮಿಸಿದಾಗ್ಯೂ ವರಿಷ್ಠ ಶಿಕ್ಷಣಕ್ಕೆ
ಕೊರತೆಯಾಗಗೊಡಲಿಲ್ಲ. ವಾರನ್ ಹೇಸ್ಟಿಂಗ್ಸನು ಸರ್
೧೭೮೦ನೇ ವರ್ಷ ಕಲಕತ್ತೆಯಲ್ಲಿ "ಮದ್ರೆಸಾ" ಎಂಬ
ಹೆಸರಿನ ಮುಸಲ್ಮಾನೀ ಕಾಲೇಜವನ್ನೂ ಸರ್ ೧೭೯೧ರಲ್ಲಿ
ಜೋನಾಥಾನ್ ಡಂಕನ್ನನೆಂಬವನು ಬನಾರಸದಲ್ಲಿ ಬೀದಿ
ಸಂಸ್ಕೃತ ಕಾಲೇಜವನ್ನೂ ಸ್ಥಾಪಿಸಿದರು. ಎಲ್ಫಿನ್‌ಸ್ಟನ್
ದೊರೆಯ ಶಿಕ್ಷಣ ಸಂಬಂಧದ ವಿಚಾರಗಳು ಬಹಳ ಉದಾತ್ತ
ವಾಗಿದ್ದವು. ಅವುಗಳಿಂದ ಎಂಥ ಪರಿಣಾಮವಾದರೂ ಚಿಂತೆ
ಇಲ್ಲ, ಅವುಗಳನ್ನು ಹ್ಯಾಗಾದರೂ ಮಾಡಿ ಪ್ರಚಾರದಲ್ಲಿ
ತರಬೇಕೆಂಬ ಕುತೂಹಲವು ಆ ದೊರೆಗೆ ಪೂರ್ಣವಾಗಿತ್ತು.
ಅವನ ಪಶ್ಚಾತ್ ಮಿ. ಟಾಪಲೆನ್ ದೊರೆಯು ೧೮೨೦ರಲ್ಲಿ
ಪುಣೆಯ ಪಟ್ಟಣದಲ್ಲಿ ಬಂದು ಸಂಸ್ಕೃತ ಕಾಲೇಜವನ್ನು
ಸ್ಥಾಪಿಸಿದನು. ಈ ಕಾಲೇಜಗಳಲ್ಲಿ ಅಭ್ಯಾಸವು ಹಳೇ
ಪದ್ಧತಿಯನ್ನನುಸರಿಸಿ ನಡಿಸಲ್ಪಟ್ಟಿದ್ದರಿಂದ, ಅವುಗಳಿಂದ
ಜನರಿಗೆ ವಿಶೇಷವೇನು ಲಾಭವಾಗಲಿಲ್ಲ. ಆ ಕಾ
ಲೇಜಗಳ ಶುಷ್ಕ ಅಸ್ಥಿಗಳಲ್ಲಿ ಜೀವನ ಶಕ್ತಿಯು ಹುಟ್ಟಿ
ಬೇಕಾದರೆ, ಪಾಶ್ಚಿಮಾತ್ಯ ವಿದ್ಯೆ, ಶಾಸ್ತ್ರಗಳು, ಇತಿಹಾಸ
ಸಮಾಜಿಕ ಸ್ಥಿತಿಯ ಭಿನ್ನ ಭಿನ್ನ ಕಲ್ಪನೆಗಳು ಇವೇ ಮುಂ

ತಾದ ಸಂಗತಿಗಳ ಜ್ಞಾನವು ಅವಶ್ಯವಾಗಿತ್ತು. ೧೮೧೩ರಲ್ಲಿ ಪ್ರಸಿದ್ಧವಾದ ಕಾಯದೆಯಿಂದ ಒಂದು ಲಕ್ಷ ರುಪಾಯಿಗಳಿಗಿಂತ ಹೆಚ್ಚು ಹಣವನ್ನು ವಿದ್ಯಾಪ್ರಸಾರದ ಕೆಲಸಕ್ಕೆ ಹಚ್ಚುವ ಅಧಿಕಾರವು ಗವ್ಹರ್ನರ ಜನರಲ್ಲನಿಗೆ ಸಿಕ್ಕಿತು; ಆದರೆ ಸರಕಾರದವರು ಈ ಸಂಬಧದಿಂದ ಏನು ಮಾಡಬೇಕೆಂಬದನ್ನು ಮುಂಗಾಣದೆ ಇದ್ದದ್ದರಿಂದ ಬಂಗಾಲ ಪ್ರಾಂತದಲ್ಲಿ ಶಿಕ್ಷಣದ ಕೆಲಸವು ಸ್ವತಂತ್ರ ಸಂಸ್ಥೆಗಳಿಂದಲೇ ಸಾಗಿಸಲ್ಪಟ್ಟಿತು.

ಈಗ್ಗೆ ನಡೆಯುತ್ತಿರುವ ಶಿಕ್ಷಣದ ಪದ್ಧತಿಯನ್ನು ಮುಂಬಯಿಯ ಗವರ್ನರನಾದ ಮೌಂಟ ಸ್ಟ್ಯುವರ್ಟ ಎಲ್ಫಿನಸ್ಟನ್ನನು ನೆಲೆಗೊಳಿಸಿದನು. ಪಾಲೋಪಯೋಗದ ಪುಸ್ತಕಗಳು ಅಚ್ಚು ಹಾಕಲ್ಪಟ್ಟವು. ಇಂಗ್ರೇಜೀ ಮತ್ತು ಮರಾಠೀ ಶಾಲೆಗಳು ಸ್ಥಾಪಿಸಲ್ಪಟ್ಟವು. ಬಡವಿದ್ಯಾರ್ಥಿಗಳಿಗೆ ದ್ರವ್ಯರೂಪದ ಸಹಾಯವು ದೊರೆಯಿತು. ಆದರೂ ವರಿಷ್ಠ ಶಿಕ್ಷಣದ ವ್ಯವಸ್ಥೆಯು ತಕ್ಕ ರೀತಿಯಿಂದ ಆಗಲಿಲ್ಲ. ಇಂಗ್ಲಿಷ ಕಲಿತ ಜನರು ಅಲ್ಲಲ್ಲಿಗೆ ತೋರಹತ್ತಿದರು; ಮಿಶನರೀ ಶಾಲೆಗಳೂ ಕಾಲೇಜಗಳೂ ಸ್ಥಾಪಿಸಲ್ಪಟ್ಟವು; ಆದರೆ ಸುಶಿಕ್ಷಿತರಾದ ಇಂಗ್ಲಿಷ ಜನರಲ್ಲಿ ಮತ್ತು ಸುಶಿಕ್ಷಿತರಾದ ಹಿಂದೂಜನರಲ್ಲಿ ಗೆಳತನವೂ ಪ್ರೇಮದ ಬಳಕೆಯೂ ಉಂಟಾಗಲಿಲ್ಲ. ಸಂಸ್ಕೃತ ಕಾಲೇಜದಿಂದ ಏನು ಉಪಯೋಗವಿಲ್ಲೆಂತಲೂ, ಆ ವಿದ್ಯಾಲಯದಿಂದ ಸುಳ್ಳು ಅಭಿಪ್ರಾಯಗಳೂ ಭ್ರಾಮಕ ಕಲ್ಪನೆಗಳೂ ಬೆಳೆಯಲಿಕ್ಕೆ ಆಸ್ಪದವಾಗುತ್ತದೆಂತಲೂ, ಎಷ್ಟೋ ದಿವಸಗಳ ಅನುಭವದಿಂದ ಕಂಡು ಬಂತು. ಇದೇ ಕಾಲಕ್ಕೆ ಬಂಗಾಲವಲ್ಲಿ ಶಿಕ್ಷಣವನ್ನು ಯಾವ ಭಾಷೆಯ ದ್ವಾರದಿಂದ ನಡಿಸಬೇಕೆಂಬ ಬಗ್ಗೆ ನಿಕರದ ವಾಗ್ವಾದಗಳು ನಡೆದವು. ಕಟ್ಟಕಡೆಗೆ ಮೆಕಾಲೆ ಸಾಹೆಬರು ಸರ್ ೧೮೩೫ರಲ್ಲಿ ಈ ವಾ

ಗ್ರಾದಗಳ ಇತ್ಯರ್ಥವನ್ನು ಮಾಡಿದರು. ಅವರು ಸಂಸ್ಕೃತ ತದಿಂದಾಗಲಿ ಪಾರ್ಸಿಯಿಂದಾಗಲಿ ಶಿಕ್ಷಣ ನಡಿಸದೆ ಇಂಗ್ಲಿಷ ಭಾಷೆಯು ಮುಖಾಂತರವಾಗಿಯೇ ನಡಿಸಬೇಕೆಂದು ಅವರು ಮಾಡಿದ ತೀರ್ಪು ಸರ್ವಾಂಶದಿಂದ ಗ್ರಾಹ್ಯವಾದದ್ದು ಇರದಿದ್ದರೂ ಬಂದು ಬಗೆಯಿಂದ ಹಿತವಾದದ್ದೇ ಇತ್ತು. ಸಂಸ್ಕೃತ ಮತ್ತು ಪಾರ್ಸೀ ಭಾಷೆಗಳ ಜ್ಞಾನವು ಇತಿಹಾಸ ದೃಷ್ಟಿಯಿಂದ ಪ್ರಯೋಜನಕರವಿದ್ದಾಗ್ಯೂ ಅವರಿಂದ ವ್ಯವಹಾರಕ್ಕೆ ಎಳ್ಳಷ್ಟು ಸಹ ಉಪಯೋಗವಾಗುವಂತೆ ಇದ್ದಿಲ್ಲ. ಈ ಭಾಷೆಗಳಲ್ಲಿ ಬರೆವ ಪುಸ್ತಕಗಳಾವರೂ ಜನರಿಗೆ ಹಿತವೊಡಮಾಡುವಂತೆ ಇದ್ದಿಲ್ಲ. ಇತಿಹಾಸಕ್ಕೂ ಅನುಭವಕ್ಕೂ ವಿರುದ್ಧವಾದ ಅಭಿಪ್ರಾಯಗಳನ್ನೂ, ಮನುಷ್ಯ ಜಾತಿಯ ವಿಷಯವಾಗಿ ಅನುದಾರ ಬುದ್ಧಿಯಿಂದ ಬರೆವ ಸಂಗತಿಗಳನ್ನೂ, ಸೃಷ್ಟಿ ಚಮತ್ಕಾರಗಳನ್ನು ನಿರೀಕ್ಷಿಸದೆ ಮತ್ತು ಪರೀಕ್ಷಿಸದೆ ಅಪೂರ್ಣಜ್ಞಾನದಿಂದ ಬರೆವ ಸಿದ್ಧಾಂತಗಳಿಂದ ತುಂಬಿ ತುಳುಕುತಿದ್ದಂಥ ಶಾಸ್ತ್ರಗಳನ್ನೂ ಮೂಲೆಗೊತ್ತುವದೇ ಹಿತವಾಗಿತ್ತು. ಈ ಶಾಸ್ತ್ರಗಳಲ್ಲಿರುವ ಗ್ರಾಹ್ಯವಾದ ಸಂಗತಿಗಳನ್ನಷ್ಟೇ ಆರಿಸಿಕೊಳ್ಳಲಿಕ್ಕೆ ಅವಶ್ಯವಾದ ವಿವೇಚನ ಶಕ್ತಿಯು ಇನ್ನೂ ಜಾಗ್ರತವಾಗಿದ್ದಿಲ್ಲ. ಆದದ್ದರಿಂದ ಇಂಗ್ಲಿಷದಿಂದ ಶಿಕ್ಷಣ ಕೊಡಬೇಕೆಂಬ ನಿಯಮವು ಅಭಿನವನೀಯವಾದದ್ದೇ ಇತ್ತು. ಈ ರೀತಿಯಿಂದ ಇಂಗ್ಲಿಷ ಶಿಕ್ಷಣದ ಪದ್ಧತಿಯು ಪ್ರಚಲಿತವಾದಾಗ್ಯೂ, ಅದು ಮಂದಗತಿಯಿಂದಲೇ ಸಾಗಿತು. ಇದಕ್ಕೆ ವರಿಷ್ಠ ಅಧಿಕಾರಿಗಳ ಪ್ರತಿಕೂಲತೆಯೇ ಕಾರಣ. ಸರ್ ಗವರ್ನರ್ ಜನರಲ್ಲರಲ್ಲಿ ಬಂಗಾಲದ ಲೆಫ್ಟನೆಂಟ ಗವರ್ನರನಾದ ಸರ್ ಜಾರ್ಜ ಕ್ಯಾಂಬೇಲನು ತನ್ನ ಅಭಿಪ್ರಾಯವನ್ನು ಬಂದು ಸಮಯದಲ್ಲಿ ವ್ಯಕ್ತಪಡಿಸಿದು ಹ್ಯಾಗಂದರೆ:-

ವರಿಷ್ಠ ಶಿಕ್ಷಣವನ್ನು ಪಡೆದವಂಥ ಜನರಿಗೆ ಮಾತ್ರ ಸರಕಾ
ದ ದೊಡ್ಡ ದೊಡ್ಡ ಉದ್ಯೋಗಗಳನ್ನು ಕೊಡಬೇಕ
ಾವರೆ ವರಿಷ್ಠ ಶಿಕ್ಷಣಕ್ಕೆ ಉತ್ತೇಜನ ಬರುವದು ಎಂದ
ಾರ್ಡ ಹಾರ್ಡಿಂಜ ಸರ್ವಾಧಿಪತಿಗಳು ಸೂಚಿಸಿದ್ದಕ್ಕ
ವರ ಗೌರವು ಬಹಳವಾಗಿದೆ, ಆದರೆ ಈ ಸೂಚನೆಯು ಇ
ನ್ನೂವರೆಗೆ ಪ್ರಚಾರದಲ್ಲಿ ಬಂದಿರುವದಿಲ್ಲ, ಮುಂದೆ ಬರು
ಿ ಸಹ ಇಲ್ಲ. ಯಾಕಂದರೆ ಕಾಲೇಜಗಳಲ್ಲಿ ಉದ್ಯೋಗ
ಬಧವಾಗಿ ಶಿಕ್ಷಣವನ್ನು ರವಷ್ಟಾದರೂ ನಡೆಸುವದಿಲ್ಲ
ುತ್ತು ಈ ವಿದ್ಯಾಭಕ್ತರನ್ನು ಸಂತೋಷ ಪಡಿಸುವದಕ್ಕಾ
ಸರಕಾರೀ ಕೆಲಸಕ್ಕೆ ತೊಂದರೆ ಮಾಡಿ ಕೊಳ್ಳುವದು ಸಕ
ಿಯಲ್ಲ. ಮಿಲ್ಟನ್ನನ ಕಾವ್ಯವು ಮುಖತೋರ್ಪ್ಪತವಾಗಿ ಬರ
ದ್ದಂಥ ಮನುಷ್ಯನು ಬಂದು ಬೇಳೆ ಪೋಲೀಸ ಶಿಪಾಯಿ
ು ಕೆಲಸಕ್ಕೆ ಸಹ ಅಯೋಗ್ಯನಾಗಬಹುದು.''

ಮೇಲಿನ ಉದ್ಗಾರವನ್ನು ವ್ಯಕ್ತ ಪಡಿಸಿದವಂಥ ಗೃಹಸ್ಥ
ಗೆ ಈ ದೇಶದ ಜನರು ವರಿಷ್ಠ ಶಿಕ್ಷಣದಲ್ಲಿ ಪ್ರವೇಶಿಸು
ು ಅಸಮ್ಮತವಿದ್ದದ್ದು ಮಾತ್ರವಲ್ಲ, ನಿತ್ಯದ ವ್ಯವಹಾ
ಳಲ್ಲಿಯಾದರು ಸುಶಿಕ್ಷಿತ ಜನರಿಂದ ಎಷ್ಟು ಮಟ್ಟಿಗೆ ಉ
ಯೋಗ ವಾಗುತ್ತದೆಂಬ ಸಂಗತಿಯು ಸಹ ಗೊತ್ತಾಗಿದ್ದಿಲ್ಲ
ಾಣೀ ಮತ್ತು ನ್ಯಾಯದ ಖಾತೆಗಳಿಗೆ ಪದವಿಗಳನ್ನು ಪ
ವರೇ ಹೆಚ್ಚು ಯೋಗ್ಯರೆಂಬ ಸಂಗತಿಯು ಈಗ್ಗೆ ಎ
ಅನುಭವಕ್ಕೆ ಬಂದಿರುತ್ತದೆ. ಮೇಲೆ ಹೇಳಿದಂತೆ ವ
ಜನರ ಪ್ರತಿಕೂಲತೆಯಿಂದ ವಿದ್ಯದ ಪ್ರಸಾರವು ಶ್ವ
ಂದ ಸಾಗದಿದ್ದರೂ ಸರ್ ಅಷ್ಟೇ ವರ್ಷ ಹುಟ್ಟಿದ ಇ
ನದಿಂದ ಮುಂದೆ ಉದಯಕ್ಕೆ ಬರತಕ್ಕಂಥ ಶಿಕ್ಷಣವೇಬ
ಾರತಿಯು ನೆಲಗಟ್ಟು ಸಿದ್ಧವಾಯಿತೆಂದು ಹೇಳಲಿಕ್ಕೆ ಅಡ್ಡ

ಇಲ್ಲ. ಈಗಿನ ಶಿಕ್ಷಣ ಪದ್ಧತಿಯನ್ನು ಸರ್ ಚಾರ್ಲಸ
ವುಡ್ಡನು ಉಪಕ್ರಮಿಸಿದನು. ೧೮೫೪ ರಲ್ಲಿ ಆವನು ಶಿಕ್ಷ
ಣ ಸಂಬಧವಾಗಿ ಬಂದು ಖರಿತವನ್ನು ಬರೆದನು. ಅದನ್ನ
ನು ಸರಿಸಿ ೧೮೫೭ ರಲ್ಲಿ ಪ್ರತಿಯೊಂದು ಇಲಾಖೆಯಲ್ಲಿ ಬಂ
ಸಿಂದು ವಿದ್ಯಾ ಪೀಠವು ಸ್ಥಾಪಿಸಲ್ಪಟ್ಟಿತು. ಜನರು ವಿ
ದ್ಯೆಯನ್ನು ಬಯಸ ಹತ್ತಿದರು. ವಿದ್ಯಾರ್ಥಿಗಳ ಸಂಖ್ಯೆಯು
ನೇ ದಿನೇ ಹೆಚ್ಚಾಗುತ್ತ ನಡೆಯಿತು. ಪ್ರವೇಶ ಪರೀಕ್ಷೆ
ಗಾಗಿ ಕಾಲೇಜವನ್ನು ಪ್ರವೇಶಿಸುವವರ ಸಂಖ್ಯೆಯು
ನೆಳೆಯುತ್ತ ಹೋದ ಹಾಗೆ ಯುರೋಪಿಯನ್ ಜನರು ಆದ
ನ್ನು ವಕ್ರದೃಷ್ಟಿಯಿಂದ ನೋಡಹತ್ತಿದರು. ಇತ್ತಿತ್ತಲಾಗೆ
ವರಿಷ್ಠ ಶಿಕ್ಷಣಕ್ಕೆ ಕೇಡು ಬಗೆಯುವಂಥ, ಕನಿಷ್ಠ ಪಕ್ಷ
ಕ್ಕೆ ವರಿಷ್ಠ ಶಿಕ್ಷಣವೆಂದರೆ ಮೂಗು ಮುರಿಯುವಂಥ ಎ
ಷ್ಟೋ ಯುರೋಪಿಯನ್ನರನ್ನು ಕಾಣಬಹುದು. ಪ್ರಾಥ
ಮಿಕ ಶಿಕ್ಷಣವು ನಮಗೆ ಅವಶ್ಯ ಉಂಟೆಂಬ ಮಾತು ದಿಟ
ವಾದದ್ದು; ಆದರೆ ವರಿಷ್ಠ ಶಿಕ್ಷಣವನ್ನು ಕುಗ್ಗಿಸಬೇಕೆಂಬ
ಇಚ್ಛೆಯಿಂದಲೇ ಈ ಮಾತು ಬಹಳ್ಮಾಮ್ಮೆ ಪ್ರಸ್ತಾಪಿಸಲ್ಪ
ಡುತ್ತದೆ. ಇದಕ್ಕೆ ಕೆಲವು ಏತದ್ದೇಶೀಯ ಜನರೂ ಸಹಾಯ
ವಾಗಿದ್ದಾರೆ. ಕೆಲವು ಸಂಣ ಸಂಣ ಹಳ್ಳೀಜನರ ಸಲುವಾಗಿ
ರುತ್ತು ಕಾಡ ಜನರ ಸಲುವಾಗಿ ಶಾಲೆಗಳು ಸವ್ಯಕ್ಕೆ ಇಲ್ಲದಿ
ದ್ದರೂ ಶಿಕ್ಷಣವನ್ನು ಬಯಸುವ ವಿದ್ಯಾರ್ಥಿಗಳು ೫ ೪ ವ
ರ್ಷಗಳ ವರೆಗೆ ಅಭ್ಯಾಸ ಮಾಡಲಿಕ್ಕೆ ತಕ್ಕಂಥ ಅನುಕಾ
ಲತೆಯು ಬಹಳ ಮಾಡಿ ಎಲ್ಲ ಕಡೆಯಲ್ಲಿಯೂ ಆಗಿರುತ್ತದೆ.
ಸ್ತ್ರೀ ಶಿಕ್ಷಣವು ಇನ್ನೂ ಬಹಳ ಹಿಂದೆ ಬಿದ್ದಿದೆ. ಆದ
ರೂ ವಿದ್ಯಾರ್ಥಿನಿಯರ ಸಂಖ್ಯೆಯು ಮಾತ್ರ ಒತ್ತರದೀದ
ನೆಳೆಯುತ್ತ ನಡೆದಿದೆ.

METHODS OF TEACHING.
ಕಲಿಸುವ ಪದ್ಧತಿಗಳು.

WRITING.
ಲೇಖನ.

ವಿದ್ಯಾರ್ಥಿಗಳಿಗೆ ಬರವಣಿಗೆಯನ್ನು ಚೆನ್ನಾಗಿ ಕಲಿಸುವಂ
ತಾಲೆಗಳಿಗೆ ಜನರು ಮೆಚ್ಚುತ್ತಾರೆಂಬ ಮಾತು ದಿಟವಾಗಿರ
ಲೇಖನ ಕಲೆಯಲ್ಲಿ ಹೆಸರಾವ ಶಾಲೆಗಳು ಜನರಿಗೆ ಸೇರುತ್ತ
ವೆ, ಮತ್ತು ಉತ್ತಮ ಅಕ್ಷರಗಳನ್ನು ಬರೆಯುವ ವಿದ್ಯಾ
ರ್ಥಿಯು ಜಾಣನಿರುತ್ತಾನೆ ಎಂಬ ತಿಳುವಳಿಕೆಯು ಬಹ
ಗೂಢವಾಗಿರುತ್ತದೆ. ಈ ತಿಳುವಳಿಕೆಯು ತೀರ ಅಪವ್ಯ
ವಾದದ್ದಲ್ಲ; ಯಾಕಂದರೆ ಉತ್ತಮ ಅಕ್ಷರ ಬರೆಯುವಂ
ವಿದ್ಯಾರ್ಥಿಗಳು ಉಳಿದ ವಿಷಯಗಳಲ್ಲಿಯಾದರೂ ತಕ್ಕ
ನುಟ್ಟಿಗೆ ಅಧೀತರಾಗಿರುವದು ಸ್ವಾಭಾವಿಕವಾದದ್ದು.

ಈ ಗೌರವದ ವಿಷಯಕ್ಕೆ ಶಿಕ್ಷಕರು ದುರ್ಲಕ್ಷ ಮಾಡ*
ನರು. ಇದು ಅಸಮಾಧಾನಕರವಾದ ಸಂಗತಿಯು. ಈ
ದುರ್ಲಕ್ಷದ ಸಂಬಂಧದಿಂದ ಅನೇಕ ಜನರು ಅನೇಕ ಕಾ
ಣಗಳನ್ನು ಹೇಳುತ್ತಾರೆ; ಆದರೆ ಇದಕ್ಕೆ ಅಲಕ್ಷದ ಹೊ
ರ್ತು ಬೇರೆ ವಿಚಾರಣೀಯವಾದ ಕಾರಣವು ನಮಗೆ ತೋ
ರುವದಿಲ್ಲ. ಕೆಟ್ಟ ಅಕ್ಷರ ಬರೆಯುತ್ತಿರುವಂಥ ಯಾವದೊ
ದು ಶಾಲೆಗೆ ಹೋಗಿ, ಲೇಖನಾಭ್ಯಾಸವನ್ನು ಮಾಡುತ್ತಿ
ರುವಂಥ ವರ್ಗವ ನೋಡಿದರೆ ಕೆಳಗೆಬರೆದ ಸಂಗತಿಗಳು
ತಪ್ಪದೆ ಕಣ್ಣಿಗೆ ಬೀಳುವವು. ಅವು ಯಾವವೆಂದರೆ:—

೧. ವ್ಯವಸ್ಥಿತವಾದ ಶಾಲೆಯಲ್ಲಿ, ವಿದ್ಯಾರ್ಥಿಗಳಿಗೆ ಕಾ
ಪೀ ಬುಕ್ಕುಗಳನ್ನು ಕೊಡಬೇಕಾದರೆ ಎರಡು ಮಿನಿಟುಗ

---

* ಅತ್ತಿತ್ತಲಾಗಿ ಕೆಲವರು ಟ್ರೇಂಡ ಮಾಸ್ತರರು ಈ ವಿಷಯಕ್ಕೆ ತ
ಕ್ಕಷ್ಟು ಲಕ್ಷಕೊಡಹತ್ತಿರುತ್ತಾರೆಂದು ಕೇಳಿ ಸಂತೋಷವಾಗುತ್ತದೆ.

ಳಿಗಿಂತ ಹೆಚ್ಚು ವೇಳೆ ಹತ್ತುವದಿಲ್ಲ; ಆದರೆ ಈ ಶಾಲೆಯಲ್ಲಿ ಅವಕ್ಕೆ ಹತ್ತಕ್ಕಿಂತ ಹೆಚ್ಚು ಮಿನಿಟು ಹತ್ತುವದಲ್ಲದೆ ಗದ್ದಲವೂ ಕೂಗಾಟವೂ ಮಿತಿಮೀರಿ ಆಗುವವು.

೨. ಶಿಕ್ಷಕನು ಈ ಅವಧಿಯಲ್ಲಿ ವಿದ್ಯಾರ್ಥಿಗಳ ನಡುವೆ ತಿರುಗಾಡುತ್ತ, ಅವರಿಗೆ ಅಕ್ಷರಗಳ ವಳಣವನ್ನು ತೋರಿಸುತ್ತ, ಬಳ್ಳಿ ಅಕ್ಷರಗಳನ್ನು ಬರೆದವರಿಗೆ ಪ್ರೋತ್ಸಾಹನ ಕೊಡುತ್ತ, ಮುಂದುಗಾಣದವರಿಗೆ ನೆರವಾಗಿ ಅಕ್ಷರಗಳನ್ನು ತೆಗೆಸುತ್ತ ಇರುವದು ಉಚಿತವಾದದ್ದು. ಆದರೆ ಈ ಕೆಲಸವನ್ನು ಕನಸು ಮನಸುಗಳಲ್ಲಿ ಸಹ ತಾರದೆ ಲೆಕ್ಕಣಿಕೆಯನ್ನು ಕೆತ್ತುತ್ತಾ, ಕಿತ್ತೆಯನ್ನು ಹಾಕಿಕೊಡುತ್ತಾ ಅವನು ಹೊತ್ತುಗಳೆಯುವನು; ವಿದ್ಯಾರ್ಥಿಗಳಿಗೆ ಮನ ಬಂದಂತೆ ಬರೆಯಗೊಡುವನು. ಈ ಪ್ರಕಾರದ ಅವಿಚಾರದಿಂದ ತಪ್ಪು ತಿದ್ದುವದಂತೂ ಬತ್ತಟ್ಟಿಗೆ ಉಳಿದು ಪುಸ್ತಿಗಳನ್ನು ನೋಡಿ ಗುಣಗಳನ್ನು ಕೊಡಲಿಕ್ಕೆ ಸಹ ಹೊತ್ತು ಸಿಗದೆ ಹೋಗುವದು.

೩. ಕೆಲಕೆಲವು ಶಾಲೆಗಳಲ್ಲಂತು ಲೇಖನ ವಿಷಯಕ್ಕೆ ವೇಳಾಪತ್ರಿಕೆಯಲ್ಲಿ ಪ್ರವೇಶವೇ ಇರುವದಿಲ್ಲ. ಆ ಶಾಲೆಗಳಲ್ಲಿ ಹುಡುಗರು ಕೂಡಿಕೂಡಿದಾಗ ತಮ್ಮ ಪುಸ್ತಿಗಳನ್ನು ಬರೆಯುವರು.

ಮಾಸ್ತರ ಜನರು, ವಿದ್ಯಾರ್ಥಿಗಳು ಹ್ಯಾಗೆ ಬರೆದರೂ ಸಾಗುವದೆಂದು ನಂಬುತ್ತಾರೇನೆಂತಲೂ ಲೆಕ್ಕಣಿಕೆಗಳನ್ನು ಕೆತ್ತಿ ಕೊಡುವದು ಮತ್ತು ಅಕ್ಷರಗಳನ್ನು ತೆಗೆದು ಕೊಡುವದು ಇವೆರಡೇ ತಮ್ಮ ಕರ್ತವ್ಯಗಳೆಂದು ತಿಳುಕೊಳ್ಳುತ್ತಾರೆಂತಲೂ ಇದರಿಂದ ಸ್ಪಷ್ಟವಾಗುತ್ತದೆ; ಆದರೆ ಈ ತಿಳುವಳಿಕೆಯು ತೀರ ತಪ್ಪಾಗಿರುವದು. ವಿದ್ಯಾರ್ಥಿಗಳ ಅಕ್ಷರಗಳು ನೆಟ್ಟಗಾಗಬೇಕಾದರೆ, ಅವರು ಬರೆಯುತ್ತಿರು

ವಾಗ್ಗೆ ಮಾಸ್ತರನು ತಪ್ಪದೆ ಎಚ್ಚರದಿಂದ ನೋಡುತ್ತಿ
ರುವದೇ ಮೇಲಾದ ಉಪಾಯವು.

ಲೇಖನಕಲಾಕೌಶಲ್ಯವನ್ನು ಪ್ರತಿಬಂಧಿಸುವ ಮತ್ತೊ
ದು ಸಂಗತಿಯುಂಟು. ಅದು ಯಾವದಂದರೆ ಉಪಕರ
ಗಳ ಕೊರತೆಯು. ಇದರಿಂದ ಅನೇಕ ಮುಪ್ಪರಿಣಾಮಗಳ
ಆಗುತ್ತವೆ. ಆದರೆ ಈ ವಿಷಯದ ಕಡೆಗೆ ಜನರ ಮನಸ್ಸು
ತಕ್ಕಷ್ಟು ಹೋಗುವದಿಲ್ಲ. ಲೇಖನ ಕಾಲಕ್ಕೆ ನೀವು ಸಹಪ
ವಾಗಿಯೇ ಬಂದು ಶಾಲೆಗೆ ಹೋದರೆ, ಅಲ್ಲಿ ಕೆಲವು ಹುಡುಗ
ರು ಸುಮ್ಮನೆ ಕೂತದ್ದು ನಿಮ್ಮ ಕಣ್ಣಿಗೆ ಬೀಳುವದು. ಹಿ
ಗೆ ಯಾಕೆ ಎಂದು ನೀವು ವಿಚಾರಿಸಿದರೆ ಲೆಕ್ಕಣಿಕೆ ಇಲ್ಲೆ
ದು ಬಬ್ಬನು, ಕಾಪೀ-ಪುಸ್ತಕವನ್ನು ಮರೆತು ಬಂದೆನೆಂದ
ಇನ್ನೊಬ್ಬನು, ಕಾಪಿಯ ಪುಸ್ತಕಗಳೇ ಇಲ್ಲೆಂದು ಕೆಲ
ರು ಸುಮ್ಮನೇ ಕೂತಿರುವದಾಗಿ ನಿಮಗೆ ತಿಳಿಸುವರು. ಈ
ಪದಾರ್ಥಗಳನ್ನು ದೊರಿಕಿಸುವದು ಕಷ್ಟವೆಂದು ಯಾರೂ
ಹೇಳಲಾರರು; ಆದರೆ ಅನಾಸ್ಥೆಯೇ ಇದರ ಕಾರಣವು
ಲೇಖನಕಲಾಕೌಶಲ್ಯವು ಅಭ್ಯಾಸದಿಂದ ಸಾಧ್ಯವಾಗುತ್ತದೆ
ಆದರೆ ಈ ರೀತಿಯಿಂದ ಅಭ್ಯಾಸಕ್ಕೆ ತೊಂದರೆಯನ್ನುಂಟು
ಮಾಡಿದರೆ ಅದು ಅವರಿಗೆ ಎಂದಿಗೂ ಲಭಿಸಲಿಕ್ಕಿಲ್ಲ.

ಲೇಖನ ಕಲೆಯನ್ನು ಕಲಿಸುವ ಕೆಲಸವು ಬಿಗಿಯಾ
ದ್ದಲ್ಲ. ಅದರಲ್ಲಿ ಗೂಢವೇನೂ ಇಲ್ಲ; ಆದರೆ ತಕ್ಕ ಉಪಕ
ರಣಗಳೊಂದಿಗೆ ಶಿಕ್ಷಕನು ನಿಶ್ಚಯದಿಂದಲೂ ತಕ್ಕ ರೀತಿ
ಯಿಂದಲೂ ಕೆಲಸ ಮಾಡಹತ್ತಿದರೆ, ಅವನ ವಿದ್ಯಾರ್ಥಿಗಳ
ಈ ಕಲೆಯಲ್ಲಿ ಕುಶಲರಾಗುವರೆಂಬದಕ್ಕೆ ಏನೂ ಸಂದೇಹ
ವಿಲ್ಲ. ಶಿಕ್ಷಕನು ಬಳ್ಳಿ ಆಸ್ಥೆಯಿಂದ ಕೆಲಸ ಮಾಡಿ, ವಿದ್ಯಾ
ರ್ಥಿಗಳಲ್ಲಿ ಲೇಖನಕಲಾಕೌಶಲ್ಯದ ಲವಲವಿಕೆಯನ್ನು

ಲೆಗೊಳಿಸಬೇಕು; ಉತ್ತಮ ಅಕ್ಷರ ಬರೆಯುವವರನ್ನು
ಾಲ್ಕು ಜನರಲ್ಲಿ ಕೊಂಡಾಡಿ ಆ ವಿಷಯವು ಮಹತ್ವದ್ದೆಂಬ
ಭಿಪ್ರಾಯವನ್ನು ವಿದ್ಯಾರ್ಥಿಗಳಲ್ಲಿ ಹುಟ್ಟಿಸಿ, ಅವರು ಈ
ಲೆಯಲ್ಲಿ ನೈಪುಣ್ಯವಡೆಯಬೇಕೆಂಬ ತನ್ನ ಉತ್ಕಟ ಇಚ್ಛೆ
ುನ್ನು ಆಗಾಗ್ಗೆ ವ್ಯಕ್ತಪಡಿಸಿ, ವಿದ್ಯಾರ್ಥಿಗಳು ಈ ವಿಷ
ುಕ್ಕೆ ಮೆಚ್ಚುವಂತೆ ಶಿಕ್ಷಕನು ಯಾವಾಗಲೂ ಯತ್ನಿಸು
ುತ್ತಿರಬೇಕು.

ವಿದ್ಯಾರ್ಥಿಯು ಅಕ್ಷರಗಳು ನೆಟ್ಟಗಾಗಬೇಕಾದರೆ ಲಕ್ಷ
ುಲ್ಲಿಡತಕ್ಕ ನಿಯಮಗಳು ಯಾವವೆಂದರೆ:—

ಅಕ್ಷರಗಳು ಚಲೋವು ಆಗಬೇಕಾದರೆ ವಿದ್ಯಾರ್ಥಿಯು
ನುಕರಿಸತಕ್ಕಂಥ ಮಾದರಿಯು ಮೇಲಾದದ್ದಿರಬೇಕು.
ಕ್ಷಕನ ಅಕ್ಷರಗಳು ಉತ್ತಮವಾಗಿದ್ದರೆ ನೆಟ್ಟಗೇ ಸರಿ;
ಂದು ವೇಳೆ ಇಲ್ಲದಿದ್ದರೆ ಛಾಪಿಸಿದ ಮಾದರಿಗಳನ್ನೇ ವಿ
್ಯಾರ್ಥಿಗಳಿಗೆ ಕೊಡುವದು ಹಿತಕರವು. ಆದರಿಂದ ಹೊ
ಾ ಶ್ರಮವೂ ಉಳಿಯುವವು. ಈ ಮಾದರಿಗಳು ಸದ್ಯ
ಕಿತ್ತೆಯ ರೂಪದಿಂದ ಇರುತ್ತವೆ; ಆದರೆ ಹಾಗಿರುವ
ು ಬಳ್ಳಿಯುದಲ್ಲ. ಸರ್ತಿಗೆ ಬಂದೊಂದು ಪಂಕ್ತಿಯನ್ನು
ುಂದಿಟ್ಟು ಬರೆಯುವದು, ಇಡಿ ಕಿತ್ತೆಯನ್ನು ತಿದ್ದಿ ಬರೆ
ುವವಕ್ಕಿಂತ ಹೆಚ್ಚು ಪ್ರಯೋಜನಕರವಾದದ್ದು. ವಿದ್ಯಾ
ರ್ಥಿಗಳಿಗೆ ಕೊಡತಕ್ಕ ಮಾದರಿಯು ಮೇಲಾದದ್ದಿರಬೇಕೆಂ
ಸಂಬಂಧದಿಂದ ಮತಭೇದವಿರಲಾರದು. ಆದರೆ ಸಣ್ಣ
ಿರವ ಕಿತ್ತೆಗಳನ್ನು ನೋಡಲಾಗಿ ಈ ಮಾತಿನ ಕಡೆಗೆ ಸ್ವ
ು ದುರ್ಲಕ್ಷವಾದದ್ದು ತೋರುತ್ತದೆ. ಅಕ್ಷರಗಳು ದೊ
ವೂ, ದುಂಡಗೂ ಇರುವದಲ್ಲದೆ ಸಾದಾ ಇರಬೇಕು. ಅ
ರಗಳು ಮುತ್ತಿನಂತೆ ಇರಬೇಕೆಂದು ಎಲ್ಲರೂ ಹೇಳುತ್ತಾ

ರೆ. ಆ ಮಾತು ಇದೇ ಸಂಗತಿಯನ್ನು ವಿವರಿಸುತ್ತದೆ. ಅಕ್ಷರಗಳು ಸಂಕುಚಿತವಾಗಿರಬಾರದು. ಬಂದನ್ನೊಂದು ಬಿಟ್ಟು ದೂರ ದೂರ ಇರಬಾರದು. ತಕ್ಕ ವಳಣದಿಂದ ಬರೆದಂಥವಿರಬೇಕು.

ಕಿತ್ತೆಯು ಚಲೋದಿದ್ದರೆ ನಮ್ಮ ಕೆಲಸಕ್ಕೆ ಅನುಕೂಲವಾಗುವದು; ಅದರೆ ಅಷ್ಟರಿಂದಲೇ ನಮ್ಮ ಕೆಲಸವು ತೀರದು. ಕಿತ್ತೆಯನ್ನು ನೋಡಿ ಅದರಂತೆ ಅಕ್ಷರಗಳನ್ನು ತೆಗೆಯಲಿಕ್ಕೆ ವಿದ್ಯಾರ್ಥಿಗಳನ್ನು ಹಚ್ಚುವದೇ ಶಿಕ್ಷಕನ ಕರ್ತವ್ಯದ ಮುಖ್ಯಾಂಶವು. ಇದು ಬಹಳ ಗೌರವದ್ದೂ ಬಿಗಿಯೂದದ್ದೂ ಇರುತ್ತದೆ. ಅಕ್ಷರಗಳ ಸ್ವರೂಪವನ್ನು ಚನ್ನಾಗಿ ತಿಳುಕೊಂಡು ಅದರಂತೆ ಅಕ್ಷರಗಳನ್ನು ತೆಗಿಯಲಿಕ್ಕೆ ವಿದ್ಯಾರ್ಥಿಗಳನ್ನು ಹಚ್ಚಬೇಕ್ಕದ್ದು. ಲೇಖನ ಕಲಾಕೌಶಲ್ಯವು ಹುಡುಗರ ಆಸ್ಥೆ ವ್ಯವಸಾಯಗಳನ್ನು ಅವಲಂಬಿಸಿರುತ್ತದೆ. ಇವು ಇಲ್ಲದಂಥ ಶಾಲೆಗಳಲ್ಲಿ ಸೊಟ್ಟಪಟ್ಟ ಅಕ್ಷರಗಳು ಕಣ್ಣಿಗೆ ಬಿದ್ದರೆ ಅವರಲ್ಲಿ ಆಶ್ಚರ್ಯವೇನು? ಕೆಟ್ಟ ಅಕ್ಷರಗಳು ದುರ್ಲಕ್ಷದ ಪರಿಣಾಮವೆಂದು ಖಂಡಿತವಾಗಿ ಹೇಳಬಹುದು. ಅನಾಸ್ಥೆಗೆ ಎಳ್ಳಷ್ಟು ಸಹ ಅಪ್ಪವ ಕೊಡಬಾರದು. ದುರ್ಲಕ್ಷದ ಲಕ್ಷಣ ತೋರಿದ ಕೂಡಲೆ ಅವನ್ನು ಎಚ್ಚರದಿಂದ ತೆಗೆದುಹಾಕಬೇಕು. ಅನಾಸ್ಥೆಯಿಂದ ಸುಧಾರಣೆಯಾಗುವದಂತು ಒತ್ತಟ್ಟಿಗುಳಿದು ಸಾಧ್ಯವಾದದ್ದು ಸಹ ಕೆಟ್ಟು ಹಾಳಾಗಿ ಹೋಗುವದು. ಆದದ್ದರಿಂದ ವಿದ್ಯಾರ್ಥಿಗಳು ಬರೆಯುತ್ತಿರುವಾಗ್ಗೆ ಶಿಕ್ಷಕನು ಎಚ್ಚರದಿಂದಲೂ ಆಸ್ಥೆಯಿಂದಲೂ ನೋಡುತ್ತಿರಬೇಕು; ಅವರ ನಡುವೆ ತಿರುಗಾಡಿ, ಅವರು ಮಾಡುವ ಪ್ರತಿಯೊಂದು ತಪ್ಪನ್ನು ಜಾಗರೂತೆಯಿಂದ ತಿದ್ದುತಿರಬೇಕು. ದುರ್ಲಕ್ಷದ ಅಂ

ಕುರ ತೋರಿದಕೂಡಲೆ ಸಿಟ್ಟು ಮಾಡಿಯಾಗಲಿ ಶಿಕ್ಷೆ ಕೊ
ಟ್ಟು ಆಗಲಿ ಅದನ್ನು ಕಿತ್ತು ಹಾಕುತ್ತಿರಬೇಕು. ಈ ಮೇ
ರೆಗೆ ಅಶ್ರಾಂತ ಶ್ರಮ ತಕ್ಕೊಂಡು ಎಚ್ಚರದಿಂದ ನೋಡು
ತ್ತಿದ್ದರೆ, ಈ ವಿಷಯದ ಸಂಬಂಧದಿಂದ ವಿದ್ಯಾರ್ಥಿಗಳಲ್ಲಿ ಇ
ರತಕ್ಕ ಆಸ್ಥೆಯನ್ನೂ ಅವರು ಮಾಡತಕ್ಕ ವ್ಯವಸಾಯಗ
ಳನ್ನೂ ಕಾಯ್ದುಕೊಳ್ಳಲಿಕ್ಕೆ ಅನುವಾಗುವದು.

ಪುಸ್ತಿಯು ಮುಗಿಮುಗಿಯುತ್ತ ಬಂದ ಹಾಗೆ ವಿದ್ಯಾರ್ಥಿಗ
ಳಲ್ಲಿ ದುರ್ಲಕ್ಷ್ಯವು ತಲೆದೋರುವದು. ಆದದ್ದರಿಂದ ಶಿಕ್ಷಕನು
ಈ ಮಾತನ್ನು ಚನ್ನಾಗಿ ಲಕ್ಷದಲ್ಲಿಟ್ಟು ಆ ಸಂಬಂಧದಿಂದ ವಿ
ದ್ಯಾರ್ಥಿಗಳನ್ನು ಎಚ್ಚರಿಸಿ ಕೆಲಸವು ಆರಂಭದಿಂದ ಕಡೆತನ
ಕ ಬಂದೇಸವನೆ ಸಾಗುವಂತೆ ಪ್ರಯತ್ನಪಡಬೇಕು. ಮಾಡಿ
ಕೆಯಾಗಿ ವಿದ್ಯಾರ್ಥಿಗಳು ತೀರ ಸಣ್ಣಕ್ಷರಗಳನ್ನು ಬರೆಯಲಿ
ಕ್ಕೆ ಪ್ರವರ್ತಿಸುತ್ತಿರುತ್ತಾರೆ. ಯಾಕಂದರೆ ಅವರು ಸಣ್ಣಕ್ಷರ
ವು ಜಾಣತನದ ಕುರುಹೆಂದು ಎಣಿಸುವರು. ಈ ಭ್ರಾಂತಿ
ಮೂಲಕವಾದ ತಿಳುವಳಿಕೆಯನ್ನಾದರೂ ಶಿಕ್ಷಕನು ಅಗ್ರಹ
ಪೂರ್ವಕವಾಗಿ ತಗೆದುಹಾಕತಕ್ಕದ್ದು. ಶಿಕ್ಷಕನು ವಿದ್ಯಾ
ರ್ಥಿಗಳಿಂದ ಅಕ್ಷರಗಳನ್ನು ದೊಡ್ಡವಾಗಿಯೂ ದಂಡಗಾಗಿ
ಯೂ ಸಣ್ಣವು ದೊಡ್ಡವು ಆಗದಂತೆ ಪ್ರಮಾಣಾನುರೂಪವಾ
ಗಿಯೂ ವಳಣಕ್ಕೆ ಸರಿಯಾಗಿಯೂ ಬರೆಸುತ್ತಿರಬೇಕು. ಸಾ
ರಾಂಶ ಕಾಪೀಬುಕ್ಕಿನ ಮುಖಪಂಕ್ತಿಯ ಅಕ್ಷರಗಳಿಗೆ, ಆಕಾ
ರವಲ್ಲಿಯೂ ವಳಣ ಮುಂತಾದ ಸಂಗತಿಗಳಲ್ಲಿಯೂ ಸರಿ
ಯಾಗಿ ಹೋಲುವಂಥ ಅಕ್ಷರಗಳನ್ನು ಅಗ್ರಹಪೂರ್ವಕ
ವಾಗಿ ಬರಿಸುತ್ತಿರಬೇಕು.

DEPARTMENTAL NOTICES.

ನೋಟೀಸು.

ಮೆ. ಕ್ಯೂರೇಟರ ಗವರ್ನಮೆಂಟ ಸೆಂಟ್ರಲ ಬುಕ ಡಿ
ಪೋ ಮುಂಬಯಿ ಇವರಿಂದ ತಿಳಿಸಲ್ಪಡುವದೇನಂದರೆ:—

ಕೆಲವು ಪುಸ್ತಕಗಳೂ ನಕಾಶಗಳೂ ತಾ|| ೧ನೇ ಅಗಪ
ಸ್ಟ ೧೮೯೬ನೇ ಇಸವಿಯಿಂದ ತಾ|| ೩೧ನೇ ಜಾನೆವ
ಸ್ಟ ೧೮೯೭ನೇ ಇಸವಿಯ ವರೆಗೆ ಮುದ್ರಿಸಲ್ಪಟ್ಟು, ಸೆ
ಟ್ರಲ ಬುಕ ಡಿಪೋಕ್ಕೆ ಮಾರಾಟಕ್ಕಾಗಿ ಬಂದಿರುತ್ತವೆ; ಆ
ವುಗಳ ವಿವರವು ಕೆಳಗೆ ಬರೆದಂತೆ:—

೧	ಬಾಂಬೆ ಸಂಸ್ಕೃತ ಸೀರೀಜ ನಂಬರು ೧೮, ವ್ಯಾಕರಣ ಮಹಾ ಭಾಷ್ಯ, ಆವ ಪತಂಜಲಿ ವಾಲ್ಯೂಮು ೧, ಭಾಗ ೧।೨।೩	ಬೆಲೆ	೯ ೭೦೧
೧	,, ,, ನಂಬರು ೪೪, ಆಪಸ್ತಂಬ ಧರ್ಮ ಸೂತ್ರ ಭಾಗ ೧	,,	೦ ೧೧೦೧
೧	,, ,, ನಂಬರು ೪೫, ರಾಜತರಂಗಿಣೀ	,,	೩೧೫
೧	,, ,, ನಂಬರು ೪೬ ಪಾತಂಜಲ ಯೋಗ ಸೂತ್ರ	,,	೩೪೧

ಕನ್ನಡ.

೧	ಕರ್ತವ್ಯ ಭೂಮಿತಿಯು ಮಾಗೋರ್ಪದೇತಿಕಾ	,,	೧೧೬

ಕನ್ನಡ ನಕಾಶಗಳು.

೧	ಧಾರವಾಡ ಜಿಲ್ಲೆಯ ನಕಾಶ	,,	೦೧೧
೧	ಹಿಂದುಸ್ಥಾನದ ನಕಾಶ	,,	೪೧೧

೪

ಮುಂಬಯಿ,
ತಾ|| ೯।೦।೯೯.

(Sd.) G. B. Nene.
ಕ್ಯೂರೇಟರ ಗವರ್ನಮೆಂಟ ಸೆಂಟ್ರಲ
ಬುಕ ಡಿಪೋ ಮುಂಬಯಿ.

CORRESPONDENCE.
ಪತ್ರವ್ಯವಹಾರ.

ರಾವಸಾಹೇಬ ಕನ್ನಡ ಶಾಲಾಪತ್ರಕದ ಎಡಿಟರರವರ ಸನ್ನಿಧಾನಕ್ಕೆ :—

ವಿ. ವಿ. ತಮ್ಮ ಕರಕಮಲದಲ್ಲಿ ಉದ್ಭವಿಸುವ ಸುಂದರವಾದ ಈ ತಿಂಗಳ ಶಾಲಾಪತ್ರದಲ್ಲಿ ಕೆಳಗಿನ ಸಂಗತಿಯನ್ನು ಪ್ರಕಟಿಸುವಿರೆಂದು ತುಂಬಾ ನಂಬಿರುವೆನು.

ಮೈಸೂರ ಪ್ರವಾಸ.

ವಾ॥ ಪ್ಪ॥ ನಿರುತಶಿಷ್ಯಸ್ತೋಮದೊಳಿತ ಬಯಸುತ್ತಿರ್ಪ ।
ಗುರುಗಳತಿಕೃಪೆಯಿಂದ ಕನ್ನಡದೆ ಪೆಸರ್ವಡೆದ ।
ನಿರುಪಮದ ಸೊಬಗಿನ ವಿಶಾಲತೆಯೊಳಧಿಕವಹ
ಮೈಸೂರ ನಾಡಿನೊಳಗೆ ॥
ಸರಸದಿಂಸಂಚರಿಸಿ ನೋಡಿವತಿ ಸೌಂದರ್ಯ ।
ತರವೂಡ ತಾಣಂಗಳಂ ವರ್ಣಿಪೆಂ ದೋಷ ।
ವಿರಲವುಗಳಂ ತೊರೆದು ಗುಣಮಂಗ್ರಹಿಪ್ಪಡೆಂದು
ಬೇಳ್ವಂವಿಬುಧನಿಕರಕೆ ॥ ೧ ॥

ದೇವರು ಬಗೆಬಗೆಯ ಪ್ರಾಣಿಗಳನ್ನು ಹುಟ್ಟಿಸಿರುವನು. ಅವುಗಳಲ್ಲಿ ಹುಲಿ, ಕರಡಿಗಳಂಥ ಪ್ರಾಣಿಗಳು ಒಂಟಿಯಾಗಿ ಇರುವವು. ಪಕ್ಷಿಗಳೆಲ್ಲ ಜೋಡಾಗಿರುವವು. ಗ್ರಾಮ್ಯ ಪಶುಗಳೆಲ್ಲ ಮನುಷ್ಯನ ಅಧೀನದಲ್ಲಿದ್ದು ಹಚ್ಚಿದ ಕೆಲಸ ಮಾಡಿ ಜೀವಿಸುತ್ತವೆ. ಎಲ್ಲವುಗಳಲ್ಲಿ ಮನುಷ್ಯನೆಂಬ ಪ್ರಾಣಿಯು ಸಮೂಹದಲ್ಲಿರುವವನೂ ಸ್ವತಂತ್ರಾಭಿಮಾನಿಯೂ ಮೇಲಾದ ಬುದ್ಧಿ ಕೌಶಲ್ಯವುಳ್ಳವನೂ ದೇವರಿಂದ ನಿರ್ಮಿತವಾದ ಎಲ್ಲ ಪ್ರಾಣಿಗಳ ಹಾಗು ಪದಾರ್ಥಗಳ ಉಪಯೋಗ ಮಾಡಿಕೊಳ್ಳುವವನೂ ಇರುವನು. ಮನುಷ್ಯ

ನಿಗೆ ಆನೆಯಂತೆ ಬಲವಾದ ಮೈಯಿಲ್ಲ, ಸೀಹನಂತೆ ಅದ್ಭು
ತ ಶಕ್ತಿಯಿಲ್ಲ. ಪಕ್ಷಿಗಳಂತೆ ರೆಕ್ಕೆಗಳಿಲ್ಲ. ಆದರೂ ಆ
ಮೂಲ್ಯವಾದ ವಿಚಾರಶಕ್ತಿಯು ಆತನಲ್ಲಿರುವದರಿಂದ ಆತ
ನು ತನ್ನ ವಿಚಾರಶಕ್ತಿಯ ಸಹಾಯದಿಂದ ಎಲ್ಲ ಪ್ರಾಣಿಗಳ
ಗಿಂತ ಪೆಚ್ಚು ಬಲಿಷ್ಠನೂ ಶ್ರೇಷ್ಠನೂ ಆಗಿರುವನು. ದು
ಷ್ಕರವಾದ ಕಾರ್ಯಗಳನ್ನು ಮಾಡುವನು. ತಾಸಿಗೆ ನೂ
ರಾರು ಮೈಲು ಪ್ರಯಾಣಿಸುವನು. ಆಕಾಶದೊಳಗಿನ ತಾ
ರೆಗಳ ನಿಜಸ್ವರೂಪವನ್ನು ಗೊತ್ತು ಹಚ್ಚುವನು. ತನ್ನ
ಸುಖಕ್ಕಾಗಿ ಅಲ್ಪಾಯಾಸದಿಂದ ಬಹು ಫಲವನ್ನು ಪಡೆದುಕೊ
ಳ್ಳುವವಕ್ಕೆ ಉಗಿ, ವಿದ್ಯುತ್ತು, ಆಕರ್ಷಣ ಮುಂತಾದ ಶ
ಕ್ತಿಗಳ ಸ್ವರೂಪವನ್ನು ತನ್ನ ವಿಚಾರಶಕ್ತಿಯ ಸಹಾಯ
ದಿಂದ ತಿಳಿದುಕೊಂಡು ಎಷ್ಟೋ ಕಾರ್ಯಗಳನ್ನು ಕೈಗೂ
ಡಿಸಿಕೊಂಡಿರುವನು. ಇದರಂತೆ ತನ್ನ ವಿಚಾರಶಕ್ತಿಯನ್ನು
ಬಲಪಡಿಸಿ ಇನ್ನು ಹೆಚ್ಚಿನ ಸಂಗತಿಗಳ ಶೋಧ ನಡಿಸಿ
ವನು.

ಹೀಗೆ ಬಗೆಬಗೆಯ ಸುಧಾರಣೆಗಳನ್ನು ಮಾಡಬೇಕಾ
ರೆ, ಆತನಲ್ಲಿರುವ ವಿಚಾರಶಕ್ತಿಯ ಬೆಳುವಣಿಗೆಯೇ ಮು
ಲಕಾರಣವೆಂದು ವಾಚಕರಿಗೆ ಸಹಜವಾಗಿ ತಿಳಿಯುವದು
ಅದರ ಬೆಳುವಣಿಗೆಗೆ ಬಗೆಬಗೆಯ ಸಾಧನಗಳುಂಟು. ಆ
ಗಳಲ್ಲಿ ದೇಶಪರ್ಯಟನವು ಬಂದಾಗಿದೆ. ದೇಶಪರ್ಯಟನ
ದಿಂದ ಮನುಷ್ಯನಿಗೆ ಬಗೆಬಗೆಯ ಅನುಭವಗಳು ಗೊತ್ತಾ
ಗುತ್ತವೆ. ಮತ್ತು ಪೂರ್ವಜರು ಪುಸ್ತಕಗಳಲ್ಲಿ ಬರೆದಿಟ್ಟ
ಸಂಗತಿಗಳ ನಿಜತ್ವವೂ ಸ್ಪಷ್ಟವಾಗಿ ಕಂಡು ಬರುತ್ತದೆ
ನಮ್ಮಲ್ಲಿಯ ಶಾಲಾಶಿಕ್ಷಣವಾದರೂ ಹಿರಿಯರ ಅನುಭವ
ಸಂಗತಿಗಳ ಸಂಗ್ರಹವೇ ಇರುತ್ತದೆ. ಬಂದು ಹಾಲಿ

ನಂತ ಅಥವಾ ಗಿಡದ ಪಾತವಾದರೂ ತೀರ ಸಣ್ಣದಾದ " ಸೈ
ಣಿ ಎಂಬದು ಮೈಸಿರಿ " ಎಂಬ ಪದ್ಯವಾದರೂ ಹಿರಿಯರ
ತಿ ಗೌರವವುಳ್ಳ ಅನುಭವವೆಂಬ ಅಮೃತದಿಂದ ಪೂರಿತ
ಾದದ್ದೆಂದು ವಿಚಾರವುಳ್ಳ ಪ್ರತಿಯೊಬ್ಬನಿಗೆ ಚನ್ನಾಗಿ ತಿಳಿ
ಯುವದು. ನಮ್ಮ ಎದುರಿಗೆ ಇರುವ ಇತಿಹಾಸದ ಬಗೆಬ
ಯ ದೃಷ್ಟಾಂತಗಳಾದರೂ " ನೀತಿಯಿಂದ ನಡಿ " ಎಂಬ
ನುಭವದ ಮಾತಿನ ನಿಜತ್ವವನ್ನೇ ಬೈಲಿಗೆ ಎಳೆಯುತ್ತ
ವೆ. ಹೀಗೆ ಮನುಷ್ಯನಲ್ಲಿ ನೀತಿಯೂ ಅನುಭವವೂ ಹೆ
ಾಗಬೇಕಾದರೆ ಆತನು ಸುತ್ತಲಿನ ಸಂಗತಿಗಳನ್ನು ಲಕ್ಷ
ಟ್ಟು ನೋಡಲಿಕ್ಕೆಬೇಕು. ಈ ಅವಲೋಕನವು ಹೆಚ್ಚಾ
ಬೇಕಾದರೆ ಆತನು ದೇಶಪರ್ಯಟನೆ ಮಾಡುವದು ಅತ್ಯ
ವಶ್ಯವಾದದ್ದೆಂಬ ಮಾತು ಸಹಜವದೆ. ಆ ಕಾರಣ ಪ್ರವಾ
ನವೆಂದರೇನು. ಅದರ ಉದ್ದೇಶವೇನು, ಅದನ್ನು ಯಾವ
ಕ್ರಮದಿಂದ ಮಾಡಬೇಕು, ಆಗ ಯಾವ ಯಾವ ಸಿದ್ಧತೆಗ
ಾರಬೇಕು, ಪ್ರವಾಸದಿಂದ ಆಗುವ ಲಾಭಗಳು ಯಾವವು,
ಮೊದಲಾದ ಸಂಗತಿಗಳನ್ನು ತಿಳುಕೊಂಡು ಅದರಂತೆ ಮಾ
ಡುವದು ಬಹು ಸಯುಕ್ತಿಕವಾದದ್ದು.

ಪ್ರವಾಸ ಮಾಡುವವರಿಂದ ಬಗೆಬಗೆಯ ಲಾಭಗಳುಂಟೇ
ನೆಂದನ್ನು ತಿಳದು ಹಂಬೋಲ್ಟ, ಮ್ಯಾಗೆಲನ, ಕುಕ, ಮಾ
ರ್ಕೊಪೊಲೊ, ಹಿವೆನ್, ತ್ಸಾಂಗ ಮುಂತಾದ ಜನರು ಆ ಕೆ
ಲವಲ್ಲಿ ಮನಸು ಹಾಕಿ ಕೀರ್ತಿಯನ್ನು ಪಡೆದವರು. ಆದರೆ
ತೆ ಇಂಗ್ಲಿಷ, ಡಚ್ಚ, ಫ್ರೆಂಚ, ಪೋರ್ತುಗೀಜ ಮೊದಲಾ
ದ ಪಾಶ್ಚಿಮಾತ್ಯ ಜನಾಂಗದವರು ಪ್ರವಾಸ ಮಾಡುವದರಲ್ಲಿ
ಮಿಗಿಲು ಪ್ರಸಿದ್ಧಿಯನ್ನು ಹೊಂದಿದವರಿದ್ದಾರೆ. ಈಚೆಯ
ಶತಮಾನದಿಂದ ಅವರು ಭೂಪ್ರವಾಸವನ್ನೂ ಸಮುದ್ರಾ

ರ್ಯಟನೆವನ್ನೂ ಮಾಡಿ ಮಾನವೀ ಪ್ರಾಣಿಗಳ ಮೇಲೆ ಅನೇಕ ಉಪಕಾರ ಮಾಡಿದ್ದಾರೆ. ಅಮೇರಿಕಾ ಮೊದಲಾದ ಹೊಸ ಭೂಮಿಗಳ ಶೋಧನೆಯು ಆ ಉಪಕಾರದ ಸಾಕ್ಷಿಯಾಗಿದೆ. ಅದಲ್ಲದೆ ಕೆಲವರು ದೂರದೂರದ ದೇಶಗಳಿಗೆ ಹೋಗಿ ವ್ಯಾಪಾರ ಉದ್ಯೋಗಗಳನ್ನು ಬಹಳ ವೃಥನಿಶ್ಚಯದಿಂದಲೂ ಸ್ವಾವಲಂಬನದಿಂದಲೂ ನಡಿಸಿ, ತಮ್ಮ ತಮ್ಮ ದೇಶಗಳ ಸಂಪತ್ತಿಯನ್ನೂ ವರ್ಚಸ್ಸನ್ನೂ ಹೆಚ್ಚು ಗೊಳಿಸಿದರು. ಈಗಲಾದರೂ ಎಷ್ಟೋ ಜನರು ಪ್ರವಾಸವೆಂಬ ಮೇಲಾದ ಸಾಧನದಿಂದ ತಮ್ಮ ವೈಭವವನ್ನು ಬೆಳಸಲಿಕ್ಕೆ ಎತ್ತುಗಡೆ ಮಾಡುತ್ತಲಿದ್ದಾರೆ.

ಅವರೆ ನಮ್ಮ ದೇಶದವರಲ್ಲಿ ಪ್ರವಾಸದ ಅಭಿರುಚಿಯು ತೀರ ಕಡಿಮೆ ಯಾಗಿದೆ. ಇದಕ್ಕೆ ಹಲವು ಕಾರಣಗಳುಂಟು. ಅವುಗಳಲ್ಲಿ ಮುಖ್ಯವಾದವುಗಳಾವವೆಂದರೆ.

(೧) ಹಿಂದುಸ್ಥಾನವು ಸೃಷ್ಟಿಯಂಬ ವಿಲಾಸಿನಿಯ ಆ ಸ್ಥಾನ ಭೂಮಿಯಂದರೂ ಅತಿಶಯೋಕ್ತಿ ಯಾಗಲಾರದು. ಈ ದೇಶದಲ್ಲಿ ಯಾವತ್ತು ಚಮತ್ಕಾರಗಳು ಕಣ್ಣಿಗೆ ಬೀಳುತ್ತವೆ. ಬಗೆ ಬಗೆಯ ಹಳ್ಳ ಕೊಳ್ಳಗಳು, ಗಿರಿ ಕಂದರಗಳು, ತಪ್ಪಲುಗಳು, ಮರುಭೂಮಿಗಳು, ವಿಧ ವಿಧವ ಗಿಡ ಬಳ್ಳಿಗಳು, ಸಣ್ಣ ದೊಡ್ಡ ಪರ್ವತಗಳು ಅಲ್ಲಲ್ಲಿಗೆ ಕಂಗೊಳಿಸುತ್ತವೆ. ಆದರಿಂದ ಈ ದೇಶದವರಿಗೆ ಆದರಲ್ಲಿ ಚಮತ್ಕಾರ ವೇನೂ ತೋರುವದಿಲ್ಲ. ಕುತೂಹಲವೂ ಜಾಗ್ರತವಾಗುವದಿಲ್ಲ. ಇವರು ಪರದೇಶವು ತುಚ್ಛವೆಂದೆಣಿಸಿ ಮತ್ತೊಂದು ಕಡೆಗೆ ಹೋಗಲಿಕ್ಕೆ ಬಯಸುವದಿಲ್ಲ. ಆದದ್ದರಿಂದ ಇವರು ಸೃಷ್ಟಿ ಕರ್ತನ ಅಲೌಕಿಕ ಮಹಿಮೆಯನ್ನು ಧ್ಯಾನಿಸುತ್ತ ಇದ್ದ ಸ್ಥಳದಲ್ಲಿಯೇ ಪಾರಮಾರ್ಥಿಕ ವಿಚಾರಗಳಲ್ಲಿ ಮಗ್ನರಾಗಿ ಕೂಡುವರು.

(ಮುಂದಕ್ಕೆ ಸಾಗುವದು.)

ಶಾಲಾಪತ್ರಿಕೆ.

ಪದ್ಯಂ.

ಶ್ರಯವಿದ್ಯಾಗುರುವರ್ಯರುನ್ನತಿಕೆಯುಂ ಸಚ್ಛಿಕ್ಷಣೋತ್ಕರ್ಷಮುಂ।
ಜಯಸುತ್ತಂ ಪ್ರತಿವಾಸವಾಮಿಗೊಲವಿಂದೀಪತ್ರಮುಂ ಮುದ್ರಿಸಿ॥
ಜಯದಿಂದಿತ್ತಪೆಪ್ರೋದುವರ್ಗಸುಗುಣಂ ತೋರಲ್ಕೆಕ್ಕೆಕೊಂಬುದೈ।
ಜಯಿಯಿಂದೋಷವತಿದ್ದನೇಳ್ವುದುಬುಧರ್ಜ್ಞಾನಾಭಿವೃದ್ಧಿಪ್ರಿಯರ್॥೧॥

ಪುಸ್ತಕ ೨೦ಳ.] ಎಪ್ರಿಲ ೧೮೮೩. [ಸಂಚಿಕೆ ೪.

EDUCATIONAL INTELLIGENCE AND USEFUL, NOTES.

ವಿದ್ಯಾಸುಧಾರಣಾ ಸಂಬಂಧದ ವೃತ್ತಾಂತಗಳು.

ಶೋಧನೃಷ್ಟಿಯು—ಬಂದು ಸಮಯವಲ್ಲಿ ಪರೀಕ್ಷೆಗಳ ಪ್ರಯುಸಾಗಿ ಕಾಲೇಜವಿಂದ ಹೋಗುವ ಕೆಲವು ವಿದ್ಯಾರ್ಥಿನಿಯರು ತಮ್ಮ ಗುರುಗಳ ಬಳಿಗೆ ಬಂದು "ಗುರುಗಳೇ, ನಾವು ಈಗ ಕಾಲೇಜವ ಅಭ್ಯಾಸವನ್ನು ಮುಗಿಸಿಕೊಂಡು ಮನೆಗೆ ಹೋಗತಕ್ಕವರಿದ್ದೀವೆ. ಮುಂದೆ ನಮ್ಮ ಆಯುಷ್ಯವು ಸುಖಕರವೂ ಶ್ರೇಯಸ್ಕರವೂ ಆಗಬೇಕಾದರೆ ಏನು ಮಾಡಬೇಕು" ಎಂದು ಕೇಳಿದರು. ಅದಕ್ಕೆ ಆ ಗುರುವು "ಶೋಧನೃಷ್ಟಿಯುಳ್ಳವರಾಗಿರಿ" ಎಂದು ಉತ್ತರಕೊಟ್ಟನು. ಈ ಉತ್ತರವು ಸರಿಯಾದದ್ದು. ಯಾಕಂದರೆ ಸೃಷ್ಟಿ ಪದಾರ್ಥಗಳ ವಿಷಯವಾಗಿ ನಾವು ಹೆಚ್ಚು ಹೆಚ್ಚು ವಿಚಾರ ಮಾಡಿದಷ್ಟಾಗಿ ಅವುಗಳಲ್ಲಿ ಬಹಿಲ್ಲೊಂದು ಆಶ್ಚರ್ಯಕರವಾದ ಗುಣವನ್ನು ಸೃಷ್ಟಿಕರ್ತನು ಇಟ್ಟಿದ್ದಾನೆಂದು ಕಂಡುಬರುತ್ತದೆ, ಮತ್ತು ಈ ಶೋಧನೃಷ್ಟಿಯಿಂದ ಬಹಳೊಮ್ಮೆ ಅಚಿಂತ್ಯವಾದ ಲಾಭವಾಗುತ್ತದೆ. ಅದು ಹ್ಯಾಗಂದರೆ:—

(೧). ಇದೇ ಶತಮಾನದ ಆರಂಭದಲ್ಲಿ ಬಬ್ಬ ಇಂಗ್ಲಿಷ
ನು ವಾಸ್ಕೋಟೆ (ಬಳಅಂಗಿ)ಗೆ ಹಚ್ಚುವ ಉಕ್ಕಿನ ಗುಂಡಿ
ಳನ್ನು ಹೇರಳವಾಗಿ ಮಾಡುತ್ತಿದ್ದನು. ಅವನು ಶೂ
ಭೆಗಾಗಿ ಆ ಗುಂಡಿಗಳ ಮೇಲೆ ಕೆಲವು ಗೆರೆಗಳನ್ನು
ಕೊರೆಯುತ್ತಿದ್ದನು. ಅವನು ಗೆರೆಗಳನ್ನು ಬಂದಕ್ಕೊಂದ
ಸವಿಾಪವಾಗಿ ಕೊರೆಕೊರೆದ ಹಾಗೆ, ತ್ರಿಕೋನಾಕೃತಿಯ
ವೆ ಕಾಜಿನಿಂದ ಬೀಳುವ ಇಂದ್ರಧನುಷ್ಯವಂತೆ ಈ ಗುಂ
ಗಳಿಂದಾವರೂ ಬಂದು ಧನುಷ್ಯಾಕೃತಿಯು ಬೀಳಹತ್ತಿದ
ನ್ನು ನೋಡಿ ಕೌತುಕಪಟ್ಟು, ಈ ಸಂಗತಿಯನ್ನು ಅ
ನು ಬಬ್ಬ ಶಾಸ್ತ್ರಜ್ಞನಿಗೆ ತಿಳಿಸಿದನು. ಆ ವಿದ್ವಾಂಸನ
ಗೆರೆ ಹಾಕಿದ ಬಂದು ಉಕ್ಕಿನ ತಗಡನ್ನು ತಕ್ಕೊಂಡು ಅ
ರ ಮೇಲೆ ಶಾಸ್ತ್ರಿಯ ಪ್ರಯೋಗಗಳನ್ನು ನಡಿಸಿ, ಉಕ್ಕಿ
ನಲ್ಲಿ ಸೂರ್ಯಕಿರಣವನ್ನು ಪ್ರತಿಕ್ಕರಣ ಮಾಡುವ ಶಕ್ತಿ
ಯು ಪೂರ್ಣವಾಗಿ ಇರುತ್ತದೆಂದು ಕಂಡುಕೊಂಡನು. ಈ
ಗ್ಗೆ ದೊಡ್ಡ ದೊಡ್ಡ ದುರ್ಬೀನುಗಳಲ್ಲಿ ಕಾಜಿನ ಲೆನ್ಸಿಂ
ಪರಳುಗಳ ಬದಲಾಗಿ ಉಕ್ಕಿನ ತಗಡುಗಳನ್ನೇ ಉಪಯೊ
ಗಿಸುತ್ತಾರೆ. ಇವರಿಂದ ಕಾಜಿನ ಲೆನ್ಸಿಂಬ ಪರಳುಗಳ
ಬಹಿಮ ಕೆಲಸಕ್ಕೆ ತೊಂದರೆ ತಟ್ಟುವದು ಇಲ್ಲದಂತಾಗಿ ವೆಚ್ಚ
ವಾದರೂ ಕಡಿಮೆ ಹಿಡಿಯುತ್ತದೆ.

(೨). ಇನ್ನೇ ಶತಮಾನದಲ್ಲಿ ಆಸ್ಟ್ರಿಯದವರಿಗೂ ತುರ
ಕರಿಗೂ ಜಗಳ ನಡೆದಾಗ ಬಂದು ದಿವಸ ಬಬ್ಬ ರೊಟ್ಟಿ ಮಾ
ರುವನನು ತನ್ನ ಕೋಣೆಯಲ್ಲಿ ರೊಟ್ಟಿಯ ಹಿಟ್ಟನ್ನು ನಾದ
ತ್ತ ಕೂತಿದ್ದನು. ಒಗ್ಗೆ ನೆರೆಯಲ್ಲಿ ತುಸು ಹೊತ್ತು ನಿಂತುನಿ
ತು ಆಗುತ್ತಿರುವಂಥ ಬಂದು ಸಣ್ಣ ಸಪ್ಪಳವನ್ನು ಕೇಳಿದನು
ಅವನು ಕೂಡಲೆ ತನ್ನ ಕೆಲಸವನ್ನು ಬಿಟ್ಟು ಆ ಸಪ್ಪಳದಗು

ಟ ಅದು ಆಗುವಲ್ಲಿಗೆ ಹೋಗಿ ನೋಡುತ್ತಾನೇ ಅಲ್ಲಿ ಆವ
ನ ಚಿಕ್ಕ ಮಗುವು ಚೆಲ್ಲಿದಂಥ ಬಂದು ಟುಮುಕಿಯ ಮೇಲೆ
ಅವಕ್ಕೆ ಕಟ್ಟಿದ ಕೆಲವು ಗುಂಡುಗಳು ಪುಟಪುಟದು ಜೀಳು
ತ್ತಿದ್ದವು. ಮತ್ತೊಬ್ಬ ಮನುಷ್ಯನು ಇದನ್ನು ನೋಡಿದ್ದ
ರೆ, ಅವನು ಈ ಗುಂಡುಗಳ ಹಾರ್ಯಾಟಕ್ಕೆ ಬೀದಿಗಳಲ್ಲಿ
ನಡೆದಿರುವ ಗೊಂದಲವಾಗಲಿ, ಆಗಾಗ್ಗೆ ಹಾರುತ್ತಿರುವ ಫಿರಂ
ಗಿಗಳ ಸಪ್ಪಳವಾಗಲಿ ಕಾರಣವಿರಬಹುದೆಂದು ಸಹಜವಾಗಿ
ಯೇ ನೆನಸುತ್ತಿದ್ದನು. ಆದರೆ ಆ ಮನುಷ್ಯನು ಶೋಧ
ದೃಷ್ಟಿಯವನಾಗಿದ್ದದ್ದರಿಂದ ಈ ಗುಂಡುಗಳು ನಿಯಮಿತವಾ
ಗಿ ಪುಟಿಯುತ್ತಿರುವದನ್ನು ನೋಡಿ ಸೋಜಿಗಗೊಂಡು
ಇದಕ್ಕೆ ಬೂಮು ವಿಶೇಷ ಕಾರಣವಿರಬಹುದೆಂದು ಯೋಚಿಸಿ ಆ
ಕಾರಣವನ್ನು ಗೊತ್ತು ಹಚ್ಚ ತೊಡಗಿದನು. ಅವನು ಚಿಕ್ಕ
ದಿನಲ್ಲಿ ಕಪ್ಪಿಗೆಯ ಧ್ವನಿವಾಹಕತ್ವವನ್ನು ಕುರಿತು ಮನಗಂ
ಡಂತೆ ಭೂಮಿಯಲ್ಲಿಯಾದರೂ ಧ್ವನಿವಾಹಕತ್ವವಿರಬಹುದೆ
ನು ಆಲೋಚಿಸಿ ನೆಲಕ್ಕೆ ಕಿವಿ ಹಚ್ಚಿ ಕೇಳಿದನು. ಆಗ
ಅವನಿಗೆ ಗುದ್ದಲಿಯು ಆಗತದ ಸಪ್ಪಳವು ಕೇಳಿಬಂತು. ಆ
ನ್ನು ವಿಶೇಷ ಲಕ್ಷ್ಯಗೊಟ್ಟು ವಿಚಾರಿಸಲು, ಹಗೆಗಳಾದ ತು
ರುಕರು ತಮ್ಮ ಪಟ್ಟಣದ ಬುಡದಲ್ಲಿ ಸುರಂಗ ತೋಡುವ
ಪ್ರಯತ್ನ ನಡಿಸಿರಬಹುದೆಂಬ ಸಂಶಯವು ಅವನ ಮನಸ್ಸಿ
ಬಂತು. ಆ ಮೇಲೆ ಅವನು ಈ ಸಂಗತಿಯನ್ನು ಆಸ್ಟ್ರಿಯ
ದ ದಂಡಿನ ಮುಖ್ಯ ಸರದಾರನಿಗೆ ತಿಳಿಸಿದನು. ಆವನು
ಬಗ್ಗೆ ಶೋಧ ಮಾಡಲು ರೊಟ್ಟಗಾರನ ಸಂಶಯವು ನಿ
ವಾದದ್ದೆಂದು ಕಂಡುಬಂತು. ಕೂಡಲೆ ಆ ಸರದಾರ
ಪ್ರತಿಯುಕ್ತಿಯನ್ನು ಕೈಕೊಂಡು ಸುರಂಗ ತೋಡು
ತುರುಕರನ್ನು ಓಡಿಸಿ, ತನ್ನ ದೇಶದ ಬಾಧೆಯನ್ನು ಪ
ಸಿ, ಕೀರ್ತಿಯನ್ನು ಪಡೆದನು. ಈ ಕೀರ್ತಿಗೂ ಆ ಪ

ಶದ ಸುಖಕ್ಕೂ ಆ ರೊಟ್ಟಿಗಾರನ ಶೋಧದೃಷ್ಟಿಯೇ ಕಾ
ಣವು.

ಅಪೂರ್ವನಕ್ಷತ್ರಶೋಧವು—ಆಕಾಶವಲ್ಲಿ ಉತ್ತರ ದಿ-
ಗೆ 'ಆಲ್ಫೋಲ' ಎಂಬ ನಕ್ಷತ್ರವಿರುತ್ತದೆ. ಅದು ಮೂ
ದಿವಸಕ್ಕೊಮ್ಮೆ ಕಳೆಗುಂದುತ್ತಾ ಸುಮಾರು ನಾಲ್ಕು ತಾ
ನಲ್ಲಿ ನಿಸ್ತೇಜವಾಗಿ ಪುನಃ ಸುಮಾರುನಾಲ್ಕು ತಾಸಿನಲ್ಲಿ ಪ
ರ್ವಸ್ಥಿತಿಯನ್ನು ಹೊಂದುತ್ತದೆಂಬ ಮಾತು ಬಹು ದಿವಸದ
ದ ಎಲ್ಲ ಜ್ಯೋತಿಷಿಗಳಿಗೆ ಗೊತ್ತಿರುತ್ತದೆ. ಈ ಪ್ರಕಾಶಲೋ
ಪವು ಆಲ್ಫೋಲದಿಂದ ೩೦ ಲಕ್ಷ ಮೈಲಿನ ಅಂತರದ ಮೇ
ಲೆ ಅದರ ಸುತ್ತು ತಿರುಗುವ ಅಪ್ರಕಾಶಕಗೋಲದ ಭ್ರಮ
ಣದಿಂದ ಉಂಟಾಗುತ್ತದೆಂದು ಜ್ಯೋತಿಷಿಗಳು ಕೆಲವು ದಿ
ವಸಗಳ ಕೆಳಗೆ ಸಿದ್ಧಮಾಡಿದರು. ಆಲ್ಫೋಲದ ಮತ್ತು ಅದ
ಸಹಚರದ ಗತಿಗಳನ್ನು ಪರೀಕ್ಷಿಸಿ ನೋಡಿ, ಗಣಿತ ಹಾ
ಅದರ ಆಧಾರದಿಂದ ಬೋಸ್ತನ ಪಟ್ಟಣದ ಮಿ. ಎಸ್. ಚ
ಚಾಂಡ್ಲರನೆಂಬ ಜ್ಯೋತಿಷಿಯು "ಈ ಆಲ್ಫೋಲಗ್ರಹ
ತನ್ನ ಸಹಚರದೊಡನೆ ಅಪ್ರಮಾಣವಾವಂಥ, ಪ್ರಕಾಶವಿ
ದಂಥ ಮತ್ತೊಂದು ನಕ್ಷತ್ರದ ಸುತ್ತಲು ತಿರುಗುತ್ತ ಲಿದೆ
ಎಂದು ತಿಳಿಸುತ್ತಾನೆ. ಪ್ರಕಾಶಿತಗೋಲವು ಅಪ್ರಕಾಶಿ
ಗೋಲದ ಸುತ್ತಲು ತಿರುಗುತ್ತದೆಂಬ ಮಾತು ಅಸಂಭವನೀ
ಯವಾಗಿ ತೋರುತ್ತದೆ; ಆದರೆ ಚಾಂಡ್ಲರನೆಂಬ ಜ್ಯೋ
ಷಿಯು ತನ್ನ ಗಣಿತದ ಆಧಾರದಿಂದ ಪ್ರತಿಪಾದಿಸುವ ಸಂ
ತಿಯು ದಿಟವಾದರೆ ಈ ಅಪ್ರಮಾಣವಾದ ಗೋಲವು ತನ್
ತೇಜವನ್ನು ಆಲ್ಫೋಲಕ್ಕಿಂತ ತೀವ್ರವಾಗಿ ಹ್ಯಾಗೆ ಕ
ಕೊಂಡಿತು ಎಂಬ ಪ್ರಶ್ನವು ಉಳಿಯುತ್ತದೆ.

* ಭರಣಿಕೃತ್ತಿಕೆಗಳ ಉತ್ತರಕ್ಕಿರುವ ಯಯಾತಿ ಎಂಬ ನಕ್ಷತ್ರ
ಪಂಜದೊಳಗಿನದೊಂದು ಹೊಳಪಳ್ಳ ನಕ್ಷತ್ರವು.

ಕೆಳಗೆ ಕೊಟ್ಟಿರುತ್ತೇವೆ. ಇದರಿಂದ ಆಯಾ ಭಾಗಗಳಲ್ಲಿ ವಿದ್ಯಾಪ್ರಸಾರದ ಸ್ಥಿತಿ ತಿಳಿದುಬರುವುದಲ್ಲದೆ

ಭಾಗ.	ಕ್ಷೇತ್ರಫಲ ಮೈಲು	†ಜನಸಂಖ್ಯೆ	ಸರಕಾರೀಯ ತ್ತು ಮಿಡ್ಲ್ ಶಾಲೆಗಳು.	ವಿದ್ಯಾರ್ಥಿಗಳು.	ಅನಾದೇಕ ನ್ಯೂನ್ಯ ಶಾಲೆಗಳು.	ವಿದ್ಯಾರ್ಥಿಗಳು.	ಶಾಲೆಗೆ ಹೋಗತಕ್ಕ ಒಟ್ಟು ಹುಡುಗರಿಗೂ ಶಾಲೆಗೆ ಹೋಗುತ್ತಿರುವ ಹುಡುಗರಿಗೂ ಪ್ರಮಾಣ.
ಮಧ್ಯಭಾಗ.							
ಮುಂಬಯಿ.	೬೦	೪೦೧೩೭೪	೬೦೪	೬೯೯೦೬	೧೪೩	೧೨೦೬೬	೫೪.೦೪
ಇತರ ಜಿಲ್ಲೆಗಳು (೬)	೫೪೫೯೦	೬೦೫೫೬೬೬	೬೦೫೪	೧೨೪೬೦೬	೫೬೧	೧೦೪೬೦	೧೪.೪
ಸಂಸ್ಥಾನಗಳು (೫)	೫೪೫೫	೪೨೪೦೯೦	೧೨೧	೪೯೧೧	೧೯	೪೧೪	೪.೩
ಉತ್ತರಭಾಗ.							
ಜಿಲ್ಲೆಗಳು* (೬)	೧೫೪೦೪	೯೯೪೪೦೫೯	೧೫೬೩	೧೧೩೫೫೬೩	೫೩೦	೧೧೨೧೪	೨೨.೪೪
ಸಂಸ್ಥಾನಗಳು (೯)	೫೬೦೪೪	೫೫೯೫೫೧೪೦	೧೪೫೫	೯೦೪೪೪೬	೩೦೪	೧೧೪೪೬	೧೨.೧
ದಕ್ಷಿಣಭಾಗ.							
ಜಿಲ್ಲೆಗಳು (೬)	೭೫೦೬೧	೪೯೯೬೬೨೬	೧೪೭೩	೧೦೩೬೧೪೪	೬೦೪	೯೪೭೦	೧೫.೬
ಸಂಸ್ಥಾನಗಳು (೬)	೪೦೫೪	೧೯೦೫೪೪೧	೬೫೪	೩೬೧೦೫	೭೩೦	೪೪೫೩	೧೪.೫
ಸಿಂಧವ್ಯಾಂತ.							
ಜಿಲ್ಲೆಗಳು (೫)	೪೬೩೯೯	೭೪೩೧೩೬೪	೧೪೦೬	೫೬೯೦೭	೪೬೯	೫೬೩೧೯	೧೪.೩
ಒಟ್ಟು. ...	೧೪೪೦೦೬	೬೬೩೯೯೫೦	೯೪೯೬	೫೬೬೦೭೦	೧೭೫೬	೬೭೪೫೬	೧೫.೬

* ಡೀಸಾ ಅಬೂ ಬಿಜೊಂದಾಕಾಂಪ ಸಹಿತ. † ಜನಸಂಖ್ಯೆಯ ಲೆಕ್ಕವಾ ೧೫ನೇಂತೆ ನಾಲಿಗೆ ಹೋಗುವ ವಯಸ್ಸಿನ ಹುಡುಗರಿ

ಹೋದ ಜನಗಣತಿಯಿಂದ ತಿಳಿದ ಸಂಗತಿಗಳು ಯಾವ ವೆಂದರೆ:—

(೧) ಮುಂಬಯಿ ಇಲಾಖೆಯಲ್ಲಿ ಮುಖ್ಯವಾಗಿ ಮರಾಠಿ, ಗುಜರಾಥಿ, ಕನ್ನಡ, ಮತ್ತು ಸಿಂಧಿ ಇಷ್ಟು ಭಾಷೆಗಳು ನಡಿಯುತ್ತವೆ. ಈ ಭಾಷೆಗಳನ್ನು ಆಡುವ ಜನರು ನಮ್ಮ ಭಾಗದೊಳಗಿನ ಯಾವ ಯಾವ ಕನ್ನಡ ಜಿಲ್ಲೆಗಳಲ್ಲಿ ಎಷ್ಟೆ ಷ್ಟು ಜನರು ಇರುತ್ತಾರೆಂಬದು ಕೆಳಗಿನ ಕೋಷ್ಟಕದಿಂದ ಸ್ಪಷ್ಟವಾಗಿ ತಿಳಿಯುತ್ತದೆ.

ಜಿಲ್ಲೆಗಳು.	ಮರಾಠೀ.	ಕನ್ನಡ.	ಗುಜರಾಥೀ.	ಈ ಜಿಲ್ಲೆಗಳಲ್ಲಿ ಯಾವ ಯಾವ ಭಾಷೆಗಳನ್ನಾಡುವ ಜನರು ಎಷ್ಟೆಷ್ಟು ಜನರು ಇರುತ್ತಾರೆಂಬದನ್ನು ತಿಳಿಸುವ ಕೋಷ್ಟಕ.
ಧಾರವಾಡ.	೪೪೫೦೩	೪೬೧೦೫೦	೪೪೪೧	
ಬೆಳಗಾವ.	೬೫೬೦೪೩	೬೫೫೭೦೯	೬೦೬೦	
ವಿಜಾಪುರ.	೩೧೯೧೫೫	೬೪೪೧೪೩	೬೯೪೬	
ಕಾನಡಾ.	೩೩೪೪೯೩	೬೫೪೪೭೬೪	೬೪	
ಅಂತೂ.	೩೨೪೪೪೪	೬೪೬೯೯೬೫	೧೪೧೯೩	

(೨) ನಮ್ಮ ದೇಶದೊಳಗಿನ ನೂರರಲ್ಲಿ ೯೦ ಜನರು ಜನ್ಮಭೂಮಿಯಲ್ಲಿ, ನೂರಕ್ಕೆ ೬ ಜನರು ಜನ್ಮಭೂಮಿಯ ಸಮೀಪವಲ್ಲಿ ಇರುತ್ತಾರೆಂದು ಗೊತ್ತಾಗುತ್ತದೆ. ಇದರಿಂದ ನಮ್ಮ ಜನರು ತಮ್ಮ ಮಾತೃಭೂಮಿಯನ್ನು ಬಿಟ್ಟು ಪರ ಸ್ಥಳಕ್ಕೆ ಹೋಗಿ ಉದ್ಯೋಗಗಳನ್ನು ಮಾಡುವದರಲ್ಲಿ ಬಹಳ ಹಿಂದೆ ಇರುತ್ತಾರೆಂದು ತಿಳಿಯುತ್ತದೆ.

ಕಲಕತ್ತಾ ಯುನಿವ್ಹರ್ಸಿಟಿಯು ಕ್ರಮಿಕ ವಿಷಯಗಳಲ್ಲಿ ಶಾರೀರಿಕ ಶಿಕ್ಷಣವನ್ನು ಸೇರಿಸಬೇಕೆಂಬ ಬಗ್ಗೆ ಕೆಲವು ದಿವಸಗಳಿಂದ ವಿಚಾರ ನಡೆದಿತ್ತು; ಆದರೆ ಮೊನ್ನೆ ಮೊನ್ನೆ ಈ ವಿಚಾರವು ಲೋಕಮಾನ್ಯವಾಗದೆ ಹಿಂದಕ್ಕೆ ಬಿತ್ತೆಂದು ಕೇಳುತ್ತೇವೆ. ಹೀಗಾದದ್ದು ಬಳ್ಳಿಯದಾಗಲಿಲ್ಲ,

ಲಂದನ ಯುನಿವ್ಹರ್ಸಿಟಿಯು "ಇಂಟರ ಮಿಜಿಯಟ" ಮತ್ತು ಬಿ. ಏ. ಪರೀಕ್ಷೆಗಳು ಕಲಕತ್ತಾ ಪಟ್ಟಣದಲ್ಲಿ ಆಗಬೇಕೆಂದು ಬಳಗಡೆ ಹಿಂದುಸ್ಥಾನ ಸರಕಾರದವರು ಸೆಕ್ರೆಟರೀ ಆಫ ಸ್ಟೇಟರ ಮುಖಾಂತರವಾಗಿ ಲಂದನ ಯುನಿವ್ಹರ್ಸಿಟಿಗೆ ತಿಳುಹಿಸಿದರು. ಲಂದನ ಯುನಿವ್ಹರ್ಸಿಟಿಯವರು ಇವಕ್ಕೆ ತಮ್ಮ ಒಪ್ಪಿಗೆಯನ್ನು ಕೊಟ್ಟಿದ್ದಾರೆ. ಇನ್ನು ಮುಂದೆ ಲಂದನದ ಬಿ. ಏ. ಪರೀಕ್ಷೆಯನ್ನು, ಬೇಕಾದವರು ಕಲಕತ್ತೆಯಲ್ಲಿಯೇ ಕೊಡಬಹುದು. ಸಿವ್ಹಿಲ್ ಸರ್ವಿಸ ಪರೀಕ್ಷೆಯಾದರೂ ಇಂಗ್ಲಂದದಲ್ಲಿ ಆಗುವಂತೆ ಅದೇ ಕಾಲಕ್ಕೆ ಇಲ್ಲಿಯೂ ಆಗಬೇಕೆಂದು ದಾದಾಭಾಯಿ ನವರೋಜಿ ಎಮ್. ಪಿ. ಇವರು ಪ್ರಯತ್ನ ನಡಿಸಿರುತ್ತಾರೆ. ಇವರ ಪ್ರಯತ್ನಕ್ಕೆ ಯಶ ಬರಲೆಂದು ಇಚ್ಛಿಸುತ್ತೇವೆ.

ಮುಸಲ್ಮಾನ ಜನರೆಲ್ಲರು ಶಿದುಹಾಗ್ಗೆ ಮುಂದಕ್ಕೂ ಹಿಂದಕ್ಕೂ ಬಾಗುತ್ತಾರೆ. ಈ ಚಟವು ಅವರಲ್ಲಿ ಸೇರಲಿಕ್ಕೆ ಅವರ ಧರ್ಮಶ್ರದ್ಧೆಯೇ ಕಾರಣವು. ಮನುಷ್ಯನಿಗೆ ಅವಶ್ಯವಾದ ಯಾವತ್ತು ಜ್ಞಾನವು ತಮ್ಮ ಕುರಾನದಲ್ಲಿರುತ್ತದೆ, ಆನಕಾರಣ ಆ ಕುರಾನದ ಹೊರ್ತು ಬೇರೆ ಪುಸ್ತಕಗಳನ್ನು ಓದುವ ಪ್ರಯೋಜನವಿಲ್ಲೆಂದು ಅವರು ನಂಬುವರು. ಈ ನಂಬಿಕೆಯನ್ನನುಸರಿಸಿ ತಮ್ಮ ಮಕ್ಕಳ ಕೈಯಲ್ಲಿ ಕೊಡುವ ಪುಸ್ತಕವಾದರೂ ಇದೇ. ಈ ಪುಸ್ತಕದಲ್ಲಿ ದೇವರ

ಹೆಸರು ಅಲ್ಲಲ್ಲಿಗೆ ಬಂದಿರುವದರಿಂದಲೂ ಆ ಹೆಸರಿನ ಉಚ್ಚಾ
ವಾದ ಕೂಡಲೆ ತಲೆಯನ್ನು ನೆಲಕ್ಕೆ ಬೊಗ್ಗಿಸಬೇಕೆಂ
ನಿರ್ಬಂಧವಿರುವದರಿಂದಲೂ ಈ ಚಟವು ಅವರಲ್ಲಿ ನಲಿಗೊ
ಡಿರುತ್ತವಂತೆ.

METHODS OF TEACHING.

ಕಲಿಸುವ ಪದ್ಧತಿಗಳು.

WRITING.

ಲೇಖನ.

[೬೭ನೇ ಪುಟದಿಂದ ಮುಂದೆ ಸಾಗಿದ್ದು.]

ಲೇಖನ ಸಂಬಂಧವ ತತ್ವದ ಮಾತುಗಳನ್ನು ಹಿಂದೆ ವಿ
ವರಿಸಿದೆವು; ಅವರೆ ಇನ್ನೂ ಕೆಲವು ಸಂಗತಿಗಳನ್ನು ಹೇಳು
ವದು ಅವಶ್ಯ ತೋರುತ್ತದೆ. ಅವು ಯಾವವಂದರೆ:—೧
ಲೇಖನದ ಕಾಲ; ೨ ಲೇಖನದ ಸ್ಥಲ; ೩ ವಿದ್ಯಾರ್ಥಿಗಳ
ಆಸನ; ೪ ಉಪಕರಣಗಳು; ೫ ಪಾಠ ಸಾಗಿಸತಕ್ಕ ಕ್ರಮ;
ಸ್ವಚ್ಛತೆ ಮುಂತಾದವು.

೧. ಲೇಖನದ ಕಾಲ—ವಿದ್ಯಾರ್ಥಿಗಳು ಶಾಲೆಗೆ ಬಂದ
ಕೆಲ ಹೊತ್ತಿನ ಮೇಲೆ ಅವರ ಮನಸು ದಣಿಯುವದರಿಂದ
ಅವರ ಲಕ್ಷವನ್ನು ಪಾಠದ ಕಡೆಗೆ ಎಳಕೊಳ್ಳುವದು ಕಠಿಣ
ವಾಗುತ್ತದೆ. ಆಗ್ಗೆ ಪ್ರಶ್ನೆಗಳಿಂದಾಗಲಿ, ಅನ್ಯರೀತಿಯಿಂದಾ
ಗಲಿ ಉತ್ಸಾಹಗೊಳಿಸುವ ವಿಷಯಗಳನ್ನು ಇಡುವದು ಉ
ಚಿತವಾದದ್ದು. ಲೇಖನವು ವಿದ್ಯಾರ್ಥಿಗಳ ಮನಸನ್ನು ಸಹ
ಜವಾಗಿಯೇ ಎಳಕೊಳ್ಳುವಂಥ ವಿಷಯವಲ್ಲ; ಅದರಲ್ಲಿ ಬಹ
ಳ ದಿವಸ ಪರಿಶ್ರಮ ಮಾಡಿದ ಹೊರ್ತು ಯಶ ಬರುವದಿ
ಅಪರೂಪ. ವಿದ್ಯಾರ್ಥಿಗಳು ಫಲವನ್ನು ತೀವ್ರವಾಗಿ ಬಯ
ಸುವವರಾದ್ದರಿಂದ ಅವರ ಮನಸು ಈ ವಿಷಯಕ್ಕೆ ಮೆಚ್ಚು

ದಿಲ್ಲ. ಆ ಕಾರಣ ಈ ಪಾಠವನ್ನು ಆದಷ್ಟು ಆರಂಭಕ್ಕೆ
ಇಡುವದೇ ಬಳ್ಳೇದು.

೨. ಲೇಖನದ ಸ್ಥೂಲ—ಲೇಖನ ನೈಪುಣ್ಯಕ್ಕೆ ಅಕ್ಷರಗ
ಸ್ವರೂಪ ಜ್ಞಾನವು ಅವಶ್ಯವಾದದ್ದು. ಪ್ರತಿ ಬಂದು ಅಕ್ಷ
ದ ಯಥಾರ್ಥ ಜ್ಞಾನವಾಗಬೇಕಾದರೆ ಏಕಾಗ್ರಚಿತ್ತದಿಂದ
ಭ್ಯಾಸ ಸಾಗಲಿಕ್ಕೆ ಬೇಕು. ಆದಕಾರಣ ವಿದ್ಯಾರ್ಥಿಗಳ
ನಸನ್ನು ವ್ಯಗ್ರಪಡಿಸುವಂಥ ಎಲ್ಲ ಸಂಗತಿಗಳನ್ನು ಕೈಲಾ
ಮಟ್ಟಿಗೆ ದೂರ ಮಾಡುವದು ಅಗತ್ಯವಾದದ್ದು. ಅವರ
ನಸಿಗೆ ಸೊಗಸಾಗುವಂಥ ಅವರ ಉತ್ಸಾಹವನ್ನು ಬೆಳ
ವಂಥ ಉಪಕರಣಗಳ ಸಿದ್ಧತೆಯೂ ಸುಖಕರವಾದಂಥ
ಳವೂ ಇರಲಿಕ್ಕೆ ಬೇಕು. ತಕ್ಕಷ್ಟು ಬೆಳಕಿಲ್ಲದಂಥ, ನೊ
ಜು ಮುಂತಾದ ಕ್ರಿಮಿಗಳುಳ್ಳಂಥ, ಜನರ ಓಡಾಟ ಗದ್ದ
ಗಳುಳ್ಳಂಥ ಸ್ಥಳಗಳಿಂದ ಲೇಖನಾಭ್ಯಾಸಕ್ಕೆ ತೊಂದರೆ
ಾಗುವದು ಸ್ಪಷ್ಟವೇ ಇರುತ್ತದೆ.

ಆಸನ—ನಮ್ಮ ದೇಶದಲ್ಲಿ ಬರೆಯುವಾಗ್ಗೆ ನೆಲದ ಮೇಲೆ
ಕೂಡ್ರುವ ರೂಢಿಯೇ ಬಹಳ ಉಂಟು. ಅದರಿಂದ ವಿದ್ಯಾ
ರ್ಥಿಗಳಿಗೆ ಬಹಳ ಪ್ರಕಾರದ ಕೇಡುಗಳು ಒದಗುತ್ತವೆಂಬ
ನು ಅನುಭವಸಿದ್ಧವಾದ ಮಾತು. ಆದಕಾರಣ ನೆಲದ
ಮೇಲೆ ಕುಳಿತು ಲೇಖನದ ಅಭ್ಯಾಸವನ್ನು ನಡಿಸುವ ಪದ್ಧ
ತಿಯನ್ನಾದರೂ ತಕ್ಕಮಟ್ಟಿಗೆ ಕಡಿಮೆ ಮಾಡಲಿಕ್ಕೆ ಬೇಕು
ಈ ಏರ್ಪಾಡು ಆಗುವ ತನಕ ಶಿಕ್ಷಕರು ಕೆಳಗೆ ಕಾಣಿಸಿ
ಸಂಗತಿಗಳನ್ನು ಲಕ್ಷದಲ್ಲಿಡಬೇಕೆಂದು ನಾವು ಸೂಚಿಸುತ್ತೆ
ವೆ. ಅಕ್ಷರವನ್ನು ಬರಿಸುವಾಗ ವಿದ್ಯಾರ್ಥಿಯನ್ನು ಮುಂದಿ
ಗಾಕಿಸಿ ಕೂಡ್ರಿಸಬೇಕು. ಅಂದರೆ ಎಡಗಾಲಿನ ಹರಡನ ತ
ನ ಮೇಲ್ಬದಿಗೆ ಬಲಗಾಲನ್ನಿರಿಸಿ ಬಲವಾದವನ್ನು ತುಸು ಮು
ಂ ತಿಗಕ್ಕೆ ಆಧಾರಕೊಟ್ಟು, ಬಲಮುಂಡಿಯು ಬರೆಯುವವನ

ಕಡೆಗೆ ಇಳಜಾರು ಆಗುವಂತೆಯೂ, ಎದೆಯ ಬಲಭಾಗವು ತುಸು ಹಿಂದೆ, ಎಡಭಾಗವು ತುಸು ಮುಂದೆ ಆಗುವಂತೆಯೂ ವಿದ್ಯಾರ್ಥಿಯನ್ನು ಕೂಡಿಸಬೇಕು. ಬರೆಯುವಾಗ್ಗೆ ವಿದ್ಯಾರ್ಥಿಯು ಬೆನ್ನು ಪುರಿಯನ್ನು ಬೊಗ್ಗಿಸದೆ ಗೋಣವನ್ನು ಸ್ವಲ್ಪ ಕೆಳಗೆ ಮಾಡಬೇಕು. ಬರೆಯತಕ್ಕ ಕಾಗದವನ್ನು ಎಲದೊಡೆಯ ಮೇಲೆ ಅದಕ್ಕೆ ಕಾಟಕೋನವಾಗಿ ಅಡ್ಡ ಇಡಬೇಕು, ಮತ್ತು ಅದನ್ನು ಎಡಗೈಯಿಂದ ಹಿಡಿಯಬೇಕು. ಎಲಗೈಯು ಪಕ್ಕಡೆಯಿಂದ ತುಸು ಅಂದರೆ ನಾಲ್ಕು ಜೊಟ್ಟು ದೂರವಿರಬೇಕು.

ಲೆಕ್ಕಣಿಕೆಯನ್ನು ಮೊದಲಿನ ಎರಡು ಬೊಟ್ಟುಗಳ ನಡುವೆ ಹಿಡಿದು ಅವಕ್ಕೆ ಮೂರನೇ ಬೊಟ್ಟನ ಆಧಾರ ಕೊಡಬೇಕು. ಬೊಟ್ಟುಗಳು ಆದಷ್ಟು ನೀಟಾಗಿರಬೇಕು; ಅವುಗಳನ್ನು ಮಡಚಬಾರದು. ಲೆಕ್ಕಣಿಕೆಯ ಕೆತ್ತಿದ ಭಾಗವು ತಕ್ಕಷ್ಟು ಮುಂದೆ ಹಾದಿರಬೇಕು. ಹಿಂಭಾಗವು ಮೊದಲಿನ ಎರಡು ಬೊಟ್ಟುಗಳ ಪ್ರೊಳ್ಳಿನಲ್ಲಿ ಬೀಳದೆ ತರ್ಜನಿಯು ಅಂದರೆ ಎರಡನೇ ಬೊಟ್ಟನ ಮೊದಲನೇಗಣ್ಣಿಗೆ ಆತು ಕೊಂಡಿರಬೇಕು. ಲೆಕ್ಕಣಿಕೆಯ ಕೆತ್ತಿದ ಭಾಗವನ್ನು ಡಬ್ಬಾಗಿ ಇಲ್ಲವೆ ಸ್ವಲ್ಪ ಬಲಿಸಿ ಹಿಡಿಯದೆ ಅಡ್ಡ ಕಡಿದ ಟೊಳ್ಳಿನ ಪೂರ್ಣಭಾಗವು ಕಾಗದಕ್ಕೆ ಹತ್ತುವಂತೆ ಬಲಗಡೆಗೆ ಬಲಿಸಿ ಹಿಡಿಯಬೇಕು.

ಅಕ್ಷರಗಳು ದೊಡ್ಡವಿದ್ದಷ್ಟು ಅವುಗಳ ಸ್ವರೂಪದ ಯಥಾರ್ಥ ಜ್ಞಾನವನ್ನು ಮಾಡಿಕೊಡಲಿಕ್ಕೆ ಅನುಕೂಲವಾಗುತ್ತದೆ. ಆದರೆ ಅಂಥ ಅಕ್ಷರಗಳನ್ನು ತೆಗೆಯುವಾಗ ಮೊಳಕೈಯನ್ನು ತಕ್ಕಷ್ಟು ಹಿಂದು ಮುಂದು ಸರಿಸಬೇಕು. ಸಣ್ಣಕ್ಷರಗಳನ್ನು ಬರೆಯುವಾಗ ಬೊಟ್ಟುಗಳನ್ನಷ್ಟೇ ಮಣಿಸ್ಯಾಡಿ ಅವುಗಳನ್ನು ತೆಗೆಯಬೇಕು.

ಮೇಲೆ ವಿವರಿಸಿದಂತೆ ವಿದ್ಯಾರ್ಥಿಗಳನ್ನು ಕೂಡಿಸುವ
ು ಸುಸಾಧ್ಯವಾದ ಸಂಗತಿಯಲ್ಲ. ಸ್ವಲ್ಪ ಕಣ್ಣುಮರೆಯಾದ
ಕೂಡಲೆ ವಿದ್ಯಾರ್ಥಿಗಳು ಬಂದಿಲ್ಲ ಬಂದು ಬಗೆಯ ತಪ್ಪು
ನ್ನು ಮಾಡುವರು. ತೊಡೆಯನ್ನು ಜೊಗ್ಗಿಸುವರು ಅಥವಾ
ತ್ತುವರು, ಕಾಗದದ ಮೇಲೆ ಬರಗುವರು, ಜೊಟ್ಟುಗಳ
ಲ್ಲ ಮುದುಡಿಸಿ ಲೆಕ್ಕಣಿಕೆಯನ್ನು ಹಿಡಿಯುವರು. ಕತ್ತಿ
ಭಾಗವನ್ನು ಎಡಕ್ಕೆ ಬಲಿಸಿ ಅಡ್ಡ ಟಾಕು ಪೂರ್ಣವಾ
ಕಾಗದಕ್ಕೆ ಹತ್ತದಂತೆ ಅವನ್ನು ಹಿಡಿಯುವರು. ಇವೇ
ುಂತಾದ ಅಜಾಗ್ರತೆಯ ತಪ್ಪುಗಳನ್ನು ಮಾಡುವರು. ಈ
ಪ್ಪುಗಳನ್ನು ಶಿಕ್ಷಕರು ಎಚ್ಚರದಿಂದ ತಿದ್ದಿ ತಕ್ಕ ಅಸನದ
ೂಢಿಮನ್ನು ಆಗ್ರಹಪೂರ್ವಕವಾಗಿ ಮಾಡಿಸಬೇಕು. ಇ
ೇ ಅವರ ಪ್ರಥಮಕರ್ತವ್ಯವು. ನೆಲದ ಮೇಲೆ ಕೂಡಿಸು
ವ ಪದ್ಧತಿಯು ಒಳಿತಲ್ಲವೆಂದು ನಾವು ಮೊದಲೇ ತಿಳಿಸಿರು
ೇವೆ. ಶಿಕ್ಷಕ ಜನರು ವಿದ್ಯಾರ್ಥಿಗಳ ತಾಯಿ ತಂದೆಗಳಿಗೆ
ೋಧಿಸಿ ಲೇಖನಕ್ಕೆ ಸರಿಯಾದ ಡೆಸ್ಕುಗಳನ್ನು ದೊರಕಿಸು
ವ ಉಪ್ಯೋಗವನ್ನು ಕೈಕೊಳ್ಳತಕ್ಕದ್ದು ಅದರೆ ಸಿಕ್ಕ ಸಿ
ಕ್ಕಂಥ ಡೆಸ್ಕುಗಳೂ, ಬಾಕುಗಳೂ ಕೆಲಸಕ್ಕೆ ಬರಲಾರವು.
ಾಕುಗಳು ತಕ್ಕಷ್ಟು ಎತ್ತರವಾಗಿರಬೇಕು, ಮತ್ತು ಆ
ಾಕುಗಳ ಮೇಲೆ ಕೂತವರ ಕೈಯು ಬರೆಯುವಾಗ ಸರ
ಾಗಿ ಆಡುವಂತೆ ಡೆಸ್ಕುಗಳು ಇರಬೇಕು. ಈ ಡೆಸ್ಕುಗಳ
ುಂದಿರುವ ಬಾಕುಗಳ ಮೇಲೆ ಕೂತ ವಿದ್ಯಾರ್ಥಿಗಳು
ಎಮುನ್ನಾಗಲಿ ಗೋಣನ್ನಾಗಲಿ ಜೊಗ್ಗಿಸದೆ ಎದೆಯು ನೆ
ಕ್ಕಗೆ ಹತ್ತದಂತೆ ನೀಟಾಗಿ ಕೂಡಬೇಕು. ಎಡಭುಜವು
ಡೆಸ್ಕಿನ ಕಡೆಗೆ ತುಸು ಬಲಿದಿರಬೇಕು. ಬಲಭುಜವು ಆ
ಕ್ಕೆ ತುಸು ದೂರವಾಗಿರಬೇಕು. ಬಲಭುಜಕ್ಕೂ ಪಕ್ಕ
ಗೂ ಅಂತರವು ನಾಲ್ಕು ಇಂಚಿಗಿಂತ ಹೆಚ್ಚಿರಬಾರದು. ಬ

ಯುವ ಕಾಗದವನ್ನು ತುಸು ಬಲಕ್ಕೆ ಸರಿಸಿ ಬೆನ್ನಿಗೆ ಸಮಾಂತರವಾಗಿ ಇಡಬೇಕು. ಎಡಭುಜವನ್ನು ಅದಷ್ಟು ಪಕ್ಕಕ್ಕಿಗೆ ಸವಿಾಪವಿಟ್ಟು ಎಡಗೈಯಿಂದ ಕಾಗದವನ್ನು ಅತ್ತಿತ್ತ ಸರಿಯದಂತೆ ಹಿಡಿಯಬೇಕು.

ಉಪಕರಣಗಳು.—ಲೇಖನಕ್ಕೆ ಬೇಕಾಗುವ ಮುಖ್ಯವಾದ ಉಪಕರಣಗಳು ಯಾವವೆಂದರೆ:—ಕಿತ್ತೆ, ಲೆಕ್ಕಣಿಕೆ, ಕಾಗದ, ಪುಷ್ಟಿಪತ್ರ, ಮಸಿ, ದೌತಿ ಮುಂತಾದವು.

ಕಿತ್ತೆಯು ಬಹು ಗೌರವದ ಉಪಕರಣವು. ಇದನ್ನು ಕುರಿತು ಹಿಂದೆ ತುಸು ಬರೆದಿರುತ್ತೇವೆ. ಇದರ ಸಂಬಂಧದಿಂದ ಲಕ್ಷದಲ್ಲಿಡತಕ್ಕ ಸಂಗತಿ ಏನೆಂದರೆ,—ಅದು ಅದಷ್ಟು ಬರೆಯುವವನ ಕಣ್ಣಮುಂದೆ ಇರಲಿಕ್ಕೆ ಬೇಕು. ಉದ್ದಗಿತ್ತೆಗಳಿಂದ ಈ ಕೆಲಸವು ಸರಿಯಾಗಿ ಆಗಲಾರದು. ಆದ ಕಾರಣ ಇಂಗ್ಲಿಷ ಕಾಪಿ ಪುಸ್ತಕದಂಥ ಪುಸ್ತಕಗಳನ್ನು ಉಪಯೋಗಿಸುವದೇ ಲೇಸು. ಈ ಕಾಪಿ ಪುಸ್ತಕಗಳಲ್ಲಿ ಬರೆದ ಮುಖಪಂಕ್ತಿಗಳು ಕಲಿಯುವವರಿಗೆ ಬಹಳ ಅನುಕೂಲವಾಗುವವು. ಸವ್ಯಕ್ಕೆ ಪ್ರಚಾರದಲ್ಲಿರುವ ಕಿತ್ತೆಗಳಲ್ಲಿ ಮತ್ತೊಂದು ದೋಷ ಉಂಟು. ಅದು ಯಾವದೆಂದರೆ:—ಅವರಲ್ಲಿ ಕಠಿಣ ಮತ್ತು ಸುಲಭ ಅಕ್ಷರಗಳು ಸರಿಬೆರಿಕೆಯಾಗಿ ಬರೆಯಲ್ಪಟ್ಟಿರುತ್ತವೆ. ಅಕ್ಷರ ಕಾಗುಣಿತಾಕ್ಷರಗಳಲ್ಲಿ ಕೆಲವು ಬರೆಯಲಿಕ್ಕೆ ಸುಲಭವಾಗಿಯೂ ಕೆಲವು ಕಠಿಣವಾಗಿಯೂ ಇರುತ್ತವೆ. ಆರಂಭಕ್ಕೆ ವಿದ್ಯಾರ್ಥಿಗಳಿಗೆ ಸುಲಭ ಅಕ್ಷರಗಳನ್ನು ತೆಗೆಯಲಿಕ್ಕೆ ಹಚ್ಚುವದೇ ಪ್ರಶಸ್ತವಾದ ಮಾರ್ಗವು. ಇದರೊಳಗೆ ತಪ್ಪಾಗ ಕೂಡದು. ಇಂಥ ಕಾಪಿಗಳು ಸಿದ್ಧವಾಗುವವರೆಗೆ ಶಿಕ್ಷಕರು ವಿಚಾರದಿಂದ ವಿದ್ಯಾರ್ಥಿಗಳಿಗೆ ಸುಲಭಾಕ್ಷರಗಳ ಅಭ್ಯಾಸವನ್ನು ಮಾಡಿಸಿ, ಕ್ರಮದಿಂದ ಕಠಿಣಾಕ್ಷರಗಳ ಅಭ್ಯಾಸವನ್ನು ಮಾಡಿಸತಕ್ಕದ್ದು. ಅಕ್ಷ

ರಗಳನ್ನೂ ಸ್ವರಚಿನ್ಹೆಗಳನ್ನೂ ಅವುಗಳ ಸಾಕಲ್ಯಾನು
ಕ್ರಮದಿಂದ ಕೆಳಗೆ ಬರೆದಿರುತ್ತೇವೆ.

ೌ ೈ ೀ । ರ ಠ ಈ । ಲ ಅ ಅಂ ಆಃ ಆ ಳ । ದ ಧ ಫ
ಡ ಢ । ಎ ವ ಛ ಮ ಪ ಘ ಷ ಳೆ । ಏ ಐ । ನ ಸ ।
ಝ ಯ । ಇ ಞ ಣ । ಒ ಓ ಔ ೌ । ಜ ಬ ಖ ಭ ಚ ಟ ।
ಉ ಊ ಎ ಂ ೊ ೋ ೀ । ಖ ಖಾ ಖೂ । ಕ ಗ ಹ ತ ಶ ೆ ।

ಬರೆಯುವ ಮುಖ್ಯ ಸಾಧನವಾದ ಲೆಕ್ಕಣಿಕೆಯಬಗ್ಗೆ
ನಾಲ್ಕೊಕಡೆಗೆ ಅನಾದರವು ಕಣ್ಣಿಗೆ ಬೀಳುತ್ತದೆ. ಲೆಕ್ಕಣಿ
ಕೆಯ ಉದ್ದಳತೆ, ಟೊಕ್ಕು, ಇವುಗಳನ್ನು ಪರೀಕ್ಷಿಸಿ ನೋ
ಡಿದರೆ ನಮ್ಮ ಅಭಿಪ್ರಾಯದ ನಿಜತ್ವವು ತಿಳಿಯುವದು.
ಲೆಕ್ಕಣಿಕೆಯಲ್ಲಿ ಇರತಕ್ಕ ಮುಖ್ಯಾಂಶಗಳು ಯಾವವೆಂದ
ರೆ:—ಅದು ನುಣಪಾವದ್ದಿರಬೇಕು; ಅದು ಬಹಳ ಗಡತರ
ವಾಗಲಿ ಸೀರಣವಾಗಲಿ ಇರಬಾರದು; ಅದು ಮತ್ತು ಬೊಟ್ಟ
ಗಿಂತ ಕಿರಿದು ಇರಕೂಡದು; ಅದು ಸರಳವಾದ್ದಿರಬೇಕು;
ತಕ್ಕಷ್ಟು ಬಿರಸು ಇರಬೇಕು. ಕೆತ್ತಿದ ಭಾಗವು ಬಹಳ
ತಿಳುವಾಗಿಯೂ ಬಹಳ ದಪ್ಪವಾಗಿಯೂ ಇರಬಾರದು. ಆ
ದ್ದ ಟೊಕ್ಕು ಲೆಕ್ಕಣಿಕೆಯ ಗರ್ಭರೇಖೆಗೆ ಕಾಟಕೊನೆವಾಗಿ
ರದೆ ಸುಮಾರು ೫॥ ಅಂಶಗಳ ಕೊನೆ ಮಾಡುತ್ತಿರಬೇ
ಕು. ಟೊಕ್ಕಿನ ಅಗಲು ಅಕ್ಷರಕ್ಕೆ ಪ್ರಮಾಣದಲ್ಲಿರಬೇಕು;
ಅಂದರೆ ಎಷ್ಟು ದೊಡ್ಡ ಅಕ್ಷರ ತೆಗೆಯತಕ್ಕದ್ದಿರುವದೋ
ಅವರ ಸುಮಾರು ೪ನೇ ಪಾಲಿನಷ್ಟು ಅಗಲು ಇರಬೇಕು.
ಕೆತ್ತಿದ ಭಾಗವು ತಕ್ಕಷ್ಟು ಅಂದರೆ ೧॥ ಬೊಟ್ಟಿನಿಂದ ೨
ಬೊಟ್ಟುಗಳ ವರೆಗೆ ಇರತಕ್ಕದ್ದು; ಮತ್ತು ಅದರ ಉದ್ದ
ಟೊಕ್ಕು ಕೆತ್ತಿದ ಭಾಗದ ೨/೩ ದಷ್ಟು ಇರಬೇಕು. ಲೆಕ್ಕಣಿಕೆ
ಯು ತುದಿಯು ನುಣುಪು ಇರಬೇಕು.

(ಮುಂದಕ್ಕೆ ನಡೆಯುವದು.)

NOTES ON GRAMMAR.
ವ್ಯಾಕರಣದ ಟಿಪ್ಪಣಿಗಳು.

ಶಬ್ದೋತ್ಪತ್ತಿಯ ಎರಡನೆಯ ಭಾಗದ ಪುಟ ೩.

" ಮೂಲ ಧಾತುಗಳಿಂದ ಹೊಸ ಧಾತುಗಳನ್ನಾಗಲಿ ನಾಮವಾಚಕ ಶಬ್ದಗಳನ್ನಾಗಲಿ ಸಾಧಿಸುವದಕ್ಕೆ ಧಾತುಗಳಿಗೆ ಹಚ್ಚುವ ಪ್ರತ್ಯಯುಗಳಿಗೆ ಕೃತ್ಪ್ರತ್ಯಯುಗಳೆಂಬ ಸಂಜ್ಞೆ."

ಈ ವಾಕ್ಯವಲ್ಲಿ **ಮೂಲ** ಧಾತುಗಳಿಂದ, ಎಂದು ಇದ್ದದ್ದು ತಪ್ಪಾಗುತ್ತದೆ. ಯಾಕಂದರೆ **ಕೃತ್ಪ್ರತ್ಯಯಗಳು** ಮೂಲ ಧಾತುಗಳಿಗೆ ಮಾತ್ರ ಹತ್ತುತ್ತವೆ, ಹೊಸ ಧಾತುಗಳಿಗೆ ಹತ್ತುವದಿಲ್ಲ ಎಂಬರ್ಥವಾಗುತ್ತದೆ. ಆದರೆ ಕೃತ್ಪ್ರತ್ಯಯುಗಳು ಹೊಸ ಧಾತುಗಳಿಗೂ ಹತ್ತುವವು.

ಉದಾ—ಎಣಿಸು + ಕೆ = ಎಣಿಕೆ. ಬಣ್ಣಿಸು + ಕೆ = ಬಣ್ಣಿಕೆ. ಮುಂ.

ಇವಲ್ಲದೆ ಮೊದಲು 'ಮೂಲ ಧಾತುಗಳಿಂದ' ಎಂದು ಬರೆದು ಕಡೆಗೆ 'ಧಾತುಗಳಿಗೆ ಹಚ್ಚುವ' ಎಂದು ಬರೆದದ್ದರಿಂದ ಪೂರ್ವಾಪರ ವಿರೋಧವು ಕಾಣುತ್ತದೆ. ಯಾಕಂದರೆ ಮೂಲ ಧಾತುಗಳಿಂದ ಶಬ್ದಗಳನ್ನು ಹುಟ್ಟಿಸುವದಿದ್ದರೆ ಮೂಲ ಧಾತುಗಳಿಗೆ ಹಚ್ಚುವ ಪ್ರತ್ಯಯುಗಳೆಂದು ಇರಬೇಕು. ಧಾತುಗಳಿಗೆ ಎಂದಿಟ್ಟರೆ ಮೂಲ ಧಾತುಗಳಿಗೂ ಸಾಧಿತ ಧಾತುಗಳಿಗೂ ಹಚ್ಚುವ ಪ್ರತ್ಯಯುಗಳು ಎಂದು ಅರ್ಥವಾಗುತ್ತದೆ.

ಇನ್ನು ಈ ವಾಕ್ಯವಲ್ಲಿ ಮೂರನೆಯದೊಂದು ದೋಷವುಂಟು. ಅದು ಯಾವದೆಂದರೆ:—ಹೊಸ ಧಾತುಗಳನ್ನಾಗಲಿ ನಾಮವಾಚಕ ಶಬ್ದಗಳನ್ನಾಗಲಿ ಸಾಧಿಸುವವಕ್ಕೆ ಎಂದು ಬರೆವದ್ದು. ಕೃತ್ಪ್ರತ್ಯಯುಗಳಿಂದ ನಾಮ, ವಿಶೇಷಣ, ಹೊಸ ಧಾತು, ಅವ್ಯಯ ಈ ನಾಲ್ಕು ತರದ ಶಬ್ದಗಳು ಹುಟ್ಟುತ್ತವೆ.

ಉದಾ—ನಾಮಕ್ಕೆ ಮಾಡು+ಅ=ಮಾಟ, ಹೊಸ ಧಾತುವಿಗೆ ಮಾಡು+ಇಸು=ಮಾಡಿಸು, ವಿಶೇಷಣಕ್ಕೆ ಮಾಡು+ಇದ=ಮಾಡಿದ. ಅವ್ಯಯಕ್ಕೆ ಮಾಡು+ಇ=ಮಾಡಿ. ಕಾರಣ 'ನಾಮವಾಚಕ ಶಬ್ದಗಳನ್ನೂ ಹೊಸ ಧಾತುಗಳನ್ನೂ ಹುಟ್ಟಿಸುವದಕ್ಕೆ ಎಂದು ಅದದ್ದು ದೋಷವಾಗುತ್ತದೆ.

ಈ ಯೆಲ್ಲ ವಿಚಾರಗಳನ್ನು ಮನಸಿಗೆ ತಂದು ಕೃತ್ಪ್ರತ್ಯಯವೆಂದರೆ ಏನು? ಎಂಬದನ್ನು ಹೇಳುವದಾದರೆ ಮೂಲ ಕೃತ್ಪ್ರತ್ಯಯಗಳಿಂದ ಹುಟ್ಟುವಂಥ ನಾಮ, ವಿಶೇಷಣ, ಹೊಸ ಧಾತು, ಅವ್ಯಯ ಈ ನಾಲ್ಕು ಪ್ರಕಾರದ ಶಬ್ದಗಳಿಗೂ ಹೆಸರಾಗುವ ಒಂದು ಸಾಮಾನ್ಯ ಶಬ್ದವನ್ನು ಕಲ್ಪಿಸಿಕೊಳ್ಳುವದು ಅವಶ್ಯವದೆ. "ವಿಭಕ್ತಿ ಪ್ರತ್ಯಯವ ಹೊಂದತಕ್ಕ" ಎಂದು ಅಂದರೆ ಮೇಲೆ ಹೇಳಿದ ನಾಲ್ಕು ವಿಧದ ಶಬ್ದಗಳೂ ಬರುತ್ತವೆ. ಇದರಿಂದ ಕೃತ್ಪ್ರತ್ಯಯದ ಹೊಸ ವ್ಯಾಖ್ಯೆಯನ್ನು ಬರೆಯೋಣ.

"ವಿಭಕ್ತಿ ಪ್ರತ್ಯಯವ ಹೊಂದತಕ್ಕ ಶಬ್ದ (ನಾಮ, ವಿಶೇಷಣ, ಹೊಸ ಧಾತು, ಅವ್ಯಯ) ಗಳನ್ನು ಹುಟ್ಟಿಸುವದಕ್ಕೆ ಧಾತುಗಳಿಗೆ ಹಚ್ಚುವ ಪ್ರತ್ಯಯಕ್ಕೆ ಕೃತ್ಪ್ರತ್ಯಯವೆಂಬ ಹೆಸರು.

ಆದರೆ ಈ ವ್ಯಾಖ್ಯೆ ಉದ್ದವಾಗುತ್ತದೆ. ಇನ್ನೊಂದು ತರದಿಂದ ಹೇಳಿದ ವ್ಯಾಖ್ಯೆಯು ಸಣ್ಣದಿರುವದರಿಂದ ವಿದ್ಯಾರ್ಥಿಗಳು ಪಾಠ ಮಾಡಲಿಕ್ಕೆ ಯೋಗ್ಯವಾಗಿ ತೋರುತ್ತದೆ ಅನ್ನು ಯಾವದೆಂದರೆ.

"ಲಿಖ್ಯಾತ ಪ್ರತ್ಯಯದ ಹೊರತು ಧಾತುವಿಗೆ ಹತ್ತಿ ಉಳಿವ ಪ್ರತ್ಯಯಗಳಿಗೆ ಕೃತ್ಪ್ರತ್ಯಯಗಳೆಂಬ ಹೆಸರು.'

ಶಬ್ದೋತ್ಪತ್ತಿ ಎರಡನೆಯ ಭಾಗ ಪುಟ ೪.

"ಧಾತುಗಳನ್ನು ಬಿಟ್ಟು ಉಳಿದ ಶಬ್ದಗಳ ಮೇಲೆ ಬರುವ ಪ್ರತ್ಯಯಗಳಿಗೆ ತದ್ಧಿತ ಪ್ರತ್ಯಯಗಳು ಅನ್ನುತ್ತಾರೆ.'

ಕಳೆದ ತಿಂಗಳ ವಿದ್ಯಾದಾಯಿನಿಯಲ್ಲಿ ಶಾಸ್ತ್ರೀಯವಾ
ದ ಬರವಣಿಗೆ ಎಂಬ ಸದರಿನ ಕೆಳಗೆ ಕನ್ನಡದ ಶುದ್ಧ ಲೇಖ
ನದ ವಿಷಯದಲ್ಲಿ ವಿಚಾರಮಾಡಿ ಬರೆದಿದ್ದಾರೆ. ಈ ವಿಷಯವ
ಈ ಕಾಲಕ್ಕೆ ಬಹು ಉಪಯುಕ್ತವಾಗಿದೆ. ಮೈಸೂರವರ
ಬರವಣಿಗೆ ಬಂದು ಬಗೆ, ಧಾರವಾಡದವರ ಬರವಣಿಗೆ ಬೇ
ದು ಬಗೆ, ಮದ್ರಾಸಿನವರ ಬರವಣಿಗೆ ಬಂದು ಬಗೆ. ಅದಲ್ಲ
ದೆ ಬಂದೇ ಭಾಗದಲ್ಲಿರುವ ಬೇರೆ ಬೇರೆ ಜನರ ಬರವಣಿಗೆ
ಬೇರೆ ಬೇರೆ ಬಗೆ. ಹೀಗಾಗುವದರಿಂದ ಕನ್ನಡ ನುಡಿಯ
ಬರವಣಿಗೆಯ ಶುದ್ಧ ಪ್ರಕಾರವು ಯಾವದೆಂಬದು ತಿಳಿಯುವ
ದಿಲ್ಲ. ಈ ಅವ್ಯವಸ್ಥೆಯು ದೂರವಾಗದೆ ಕನ್ನಡ ನುಡಿಯು
ಸುಧಾರಿಸಲಾರದೆಂಬದು ಮೇಲೇ ತೋರುತ್ತದೆ. ಅದದರಿಂ
ದ ಈ ವಿಷಯವ ಎತ್ತುಗಡೆ ಮಾಡಿದವರ ಉಪಕಾರವನ್ನು
ಎಲ್ಲ ಕನ್ನಡಿಗರು ನೆನಿಸತಕ್ಕದ್ದು.

ಹಲವು ಕನ್ನಡಿಗರು ಈಗ ಹಲವು ಬಗೆಯಾಗಿ ಬರೆಯು
ತ್ತಿದ್ದರೂ ಅವರಿಗೆಲ್ಲ ಮೂಲಾಧಾರವು ಒಂದೇ ಇರುತ್ತದೆ.
ಅದನ್ನು ಅನುಸರಿಸುವದಕ್ಕೆ ಬಹುಶಃ ಎಲ್ಲರೂ ಒಪ್ಪಿಕೊ
ಳ್ಳುತ್ತಾರೆ. ಅದಾವದೆಂದರೆ ಕನ್ನಡದ ವ್ಯಾಕರಣವು. ಶಬ್ದ
ಮಣಿದರ್ಪಣ, ಶಬ್ದಾನುಶಾಸನ, ಭಾಷಾ ಭೂಷಣ, ಎಂಬ
ಮೂರು ಪ್ರಸಿದ್ಧ ವ್ಯಾಕರಣಗಳುಂಟು. ಇವು ಒಂದನ್ನೊಂ
ದು ಹೋಲುತ್ತವೆ. ಇವಲ್ಲದೆ ಕಬ್ಬಿಗರಕಾವ, ಪಂಪರಾಮಾ
ಯಣ, ರಾಜಶೇಖರ, ಶಬರಶಂಕರ ಮುಂತಾದ ಪ್ರಾಚೀನ
ಕಾವ್ಯ ಗ್ರಂಥಗಳು ವ್ಯಾಕರಣಶುದ್ಧಪದಗಳಿಂದ ರಚಿಸಲ್ಪ
ಟ್ಟವೆ. ಇವೆಲ್ಲವುಗಳ ಸಹಾಯದಿಂದ ಹೊಸಗನ್ನಡದ ಬರವ
ಣಿಗೆಯನ್ನು ಕ್ರಮಗೊಳಿಸುವದು ಅಷ್ಟು ಕಠಿಣವೆಂದೇನು
ತೋರುದಿಲ್ಲ

ಶಾಸ್ತ್ರೀಯವಾದ ಬರವಣಿಗೆಯನ್ನು ವಿವರಿಸುವ ಬರಹ

ಪಕ್ಷಿಯೇ ಈ ಭಾಗದ ಜನರಿಗೆ ಅಸಮ್ಮತವಾದ ಕೆಲವು ರೂಪಗಳು ಕಾಣಿಸಿದ್ದರಿಂದ ಅವುಗಳ ವಿಷಯಕ್ಕೆ ಇಲ್ಲಿ ವಿವರಿಸುವದು ಅವಶ್ಯವಾಗಿದೆ, ಆವ್ಯಾವವೆಂದರೆ—

(೧) ವರ್ಣ ಶಬ್ದದ ಸ್ಥಳದಲ್ಲಿ ಬಮ್ಮೆ ವರ್ನವೆಂಬದನ್ನೂ ಬಮ್ಮೆ ವರ್ಣವೆಂಬದನ್ನೂ ಬರೆಯುತ್ತಾರೆ. ಹೀಗೆ ಬರೆಯಲಿಕ್ಕೆ ಆಧಾರವೇನೋ ತಿಳಿಯುವದಿಲ್ಲ.

(೨) ನೆರವೇರಿಸುವದರಗೋಸರ. ಓಸರವೆಂಬ ವಿಭಕ್ತ್ಯಾವ್ಯಯವು ಚತುರ್ಥಿಗೆ ಪರವಾಗುವದು ಪ್ರಸಿದ್ಧವಿರುತ್ತದೆ. ಅವನ್ನು ಬಿಟ್ಟು ಅದನ್ನು ಷಷ್ಠಿಗೆ ಹಚ್ಚಿದ್ದಾರೆ. "ನೆರವೇರಿಸುವದಕ್ಕೋಸ್ಕರ ಎಂದು ಇರುವದು ಸರಿಯಾದೆ."

(೩) ಅನೇಕ ತಪ್ಪುಗಳನ್ನು ಇದು ಆರೆಸಮಾಸವಾಗುತ್ತದೆ. ಇವರ ಸ್ಥಳದಲ್ಲಿ ಎಷ್ಟೋ ತಪ್ಪುಗಳನ್ನು ಎಂಬ ಪದವು ಇರತಕ್ಕದ್ದು.

(೪) ಬಹು ವಿಧಗಳಾಗಿ ಬರೆಯಬಹುದು. ಬಹು ವಿಧಗಳಾಗಿ ಎಂಬದು ಬರೆಯಬಹುದು ಎಂಬದಕ್ಕೆ ಕ್ರಿಯಾವಿಶೇಷಣವಾಗುತ್ತದೆ. ಆಗಿ ಎಂಬ ಅವ್ಯಯವನ್ನು ಹಚ್ಚಿ ಮಾಡಿದ ಕ್ರಿಯಾವಿಶೇಷಣದ ಪೂರ್ವಪದವು ಬಹುವಚನವಿರುವ ಕಾರಣವಿಲ್ಲ. ಬಹು ವಿಧವಾಗಿ ಎಂದು ಬರೆಯತಕ್ಕದ್ದು.

(೫) ಉಪಯೋಗಿಸಿರುತ್ತೆ. ವ್ಯಾಕರಣದ ನಿಯಮದಂತೆ ಉಪಯೋಗಿಸಿರುತ್ತೆ ಎಂಬ ರೂಪವು ಸಿದ್ಧವಾಗುವದಿಲ್ಲ. ಇಂಥ ಪ್ರಯೋಗವು ಪ್ರಾಚೀನ ಗ್ರಂಥಗಳಲ್ಲಿ ಇಲ್ಲ.

(೬) ಇವುಗಳ ಪೈಕಿ—ಪೈಕಿ ಎಂಬದು ಕನ್ನಡ ಶಬ್ದವಲ್ಲ. ಶಿಷ್ಟರು ಇದನ್ನು ಪ್ರಯೋಗಿಸುವದಿಲ್ಲ. ಇದರ ಬದಲಾಗಿ ಇವುಗಳಲ್ಲಿ ಎಂದಿದ್ದರೆ ಕನ್ನಡ ಭಾಷಾಪದ್ಧತಿಗೆ ಸಲ್ಲುತ್ತಿತ್ತು.

(೬) ಬಹಳತನಕ ಸಹಾಯಕರವಾಗಿರುವದು. ಈ ವಾಕ್ಯದ ಅರ್ಥವು ಏನು ಎಂಬದು ತಿಳಿಯುವದಿಲ್ಲ.

(೪) ಸೇರಿಸಬಾರದೆಂದುನ್ನೂ, ಈ ರೂಪವು ಕನ್ನಡ ವ್ಯಾಕರಣದ ನಿಯಮದಿಂದ ಸಿದ್ಧವಾಗುವದಿಲ್ಲ. ಈ ಹೊಸ ಗನ್ನಡದ ನಿಯಮಗಳಲ್ಲಿ ಹೇಳಿದಂತೆ ಸೇರಿಸಬಾರದೆಂದೂ ಎಂಬ ರೂಪವು ಇವರ ಸ್ಥಳದಲ್ಲಿರುವದು ತಕ್ಕದ್ದಾಗಿದೆ.

(೯) ತಿಳಿಯುವದ್ದರಿಂದ—ತಿಳ್ ಧಾತುವಿಗೆ ಉವದು ಎಂಬ ಕ್ರಿಯಾನಾಮದ ಪ್ರತ್ಯಯವನ್ನು ಹಚ್ಚಿದರೆ ತಿಳಿಯುವದು ಎಂಬ ಶಬ್ದವು ಹುಟ್ಟುತ್ತದೆ. ಇದರ ತೃತೀಯಾ ವಿಭಕ್ತಿಯ ಏಕವಚನವು ತಿಳಿಯುವದರಿಂದ ಎಂದು ಆಗುತ್ತದೆ ಕಾರಣ ದ ಕಾರದ ದ್ವಿತ್ವವು ಅವಶ್ಯವಿಲ್ಲ.

(೧೦) ಅನುಸ್ವಾರವನ್ನ—ಅನುಸ್ವಾರ ಶಬ್ದದ ದ್ವಿತೀಯಾ ಏಕವಚನವು ಅನುಸ್ವಾರವನ್ನು ಎಂದು ಇರಬೇಕು ಅನುಸ್ವಾರವನ್ನ ಎಂಬ ರೂಪವು ಸಿದ್ಧವಾಗುವದಿಲ್ಲ.

(೧೧) ಜನಗಳು—ಜನಶಬ್ದಕ್ಕೆ ಬಹುವಚನದಲ್ಲಿ ಸಮೂಹ ಸಕತ್ವವು ಇಲ್ಲ. ಆದರಿಂದ ಜನರು ಎಂದು ಇರತಕ್ಕದ್ದು.

(೧೨) ಸುಲಭಪಡಿಸು—ವಿಶೇಷಣದ ಮುಂದೆ ಪಡು ಧಾತು ಬಂದು ಕ್ರಿಯಾಸಮಾಸವಾಗುವದಿಲ್ಲ. ಆದದ್ದರಿಂದ ಈ ಸ್ಥಳದಲ್ಲಿ ಸುಲಭ ಮಾಡು ಎಂದು ಇರತಕ್ಕದ್ದು.

ವ್ಯಾಕರಣ ಸಿದ್ಧವಾದಂಥ ಪ್ರಾಚೀನ ಪಂಡಿತರಿಗೆ ಮಾನ್ಯವಾದಂಥ ಶಬ್ದಗಳನ್ನೂ ರೂಪಗಳನ್ನೂ ಪ್ರಯೋಗಿಸ ಹತ್ತಿದರೆ ಕನ್ನಡದ ಬೆಳವಣಿಗೆಗೂ ಕರ್ನಾಟಕದ ಜಿಕ್ಕ ಟ್ಟಿಗೂ ಅನುಕೂಲವಾಗುವದೆಂಬ ದೃಢವಿಶ್ವಾಸ ನಮಗುಂಟು. ಆದರಿಂದಲೇ ವಿದ್ಯಾದಾಯಿನಿಯೊಳಗಿನ ಲೇಖವು ನಮ್ಮ ಭಾಗದ ಜನರಿಗೆ ತಿಳಿಯಬೇಕಾದರೆ ಹ್ಯಾಗಿರ

ನೀಕೆಂಬದನ್ನು ಸೂಚಿಸಿರುತ್ತೇವೆ. ಇದನ್ನು ಕುರಿತ ನೂಸಿಕ ಪುಸ್ತಕಕರ್ತರೂ ಲೇಖಕಾರರೂ ಆಲೋಚಿಸಿ ತಮಗೆ ಸರಿಕಂಡದ್ದನ್ನು ಕೈಕೊಳ್ಳತಕ್ಕದ್ದು.

EXCUSSION TO MYSORE.

ಮೈಸೂರ ಪ್ರವಾಸ.

(೭). ಹಿಂದುದೇಶದ ವಿಸ್ತಾರವು ಬಹಳವದೆ. ಅಂದರೆ ರಶಿಯದ ಹೊರತು ಇಡಿ ಯುರೋಪ ಖಂಡದಷ್ಟು ಇರುತ್ತದೆ. ಆವಕಾರಣ ತಮ್ಮ ದೇಶಪರ್ಯಟನವೇ ಸಾಕಾದದರಿಂದ ಪರದೇಶ ಪ್ರವಾಸ ಮಾಡುವ ಹವ್ಯಾಸವನ್ನು ಇವರು ಬಿಟ್ಟುಕೊಟ್ಟರು.

(೫). ಮಧ್ಯಕಾಲದ ಗಡಿಬಿಡಿಯು—ಮೇಲೆ ಹೇಳಿದ ಎರಡು ಕಾರಣಗಳಿಂದ ಜನರು ಪರದೇಶದ ಪ್ರವಾಸವನ್ನು ಮಾತ್ರ ಬಿಟ್ಟರು. ಆದರೆ ಈ ೩ನೆಯ ಕಾರಣದಿಂದ ಇವರು ಸ್ವದೇಶಪರ್ಯಟನವನ್ನು ಸಹ ಮಾಡದಾದರು. ಮುಸಲ್ಮಾನರು ಈ ದೇಶದ ಒಡೆತನವನ್ನು ಹೊಂದಿದಾಗ ಜನರಲ್ಲಿ ಅಪನಂಬಿಗೆಯೂ ಭಯವೂ ಹೆಚ್ಚಿದವು. ಜ್ಞಾನದ ಬೆಳುವಣಿಗೆಯು ಕಟ್ಟಾಯಿತು. ಇವರು ಮನೆಯ ಬಿಟ್ಟು ಹೊರಗೆ ಕಾಲಿಡದಾದರು. ಆವಕಾರಣ ಸ್ವದೇಶದ ಪರ್ಯಟನವು ಸಹ ನಿಂತು ಹೋಯಿತು.

ಆದರೆ ನಮ್ಮ ಪೂರ್ವಜರು ದೇಶಪ್ರವಾಸೆ ಮಾಡುತ್ತಿದ್ದರೆಂಬ ಬಗ್ಗೆ ಹಲವು ಪ್ರಮಾಣಗಳು ಪ್ರಾಚೀನ ಗ್ರಂಥಗಳಿಂದ ದೊರೆಯುತ್ತವೆ. ಅವುಗಳಲ್ಲಿ ಕೆಲವನ್ನು ಇಲ್ಲಿ ವಿವರಿಸುವುದು ಯುಕ್ತವಾಗಿ ತೋರುತ್ತದೆ.

ಐತರೇಯ ಬ್ರಾಹ್ಮಣದೊಳಗಿನವು.

नाना श्रान्ताय श्रीरस्तिति रोहित शुश्रुम ।
पापो नृषद्वरो जन इन्द्र इच्चरतः सखा ॥१॥

ತಾತ್ಪರ್ಯ—ದಣಿಯುವವನಿಗೆ ಮುಡ್ಡಿ ಶಿಗುವದಿಲ್ಲ. ಕೂ
ತವನು ಪಾಪಿಷ್ಠನು. ತಿರುಗುವವಗೆ ಇಂ
ದ್ರನು ಗೆಳೆಯನಾಗುತ್ತಾನೆ.

पुष्पिण्यौ चरतो जंघे भूष्णुरात्मा फलग्रहिः ।
शेरेऽस्य सर्वे पाप्मानः श्रमेण प्रपथे हताः ॥२॥

ತಾ॥ ಆಡ್ಡಾಡುವವನ ತೊಡೆಗಳು ಅನಂದಕೊಡುತ್ತವೆ.
ಹಾಗು ಅವನ ಆತ್ಮವು ಬೇಕಾದ ಫಲವನ್ನು
ಹೊಂದುತ್ತದೆ. ಆತನ ಪಾಪಗಳು ನಾಶವಾಗು
ತ್ತವೆ.

आस्तेभग आसीनस्यो र्ध्वस्तिष्ठति तिष्ठतः ।
शेते निपद्यमानस्य चराति चरतो भगः ॥३॥

ತಾ॥ ಕೂತವನ ದೈವವು ಕೂತಿರುತ್ತದೆ ನಿಂತವನದು
ನಿಂತಿರುತ್ತದೆ. ಮಲಗಿದವನದು ಮಲಗಿರುತ್ತದೆ.
ತಿರುಗುವವನ ದೈವವು ಆಡ್ಡಾಡುತ್ತದೆ.

कलिः शयानो भवति संजिहानस्तु द्वापरः ।
उत्तिष्ठंस्त्रेता भवति कृतंसंपद्यते चरन् ॥४॥

ತಾ॥ ಕಲಿಯು ಮಲಗಿರುವನು. ತ್ರೇತಾಯುಗವು ನಿಂ
ತಿರುತ್ತದೆ. ಕೃತಯುಗವು ತಿರುಗುತ್ತದೆ. ಆದ
ರೆ ತಿರುಗಾಡುವವನು ಕೃತಯುಗದ ಫಲವನ್ನು
ಹೊಂದುತ್ತಾನೆ.

चरन्वै मधु विन्दति चरन् स्वादुमुदुम्बरम् ।
सूर्यस्य पश्य श्रेमाणं यो न तन्द्रयते चरन् ॥५॥

ತಾ॥ ಅಡ್ಡಾಡುವವನು ಮಧುವನ್ನು ಔದುಂಬರದ ಫಲಗಳನ್ನು ದೊರಕಿಸುತ್ತಾದೆ ಶ್ರಮಮಾಡುವ ಸೂರ್ಯನನ್ನು ನೋಡು. ಅತನಿಗೆ ಏನೂ ಆಲಸ್ಯವಿಲ್ಲ.

ಸುಭಾಷಿತಗಳು.

यो न संचरते देशान्यो न सेवेत पण्डितान् ।
तस्य संकुचिता बुध्दिर्घृत बिन्दुरिवाम्भसि ॥१॥

ತಾ॥ ದೇಶಾಟನ ಮಾಡದಂಥ ಮತ್ತು ಪಂಡಿತರನ್ನು ಸೇವಿಸದಂಥ ಮನುಷ್ಯನ ಬುದ್ಧಿಯು ನೀರಲ್ಲಿಟ್ಟ ತುಪ್ಪದ ಹನಿಯಂತೆ ಸಂಕುಚಿತವಾಗುತ್ತದೆ.

यस्तु संचरते देशान्यस्तुसेवेत पण्डितान् ।
तस्य विस्तारिता बुध्दिस्तैलबिन्दुरिवाम्भसि ॥२॥

ತಾ॥ ದೇಶಾಟನ ಮಾಡುವಂಥ ಮತ್ತು ಪಂಡಿತರನ್ನು ಸೇವಿಸುವಂಥ ಮನುಷ್ಯನ ಬುದ್ಧಿಯು ನೀರಲ್ಲಿ ಚಲ್ಲಿದ ಎಣ್ಣೆಯ ಹನಿಯಂತೆ ವಿಸ್ತಾರವಾಗಿರುವದು.

व्यापारान्तरमुत्सृज्य वीक्ष्यमाणो वधुमुखम् ।
यो गृहेष्वेव निद्राति दरिद्राति स दुर्मतिः ॥३॥

ವ್ಯಾಪಾರೋದ್ಯೋಗಗಳನ್ನು ಬಿಟ್ಟು ಸ್ವಸ್ತ್ರೀಯ ಮುಖವನ್ನು ನೋಡುತ್ತ ಯಾವನು ಮನೆಯಲ್ಲಿಯೇ ಮಲಗುವನೋ ಅವನು ದುರ್ಮತಿಯೂ ದರಿದ್ರನೂ ಆಗುತ್ತಾನೆ.

देशे देशे किमपि कुतुकादद्भुतं लोकमानाः ।
संपाद्यैव द्रविणमतुलं सद्म भूयोप्यवाप्य ॥
संभुज्यन्ते सुचिरविरहोत्कंठिताभिः सतीभिः ।
सौख्यंधन्याः किमपि दधते सर्व संपत्समृद्धाः ॥४॥

ತಾ॥ ದೇಶಾಟನ ಮಾಡುವವರು ಪ್ರತಿಯೊಂದು ದೇಶದಲ್ಲಿ ಚಮತ್ಕಾರವ ಸಂಗತಿಗಳನ್ನು ನೋಡುವದಲ್ಲದೆ ಬಹು ದ್ರವ್ಯ ಸಂಪಾದಿಸಿ ಮನೆಗೆ ಬಂದು ಕುಟುಂಬದಲ್ಲಿ ಸೌಖ್ಯ ಹೊಂದುವರು.

तीर्थानामवलोकनं परिचयः सर्वत्र वित्तार्जनं ।
नानाश्चर्य निरिक्षणं चतुरता बुध्देःप्रशस्तागिरः ॥
एते सन्तिगुणाः प्रवासविषये दोषोस्तिचैकोमहान् ।
यन्मुग्धा मधुराधराधर सुधापानं विनास्थीयते ॥५॥

ತಾ॥ ಪ್ರವಾಸದಿಂದ ತೀರ್ಥಗಳ ದರ್ಶನವು, ಅನೇಕವ ವು. ದ್ರವ್ಯಸಂಚಯವು, ನಿರೀಕ್ಷಣವು, ಜಾಣತನ ವು ವಿಸ್ತಾರವಾವ ಬುದ್ಧಿಯು ಮುಂತಾದ ಲಾಭಗಳಾಗುತ್ತವೆ.

ಈ ಎಲ್ಲ ಶ್ಲೋಕಗಳಿಂದ ನಮ್ಮ ಪೂರ್ವಜರು ಪ್ರವಾಸಕ್ಕೆ ಮೆಚ್ಚಿದ್ದರೆಂಬದು ಸ್ಪಷ್ಟವಾಗುತ್ತದೆ. ಈ ಅನುಮಾನವನ್ನು ಬಲಪಡಿಸುವಂಥ ಸಾಧನಗಳೂ ಉಂಟು. ಅವು ಯಾವವೆಂದರೆ:—ಪ್ರಾಚೀನರು ಸ್ಥಾಪಿಸಿದ ಅದ್ಭುತ ಮಹಿಮೆಯುಳ್ಳ ದೇವಾಲಯಗಳು, ಮತ್ತು ಅವರು ವರ್ಣಿಸಿರುವ ತೀರ್ಥಸ್ಥಳಗಳು. ಪ್ರಾಚೀನರು ಇಂಥ ದೇವರ ದರ್ಶನದಿಂದ ಬಹು ಪುಣ್ಯ ಬರುವದೆಂತಲೂ ಇಂಥ ದೇವರ ದರ್ಶನದಿಂದ ಸ್ವರ್ಗಸುಖ ಪ್ರಾಪ್ತಿಯಾಗುವ

ದೆಂತಲೂ ಬರೆದಿಟ್ಟಿದ್ದಾರೆ. ಇಂಥ ತೀರ್ಥಗಳಲ್ಲಿ ಸ್ನಾನ ಮಾಡಿದರೆ ಮುಕ್ತಿಯಾಗುವದೆಂದು ವಿಧಿಸಿದ್ದಾರೆ. ಇದರ ಉದ್ದೇಶವು ಜನರು ವಾರವಾರ್ಹ ವಿಚಾರದಲ್ಲಿ ತೊಡಗಿದ್ದರೂ ಪ್ರವಾಸಮಾಡಿ, ಅದರ ಅನುಭವವನ್ನು ಹೊಂದಬೇಕೆಂಬದೇ ಇರುತ್ತದೆ. ಈ ಉದ್ದೇಶವನ್ನು ಅನುಸರಿಸಿ ಅವರು ಸೋಮನಾಥ, ಬದ್ರಿಕೇದಾರ, ವಿಶ್ವೇಶ್ವರ, ರಾಮಲಿಂಗ ಮುಂತಾದ ದೇವಾಲಯಗಳನ್ನು ದೂರದೂರದ ಸ್ಥಳಗಳಲ್ಲಿ ಸ್ಥಾಪಿಸಿದರು, ಮತ್ತು ಕೃಷ್ಣಾನದಿಯ ಮಹಾತ್ಮ್ಯ ಮುಂತಾದ ತೀರ್ಥಮಹಾತ್ಮ್ಯವನ್ನು ವರ್ಣಿಸುವ ಗ್ರಂಥಗಳನ್ನು ಬರೆಯಿಟ್ಟರು.

ಆದರೆ ಬಳಗಡೆಯಲ್ಲಿ ಈ ದೇಶಕ್ಕೆ ಬಂದು ಸಂಚರಿಸಿ ಹೋದ ಕಾರ್ಪೆಂಟರನೆಂಬ ಇಂಗ್ಲಿಷ ಪ್ರವಾಸಿಯು ತನ್ನ ಪ್ರವಾಸವೃತ್ತದಲ್ಲಿ "ಹಿಂದೂ ಜನರ ಕಾಲುಗಳು ಸಣ್ಣಾಗಿರುವದರಿಂದ ಅವರು ಪ್ರವಾಸಕ್ಕೇ ತಕ್ಕವರಲ್ಲ" ಎಂದು ಬರೆದಿದ್ದಾನೆ. ಆದರೆ ನಮ್ಮ ಜನರು ಪ್ರವಾಸಕ್ಕೆ ಮೈಚಿದ್ದಾರೆಂತಲೂ ಅದನ್ನು ಎಲ್ಲ ಜನರು ಕೈಕೊಳ್ಳುವದು ಅವಶ್ಯವೆಂದು ಬಗೆಬಗೆಯ ಏರ್ಪಾಡುಗಳನ್ನು ಮಾಡಿರುವರೆಂತಲೂ ಮೇಲೆ ಉಲ್ಲೇಖಿಸಿರುತ್ತೇವೆ. ಇತ್ತಿತ್ತಲಾಗಿ ಮುಖ್ಯ ಕಾಲವ ಗಡಿಬಿಡಿಯ ಮೂಲಕ ಜನರ ಸ್ಥಿತಿಯಲ್ಲಿ ಬಹಳ ಹೆಚ್ಚು ಕಡಿವಿಯಾಗಿ ಹೋದದ್ದರಿಂದ ಅವರು ಪ್ರವಾಸಾಭಿಲಾಷೆಯನ್ನು ಬಿಟ್ಟದ್ದು ನಿಜವು. ಆದರಿಂದ ಆ ಇಂಗ್ಲಿಷ ಪ್ರವಾಸಿಯ ಅಭಿಪ್ರಾಯವು ತಾತ್ಕಾಲಿಕ ಸ್ಥಿತಿಗೆ ಮಾತ್ರ ಸರಿಯಾಗಿ ಹತ್ತುತ್ತದೆ.

ಇದಲ್ಲದೆ ಸ್ವಲ್ಪ ದಿವಸಗಳ ಕೆಳಗೆ ಈ ದೇಶಕ್ಕೆ ಬಂದಿದ್ದ ಡಿಗ್ಬಿ ಎಂಬ ಹೆಸರಿನ ಪಾಶ್ಚಿಮಾತ್ಯ ರಾಜಕಾರ್ಯಧುರಂಧರ

ನು ಪುಣೆಯಲ್ಲಿ ಕೂಡಿದ ಸಭೆಯಲ್ಲಿ ಭಾಷಣ ಮಾಡುವಾಗ "ನಾನು ಹಿಂದುಸ್ಥಾನದ ನಿವಾಸಿಯಾಗಿದ್ದರೆ, ನಿಮ್ಮಂತೆ ಇಷ್ಟು ದಿನಗಳವರೆಗೆ ಸುಮ್ಮನೆ ಕೂಡುತ್ತಿದ್ದಿಲ್ಲ. ನನಗಾಗುತ್ತಿರುವ ಪರಿಪರಿಯ ಕಷ್ಟಗಳನ್ನು ಕನಿಷ್ಠ ೪ ದಿನ ಕ್ರೈಸ್ತಮ್ಮಯಾವರೂ ಇಂಡಿಯಾ ಲಫಿಸಿಗೆ ತಿಳಿಸುತ್ತಿದ್ದೆನು. ಅವನ್ನು ಅಧಿಕಾರಿಗಳ ಮುಂದೆ ತೋಡಿಕೊಳ್ಳುತ್ತಿದ್ದೆನು. ಇನ್ನುಮೇಲಾದರೂ ನೀವು ಎಚ್ಚೆತ್ತು ದೀಘೋರ್ದ್ಯೋಗದಿಂದಲೂ ಸ್ವಾವಲಂಬನದಿಂದಲೂ ಒಟ್ಟಾಗಿ ಯತ್ನ ನಡಿಸಿರಿ, ಮತ್ತು ನಿಮ್ಮ ಈಗಿನ ಸ್ಥಿತಿಯನ್ನು ತಪ್ಪದೆ ಮೇಲಿನವರಿಗೆ ತಿಳಿಸಿರಿ" ಎಂದು ಹೇಳಿದನು.

ಇವರಂತೆ ಎಷ್ಟೋ ಜನರು ನಮ್ಮ ದೇಶದವರ ಬಗ್ಗೆ ಬಗೆಬಗೆಯ ನಿಂದೆಯ ಉದ್ಗಾರಗಳನ್ನೂ ಹೊರಗೆಡವಿದ್ದಾರೆ. ಆದರೆ ನಾವು ಅವನ್ನೆಲ್ಲ ಕೇಳುತ್ತ ಇನ್ನುಮುಂದೆ ಸಹ ಸುಮ್ಮನೆ ಕೂಡುವದು ಸರಿಯಲ್ಲ. ತಕ್ಕ ಪ್ರಯತ್ನದಿಂದ ನಮ್ಮ ಪೂರ್ವದ ಸುಸ್ಥಿತಿಯನ್ನು ಪಡೆಯತಕ್ಕದ್ದು. ನಮ್ಮ ದೇಶವು ಊರ್ಜಿತ ಸ್ಥಿತಿಯನ್ನು ಬೇಗನೆ ಪಡೆಯಬೇಕಾದರೆ ಬೇರೆ ಬೇರೆ ದೇಶಗಳಲ್ಲಿ ತಿರುಗಾಡಿ ಅವುಗಳಲ್ಲಿರುವ ಐಶ್ವರ್ಯಾಭಿವೃದ್ಧಿಯ ಸಾಧನಗಳನ್ನು ನಮ್ಮಲ್ಲಿ ಪ್ರತಿಷ್ಠಿಸಲಿಕ್ಕೆ ಬೇಕು. ಮೊದಲಿನಂತೆ ದೇಶಪರ್ಯಟನ ಮಾಡುವದು ಈಗ ಕಠಿಣವಲ್ಲ. ಯಾಕಂದರೆ ಅದಕ್ಕೆ ಅನುಕೂಲವಾಗಿ ಉಗಿಬಂಡಿ, ಲೈನಮಾರ್ಗ, ಮೊದಲಾದ ಸಾಧನಗಳು ಹೆಚ್ಚಾಗಿವೆ. ಅದಕಾರಣ ಕಾಲಾನುಕೂಲತೆ ಧನಾನುಕೂಲತೆಗಳನ್ನು ನೋಡಿಕೊಂಡು ದೇಶಪರ್ಯಟನ ಮಾಡಿ ಅದರಿಂದ ತಕ್ಕ ಫಲವನ್ನು ಹೊಂದುವದು ಪ್ರತಿಯೊಬ್ಬನ ಕರ್ತವ್ಯವಾದೀತು.

ಶಾಲಾಪತ್ರಕ.

ಪದ್ಯಂ.

ಪ್ರಿಯವಿದ್ಯಾಗುರುವರ್ಯರುನ್ನತಿಕೆಯಂ ಸಚ್ಛಿಕ್ಷಣೋತ್ಕರ್ಷಮುಂ
ಬಯಸುತ್ತಂ ಪ್ರತಿಮಾಸದಾದಿಗೊಲವಿಂದೀಪತ್ರಮುಂ ಮುದ್ರಿಸಿ ॥
ನಯದಿಂದಿತ್ತಪೆಪ್ರೋದ್ಯವರ್ಗಸುಗುಣಂ ತೋರಲ್ಕ್ಕೆಕೈಕೊಂಬುದೈ ।
ದಯೆಯಿಂದೋಷವತಿದ್ದವೇಳ್ಪುದುಬುಧರ್ ಜ್ಞಾನಾಭಿವೃದ್ಧಿಪ್ರಿಯರ್॥೧॥

ಪುಸ್ತಕ ೩ಲ.] ಮೇ ೧೮೮೩. [ಸಂಚಿಕೆ ೫.

EDUCATIONAL INTELLIGENCE AND USEFUL NOTES.

ವಿದ್ಯಾಸುಧಾರಣಾ ಸಂಬಂಧದ ವೃತ್ತಾಂತಗಳು.

ಶಿಕ್ಷಕರು ಯಾವಾಗಲು ತಮ್ಮ ಜ್ಞಾನವನ್ನು ಬೆಳಿಸುವ ಹ ವಣಿಕೆಯಲ್ಲಿರುವದು ಅವರ ಕರ್ತವ್ಯವು. ಅದರಂತೆ ಅವ ರು ತಪ್ಪದೆ ವರ್ತಿಸುತ್ತಿರಬೇಕು. ಬರೇ ಕನ್ನಡ ಕಲಿತ ಶಿಕ್ಷಕರಿಗೆ ತಮ್ಮ ಜ್ಞಾನವನ್ನು ಬೆಳಿಸುವ ಸಾಧನವಿಲ್ಲ. ಅದ ದ್ದರಿಂದ ಇಂಗ್ಲಿಷ ಬಲ್ಲಂಥ ಜನರಿಗೆ ಶಾಲಾಖಾತೆಯಲ್ಲಿ ಸೇರ ಲಿಕ್ಕೆ ಅನುಕೂಲ ಮಾಡಿಕೊಡುವ ಉದ್ದೇಶದಿಂದ ವಿದ್ಯಾ ಖಾತೆಯ ಅಧಿಕಾರಿಗಳು ಕಾಲೇಜಕೋಡಿನಲ್ಲಿ ಬಂದು ಹೊ ಸ ಕಲಮನ್ನು ಹಾಕಿದ್ದಾರೆ. ಅದರಿಂದ ಯುನಿವ್ಹರ್ಸಿಟಿ ಸ್ಕೂಲ ಫಾಯನಲ ಪರೀಕ್ಷೆ ಪಾಸಾದ ಶಿಕ್ಷಕರಿಗೆ ಪ್ರಾಂತಿಕ ಇನಸ್ಪೆಕ್ಟರರ ಅಪ್ಪಣೆಯನ್ನು ಪಡೆದು ಎನೆಯ ವರ್ಷದ ಕಾಲೇಜ ಪರೀಕ್ಷೆಗೆ ಕೂಡ್ರಲಿಕ್ಕೆ ಮಾರ್ಗವಾಗಿದೆ. ಈ ಮೇರೆಗೆ ಇಂಗ್ಲಿಷ ಬಲ್ಲಂಥ ಬಹಳ ಜನರು ವಿದ್ಯಾಖಾತೆಯ ಲ್ಲಿ ಸೇರಿ, ತಮ್ಮ ಕೆಲಸವನ್ನು ಲಕ್ಷಪೂರ್ವಕವಾಗಿ ಮಾಡಿ ದೇಶದ ಸ್ಥಿತಿಯನ್ನು ಸುಧಾರಿಸುವರೆಂದು ನಾವು ನಂಬು ತ್ತೇವೆ.

(ನಡು ಪುಟದಿಂದ ಮುಂದೆ ಸಾಗಿದ್ದು.)

ಮುಂಬಯಿನ ಪ್ರಾಂತ್ಯದ ಅಲ್ಲಾಖೆಯೊಳಗಿನ ಅಯಾ ಭಾಗದಲ್ಲಿ ಪ್ರಾಥಮಿಕ ಶಾಲೆಗಳ ಸ್ಥಿತಿಯು ಹ್ಯಾಗಿರುತ್ತದೆಂಬದನ್ನು ತಿಳ
ಬಗ್ಗೆ ಕೆಳಗಿನ ಪಟ್ಟಿಯನ್ನು ಕೊಟ್ಟಿರುತ್ತೇವೆ.

ಭಾಗ.	ಶಾಲೆಗಳ ಸಂಖ್ಯೆ.	ವಿದ್ಯಾರ್ಥಿಗಳ ಸಂಖ್ಯೆ.	೫ನೆಯ ಇಯತ್ತೆ ಕಲಿಯುವ.			೭ನೆಯ ಇಯತ್ತೆ ಕಲಿಯುವ.			೯ನೆಯ ಇಯತ್ತೆಯವರೆಗೆ ಕಲಿಯುವ.			ಅಂತೂ.		
			ಗಂಡು.	ಹೆಣ್ಣು.	ಅಂತೂ.	ಗಂಡು.	ಹೆಣ್ಣು.	ಅಂತೂ.	ಗಂಡು.	ಹೆಣ್ಣು.	ಅಂತೂ.	ಗಂಡು.	ಹೆಣ್ಣು.	ಅ
ಮಧ್ಯಭಾಗ.	೨೩೯	೧೩೫೦೬	೩೬೪೫	೨೩೪೩	೩೪೪೮	೪೬೦೯	೪೦೬೩	೪೦೫೬	೩೭೪೨	೩೪೪೦	೪೪೫೦	೧೭೦೫೭೦	೧೪೪೫೬	೧೩೫
ಉತ್ತರಭಾಗ.	೨೪೪೪	೧೯೧೯೫೦	೫೬೨೪	೩೬೬೩	೫೫೪೪	೬೬೪೦	೪೪೦೧	೪೪೪೪	೧೫೫೫೦	೧೩೯೬೫	೨೯೫೦	೧೬೪೪೧೧	೨೬೦೩೯	೧೯೧
ದಕ್ಷಿಣಭಾಗ.	೨೩೬೬	೧೩೬೧೬೫	೩೬೧೬೫	೧೩೯೩	೩೪೫೪	೫೦೩೨	೪೪೩೩	೫೪೪೧	೪೪೪೪	೩೬೪೬	೪೪೪೬	೧೭೯೯೧೧	೧೫೬೪೪	೧೩೬
ಸಿಂಧ.	೧೩೬೬	೫೩೯೧೬	೬೯೪೯	೨೪೦	೪೦೬೯	೭೪೪೪	೫೬೧೧	೭೪೫೯	೧೭೬೧೪	೪೪೬೫	೧೬೦೪೯	೪೪೪೧೪	೧೦೪೬೬	೫೩

ಈ ಸಂಬಂಧದಿಂದ ಮಿ. ಡೈರೆಕ್ಟರ ಆಫ್ ಪಬ್ಲಿಕ್ ಇನ್ಸ್ಟ್ರಕ್ಷನ್ ದೊರೆಗಳು ಅನ್ನುವದೇನಂದರೆ, ೫ನೇ ೪ನೇ ೩ನೇ ಮತ್ತು ೭ನೇ ಇಯತ್ತೆಗಳನ್ನು ಕಲಿಯುವ ಹುಡುಗರ ಮತ್ತು ಹುಡಿಗಿಯರ ಸಂಖ್ಯೆಯು ನಾಲ್ಕು ಭಾಗಗಳಲ್ಲಿಯೂ ಹೋದ ವರ್ಷಕ್ಕಿಂತ ಹೆಚ್ಚಾಗಿರುತ್ತದೆ. ಈ ವರ್ಷದ ಪರೀಕ್ಷೆಯಲ್ಲಿ ಪಾಸಾದ ವಿದ್ಯಾರ್ಥಿಗಳ ಸಂಖ್ಯೆಯು ಸಹ ಹೋದ ವರ್ಷದ ಸಂಖ್ಯೆಗಿಂತ ಹೆಚ್ಚಿರುತ್ತದೆ. ಒಟ್ಟು ಇಲಾಖೆಯ ಪ್ರಾಥಮಿಕ ಶಾಲೆಗಳಲ್ಲಿ ೪೪೫೪ ಗಂಡು ೩೭೭೯ ಹೆಣ್ಣು ಹುಡುಗರು ಪರೀಕ್ಷೆಗೆ ನಿಂತಿದ್ದರು. ಅವರಲ್ಲಿ ೪೦೫೯ ಗಂಡು ೨೨೧೯ ಹೆಣ್ಣು ಹುಡುಗರು ಪಾಸಾದರು. ಮುಂಬಯಿ ಇಲಾಖೆಯೊಳಗಿರುವ ಶಿಕ್ಷಕರ ೪ ಕಾಲೇಜಗಳಲ್ಲಿ ೬೭೪ ಜನ ವಿದ್ಯಾರ್ಥಿಗಳೂ ಸ್ತ್ರೀಶಿಕ್ಷಕರ ೩ ಟ್ರೇನಿಂಗಕಾಲೇಜಗಳಲ್ಲಿ ೧೩೯ ಜನ ವಿದ್ಯಾರ್ಥಿನಿಯರೂ ಕಲಿಯುತ್ತಾರೆ. ಈ ವರ್ಷ ಹೋದ ವರ್ಷಕ್ಕಿಂತ ಹೆಚ್ಚು ವಿದ್ಯಾರ್ಥಿನಿಯರು ಪರೀಕ್ಷೆಗೆ ನಿಂತು ಹೆಚ್ಚು ಜನರು ಪಾಸಾಗಿದ್ದಾರೆ. ಇವರಿಂದ ಸ್ತ್ರೀಶಿಕ್ಷಣವು ಕ್ರಮೇಣ ಬೆಳೆಯುತ್ತ ನಡೆದದೆಂದು ಹೇಳಲಿಕ್ಕೆ ಅಡ್ಡಿ ಇಲ್ಲ.

ಶಾಲೆಯ ಹೊತ್ತನ್ನು ಬಿಟ್ಟು ಉಳಿದ ಹೊತ್ತಿನಲ್ಲಿ ಕಾಲಾಗೃಹದ ಹೊರಗೆ ಮಾಡಿದ ತಪ್ಪಿಗಾಗಿ ವಿದ್ಯಾರ್ಥಿಗೆ ಶಿಕ್ಷೆ ಕೊಡುವ ಅಧಿಕಾರವು ಅವನ ಗುರುವಿಗೆ ಉಂಟೋ ಇಲ್ಲವೋ ಎಂಬ ಮಾತಿನ ಬಗ್ಗೆ ಬಹು ದಿವಸದಿಂದ ಮತಭೇದವಿತ್ತು. ಆದರೆ ಕೆಲವು ದಿವಸಗಳ ಹಿಂದೆ ವಿಲಾಯತಿಯೊಳಗಿನ "ಡಿವಿಜನಲ್ ಕೋರ್ಟ ಆಫ್ ಅಪೀಲ" ಎಂಬ ನ್ಯಾಯಸಭೆಯಲ್ಲಿ ಈ ಮಾತಿನ ಚರ್ಚೆಯಾಗಿ ನ್ಯಾಯಾಧೀಶರು ಮಾಸ್ತರನಿಗೆ ಈ ಅಧಿಕಾರವುಂಟೆಂದು ತೀರ್ಪು ಕೊಟ್ಟರು. ಅವರು

(ನಯು ಪುಟದಿಂದ ಮುಂದೆ ಸಾಗಿದ್ದು.)

ಮೊರಂಬಿಯು ರಾಜ್ಯದಲ್ಲಿನ ಆಯಾ ಭಾಗದಲ್ಲಿ ಪ್ರಾಥಮಿಕ ಶಾಲೆಗಳ ಸ್ಥಿತಿಯು ಹ್ಯಾಗಿರುತ್ತದೆಂಬದನ್ನು ತಿಳಿಸ
ಬಗ್ಗೆ ಕೆಳಗಿನ ಪಟ್ಟಿಯನ್ನು ಕೊಟ್ಟಿರುತ್ತೇವೆ.

ಭಾಗ.	ಶಾಲೆಗಳ ಸಂಖ್ಯೆ	ವಿದ್ಯಾರ್ಥಿಗಳ ಸಂಖ್ಯೆ	೫ನೆಯ ವರ್ಷದ ಇಯತ್ತೆ ಕಲಿಯುವ.			೩ನೆಯ ವರ್ಷದ ಇಯತ್ತೆ ಕಲಿಯುವ.			೧ನೆಯ ಇಯತ್ತೆಯವರೆಗೆ ಕಲಿಯುವ.			ಅಂತೂ.		
			ಗಂಡು.	ಹೆಣ್ಣು.	ಅಂತೂ.	ಗಂಡು.	ಹೆಣ್ಣು.	ಅಂತೂ.	ಗಂಡು.	ಹೆಣ್ಣು.	ಅಂತೂ.	ಗಂಡು.	ಹೆಣ್ಣು.	ಅಂ
ಮಧ್ಯಭಾಗ.	೨೩೯	೧೩೫೦೬	೩೬೪೫	೨೩೪೩	೩೩೧೮	೪೬೦೯	೪೦೬೩	೫೦೫೬	೩೬೪೦	೩೩೦೬	೬೯೫೦	೧೭೦೫೭೦	೧೪೪೫೬	೧೩೫
ಉತ್ತರಭಾಗ.	೨೪೪	೧೯೦೯೫೦	೫೬೨೬	೩೬೬೩	೫೯೯೪೯	೬೬೪೭೦	೪೪೨೧	೪೪೨೦೧	೪೫೫೫೪	೧೧೯೬೫	೫೫೭೦	೧೬೪೪೧೧	೨೩೦೩೯	೧೯೦
ದಕ್ಷಿಣಭಾಗ.	೨೩೭೬	೧೩೭೧೬೫	೩೭೧೬೫	೧೩೯೩	೩೪೫೬೪	೫೦೩೨೪	೪೪೩೩	೪೪೪೧೧	೩೪೪೪	೯೨೫೪	೪೭೩೪	೧೨೧೯೯೧	೧೫೯೪೪	೧೩೭೬
ಸಿಂಧ.	೧೩೬೭	೫೩೯೧೭	೭೯೪೪	೨೪೦	೪೨೬೯	೨೨೪೪೪	೫೪೧೧	೨೪೫೫೯	೧೨೬೧೪	೪೪೭೫	೧೭೦೪೯	೪೩೪೫೧	೧೦೪೬೬	೫೩

ಈ ಸಂಬಂಧದಿಂದ ಮಿ. ಡೈರೆಕ್ಟರ ಆಫ್ ಪಬ್ಲಿಕ್ ಇನ್ಸ್ಟ್ರಕ್ಷನ್ ದೊರೆಗಳು ಅನ್ನುವದೇನಂದರೆ, ೫ನೇ ೪ನೇ ೩ನೇ ಮತ್ತು ೭ನೇ ಇಯತ್ತೆಗಳನ್ನು ಕಲಿಯುವ ಹುಡುಗರ ಮತ್ತು ಹುಡಿಗಿಯರ ಸಂಖ್ಯೆಯು ನಾಲ್ಕು ಭಾಗಗಳಲ್ಲಿಯೂ ಹೋದ ವರ್ಷಕ್ಕಿಂತ ಹೆಚ್ಚಾಗಿರುತ್ತದೆ. ಈ ವರ್ಷದ ಪರೀಕ್ಷೆಯಲ್ಲಿ ಪಾಸಾದ ವಿದ್ಯಾರ್ಥಿಗಳ ಸಂಖ್ಯೆಯು ಸಹ ಹೋದ ವರ್ಷದ ಸಂಖ್ಯೆಗಿಂತ ಹೆಚ್ಚಿರುತ್ತದೆ. ಬಿಟ್ಟು ಇಲಾಖೆಯ ಪ್ರಾಥಮಿಕ ಶಾಲೆಗಳಲ್ಲಿ ೪೪೫೪ ಗಂಡು ೩೬೭೯ ಹೆಣ್ಣು ಹುಡುಗರು ಪರೀಕ್ಷೆಗೆ ನಿಂತಿದ್ದರು. ಅವರಲ್ಲಿ ೪೫೫೪ ಗಂಡು ೩೦೧೯ ಹೆಣ್ಣು ಹುಡುಗರು ಪಾಸಾದರು. ಮುಂಬಯಿ ಇಲಾಖೆಯೊಳಗಿರುವ ಶಿಕ್ಷಕರ ೪ ಕಾಲೇಜಗಳಲ್ಲಿ ೬೭೪ ಜನ ವಿದ್ಯಾರ್ಥಿಗಳೂ ಸ್ತ್ರೀಶಿಕ್ಷಕರ ೭ ಟ್ರೇನಿಂಗಕಾಲೇಜಗಳಲ್ಲಿ ೧೭೯ ಜನ ವಿದ್ಯಾರ್ಥಿನಿಯರೂ ಕಲಿಯುತ್ತಾರೆ. ಈ ವರ್ಷ ಹೋದ ವರ್ಷಕ್ಕಿಂತ ಹೆಚ್ಚು ವಿದ್ಯಾರ್ಥಿನಿಯರು ಪರೀಕ್ಷೆಗೆ ನಿಂತು ಹೆಚ್ಚು ಜನರು ಪಾಸಾಗಿದ್ದಾರೆ. ಇವರಿಂದ ಸ್ತ್ರೀಶಿಕ್ಷಣವು ಕ್ರಮೇಣ ಬೆಳೆಯುತ್ತ ನಡೆದದೆಂದು ಹೇಳಲಿಕ್ಕೆ ಅಡ್ಡಿ ಇಲ್ಲ.

ಶಾಲೆಯ ಹೊತ್ತನ್ನು ಬಿಟ್ಟು ಉಳಿದ ಹೊತ್ತಿನಲ್ಲಿ ಶಾಲಾ ಗೃಹದ ಹೊರಗೆ ಮಾಡಿದ ತಪ್ಪಿಗಾಗಿ ವಿದ್ಯಾರ್ಥಿಗೆ ಶಿಕ್ಷೆ ಕೊಡುವ ಅಧಿಕಾರವು ಅವನ ಗುರುವಿಗೆ ಉಂಟೋ ಇಲ್ಲವೋ ಎಂಬ ಮಾತಿನ ಬಗ್ಗೆ ಬಹು ದಿವಸದಿಂದ ಮತಭೇದವಿತ್ತು. ಆದರೆ ಕೆಲವು ದಿವಸಗಳ ಹಿಂದೆ ವಿಲಾಯತಿಯೊಳಗಿನ "ಡಿವಿಜನಲ್ ಕೋರ್ಟ ಆಫ್ ಅಪೀಲ" ಎಂಬ ನ್ಯಾಯಸಭೆಯಲ್ಲಿ ಈ ಮಾತಿನ ಚರ್ಚೆಯಾಗಿ ನ್ಯಾಯಾಧೀಶರು ಮಾಸ್ತರನಿಗೆ ಈ ಅಧಿಕಾರವುಂಟೆಂದು ತೀರ್ಪು ಕೊಟ್ಟರು. ಅವರು

ತೀರ್ಪಿನಲ್ಲಿ ಬರೆದದ್ದೇನೆಂದರೆ:—" ವಿದ್ಯಾರ್ಥಿಯು ಮನೆಯ
ಬಾಗಿಲ ಬಿಟ್ಟು ಹೊರಗೆ ಹೋದ ಕೂಡಲೆ ಅವನ ಮೇ
ತಾಯಿತಂದೆಗಳ ಅಧಿಕಾರವು ಇಲ್ಲಿಂತಲೂ ಅವನು ಶಾ
ಯು ಬಾಗಿಲವನ್ನು ಮುಟ್ಟುವದಕ್ಕಿಂತ ಮುಂಚೆ ಮಾಸ್ತರ
ಅಧಿಕಾರವು ಅವನ ಮೇಲೆ ನಡೆಯುವದಿಲ್ಲಿಂತಲೂ ತೀ
ಯುವದು ಸರಿಯಾದದ್ದಲ್ಲ. ವಿದ್ಯಾರ್ಥಿಯು ಶಾಲೆಯಿಂ
ಮನೆಗೆ ಹೋಗುವಾಗ್ಗೆ ಅಥವಾ ಮನೆಯಿಂದ ಶಾಲೆಗೆ ಬರು
ವಾಗ್ಗೆ, ಅವನು ಮಾಡಿದಂಥ ಅಪರಾಧಕ್ಕಾಗಿ ಅವನನ್ನು
ಶಿಕ್ಷಿಸುವ ಅಧಿಕಾರವು ಮಾಸ್ತರನಿಗೆ ಇರಲಿಕ್ಕೆಬೇಕು." ಆ
ನ್ಯಾಯಾಧೀಶರು ತಮ್ಮ ತೀರ್ಪಿನಲ್ಲಿ ಕೆಲವು ಹಿಂದಿನ ಉ
ದಾಹರಣೆಗಳನ್ನು ಉಲ್ಲೇಖಿಸಿದ್ದಾರೆ. ಅವುಗಳಿಂದ ದೊ
ಡ್ಡ ದೊಡ್ಡ ಶಾಲೆಗಳಲ್ಲಿ ದೇಹದಂಡವು ಇರಲಿಕ್ಕೆಬೇಕೆಂಬ
ಮಾತಿಗೆ ಇಂಗ್ಲಂಡದೊಳಗಿನ ಹೆಸರಾದ ಕಾಯದೆಪಂಡಿತರು
ಒಪ್ಪಿಕೊಳ್ಳುತ್ತಾರೆಂದು ವ್ಯಕ್ತವಾಗುತ್ತದೆ. ಸಾರಾಂಶ, ವಿ
ದ್ಯಾರ್ಥಿಯು ತನ್ನ ಅಧೀನದಲ್ಲಿರುವ ತನಕ ಮಾಸ್ತರನಿಗೆ
ವಿದ್ಯಾರ್ಥಿಯ ತಾಯಿತಂದೆಗಳ ಯಾವತ್ತು ಅಧಿಕಾರಗಳು
ಇರುತ್ತವೆ; ಮತ್ತು ಆ ಅಧಿಕಾರವನ್ನು ನಡಿಸುವದು ಅವ
ನ ಕರ್ತವ್ಯವಿರುತ್ತದೆ ಎಂಬ ಸರ್ವಮಾನ್ಯವಾದ ತತ್ವವ
ನ್ನೇ ಮೇಲಿನ ತೀರ್ಪು ಸ್ಥಾಪಿಸುತ್ತದೆ.

ಕೆಲವು ದಿವಸಗಳ ಕೆಳಗೆ ಪುಣೆಯ ಜನರು ಸಭೆಗೂಡಿ
ಪ್ರಾಥಮಿಕ ಶಿಕ್ಷಣವನ್ನು ಬಡಜನರಿಗೆ ಖರ್ಚುಬೀಳದೆ
ಸರಕಾರದ ವೆಚ್ಚದಿಂದಲೇ ಸಿಗುವಂತೆ ಮಾಡಬೇಕೆಂತ
ಲೂ ಎಲ್ಲ ಜನರು ೫ರಿಂದ ೧೦ ವರ್ಷದ ತಮ್ಮ ಮಕ್ಕ
ಳನ್ನು ಶಾಲೆಗೆ ಕಳುಹಿಸಿ ದೇಶಭಾಷೆಯ ೪ನೆಯ ಇಯತ್ತೆ
ಯವರೆಗೆ ಕಲಿಸಲಿಕ್ಕೆಬೇಕೆಂದು ಕಟ್ಟುಮಾಡಬೇಕೆಂತಲೂ

ಹಿಂದುಸ್ತಾನದ ಸರಕಾರದವರಿಗೆ ಬಂದು ವಿಜ್ಞಾಪನಾ ಪತ್ರದ ಮುಖಾಂತರವಾಗಿ ಬೇಡಿಕೊಂಡಿದ್ದರು. ಅದಕ್ಕೆ ಮೊನ್ನೆ ಮೊನ್ನೆ ಹಿಂದುಸ್ತಾನದ ಸರಕಾರದವರು ಪ್ರತ್ಯುತ್ತರವನ್ನು ಬರೆದಿದ್ದಾರೆ. ಅದರಲ್ಲಿ ಅವರು ಸರಕಾರದ ವೆಚ್ಚದಿಂದ ಪ್ರಾಥಮಿಕ ಶಿಕ್ಷಣದ ಪ್ರಸಾರವನ್ನು ಮಾಡುವದಕ್ಕೆ ಒಪ್ಪಿಕೊಂಡರೂ ಹಿಂದುಸ್ತಾನದ ಸದ್ಯಸ್ಥಿತಿಯು ಈ ಪ್ರಕಾರದ ಏರ್ಪಾಡು ಮಾಡಲಿಕ್ಕೆ ಅನುಕೂಲವಾಗಿರುವದಿಲ್ಲೆಂದು ತಿಳಿಸಿರುತ್ತಾರೆ.

ಕಮ್ಮಿ ಬಂದದ್ದು ಬಾಯಿಗೆ ಬರಲಿಲ್ಲ—ಮಿ. ಅರವಿಂದ ಘೋಷನೆಂಬ ಬಂಗಾಲದ ತರುಣನು ಇರ್ಡಿಯನ್ ಸಿವಿಲ್ ಸರ್ವೀಸದೊಳಗೆ ತೇರ್ಗಡೆ ಹೊಂದಿದನು. ಆದರೆ ಅವನು ಅಶ್ವಾರೋಹಣ ವಿಷಯದಲ್ಲಿ ನಾಪಾಸಾಗದ್ದರಿಂದ ಅವನಿಗೆ ಸಿವಿಲ್ ಸರ್ವೀಸದೊಳಗೆ ಸ್ಥಳವು ದೊರೆಯುವಲ್ಲಿಲ್ಲ. ಅವನು ಕಡೆಯ ಪರೀಕ್ಷೆಯಲ್ಲಿ ಅಶ್ವಾರೋಹಣ ವಿಷಯದಲ್ಲಿ ನಾಪಾಸು ಆದದ್ದರಿಂದ, ಆ ವಿಷಯವನ್ನು ಚನ್ನಾಗಿ ಕಲಿಯಲಿಕ್ಕೆ ಇಂದು ತಿಂಗಳ ಅವಧಿ ಕೊಟ್ಟರು. ಆದರೆ ಕಾಲಕ್ಕೆ ಸರಿಯಾಗಿ ಅವನು ಪರೀಕ್ಷೆಗೆ ಹೋಗದೆ ತುಸು ತಡಮಾಡಿ ಬಿಟ್ಟನು. ಆದದ್ದರಿಂದ ಅವನ ಪರೀಕ್ಷೆಯನ್ನು ತೆಗೆದುಕೊಳ್ಳಲಿಲ್ಲ. ಮುಂದೆ ಸ್ವಲ್ಪ ಹೊತ್ತಿನಲ್ಲಿಯೇ, ಹಿಂದುಸ್ತಾನದ ಸರಕಾರದವರಿಗೆ ನಿಮ್ಮ ನೌಕರಿಯು ಅಗತ್ಯವಿಲ್ಲೆಂಬ ಅಭಿಪ್ರಾಯದ ಪುಕುಮು ಅವನಿಗೆ ಬಂದು ಮುಟ್ಟಿತು. ಅವನು ಈ ಪರೀಕ್ಷೆಯಲ್ಲಿ ಪಾಸಾಗಿದ್ದರೆ, ಅವನ ಸಲುವಾಗಿ ಅವನ ತಾಯಿತಂದೆಗಳುಮಾಡಿದ ವೆಚ್ಚವು ಸಾರ್ಥಕವಾಗಿ ಅವನು ತಿಂಗಳಿಗೆ ೫೦೦೫೫೦೦ ರೂಪಾಯಿ ತಲಬನ್ನು ಹೊಂದುವ ಪ್ರಾಂತಿಕ ಕಮಿಶನರ

ನ ಸ್ಥಲಕ್ಕೆ ಬಾಧ್ಯಸ್ಥನಾಗುತ್ತಿದ್ದನು. ಆದರೆ ಅದೆಲ್ಲ ಆ
ನ ಪಾಲಿಗೆ ಸ್ವಪ್ನವೇ ಆಯಿತು. ಅವನು ಅಶ್ವಾರೋಹ
ಣದಲ್ಲಿ ಮಾತ್ರ ನಿಪುಣನಿರುವದಿಲ್ಲೆಂಬ ಕಾರಣದಿಂದ ದಯಾ
ಳು ಸರಕಾರವವರು ಅವನಿಗೆ ಕೈಮುಚ್ಚಿಕೊಂಡು ಕೂಡ
ಲಿಕ್ಕೆ ಹೇಳಲಿಕ್ಕಿಲ್ಲೆಂಬದು ಸ್ಪಷ್ಟವದೆ. ಆದರೆ ಯಾವ
ನೊಂದು ಕೆಲಸಕ್ಕೆ ಕೈಹಾಕುವವರು ಆ ಕೆಲಸಕ್ಕೆ ತಮ್ಮ
ಮಾತ್ರತೆಯನ್ನು ವಿಚಾರಿಸಿ ಅವಶ್ಯವಾದ ಸಿದ್ಧತೆಯನ್ನು
ಮಾಡಿಕೊಂಡು ಕೈ ಹಾಕಬೇಕೆಂದು ನಮ್ಮ ಸೂಚನೆ
ಯುಂಟು.

(ಮುಂದಕ್ಕೆ ಸಾಗುವದು.)

"Dr. KIRTIKAR ON SENSES"

"ಇಂದ್ರಿಯ ವಿಜ್ಞಾನ ವಿಚಾರವನ್ನು ಕುರಿತು ಡಾಕ್ತರ ಕೀರ್ತಿಕರರ ವ್ಯಾಖ್ಯಾನವು."

[ಗರ್ಜನೇ ಇ. ೬೬ನೇ ಪುಟದಿಂದ ಮುಂದೆ ಸಾಗಿದ್ದು.]

ತತ್ವಜ್ಞಾನ ಶಿರೋಮಣಿಯೂ ವಿಶಾಲ ಬುದ್ಧಿಯ ಶೋಧ
ಕನೂ ಆದ ಡಾರ್ವಿನ್ನನು ಈ ವಿಷಯವನ್ನು ಕೈಕೊಂ
ಡು ತನ್ನ ಮನೆಯೊಳಗಿನ ಬಬ್ಬ ಬಾಲಕನು ಬೆಳೆಯುತ್ತಿ
ರುವಾಗ್ಗೆ ಅವನ ಮಾನಸಿಕ ಶಕ್ತಿಯ ವಿಕಾಸವು ಹ್ಯಾಗೆ
ಹ್ಯಾಗೆ ಆಗುತ್ತ ಹೋಗುತ್ತದೆಂಬ ಸಂಗತಿಯನ್ನು ಕೆಲವ
ವರ್ಷಗಳ ವರೆಗೆ ಲಕ್ಷ ಪೂರ್ವಕವಾಗಿ ನೋಡಿ, ಅದನ್ನು
ಆಗಿಂದಾಗ್ಗೆ ಬರೆದಿಟ್ಟು ಕೊನೆಗೆ ಅದನ್ನು ಪ್ರಸಿದ್ಧ ಮಾಡಿ
ದನು. ಇದೇ ಮೇರೆಗೆ ಗಾಲ್ಟನ್ನನೆಂಬ ಪ್ರಸಿದ್ಧ ಪುರುಷ
ನು ವಂಶ ಪರಂಪರೆಯಿಂದ ಪ್ರಾಪ್ತವಾದ ಶಾರೀರಕ ಮತ್ತು
ಮಾನಸಿಕ ಗುಣದೋಷಗಳನ್ನು ಕುರಿತು ತನ್ನ ಶೋಧ
ವನ್ನು ಜಾಗ್ರತೆಯಿಂದ ನಡಿಸಿರುತ್ತಾನೆ. ಫ್ರಾನ್ಸದೇಶದಲ್ಲಿ
ಟೇನೆ, ಕಾಟೇಲಿ ಎಂಬವರು ಮತ್ತು ಅಮೇರಿಕೆಯ ಸಂ

ಯುಕ್ತ ಸಂಸ್ಥಾನದ ಬೌಡೀಚನೆಂಬ ವಿದ್ವಾಂಸನು ಈ ವಿ
ಷಯವನ್ನು ಕುರಿತು ವಿಚಾರ ಮಾಡಿರುತ್ತಾರೆ. ನಮ್ಮ
ದೇಶದಲ್ಲಿ ಇಂದ್ರಿಯ-ವಿಜ್ಞಾನ-ಶಾಸ್ತ್ರದ ಈಗಿನ ಸ್ಥಿತಿಯನ್ನು
ನುಸರಿಸಿ ಈ ವಿಷಯವನ್ನು ಕುರಿತು ವಿಚಾರ ಮಾಡಿ
ನಮ್ಮ ಬಾಲಕರ ಶಾರೀರಕ ಮತ್ತು ಮಾನಸಿಕ ಶಕ್ತಿಗಳ
ಬೆಳವಣಿಗೆಗೆ ತಕ್ಕ ಉಪಾಯಗಳು ಯಾವವು ಎಂಬದನ್ನು
ಶೋಧಿಸಿ, ಅವುಗಳನ್ನು ಮೂಢ ಜನರಿಗೆ ತಿಳಿಸಿ, ನಮ್ಮ
ಬಾಲಕರನ್ನು ಅಕಾಲದ ಮೃತ್ಯುವಿನಿಂದಲೂ ಅವಮರಣ
ವ್ಯಾಧಿಗಳಿಂದಲೂ ಮುಕ್ತರನ್ನು ಮಾಡುವಂಥ ಪುರುಷರು
ನಿಶ್ಚಯವಾಗಿ ಧನ್ಯರೆಂದು ಅನಿಸಿಕೊಳ್ಳಬಹುದು; ಮತ್ತು
ಅಂಥ ಪುರುಷರನ್ನು ಕಂಡ ದಿವಸವೇ ಸುದಿನವು.

ಕೂಸು ಹುಟ್ಟಿದ ಮೇಲೆ ಅದು ಹ್ಯಾಗೆ ಬೆಳೆಯುತ್ತ
ಹೋಗುತ್ತದೆಂಬದನ್ನು ಕುರಿತು ವಿಚಾರಿಸುವಾ. ಅದು
ಹುಟ್ಟಿದಾಗ್ಗೆ ಅದರ ಭಾರವು ಸುಮಾರು ೫|೬ ಸೇರು, ನಿಲು
ವು ೧೪|೧೯ ಇಂಚು ಇರುತ್ತದೆ. ಹೆಣ್ಣು ಕೂಸು ಭಾರ
ದಲ್ಲಿ ಸೇರು, ಅರ್ಧಸೇರು, ನಿಲುವಿನಲ್ಲಿ ಅರ್ಧ ಇಂಚು
ಕಡಿಮೆ ಇರುತ್ತದೆ. ಸ್ಥೂಲವಾನದಿಂದ ವಿಚಾರ ಮಾಡಿದ
ರೆ ಬಾಲ್ಯಾವಸ್ಥೆಯಲ್ಲಿ ಶರೀರದ ನಿಲುವು ಪ್ರೌಢಾವಸ್ಥೆಯಲ್ಲಿ
ರುವ ಶರೀರದ ನಿಲುವಿನ ೪ನೇ ಪಾಲು ಇರುತ್ತದೆ. ಬಾ
ಲ್ಯಾವಸ್ಥೆಯಲ್ಲಿ ತಲೆ ಮತ್ತು ಶರೀರದ ಮಧ್ಯಭಾಗ ಅಂದ
ರೆ ಧಡ ಇವೇ ವಿಶೇಷ ಭಾರವುಳ್ಳ ಅವಯವಗಳು. ಬಾಲ್ಯ
ದಲ್ಲಿ ಕೈಕಾಲುಗಳು ಕಿರಿದು ಇರುತ್ತವೆ. ೧ನೆಯ ವರ್ಷವು
ತುಗಿಯುವದರೊಳಗಾಗಿ ಅವು ಮೆಲ್ಲ ಮೆಲ್ಲನೆ ಉದ್ದವಾಗು
ತ್ತವೆ. (ತೊಡೆಯಿಂದ ಪಾದಗಳವರೆಗೆ ಇರುವ ಭಾಗವು
ರ ಕಾಲಕ್ಕೆ ಬೆಳೆದಷ್ಟು ಮುಂದೆ ಎಂದೂ ಬೆಳೆಯುವದಿಲ್ಲ.)
ಇವರೂ ಅವು ವರ್ಷ ವರ್ಷಕ್ಕೆ ತುಸು ತುಸು ಬೆಳೆಯುತ್ತ

ಲೇ ಇರುತ್ತವೆ. ೧ನೆಯ ವರ್ಷ ಕೂಸು ೫ಕ್ಕಿ ಅಥವ
೬ಕ್ಕೆ ಇಂಚು ಬೆಳೆಯುತ್ತದೆ. ಆದರೆ ಇದೇ ಪ್ರಮಾಣ
ಮುಂದೆ ಇರುವದಿಲ್ಲ. ಯಾಕಂದರೆ ಒಂದು ವೇಳೆ ೧ನೆಯ
ವರ್ಷದ ಪ್ರಮಾಣದಿಂದ ಶರೀರವು ಬೆಳೆಯುತ್ತ ನಡೆದರ
ಆ ಹುಡುಗನು ೨೦ ವರ್ಷದವನಾದಾಗ್ಗೆ ಅವನ ನಿಲುವ
೧೪ ಫೂಟು ಆಗುವದು! ಅಂದರೆ ಸಾಧಾರಣವಾದ ಮನು
ಷ್ಯನಿಗಿಂತ ೬ ಪಟ್ಟು ಹೆಚ್ಚು ಆಗುವದು. ೨ನೆಯ
ವರ್ಷ ಶರೀರದ ಬೆಳವಣಿಗೆಯು ೧ನೆಯ ವರ್ಷಕ್ಕಿಂ
ಅರ್ಧಕಡಿಮೆಯಾಗುತ್ತದೆ, ಅಂದರೆ ಶರೀರವು ಸುಮಾರ
೩ಕ್ಕಿ ಅಥವಾ ೩ಕ್ಕೆ ಇಂಚು ಬೆಳೆಯುತ್ತದೆ. ಇದೇಮೇರೆ
೧೦ನೆಯ ವರ್ಷದ ತನಕ ನಿಲುವು ಬರಬರುತ್ತ ಕಡಿಮೆ
ಕಡಿಮೆ ಪ್ರಮಾಣದಿಂದ ಬೆಳೆಯುತ್ತ ಹೋಗುತ್ತದೆ. ಮು
ದೆ ಶರೀರವು ಪ್ರತಿ ವರ್ಷ ೧ಕ್ಕಿ ಅಥವಾ ೦ ಇಂಚ
ಬೆಳೆಯುತ್ತದೆ. ಈ ಪ್ರಕಾರದ ಬೆಳವಣಿಗೆಯು ವಿಕಾ
ವಿರಹಿತವಾದಂಥ, ಪೋಷಣದ ಸಾಧನಗಳಾದ ಅನ್ನ ಪಾ
ನಾದಿಗಳ ಅನುಕೂಲತೆಯುಳ್ಳಂಥ ಶರೀರದಲ್ಲಿ ಮಾತ್ರ
ಸಂಭವಿಸುತ್ತದೆಂಬ ಮಾತು ಮರೆಯಲಾಗದು. ಹೆಣ್ಣು
ಅಥವಾ ಗಂಡು ಹುಡುಗರು ೧೦/೧೫ ವರ್ಷಗಳ ವರೆಗೆ ಸ
ರಿಪ್ರಮಾಣದ್ಹಿಂದ ಬೆಳೆಯುತ್ತವೆ. ಮುಂದೆ ಹೆಣ್ಣು ಹುಡು
ಗರ ಬೆಳಿಗೆಯು ಹೆಚ್ಚಾಗುತ್ತದೆ ಅಂದರೆ ನಿಲುವೂ ಭಾರ
ವೂ ಹೆಚ್ಚು ಪ್ರಮಾಣದಿಂದ ಬೆಳೆಯುತ್ತವೆ. ಇದರಿಂದ
ಅವರು ೧೦/೧೫ ವರ್ಷಕ್ಕೆ ಮಾತೃದಶೆಗೆ ತಕ್ಕವರಾಗುತ್ತಾ
ರೆಂದು ಮಾತ್ರ ಯಾರೂ ತಿಳಿಯಬಾರದು. ಈ ತರದ ತಿ
ಳುವಳಿಕೆಯು ನಮ್ಮ ಭಾವಿ ಪ್ರಜೆಗಳಿಗೆ ಬಹಳ ಹಾನಿಕಾ
ರಕವಾದದ್ದಾಗಿರುತ್ತದೆಂಬ ಮಾತನ್ನು ಲಕ್ಷದಲ್ಲಿಡತಕ್ಕದ್ದು.

ಮೊದಲಿನ ೪ ವರ್ಷಗಳಲ್ಲಿ ಶರೀರದ ನಿಲುವು ೧೪|೧೯ ಇಂಚು, ಭಾರವು ೩೫ ಪೌಂಡು ಬೆಳೆಯುತ್ತದೆಂದು ಡಾಕ್ಟರ ಕ್ಲೋಸ್ಟನ್ನನು ಹೇಳುತ್ತಾನೆ. ೫ ರಿಂದ ೯ ವರ್ಷದ ತನಕ ನಿಲುವು ಪ್ರತಿ ವರ್ಷ ೩ ಇಂಚು, ೬ನೇ ೫ನೇ ವರ್ಷ ಭಾರವು ೯ ಪೌಂಡು, ೬ನೇ ವರ್ಷ ೪ ಅಥವಾ ೫ ಪೌಂಡು ಮುಂದೆ ೧೨ನೇ ವರ್ಷದವರೆಗೆ ೩ರಿಂದ ೪ ಪೌಂಡುಗಳವರೆಗೆ ಬೆಳೆಯುತ್ತ ಹೋಗುತ್ತದೆಂದು ಆತನು ತಿಳಿಸುತ್ತಾನೆ. ೧೨ನೆಯ ವರ್ಷ ನಿಲುವು ೪ ಫೂಟು ೫ ಇಂಚು, ಭಾರ ೭೪ ಪೌಂಡು ಇರುತ್ತದೆ. ಮುಂದೆ ೧೫ನೆಯ ವರ್ಷದವರೆಗೆ ಪ್ರತಿ ವರ್ಷ ಭಾರವು ೪ ರಿಂದ ೧೦ ಪೌಂಡಿನ ವರೆಗೆ ನಿಲುವು ೩½ ಇಂಚು; ೧೫ನೆಯ ವರ್ಷದಿಂದ ೧೭ನೆಯ ವರ್ಷದ ವರೆಗೆ ಭಾರವು ೧೦ ಪೌಂಡು ನಿಲುವು ೩ ಇಂಚು ಬೆಳೆಯುತ್ತದೆ. ೧೭ನೆಯ ವರ್ಷದ ತರುವಾಯ ನಿಲುವು ಮತ್ತು ಭಾರ ಇವುಗಳ ಬೆಳಿಗೆಯ ಪ್ರಮಾಣವು ಕಡಿಮೆಯಾಗುತ್ತ ಹೋಗುತ್ತದೆ. ಅದು ಹ್ಯಾಗೆಂದರೆ:—೧೭|೧೪ರಲ್ಲಿ ಭಾರ ೬ ಪೌಂಡು, ನಿಲುವು ೩ ಇಂಚು; ೧೪|೧೯ರಲ್ಲಿ ಭಾರ ೬ ಪೌಂಡು, ನಿಲುವು ೧½ ಇಂಚು; ೧೯|೨೦ರಲ್ಲಿ ಭಾರ ೪ ಪೌಂಡು, ನಿಲುವು ½ ಇಂಚು ಬೆಳೆಯುತ್ತದೆ. ಮುಂದೆ ಪ್ರತಿವರ್ಷಕ್ಕೆ ಭಾರ ೧೦ ಪೌಂಡು, ನಿಲುವು ½ ಇಂಚು ಬೆಳೆಯುತ್ತ ಹೋಗುತ್ತದೆ.

ಮೇಲೆ ಹೇಳಿರುವ ನಿಯಮವು ಸರ್ವ ಸಾಧಾರಣವಾಗಿದ್ದಿರುತ್ತದೆ. ವ್ಯಕ್ತಿಭೇದದಿಂದ ಮತ್ತು ಬಾಹ್ಯ ಸ್ಥಿತಿಯ ಅನುಕೂಲ ಪ್ರತಿಕೂಲತೆಗಳಿಂದ ಇದರಲ್ಲಿ ಹೆಚ್ಚು ಕಡಿಮೆಯಾಗುವದುಂಟು, ಮತ್ತು ಬಹಳೊಮ್ಮೆ ಭಾರವು ನಿಲುವಿನ ಮಾನದಿಂದ ಕಡಿಮೆ ಬೆಳೆಯುತ್ತದೆ.

ಕಾಟೇಲೆ ಎಂಬ ವಿದ್ವಾಂಸನು ಹೇಳುವದೇನಂದರೆ:— ೫೦ ವರ್ಷದ ಮನುಷ್ಯನು ಮುಂದೆ ೪೦ ವರ್ಷ ಬದುಕಿದರೆ ಅಂದರೆ ಅವನು ೯೦ ವರ್ಷದವನಾದರೆ ಆಗ್ಗೆ ಅವನ ನಿಲುವು ನೊದಲಿಗಿಂತ ೧½ ಇಂಚು ಕಡಿಮೆಯಾಗುವದು. ಸ್ತ್ರೀಯರ ಬೆಳಿಗೆ ೧೧ ರಿಂದ ೧೫ ವರ್ಷಗಳ ತನಕ ವಿಶೇಷವಾಗಿರುವದು. ಸಾಧಾರಣ ಮಾನದಿಂದ ಸಮ ವಯಸ್ಸಿನ ಸ್ತ್ರೀಪುರುಷರಲ್ಲಿ ಸ್ತ್ರೀಯರು ಪುರುಷರಗಿಂತ ½ ಇಂಚು ನಿಲುವಿನಲ್ಲಿ ಕಡಿಮೆಯಾಗಿರುವರು. ಇದರ ಕಾರಣವೇನಂದರೆ:—ಅವ ಪಿಂಡವು ಹುಟ್ಟಿದಾಗಲೇ ಪುರುಷ ಪಿಂಡಕ್ಕಿಂತ ಸಣ್ಣದಿರುತ್ತದೆ. ಇಷ್ಟರಿಂದಲೇ ಸ್ತ್ರೀಯರಲ್ಲಿ ಶಾರೀರಕ ಅಥವಾ ಮಾನಸಿಕ ಶಕ್ತಿಯು ಕಡಿಮೆ ಇರುತ್ತದೆಂದು ಮಾತ್ರ ಯಾರೂ ಊಹಿಸಲಾಗದು.

ಶರೀರವು ಬೆಳೆಯು ಹತ್ತಲು, ಜನ್ಮಕಾಲದಲ್ಲಿಯು ಕೋಮಲವಾದ ಅಸ್ಥಿಗಳು ಗಟ್ಟಿಯಾಗ ಹತ್ತುತ್ತವೆ. ಅವುಗಳಲ್ಲಿಯು ಕೋಮಲತ್ವವು ನಷ್ಟವಾಗಿ ಇಡಿ ಶರೀರದ ಭಾರವನ್ನು ಸಹಿಸುವಷ್ಟು ಬಲವು ಮೊಣಕಾಲುಗಳಿಂದ ಪಾದಗಳವರೆಗೆ ಇರುವಂಥ ಅಸ್ಥಿಗಳಿಗೆ ಬರುತ್ತದೆ, ಮತ್ತು ಚಲನವಲನಾದಿ ಕ್ರಿಯೆಗಳು ಹೆಚ್ಚು ಚಪಲತೆಯಿಂದ ನಡೆಯುತ್ತವೆ. ಇಂಥ ಅಮೂಲ್ಯವಾದ ಬಾಲದೇಹದ ಸಂಗೋಪನವು ನಮ್ಮಿಂದ ತಕ್ಕಷ್ಟು ಸರಿಯಾಗಿ ಸಾಗುವ ದಿಲ್ಲೆಂಬದು ಕೆಳಗಿನ ವಿವರಣೆಯಿಂದ ಸ್ಪಷ್ಟವಾಗಿ ತಿಳಿಯುವದು. ಮಕ್ಕಳು ಅಳ ಹತ್ತಿದವೆಂದರೆ ಅದರ ಕಾರಣವು ತಾಯಿ ತಂದೆಗಳಿಗೆ ತಿಳಿಯದ್ದರಿಂದ ಅವುಗಳ ಹೊಟ್ಟೆ ನೋಯುತ್ತಿರಬಹುದೆಂದು ಗ್ರಹಿಸಿ ಅವುಗಳಿಗೆ ಗುಟ್ಟಿಯನ್ನು ಹಾಕುತ್ತಾರೆ. ಇದರಲ್ಲಿ ವಿಶೇಷವಾಗಿ ಜಾಜೀಕಾಯಿ ಅಪ್ಪು ಮುಂತಾದ ಮಾದಕ ಪದಾರ್ಥಗಳು ಇರುವದರಿಂದ ಕೂಸುಗಳು ಅಮಲೇ

ರಿ ಬಿದ್ದು ಕೊಳ್ಳುತ್ತಪೆ. ಆದರೆ ಇದರ ಪರಿಣಾಮವೇನಾಗು
ತ್ತದೆಂದರೆ:—ದಿನ ಬಂದಕ್ಕೆ ಮಾದಕ ಪದಾರ್ಥಗಳ ಪ್ರಯೋ
ಗವು ಆ ಕೋಮಲವಾದ ಶರೀರದಲ್ಲಿ ಆಗುವದರಿಂದ, ಜಠ
ರಾಗ್ನಿಯು ಮಂದವಾಗುತ್ತದೆ; ಅಂದರೆ ಹಸಿವು ಕಟ್ಟು
ತ್ತಾ ಬರುತ್ತದೆ. ಪ್ರೀತಿಯಿಂದ ಉಣಿಸುವಂಥ ತಾಯಿಯು
ಮೊಲೇಹಾಲು ಆ ಕೂಸಿಗೆ ವಿಷವಾಗಿ ಹಾಲಿನಿಂದಾಗತಕ್ಕ
ಪೋಷಣವಾಗದೆ ಅಪಾಯ ಮಾತ್ರ ಆಗುತ್ತದೆ, ಶರೀರದ
ಬೆಳಿಗೆಯು ಕುಗ್ಗುತ್ತದೆ, ಯಕೃತ್ತು ಬೆಳಿಯುತ್ತದೆ. ಈ
ಯಕೃತ್ತಿನ ಬೆಳಿಗೆಯು ಮಂದಗತಿಯಿಂದ ಸಾಗುತ್ತಿರುವ
ದರಿಂದ ಅದು ನಮ್ಮ ಲಕ್ಷಕ್ಕೆ ಬರುವದಿಲ್ಲ. ಅದು ಬೆಳೆದ
ಮೇಲೆ ನಾವು ಆ ಕೂಸನ್ನು ವೈದ್ಯರ ಬಳಿಗೆ ಬಯ್ಯುತ್ತೇವೆ. ಆಮೇಲೆ ವೈದ್ಯನಾದರೂ ಮಾಡುವದೇನು?
ಸೃಷ್ಟಿ ಕ್ರಮವನ್ನು ಉಲ್ಲಂಘಿಸುವದು ಅವನಿಂದಾಗುವ
ದೋ? ದೀರ್ಘಕಾಲದ ವಿಕಾರವು ಸುಸಾಧ್ಯವೋ? ಈ
ಮೇರೆಗೆ ಇಡಿ ಶರೀರದ ಯಂತ್ರವು ಕೆಟ್ಟು, ಕಟ್ಟಕಡೆಗೆ
ಶರೀರವು ನಿಸ್ತೇಜವಾಗಿ ಅದಕ್ಕೆ ಉದರದ ಭಾವನೆಯಾ
ಗುತ್ತದೆ; ಅಂದರೆ ಉದರದಲ್ಲಿ ಜಲ ಸಂಚಯವಾಗಿ, ಆದ
ರಿಂದಲೇ ಆ ಕೂಸು ಕೈಬಿಡುತ್ತದೆ. ಬಿಟವಾಗಿ ನೋ
ಡಿದರೆ ಆ ಸಂಚಯವು ನೀರಿನದಲ್ಲ; ಕೆಟ್ಟಂಥ ಪೋಷಕ
ರಸದ್ದು. ವಿಕಾರವಾದಾಗ ಶರೀರದೊಳಗಿನ ಪೋಷಕ ರಸದ
ಬಂದು ಮುಖ್ಯಾಂಶವು ರಕ್ತದಿಂದ ಬೇರೆಯಾಗಿ ಕೂಡ
ಬೀಳುತ್ತದೆ; ಅದೇ ರೋಗವು. ಈಮೇರಿಗೆ ಪೋಷಕ
ಅನ್ನವೇ ಜೀವಕ್ಕೆ ಮೂಲವಾಗುತ್ತದೆ. ಇದು ಅಜ್ಞಾನದ
ಪರಿಣಾಮವು. ಎಷ್ಟೋ ಹಳ್ಳಿಗಳೊಳಗಿನ ಕೂಲಿ ಕುಂಬಳ
ಮಾಡಿ ಹೊಟ್ಟೆ ತುಂಬಿಕೊಳ್ಳುವಂಥ ಹೆಂಗಸರು ತಮ್ಮ
ಹೊಟ್ಟೆಗಾಗಿ ಮನೆ ಬಿಟ್ಟು ಹೋಗುವಾಗ್ಗೆ, ಹಸುಗೂಸುಗ
ಳಿಗೆ ಅಫೂ ಹಾಕಿ ಅವುಗಳನ್ನು ಮಲಗಿಸಿ ಹೋಗುವ

ಸಂಪ್ರದಾಯ ಉಂಟು. ಈ ಸಂಪ್ರದಾಯವು ಕೇವಲ ಅಜ್ಞಾನ ಮೂಲಕವಾದಾಗ್ಯೂ ಅಪಾಯಕರವಾಗಿರುತ್ತದೆ. ತಾಯಂದಿರು ತಮ್ಮ ಮಕ್ಕಳ ಸುಖದ ಸಲುವಾಗಿ ಮಾಡಿದ ಆಲೋಚನೆಯು ಅವುಗಳ ಜೀವನಾಶಕ್ಕೆ ಕಾರಣವಾಗುತ್ತದೆ. ಇದೆಷ್ಟು ದುರ್ದೈವವು? ಬಹ್ಮೋಮ್ಮೆ ಈ ಆವಿಚಾರದ ಕೃತ್ಯದಿಂದ ಹುಡುಗರು ಕಣ್ಣು ಕಳಕೊಂಡು ಪರಾಧೀನರಾಗಿ ಸಂಕಟದಿಂದ ಕಾಲಕಳೆಯಬೇಕಾಗುತ್ತದೆ. ಈ ಮಾತು ಎಲ್ಲ ಜನರಿಗೆ ತಿಳಿದರೆ ಎಷ್ಟು ಹಿತವಾಗುವದು? ಆದಕ್ಕರಿಂದ ಪ್ರತಿಯೊಬ್ಬನು ಈ ಮಾತು ತನ್ನ ದೇಶಬಂಧುಗಳಿಗೂ ದೇಶ ಭಗಿನಿಯರಿಗೂ ತಿಳಿಸುವದು ಆವಶ್ಯಕವಿದೆ.

(ಮುಂದಕ್ಕೆ ಸಾಗಲಿದೆ.)

METHODS OF TEACHING.

ಕಲಿಸುವ ಪದ್ಧತಿಗಳು.

WRITING.

ಲೇಖನ.

(ಸೇ ಪುಟದಿಂದ ಮುಂದೆ ಸಾಗಿದ್ದು.)

ಕೆಲವರು ಪುಸ್ತಿಗಳನ್ನು ಪಾಟಿಯ ಮೇಲೆ ಬರಿಸಬೇಕೆಂದು ಪ್ರತಿಪಾದಿಸುತ್ತಾರೆ. ಆದರೆ ಇದು ಆರೋಗ್ಯಶಾಸ್ತ್ರಕ್ಕೂ ದೃಷ್ಟಿಶಾಸ್ತ್ರಕ್ಕೂ ಅಸಮ್ಮತವಾದ ಸಂಗತಿಯು. ಪಾಟಿಗಳು ಮಲಿನವಾಗಿಯೂ ಹುರುಬರಕಾಗಿಯೂ ಇರುವದಲ್ಲದೆ ಅವುಗಳ ಮೇಲೆ ಬರಿಸುವದರಿಂದ ಗದ್ದಲವೂ ಸಪ್ಪಳವೂ ಬಹಳವಾಗುತ್ತವೆ. ಪಾಟಿಗಳನ್ನು ಉಪಯೋಗಿಸುವದರಿಂದ ಮಲಿನತನವೂ ಸೋಮಾರಿತನವೂ ಬೆಳೆಯುತ್ತವೆ, ಮತ್ತು ಕೆಲವು ದುರ್ಗುಣಗಳು ಸಹ ವಿದ್ಯಾರ್ಥಿಗಳಿಗೆ ಹತ್ತುತ್ತವೆ. ಕಾಗದಕ್ಕೆ ಪಾಟಿಗಿಂತ ಹೆಚ್ಚು ಖರ್ಚು

ಕತ್ತುತ್ತದೆ; ಅವರಿ ಇದರಿಂದ ಲಾಭಗಳು ಹಲವು ಉಂ
ಟು. ಓರಣ, ಸ್ವಚ್ಛತನ, ಸತ್ಯವಂತಿಕೆ, ಆರೋಗ್ಯ,
ವ್ಯವಸ್ಥೆ ಮುಂತಾದ ಗುಣಗಳು ವಿದ್ಯಾರ್ಥಿಗಳಲ್ಲಿ ಬೆಳೆ
ಯುತ್ತವೆ. ಈ ಲಾಭಗಳನ್ನು ವಿದ್ಯಾರ್ಥಿಗಳ ತಾಯಿತಂ
ದೆಗಳಿಗೆ ತಿಳುಹಿಸಿಕೊಟ್ಟರೆ ಅವರು ಈ ಖರ್ಚನ್ನು ಕೊ
ಡಲಿಕ್ಕೆ ಒಡಂಬಡುವರು. ಅವರು ಒಡಂಬಡುವ ತನಕ
ಪಾಠಗಳನ್ನೇ ಉಪಯೋಗಿಸುವ ಪ್ರಸಂಗವಲ್ಲಿ ಬಿಳಿಯ ಹಾ
ಳೆಗಳನ್ನು ಕೊಡಬೇಕು. ಕರಿಯ ಪಾಟಿಗಳನ್ನು ಸರ್ವ
ಥಾ ಕೊಡಬಾರದು. ಅವು ನುಣುಪಾಗಿಯೂ ಬರೆದ ಕೂ
ಡಲೆ ಅಕ್ಷರಗಳು ಸ್ಪಷ್ಟವಾಗಿ ಮೂಡುವಂಥವಾಗಿಯೂ,
ಕ್ಕ ಆಕಾರದವಾಗಿಯೂ ಗಟ್ಟಿಯಾದ (ಮೂಲೆಯಲ್ಲಿ ಬಿಚ್ಚಿ
ದ ಹಾಗೆ) ಕಟ್ಟುಗಳುಳ್ಳಂಥವುಗಳಾಗಿಯೂ, ಬಂದು ಮಗ್ಗ
ುಗೆ ರೂಲು ಹಾಕಿದವುಗಳಾಗಿಯೂ ಇರಬೇಕು. ಹೆನ್ನಿ
ಲುಗಳಾವರೂ ಕಠಿಣವೂ ಗಿಡ್ಡನೆವೂ ಒಹಳ ಗಡುತರವೂ
ಒಹಳ ನೀರವೂ ಇರಬಾರದು.

ಕಾಗದ—ಕಾಗದಗಳು ಬೆಳ್ಳಗಾಗಿಯೂ, ನುಣುಪಾಗಿ
ಯೂ, ಫುಲಸ್ಕೇಪ ಕಾಗದದಷ್ಟು ದಪ್ಪಾಗಿಯೂ ಇರಬೇ
ಕು. ಬಣ್ಣದ ಕಾಗದಗಳೂ ತೀರ ತೆಳ್ಳನ್ನ ಕಾಗದಗಳೂ,
ಮಸಿ ಬಡಿಯುವಂಥ ದಪ್ಪನ್ನ ಕಾಗದಗಳೂ ಲೇಖನಾಭ್ಯಾ
ಸಕ್ಕೆ ಪ್ರಯೋಜನಕರವಾದವುಗಳಲ್ಲ. ಬಿಡಿ ಕಾಗದಗಳಿ
ಗಿಂತ ಕಟ್ಟಿದ ಪುಸ್ತಕಗಳು ಲೇಖನಾಭ್ಯಾಸಕ್ಕೆ ಒಹಳ
ಪ್ರಯೋಜನಕರವಾಗಿರುತ್ತವೆಂಬ ಮಾತು ಮಾಸ್ತರ ಜನರ
ನಿವರ್ತನಕ್ಕೆ ಬಂದಿರಬಹುದು; ಆದರೆ ಮುಖಪಂಕ್ತಿಗಳು
ಳ್ಳ ಪುಸ್ತಕಗಳಿರಬೇಕೋ, ಸಾದಾ ಪುಸ್ತಕಗಳಿರಬೇಕೋ
ಎಂಬುಬಗ್ಗೆ ಮತಭೇದ ಹುಟ್ಟುವದು. ಪಾಶ್ಚಿ ಮಾತ್ಯ ರಾಷ್ಟ್ರ

ಗಳ ಕೆಲವು ವಿದ್ವಾಂಸರು ಸಾದಾ ಪುಸ್ತಕಗಳಿರಬೇಕೆಂತ ವಾದಿಸುವದಲ್ಲದೆ ಈ ಪದ್ಧತಿಯಲ್ಲಿ ಕೆಳಗೆ ಬರೆದ ಮೂರು ಗುಣಗಳಿರುತ್ತವೆಂದು ಪ್ರತಿವಾದಿಸುವರು.

೧. ಎಲ್ಲಹುಡಗರು ಬಂದೇಮಾದರಿಯನ್ನು ಬರೆಯುವರು.

೨. ಗೈರಹಾಜರಾದ ಹುಡುಗರಿಗೆ ಹಿಂದಿನ ಕಾಪಿಗಳನ್ನು ಬರೆಯುವ ಅವಶ್ಯ ಬೀಳುವದಿಲ್ಲ.

೩. ಶಾಲೆಗೆ ತಪ್ಪದೆ ಬರುವವರೂ ಗೈರಹಾಜರು ಆದವರೂ ಹಿಂದು ಮುಂದು ಆಗುವದಿಲ್ಲ.

ಆದರೆ ಇತ್ತಿತ್ತಲಾಗೆ ಈ ವಿಷಯವನ್ನು ಕುರಿತು ವಿಚಾರ ಮಾಡಿ ಮಾಡಿದಹಾಗೆ ಅದರಲ್ಲಿ ಕೆಳಗೆ ಬರೆದ ದೋಷಗಳು ವ್ಯಕ್ತವಾಗಿ ಕಂಡುಬಂದವು. ಅವು ಯಾವವೆಂದರೆ:—

೧. ಅನುಕರಣಕ್ಕಾಗಿ ಬರೆದ ಮಾದರಿಗಳು ಪೂರ್ಣವಾಗಿರುವದು ಅಪರೂಪ.

೨. ಈ ಮಾದರಿಗಳು ಬಂದೇ ಸವನೆ ಇರದೆ ಬೀದು ದಿವಸ ಬಂದು ಪ್ರಕಾರದವಾದರೆ ಮತ್ತೊಂದು ದಿವಸ ಮತ್ತೊಂದು ಪ್ರಕಾರದವಾಗಿ ವಿದ್ಯಾರ್ಥಿಗಳ ಕೆಲಸಕ್ಕೆ ಬರಲಾರವು.

೩. ಈ ಮಾದರಿಗಳಲ್ಲಿ ಕಾಠಿಣ್ಯ ಸೌಯ್ಯಾನುಕ್ರಮವು ಉಳಿಯಲಾರದು.

೪. ಈ ಮಾದರಿಗಳನ್ನು ಬರೆಯುವ ತನಕ ಮಾತ್ರ (ಅಂದರೆ ತಾಸು ದೀಡತಾಸು ಮಾತ್ರ) ಕರಿಯ ಹಲಿಗೆಯಮೇಲೆ ಇಟ್ಟು ಬಳಿಕ ಅಳಿಸುವರು. ಆದ ದರಿಂದ ಅವು ವಿದ್ಯಾರ್ಥಿಗಳಿಗೆ ಬೇಕುಬೇಕಾದಾಗ್ಗೆ ನೋಡಲಿಕ್ಕೆ ಸಿಗಲಾರವು.

೫. ಈ ಮಾದರಿಗಳಲ್ಲಿ ಸುಲಭಾಕ್ಷರಗಳೂ ಕಠಿಣಾಕ್ಷರಗಳೂ ಕ್ರಮವಿಲ್ಲದೆ ಸೇರಿರುವದರಿಂದ ವಿದ್ಯಾರ್ಥಿಗಳ ಉತ್ಸಾಹವು ನೆಲೆಗೊಳ್ಳಲಾರದು.

೬. ಮುಂದದೃಷ್ಟಿಯ ವಿದ್ಯಾರ್ಥಿಗಳಿಗೆ ಅವುಗಳಿಂದ ಪ್ರಯೋಜನವಾಗಲಾರದು.

೭. ಈ ಮೂದರಿಗಳನ್ನು ಬರೆಯುವದರಲ್ಲಿ ಮೊಸ್ತರನ ಹೊತ್ತು ವೆಚ್ಚವಾಗುವದಲ್ಲದೆ ಈ ನಿಷ್ಕಾರಣವಾದ ಶ್ರಮದಿಂದ ಅವನ ಹುರುಪು ಕಡಿಮೆಯಾಗುವದು.

೮. ಮೊಸ್ತರನು ಈ ಮೂದರಿಗಳನ್ನು ಬರೆಯುವ ಕಾಲಕ್ಕೆ ವಿದ್ಯಾರ್ಥಿಗಳು ಕೆಲಸವಿಲ್ಲದೆ ವ್ಯರ್ಥವಾಗಿ ಹೊತ್ತು ಕಳೆಯಬೇಕಾಗುತ್ತದೆ.

೯. ಈ ಮೂದರಿಗಳನ್ನು ಬರೆಯುವ ಕ್ರಮವೂ ವಿದ್ಯಾರ್ಥಿಗಳು ಅವುಗಳನ್ನು ಅನುಕರಿಸುವ ಕ್ರಮವೂ ಭಿನ್ನವಾದ ಕಾರಣ, ಈ ಮೂದರಿಗಳಿಂದ ಅನುಕರಣಕ್ಕೆ ಎಷ್ಟು ಮಾತ್ರವೂ ಸಹಾಯವಾಗಲಾರದು.

೧೦. ಈ ಮೂದರಿಗಳಿಂದ ವಿದ್ಯಾರ್ಥಿಗಳಲ್ಲಿ ಹುರುಪು ಹುಟ್ಟಲಾರದು.

ಈ ದೋಷಗಳನ್ನೆಲ್ಲ ಮನಸಿನಲ್ಲಿ ತೂಗಿ ನೋಡಿದರೆ ವಿಚಾರಪೂರ್ವಕವಾಗಿ ಬರೆದ ಮುಖಪಂಕ್ತಿಗಳುಳ್ಳ ಕಾಪಿ ಪುಸ್ತಕಗಳೇ ಪ್ರಯೋಜನಕರವಾದವುಗಳೆಂದು ವ್ಯಕ್ತವಾಗುವದು. ಈ ಪುಸ್ತಕಗಳು ವಿದ್ಯಾರ್ಥಿಗಳ ವಯಸ್ಸಿನ ಮಾನದಂತೆ ೫" × ೪" ನಿಂದ ೧೦" × ೮" ನಷ್ಟು ಇರಬಹುದು.

ಸವ್ಯಕ್ಕೆ ನಮ್ಮ ದೇಶದಲ್ಲಿ ವಿದ್ಯಾರ್ಥಿಗಳು ಕಿತ್ತೆಯನ್ನು ಉಪಯೋಗಿಸುತ್ತಾರೆ. ಈ ಪದ್ಧತಿಯು ಎಷ್ಟು ಮಾತ್ರವೂ ಸರಿಯಾದದ್ದಲ್ಲ. ಇದರಲ್ಲಿ ತಕ್ಕ ಏರ್ಪಾಡು ಆಗುವದು ಅವಶ್ಯವಿರುತ್ತದೆ. ಕೆಲವು ಶಾಲೆಗಳಲ್ಲಿ ಕಿತ್ತೆಯನ್ನು ಎಡದೊಡೆಯ ಪೀಲಿಟ್ಟು ಬರೆಯುತ್ತಾರೆ. ಈ ಪದ್ಧತಿಯಿಂದ ಲೇಖನಾಭ್ಯಾಸಕ್ಕೆ ಸಹಾಯವಾಗುವದಂತು ಒತ್ತಟ್ಟಿಗಿರಲಿ ಕಣ್ಣಿಗೆ ಮಾತ್ರ ಅಪಾಯ ಸಂಭವಿಸುತ್ತದೆ.

ಕರಿಯು ಹಲಿಗೆಯಮೇಲೆ ಬರೆದ ಮೂದರಿಗಳು ಕೇವಲ ನಿಷ್ಪ್ರಯೋಜನವಾಗಿರುತ್ತವೆಂದು ನಮ್ಮ ಅಭಿಪ್ರಾಯವಿಲ್ಲ; ಆದರೆ ವಿದ್ಯಾರ್ಥಿಗಳು ಬರೆದದ್ದರಲ್ಲಿ ಆದ ದೋಷಗಳನ್ನು ತೋರಿಸಲಿಕ್ಕೆ ಕರಿಯ ಹಲಿಗೆಯಷ್ಟು ಉಪಯೋಗವುಳ್ಳ ಸಾಧನವು ಮತ್ತೊಂದಿಲ್ಲ. ಸಾರಾಂಶ ಬರೆಯುವದಕ್ಕಿಂತ ಪೂರ್ವದಲ್ಲಿ ಕರಿಯ ಹಲಿಗೆಯಿಂದ ಸ್ವಲ್ಪ ಪ್ರಯೋಜನವಾಗುವದು, ಆದರೆ ಪುಸ್ತಿಗಳನ್ನು ಬರೆದ ಬಳಿಕ ಕರಿಯ ಹಲಿಗೆಯನ್ನು ಉಪಯೋಗಿಸಿದರೆ ಮಿತಿಮೀರಿ ಲಾಭವಾಗುವದು.

ಮಸಿ—ಬಳ್ಳಿ ಕಪ್ಪಾದ ಮಸಿಯಿಂದ ವಿದ್ಯಾರ್ಥಿಗಳು ಬರೆಯಬೇಕು. ಅದರಿಂದ ಅವರು ಬರೆದ ಅಕ್ಷರಗಳು ಎದ್ದು ಕಾಣಿಸುವದಲ್ಲದೆ, ಆ ಅಕ್ಷರಗಳಿಗೂ ಅವರ ಕಣ್ಣು ಮುಂದಿರುವ ಮೂದರಿಯ ಅಕ್ಷರಗಳಿಗೂ ಇರುವ ಭೇದವು ವ್ಯಕ್ತವಾಗಿ ತೋರುವದು; ಮತ್ತು ಲೇಖನಾಭ್ಯಾಸದಲ್ಲಿ ವಿದ್ಯಾರ್ಥಿಗಳ ಗತಿಯು ಎಷ್ಟಾಯಿತೆಂಬದು ಅನಾಯಾಸವಾಗಿ ತಿಳಿಯುವದು. ಬರೇ ಸರಿಯ ಮಸಿಯು (ಅಂದರೆ ಬಣ್ಣವಿಲ್ಲದ ಮಸಿಯು) ಅಥವಾ ಅಳಲೀ ಕಾಯಿಯ ಮಸಿ ಮುಂತಾದ ರಸಾಯನ ಮಸಿಗಳು (ಅಂದರೆ ಬರೆದಮೇಲೆ ತುಸು ಹೊತ್ತಿನಲ್ಲಿ ಬಣ್ಣ ಬರುವ ಮಸಿಗಳು) ವಿದ್ಯಾರ್ಥಿಗಳ ಕೆಲಸದವಲ್ಲ.

ಒತ್ತುಕಾಗದ—ಬರೆದದ್ದನ್ನು ಬಣಗಿಸುವ ಪ್ರಸಂಗವು ಮೇಲಿಂದಮೇಲೆ ಬರುತ್ತದೆ. ಅದಕ್ಕಾಗಿ ಕೆಲವರು ಉಸುಕು ಹಾಕುತ್ತಾರೆ. ಉಸುಕು ಹಾಕಿದ ಕಾಗದದ ಬೆನ್ನಿನ ಮೇಲೆ ಬರೆಯುವದು ಕಠಿಣವಾಗುತ್ತದೆ. ಉಸುಕು ಹಾಕುವದರಿಂದ ಕಾಗದವು ತಗ್ಗುದಿನ್ನೆಯಾಗಿ ಬರೆಯಲಿಕ್ಕೆ ಅಡ್ಡಿಯಾಗುತ್ತದೆ. ಕೆಲವರಂತು ನೆಲಕೆದರಿ ಮಣ್ಣು ಹಾ

ಕುತ್ತಾರೆ. ಇದರಿಂದ ನೆಲ ಕೆಡುವದಲ್ಲದೆ ಕೈಗಳೂ ಪುಸ್ತಿ
ನುಪುಸ್ತಕಗಳೂ ಮಾಸುತ್ತವೆ. ಮಲೀನತನದ ಮತ್ತು
ಸೋಮಾರಿತನದ ಚಟಗಳು ವಿದ್ಯಾರ್ಥಿಗಳಿಗೆ ಹತ್ತುತ್ತವೆ.
ಕಾರಣ ಪ್ರತಿಯೊಬ್ಬ ವಿದ್ಯಾರ್ಥಿಯು ಹತ್ತರ ಕೆಂಪು ಬ
ಟ್ಟ ಕಾಗದ ಇರಲಿಕ್ಕೆ ಬೇಕೆಂದು ಕಟ್ಟು ಮಾಡುವದು ವಿಹಿ
ತವು. ಈ ಬತ್ತು ಕಾಗದದಿಂದ ಸ್ವಚ್ಛತನ ಕಾದುಕೊಳ್ಳಲ್ಪ
ಡುವದಲ್ಲದೆ ಹೊತ್ತು ಉಳಿದು ಲೇಖನಾಭ್ಯಾಸಕ್ಕೆ ತಕ್ಕಷ್ಟು
ಸಹಾಯವಾಗುವದು.

ಸ್ಪೊಂಜ ಅಥವಾ ಒದ್ದೆಯ ಅರಿವೆ—ಬರಹದ ಕೆಲಸ ಮು
ಗಿದಬಳಿಕ ತಮ್ಮ ಲೆಕ್ಕಣಿಕೆಗಳನ್ನು ವಿದ್ಯಾರ್ಥಿಗಳು ಬರಿಸಿ
ಇಡಲಿಕ್ಕೆ ಬೇಕು. ಲೆಕ್ಕಣಿಕೆಗಳನ್ನು ಬರಿಸಿ ಇಡದಿದ್ದರೆ,
ಅವು ತೀವ್ರವಾಗಿ ಕೆಟ್ಟು ಹೋಗುವವು. ಗಂಟಿಗೆ ಬರಿಸಿ
ಟ್ಟರೆ, ಗಂಟಿನ ಅರಿವೆ ಮಾಸುವದು. ಆದಕಾರಣ ಸ್ಪೊಂಜ
ನ್ನಾಗಲಿ ಒದ್ದೆಯ ಅರಿವೆಯನ್ನಾಗಲಿ ವಿದ್ಯಾರ್ಥಿಗಳು
ತಮ್ಮ ಹತ್ತರ ಇಟ್ಟುಕೊಳ್ಳಲಿಕ್ಕೆ ಬೇಕು. ಸಣ್ಣ ಹುಡುಗ
ರಿಗೆ ಯಾವತ್ತು ಸಾಹಿತ್ಯಗಳನ್ನು ಪೂರೈಸುವದರಿಂದ ಅವ
ರಲ್ಲಿ ನಿಯಮಿತತನವೂ ಚುರುಕುತನವೂ ಸ್ವಚ್ಛತನವೂ
ಕಾರ್ಯ ಪ್ರೀತಿ ಮುಂತಾದ ಗುಣಗಳೂ ನೆಲೆಗೊಳ್ಳುವವು.
ಇದಕಾರಣ ಮಾಸ್ತರರು ಈ ಬಗ್ಗೆ ಮನಮುಟ್ಟಿ ಶ್ರಮವ
ನ್ನು ಲೆಕ್ಕಿಸದೆ ಯತ್ನಿಸಬೇಕು.

(ಮುಂದಕ್ಕೆ ಸಾಗುವದು.)

DEPARTMENTAL NOTICES.

ನೋಟೀಸು.

ದಕ್ಷಿಣ ಭಾಗದೊಳಗಿನ ಎಲ್ಲ ಮಾಸ್ತರರಿಗೂ ಅಶಿಸ್ಟಂ
ದ ಮಾಸ್ತರರಿಗೂ ತಿಳಿಸುವದೇನೆಂದರೆ:—

ವಿಜಾಪುರ ತಾಲೂಕ ತಿಗಣಿ ಬಿದರಿ ಶಾಲೆಯ ಹಿಂದಿನ ಮಾಸ್ತರನಾದ ಹಣಮಂತ ಮಲ್ಲಾರ ಕುಲಕರ್ಣಿ ಈತನು ಮುಲ್ಕೀ ಪರೀಕ್ಷೆ ಪಾಸಾದವನೂ ತಿಂಗಳಿಗೆ ೧೦ ರೂ. ತಲಬುಳ್ಳವನೂ ಇದ್ದು, ಕಾನಡಾ ಜಿಲ್ಲೆಯ ಡಿಪ್ಯೂಟಿ ಎಜ್ಯುಕೇಶನಲ ಇನಸ್ಪೆಕ್ಟರರ ಕಡೆಗೆ ಮಾಡಿದಂಥ ಅರ್ಜಿಯಲ್ಲಿ ತಾನೂ ಬ್ಬ ಟ್ರೇನ್ಡ ಮಾಸ್ತರನೂ ತಿಂಗಳಿಗೆ ೧೫ ರೂ. ಸಂಬಳವ್ಳ ಳ್ಳವನೂ ಇರುತ್ತೇನೆಂದು ಬರೆದು ತನಗೆ ೧೭ ಅಥವಾ ೧೮ ರೂಪಾಯಿಯ ಸ್ಥಳ ಕೊಡಬೇಕೆಂದು ಬೇಡಿಕೊಂಡನು. ಇದಲ್ಲದೆ ತನ್ನ ಅರ್ಜಿಯ ಸಂಗಡ ಕಳುಹಿಸಿದಂಥ ವಿಜಾಪುರ ಡಿಪ್ಯೂಟಿ ಎಜ್ಯುಕೇಶನಲ್ ಇನಸ್ಪೆಕ್ಟರರ ಹುಕುಮಿನಲ್ಲಿ ಸಂಬಳದ ರಕಮನ್ನು ತೋರಿಸುವ ೧೦ರ ಅಂಕಿಯನ್ನು ತಿದ್ದಿ ೧೫ ಮಾಡಿದನು. ಈ ಮೇರೆಗೆ ಹುಕುಮನ್ನು ತಿದ್ದಿದ್ದರಿಂದಲೂ ಸುಳ್ಳು ಬರಪದ ಕಾರಣದಿಂದಲೂ ಆವನನ್ನು ಮೆ. ಡೈರೆಕ್ಟರ ಆಫ್ ಪಬ್ಲಿಕ್ ಇನ್ಸ್ಟ್ರಕಶನ್ ದೊರೆಗಳವರ ಹುಕುಮಿನಿಂದ ಬರತರಫು ಮಾಡಿರುತ್ತದೆ.

ಧಾರವಾಡ.
ತಾ॥ ೧೯ | ೪ | ೯೩

(Sd.) S. V. Patwardhan,
ಎಜ್ಯುಕೇಶನಲ್ ಇನಸ್ಪೆಕ್ಟರ,
ದಕ್ಷಿಣಭಾಗ.

EXCURSION TO MYSORE

ಮೈಸೂರ ಪ್ರವಾಸವು.

(೯೬ನೆಯ ಪುಟದಿಂದ ಮುಂದೆ ಸಾಗಿದ್ದು.)

ಇನ್ನು ನಾನು ಬರೆಯುವ ಪ್ರವಾಸ ವೃತ್ತದ ಆರಂಭದಲ್ಲಿ ನಾವು ನೋಡಿದ ಆ ದೇಶದ ಭಾಷೆ ಇತಿಹಾಸ, ವಿಸ್ತಾರ, ಜನಸಂಖ್ಯೆ ಮೊದಲಾದ ಸಂಗತಿಗಳನ್ನು ತಕ್ಕ ಮಟ್ಟಿಗೆ ವಿವರಿಸುವದು ಉಚಿತವೆಂದು ತೋರುತ್ತದೆ.

ನಾವು ನೋಡಿದ್ದು ಮೈಸೂರ ನಾಡು ಇದು ಕರ್ನಾಟಕದ ಬಹು ದೊಡ್ಡ ಭಾಗವು. ಇದು ಈಗ ಶ್ರೀಮನ್ಮಹಾ

ರಾಜ ಚಾಮರಾಜೇಂದ್ರ ಬಡೆಯರು ಎಂಬ ದೊರೆಗಳ ಆ ಪಳತೆಯಲ್ಲಿರುತ್ತದೆ. ಈ ದೇಶದ ಕ್ಷೇತ್ರಫಲವು ಕೊಡಗು ಸಹಿತ ೨೭೦೦೦ ಚದರಮೈಲು, ಜನಸಂಖ್ಯೆ ೬೦ ಲಕ್ಷ ಆದೆ. ಇದರ ಉತ್ತರಕ್ಕೆ ಮುಂಬಯಿ ಇಲಾಖೆಯೂ ಉಳಿದ ೩ ದಿಕ್ಕುಗಳಲ್ಲಿ ಮದ್ರಾಸ ಇಲಾಖೆಯೂ ಉಂಟು.

ಇದು ಭಾರತದಲ್ಲಿ ಹೆಸರಾದ ಬಬ್ರುವಾಹನನ ರಾಜ್ಯವಂತೆ. ಚಾಮರಾಜನಗರದ ಹತ್ತರ ಇರುವ ಹರಳುಕೋಟೆ ಎಂಬದೇ ಬಬ್ರುವಾಹನನ ರಾಜಧಾನಿಯಾದ ಮಣಿಪುರವೆಂದು ಹೇಳುತ್ತಾರೆ. ಒಮ್ಮೆ ಬಬ್ರುವಾಹನನಿಗೆ ನಿವಾತಕವಚರ ಉಪದ್ರವವಾಗಲು, ಅರ್ಜುನನು ಬಂದು ಅದನ್ನು ನಿವಾರಣೆ ಮಾಡಿದನು. ಮುಂದೆ ಆ ಊರ ರಕ್ಷಣೆಗಾಗಿ ನಾಲ್ಕೂದಿಕ್ಕಿನಲ್ಲಿ ೪ ಹನುಮಂತದೇವರನ್ನು ಸ್ಥಾಪಿಸಿದನು. ಅವು ಈಗೂ ಉಂಟು.

ಕ್ರಿ. ಪೂ. ೨೫೫ ವರ್ಷ ಅಶೋಕನು ಆಳುತ್ತಿದ್ದಾಗ ಈ ದೇಶಕ್ಕೆ ಮಹಿಷಮಂಡಲವೆಂಬ ಹೆಸರಿತ್ತೆಂದು ಶಿಲಾಲೇಖಗಳಿಂದ ತಿಳಿದದೆ. ಮುಂದೆ ಬಹುಕಾಲದವರೆಗೆ ಈ ದೇಶವು ಚೇರ, ಚೋಳ, ಪೊಮಿಸಾಲ ಎಂಬ ಅರಸರ ಕೈಕೆಳಗೆ ಇತ್ತು, ಆಮೇಲೆ ವಿಜಯನಗರದ ಅರಸರು ಇದನ್ನು ಆಕ್ರಮಿಸಿದರು. ಆಗ ರಂಗನಾಥರಾಯಲು ಎಂಬವನು ವಿಜಯನಗರದವರ ಪ್ರತಿನಿಧಿಯಾಗಿ ಆಳಿದನು. ಆದೇ ಕಾಲಕ್ಕೆ ದೇಶದಲ್ಲಿ ವೈಷ್ಣವ ಮತದ ಪ್ರಾಬಲ್ಯವಿತ್ತು ಆದದ್ದರಿಂದ ಅರಸು ಮನೆತನದವರು ಶೈವರಿದ್ದರೂ ವೈಷ್ಣವ ಮತವನ್ನು ಸ್ವೀಕರಿಸಿದರು. ಆದ ಕಾರಣ ಈಗ ಆ ಅರಸು ಮನೆತನದಲ್ಲಿ ಇಬ್ಬಗೆಯ ಮತಗಳು ನಡೆಯುತ್ತವೆ.

ಮುಂದೆ ಚಿಕ್ಕ ದೇವರಾಜನು ಕಾಸೀಖಾನನೆಂಬ ಸರದಾರನ ಮುಖಾಂತರ ಔರಂಗಜೇಬನ ಗೆಳೆತನ ಸಂಪಾದಿ

ಸಿ ಅವನಿಂದ ೧ ನನೆದನ್ನು ಪಡೆದನು. ಅವನೆ ವಂಶದವರ
ಕ್ರಿ. ಶ. ೧೭೬೦ ರ ವರೆಗೆ ಆಳಿದ ಮೇಲೆ ಹೈದರನೆಂಬ
ನಾಳ್ಯಗಾರನು ದಂಡಿನಲ್ಲಿ ಸೇರಿ ಬಲಿಷ್ಠನಾಗಿ ಸಿಂಹಾಸನವ
ನ್ನ ಹಿಡಿದುಕೊಂಡನು. ಮುಂದೆ ಹೈದರನೂ ಅತನ ಮ
ಗನಾದ ಟೀಪೂನೂ ಕ್ರಿ. ಶ. ೧೭೯೯ ರ ವರೆಗೆ ಆಳಿ
ದನು. ಆಗ ಅವರ ರಾಜಧಾನಿಯು ಕಾವೇರಿ ತೀರದಲ್ಲಿ
ರುವ ಶ್ರೀರಂಗಪಟ್ಟಣವಾಗಿತ್ತು. ಆವರ್ಷ ಇಂಗ್ಲಿಷರಿಗೂ
ಟೀಪೂನಿಗೂ ಯುದ್ಧವಾಗಲು, ಕಾಳಗದಲ್ಲಿ ಟೀಪೂ ಮಡಿ
ದನು. ಮತ್ತು ಅವನ ರಾಜ್ಯವು ಇಂಗ್ಲೀಷರ ಕೈ ಸೇರಿತು
ಆಗ ಇಂಗ್ಲೀಷರು ಮೂಲರಾಜವಂಶವನ್ನು ಮುಳುಗಿಸಬಾ
ರದೆಂದು ಕೃಷ್ಣರಾಜ ಒಡೆಯರ್ ಎಂಬವನಿಗೆ ಮೈಸೂರ ಸಿ
ಂಹಾಸನವನ್ನು ಕಟ್ಟಿದರು. ಅವನು ೧೮೬೮ ರ ವರೆಗೆ ಆಳಿದನು. ಆದ
ರೆ ಅವನು ಕಾರಭಾರದ ಕಡೆಗೆ ಲಕ್ಷ್ಯ ಕೊಡದ್ದರಿಂದ ಇಂ
ಗ್ಲಿಷ ಸರಕಾರದವರು ಕಮಿಶನರರ ಮುಖಾಂತರವಾಗಿ ರಾ
ಜ್ಯ ನಡಿಸಿದರು. ಕ್ರಿ. ಶ. ೧೮೬೪ ರಲ್ಲಿ ಕೃಷ್ಣರಾಜನು ಎ
ಲ್ಲ ರಾಜ್ಯವನ್ನು ನೀವೇ ತೆಗೆದುಕೊಳ್ಳಿರೆಂದು ಇಂಗ್ಲೀಷರಿ
ಗೆ ಹೇಳಿದನಂತೆ. ಆವರೆ ಮೇಜರ ಬೆಲ್ ಮತ್ತು ನರಸಯ್ಯ
ಎಷ್ಟಿ ಎಂಬ ರಾಜಕಾರ್ಯ ಧುರಂಧರರ ಅಶ್ರಾಂತ ಶ್ರಮದಿಂ
ದಲೂ ದೀರ್ಘ ಪ್ರಯತ್ನದಿಂದಲೂ ನಮ್ಮ ಇಂಗ್ಲಿಷ ಸರ
ಕಾರದವರ ಉದಾರಬುದ್ಧಿಯಿಂದಲೂ ಈ ರಾಜ್ಯವು ದೇಶೀ
ಶರಸನ ವಶದಲ್ಲಿ ಉಳಿಯಿತು. ಈಗಿನ ಚಾಮರಾಜೇಂದ್ರ
ಒಡೆಯರ ಜನ್ಮವು ೧೮೬೩ ರಲ್ಲಿ ಆಯಿತು. ಇವರ ದತ್ತ
ವಿಧಾನವು ೧೮೬೫ ರಲ್ಲಿ ಆಯಿತು. ಪಟ್ಟಾ-ಖಿಪೇ
ಕವು ೧೮೬೮ ರಲ್ಲಿ ಕೃಷ್ಣರಾಜರ ತರುವಾಯ ಜರಿಗಿ
ಸಲ್ಪಟ್ಟಿತು; ಮತ್ತು ಸಂಸ್ಥಾನದ ರಾಜಕಾರಭಾರವು ಇ.
ಸ್. ೧೮೮೧ ರಲ್ಲಿ ದೊರೆಯಿತು. ಇವರಿಗೆ ೩ ಮಂದಿ ಗಂ

ಡುಮಕ್ಕಳೂ ೩ ಮಂದಿ ಹೆಣ್ಣು ಮಕ್ಕಳೂ. ಅವರಲ್ಲಿ ಚಿಕ್ಕ ಪುತ್ರರಾದ ದೇವರಾಜ ಎಂಬವರು ಮೊನ್ನೆ ಮೊನ್ನೆ ಮಹಾರಾಜರು ಕಲಕತ್ತೆಗೆ ಬಿಜಯಂಗೈದಾಗ ಸ್ವರ್ಗಸ್ಥರಾದರೆಂದು ಕೇಳಿ ನಮಗೆಲ್ಲರಿಗೂ ದುಃಖವಾಗಿದೆ. ಈಗ ಮಹಾರಾಜರಿಗೆ ೫ ಮಂದಿ ಮಕ್ಕಳಿದ್ದಾರೆ.

ಈ ಸಂಸ್ಥಾನದವರು ಪ್ರತಿವರ್ಷ ಇಂಗ್ಲಿಷ ಸರಕಾರಕ್ಕೆ ೩೫ ಲಕ್ಷ ರೂ. ಕಪ್ಪಕೊಡುತ್ತಾರೆ. ಈ ಸಂಸ್ಥಾನದ ಉತ್ಪನ್ನವು ೧,೩೯,೪೫,೦೦೦ ರೂ. ಅದೆ, ವೆಚ್ಚವು ೧,೦೯,೩೫,೦೦೦ ಇರುತ್ತದೆ. ಪ್ರಸ್ತುತದ ಪ್ರವಾಸ ವೃತ್ತದ ಸಂಬಂಧದಿಂದ ಇಷ್ಟು ವಿವರಣೆಯು ಸಾಕು.

ಇನ್ನು, ಕಾಲೇಜದ ವಿದ್ಯಾರ್ಥಿಗಳಾದ ನಾವೆಲ್ಲರು ಈ ಪ್ರವಾಸವನ್ನು ಯಾಕೆ ಮಾಡಿದವು, ಅದಕ್ಕೆ ಯಾರು, ಯಾವ ಉದ್ದೇಶದಿಂದ ನೆರವಾದರು, ಎಂಬದನ್ನು ಹೇಳಿ ಬಳಿಕ ನಾನು ನೋಡಿದ ಸ್ಥಳಗಳ ವರ್ಣನೆಯನ್ನು ಬರಿಯಲಾರಂಭಿಸುತ್ತೇನೆ.

ಮನುಷ್ಯನ ಬುದ್ಧಿಯು ವಿಕಸಿತವಾಗಿ ಅತನು ವ್ಯವಹಾರಕ್ಕೆ ತಕ್ಕವನಾಗಬೇಕಾದರೆ, ಅತನಿಗೆ ಸತ್ ಶಿಕ್ಷಣವು ದೊರೆಯುವದು ಅವಶ್ಯವದೆ. ಶಿಕ್ಷಣವೆಂದರೆ ಬರೀ ಪುಸ್ತಕಗಳನ್ನು ಓದಿ ಜ್ಞಾನ ಮಾಡಿಕೊಳ್ಳುವದು ಇಷ್ಟೇ ಅಲ್ಲ, ವ್ಯವಹಾರದಲ್ಲಿ ಬವಗುವ ಯಾವತ್ತು ಸಂಗತಿಗಳ ಜ್ಞಾನ ಮಾಡಿಕೊಳ್ಳುವದೂ ಶಿಕ್ಷಣವೆನಿಸುವದು. ಈ ಶಿಕ್ಷಣಕ್ಕೆ ಎಲ್ಲ ಇಂದ್ರಿಯಗಳಲ್ಲಿ ನೇತ್ರವೇ ಮೇಲಾದ ಸಾಧನವಾಗಿದೆ. ಈ ಬಗೆಯ ವ್ಯವಹಾರ ಶಿಕ್ಷಣವು ತಮ್ಮ ವಿದ್ಯಾರ್ಥಿಗಳಿಗೆ ದೊರೆಯಬೇಕೆಂದು ನಮ್ಮ ಕಾಲೇಜದ ಗುರುಗಳು ಯಾವಾಗಲೂ ಯತ್ನಿಸುತ್ತಿರುವರು. ಈ ಪ್ರಯತ್ನಕ್ಕೆ ಸರಿಯಾಗಿ ಅವರು ಈಗ ೩ ವರ್ಷಗಳ ಹಿಂದೆ ಶಿಷ್ಯವರ್ಗದೊಂದಿಗೆ ಕೊಲ್ಹಾ

ಪುರದ ಪ್ರವಾಸ ಮಾಡಿ, ಪ್ರವಾಸದಲ್ಲಿ ತಟ್ಟುವ ತೊಂದರೆಗಳನ್ನೂ ಅವನ್ನು ನೀಗುವ ಉಪಾಯಗಳನ್ನೂ ದೊಡ್ಡ ಜನರ ಆಶ್ರಯವಿದ್ದರೆ ಆಗುವ ಲಾಭಗಳನ್ನೂ ಸಂಘದಿಂದ ಆಗುವ ಮಹತ್ಕಾರ್ಯಗಳನ್ನೂ ಪರರಿಗೆ ಮಾಡಿದ ಸಹಾಯವು ವ್ಯರ್ಥವಾಗುವದಿಲ್ಲೆಂಬದನ್ನೂ ಪುಸ್ತಕದಲ್ಲಿದ್ದ ಸಂಗತಿಗಳ ಪ್ರತ್ಯಕ್ಷ ಜ್ಞಾನವನ್ನೂ ಪರದೇಶವರ ನಡೆನುಡಿಗಳ ಜ್ಞಾನವನ್ನೂ ನಮ್ಮ ಮಿತ್ರರಿಗೆ ದೊರಕಿಸಿ ಕೊಟ್ಟರು. ಯಾಕಂದರೆ ನಮಗೆ ಗುರುಗಳಿಂದ ವ್ಯವಹಾರ ಶಿಕ್ಷಣವು ದೊರೆಯುವಂತೆ, ನಾವಾವರೂ ನಮ್ಮ ಶಿಷ್ಯರಿಗೆ ವ್ಯವಹಾರ ಶಿಕ್ಷಣವನ್ನು ಕೊಡಬೇಕೆಂಬದೇ ಇದರ ಮುಖ್ಯ ಉದ್ದೇಶವಿರುತ್ತದೆ. ಈ ಉದ್ದೇಶವನ್ನು ಅನುಲಕ್ಷಿಸಿ ಮೈಸೂರ ಪ್ರವಾಸದ ಲಾಭವನ್ನು ದೊರಕಿಸಿ ಕೊಡುವದಕ್ಕಾಗಿ ಕಳೆದ ನಾತಾಳಿಯ ಸೂಟಿಯ ಪೂರ್ವದಲ್ಲಿ ನಮಗೆ ಉಪದೇಶಿಸಿದರು. ಅವಕ್ಕೆ ಎಷ್ಟೋ ಜನರು ಪ್ರವಾಸಕ್ಕೆ ಬರುವ ಮನಸಿದ್ದರೂ ಹಣವ ಕೊರತೆಗಾಗಿ ಬಪ್ಪಲಿಲ್ಲ. ಕಡೆಗೆ ನಮ್ಮ ಗುರುಗಳು ಅವರಿಗೆ ಹಣವ ಸಹಾಯವನ್ನು ಮಾಡಿದ್ದರಿಂದ ಒನೆಯ ಖಿನೆಯ ವರ್ಷವ ವಿದ್ಯಾರ್ಥಿಗಳಲ್ಲಿ ಸುಮಾರು ೬೦ ಜನರು ಪ್ರಯಾಣಕ್ಕೆ ಬಪ್ಪಿದರು. ಇದಲ್ಲದೆ ನಮ್ಮ ಗುರುಗಳು ಈ ಪ್ರಯಾಣವ ಸಂಗತಿಯೆನ್ನು ಧಾರವಾಡ ಶಹರವ ಶಾಲಾ ಗುರುಗಳಿಗೂ, ಹಲವು ಬೇರೂರ ಶಾಲಾ ಗುರುಗಳಿಗೂ ತಿಳಿಸಿದ್ದರು. ಅವರಲ್ಲಿ ಧಾರವಾಡವ ಅಡಬಡ್ಡಿ ಎಂಬವರೂ, ಬೇರೂರ ಶಾಲಾಗುರುಗಳಲ್ಲಿ ವಿರಕ್ತಮಠ, ಸ್ವಾ. ಗೋ. ಕುಲಕರ್ಣಿ, ತಲವಾಯಿ, ದೀಕ್ಷಿತ, ಎಂಬವರೂ ಈ ಪ್ರಯಾಣಕ್ಕೆ ಬಪ್ಪಿದರು.

ನಮ್ಮ ಗುರುಗಳು ತಾವು ಒಬ್ಬರೇ ಹೋಗಿದ್ದರೆ ಏನೂ ತೊಂದರೆಯಾಗುತ್ತಿದ್ದಿಲ್ಲ, ಆದರೆ ನಮ್ಮೆಲ್ಲರಿಗೂ ಪ್ರವಾಸದ ಅನುಭವವಾಗಬೇಕೆಂದು, ತಮ್ಮೊಡನೆ ನಮ್ಮನ್ನು

ಕರಕೊಂಡು ಹೋಗಲಿಚ್ಛಿಸಿ, ದ್ರವ್ಯಾನುಕೂಲತೆಯನ್ನು ಸಹ ಮಾಡಿಕೊಟ್ಟರು. ಇದರಿಂದ ಅವರ ಪರಹಿತಾಪೇಕ್ಷೆಯೂ ವಿದ್ಯಾರ್ಥಿಗಳ ಮೇಲಿರುವ ನಿಜವಾದ ವಾತ್ಸಲ್ಯವೂ ವ್ಯಕ್ತವಾಗುತ್ತವೆ. ನಾವು ಈ ದೀರ್ಘ ಪ್ರಯಾಣದ ಬಟ್ಟೆ ವೆಚ್ಚವು ಬಹಳ ಹೆಚ್ಚಾದೀತೆಂದು ನೆನಿಸಿದ್ದಿವು. ಆದರೆ ನಮ್ಮ ಗುರುಗಳ ಪ್ರಯತ್ನದಿಂದ ಉಗಿ ಬಂಡಿಯ ವೆಚ್ಚವು ಹೋಗಿ ಬರುವವಕ್ಕೆ ಕೂಡಿ ೧॥ ಪಾಲು ಮಾಡಲ್ಪಟ್ಟತು. ಆದದ್ದರಿಂದ ಪ್ರಯಾಣದ ವೆಚ್ಚವು ೩ನೆಯ ತರಗತಿಯ ಟಿಕಿಟನವರಿಗೆ ೯೯೦ ಮತ್ತು ೨ನೆಯ ತರಗತಿಯ ಟಿಕಿಟನವರಿಗೆ ೧೧೫೫ ಬಿತ್ತು. ಈ ವೆಚ್ಚವು ಪ್ರವಾಸದ ಮಾನದಿಂದ ತೀರಕಡಿಮೆಯೆನ್ನಲಿಕ್ಕೆ ಅಡ್ಡಿ ಇಲ್ಲ.

DHARWAR TRAINING COLLEGE CERTIFI CATE EXAMINATION—1892.

ಧಾರವಾಡ ಟ್ರೇನಿಂಗ ಕಾಲೇಜದ ಸರ್ಟಿಫಿಕೇಟ ಪರೀಕ್ಷೆಯ ಪ್ರಶ್ನಗಳು. ೧೮೯೨.

ಇತಿಹಾಸ ಭೂಗೋಲ.

೨ನೇ ವರ್ಷ.

ಬಲಕ್ಕೆ ಬರೆದ ಅಂಕಿಗಳು ಪ್ರಶ್ನಗಳ ಪೂರ್ಣ ಗುಣಗಳು.

೧. ಗ್ರೆಟಬ್ರಿಟನ್ನಿನ ಈಗಿನ ರಾಜ್ಯಪದ್ಧತಿಯು ಯಾವ ಪ್ರಕಾರದ್ದಿರುತ್ತದೆ. ಈ ಸ್ಥಿತಿಯನ್ನು ಅದು ಯಾವ ಕ್ರಮದಿಂದ ಹೊಂದಿತ್ತು ? ಅದಕ್ಕಾಗಿ ಜನರು ಮಾಡಿದ ಪ್ರಯತ್ನಗಳನ್ನೂ ಸರಕಾರದಿಂದ ಮಾಡಲ್ಪಟ್ಟ ಕಟ್ಟಳೆಗಳನ್ನೂ ಸವಿಸ್ತಾರಾನುಕ್ರಮದಿಂದ ವಿವರಿಸಿರಿ. ೧೦

೨. ಕೆಳಗೆ ಬರೆದವರಲ್ಲಿ ಮೂವರ ಚರಿತ್ರವನ್ನು ಬರೆಯಿರಿ:—

ವಿಜಯೀ ವಿಲಿಯಮ್ಸ, ಜಾನವಿಕ್ಲಿಫ, ಸ್ಕಾಟ್‌ಲಂಡದ ರಾಣಿಯಾದ ಮೇರಿ, ಜೋನ್ ಆಫ್ ಆರ್ಕ, ಬೇಕನ್, ಸ್ಪಾನ್ಸಿಸ್‌ಡ್ರೇಕ, ೨ನೇ ಜೇಮ್ಸಗಾರೆ, ಮತ್ತು ನೆಲ್ಸನ್.

೩. ಇಂಗ್ಲಂಡದಲ್ಲಿಯೇ ಇದ್ದು ಹಿಂದುಸ್ಥಾನದ ರಾಜ್ಯಕಾರಭಾರವನ್ನು ನೋಡುವದಕ್ಕೆ ನೇಮಿಸಲ್ಪಟ್ಟ ಅಧಿಕಾ ೧೦

ರಸ್ಥರು ಯಾರು? ಎಷ್ಟನುಂದಿ? ಅವರ ಕಡಿಗಿರುವ ಅಧಿಕಾರವೇನು?

೪. ಅಮೇರಿಕದ ಸ್ವಾತಂತ್ರ್ಯದ ಸಂಬಂಧದಿಂದ ಆದ ಯುದ್ಧದ ಕಾರಣಗಳನ್ನೂ, ಕಾಳಗಗಳನ್ನೂ ಕಡೆಗಾದ ಒಪ್ಪಂದದ ಶರ್ತುಗಳನ್ನೂ, ಬರೆಯಿರಿ. ೪

೫. ಯುಟ್ರೆಚ್, ನಾಡ್ರಿಡ್, ಎಕ್ಸ್‌ಲಾಚಾಪೆಲ್, ಮತ್ತು ಪಾರಿಸ ಈ ಒಪ್ಪಂದಗಳು ಎಂದಾದವು? ಯಾರೊಳಗೆ? ಇವುಗಳಿಂದ ಯಾವ ಯಾವ ಯುದ್ಧಗಳು ನುಗಿದವು? ಇವುಗಳ ಶರ್ತುಗಳು ಯಾವವು? ೧೦

೬. ಕೆಳಗೆ ಬರೆದ ನಕ್ಷೆಗಳಲ್ಲಿ ಯಾವ ಸಂಗತಿಗಳು ವರ್ತಿಸಿದವು ಬರೆಯಿರಿ. ೬

೪೧೦, ೧೦೦೨, ೧೧೪೪, ೧೧೬೨, ೧೪೪೧, ೧೪೪೫, ೧೪೬೫, ೧೪೭೨, ೧೪೦೧, ೧೪೪೪.

ಭೂಗೋಲ.

೭. ಗ್ರೇಟ್‌ಬ್ರಿಟನ್‌ದ ನಕಾಶವನ್ನು ತೆಗೆದು ಅದರಲ್ಲಿ ಮುಖ್ಯವಾದ ಪರ್ವತಗಳನ್ನೂ; ವಿದ್ಯಾಲಯಗಳು ಇರುವ ಪಟ್ಟಣಗಳನ್ನೂ, ಹಡಗ ಪಡೆಗಳಿರುವ ಬಂದರಗಳನ್ನೂ ಸ್ಕಾಟ್ಲಂಡದನರಿಗೂ ಇಂಗ್ಲಂಡದವರಿಗೂ ಆದ ಕಾಳಗಗಳ ಸ್ಥಳಗಳನ್ನೂ ತೋರಿಸಿರಿ. ೧೪

೮. ಇಂಗ್ಲಂಡದಿಂದ ಹಿಂದುಸ್ಥಾನಕ್ಕೆ ಮತ್ತು ಹಿಂದುಸ್ಥಾನದಿಂದ ಇಂಗ್ಲಂಡಕ್ಕೆ ರಫ್ತಾಗುವ ಸರಕುಗಳು ಯಾವವು? ಕ್ರಮವಾಗಿ ಬರೆಯಿರಿ. ೧೦

೯. ಇಂಗ್ಲಿಶರ ಯಾವ ಯಾವ ವಸಾಹತುಗಳಿಂದ ಇಂಗ್ಲಿಶರಿಗೆ ಯಾವ ಯಾವ ಸಮುದ್ರಗಳ ಮೇಲೆ ಸ್ವಾಮಿತ್ವವು ಉಂಟಾಗಿದೆ. ೧೨

೧೦. ಕೆಳಗೆ ಬರೆದವುಗಳು ಏನು? ಎಲ್ಲಿವೆ? ಮತ್ತು ಯಾತರ ವಿಷಯವಾಗಿ ಹೆಸರಾಗಿವೆ? ೬

೧ ಕ್ಯಾಂಟರಬರಿ. ೨ ಸ್ವಾನಸಿ ೩ ಸಾರ್ಕ ೪ ನುಂಾಥ ಆಫ್‌ಗಾಲೋವೆ ೫ ಬೆನ್ನೆವಿಸ್ ಮತ್ತು ೬ ನೂಲಿನ ಹೆಡ್. ೮

೧೧. ಗ್ರೇಟ ಬ್ರಿಟನ್‌ದಲ್ಲಿಯೂ ಅಯರ್ಲಂದದಲ್ಲಿಯೂ ಉಕ್ಕು ಕಬ್ಬಿಣಗಳ ಯಂತ್ರಾದಿಗಳೂ ಇದ್ದಲಿಯ ಖಣಿಗಳೂ ಕಾಲುಚೀಲಗಳೂ ನೂಲಿನ ವಸ್ತ್ರಗಳೂ ಎಲ್ಲೆಲ್ಲಿ ಆಗುತ್ತವೆ? ೮

ಶಾಲಾ ಪತ್ರಿಕೆ.

ಪದ್ಯಂ.

ಪ್ರಿಯವಿದ್ಯಾಗುರುವರ್ಯರುನ್ನತಿಕೆಯಂ ಸಚ್ಛಿಕ್ಷಣೋತ್ಕರ್ಷಮಂ ।
ಭಯಸುತ್ತಂ ಪ್ರತಿವಾಸದಾದಿಗೊಲವಿಂದೀಪತ್ರಮಂ ಮುದ್ರಿಸಿ ॥
ನಯದಿಂದಿತ್ತಪೆವೋದುವರ್ಗಸುಗುಣಂ ತೋರಲ್ಕೆಕೈಕೊಂಬುದೈ ।
ಪಯಿಯಿಂದೋಷವತಿದ್ದವೇಳ್ವುದುಬುಧರ್ಜ್ಞಾನಾಭಿವೃದ್ಧಿಪ್ರಿಯರ್॥೧॥

ಪುಸ್ತಕ ೩ಲ್.] ಜೂನ ೧೮೮೯ನಿ. [ಸಂಚಿಕೆ ೬.

EDUCATIONAL INTELLIGENCE AND USEFUL NOTES.

ವಿದ್ಯಾಸುಧಾರಣಾ ಸಂಬುಧದ ವೃತ್ತಾಂತಗಳು.

ಮಾಂಸಾಹಾರದ ಅನಾವಶ್ಯಕತೆಯು—ನಮ್ಮ ಜನರಿಗೂ ಪಾಶ್ಚಾತ್ಯ ಜನರಿಗೂ ಸರಿ ಹಚ್ಚಿನೋಡಿದರೆ ಅವರು ನಮಗಿಂತ ಎಷ್ಟೋ ಪಾಲಿಗೆ ಸಶಕ್ತರೂ ಗಟ್ಟಿಗರೂ ಇರುತ್ತಾರೆಂದು ಸ್ಪಷ್ಟವಾಗಿ ತೋರುವದು. ಇದಕ್ಕೆ ಮಾಂಸಾಹಾರವೇ ಕಾರಣವೆಂದು ಬಹಳ ಜನರು ನೆನಸುವದುಂಟು. ಆದರೆ ಈ ತಿಳುವಳಿಕೆಯು ತೀರ ಭ್ರಾಂತಿಮೂಲಕವಾದದ್ದೆಂದು ಡಾಕ್ಟರ ದೇಶಮುಖ ಎಂಬವರು ಸಪ್ರಮಾಣವಾಗಿ ಹೇಳಿದ್ದಾರೆ. ಅದು ಹ್ಯಾಗಂದರೆ:—

ಪಶುಗಳಿಗೆ ಹಾಲಿನ ಅವಶ್ಯಕತೆಯು ಬಹಳವಾಗಿರುತ್ತದೆಂಬದಿಷ್ಟೇ ಅಲ್ಲ ಆದರೆ ಅದು ಹಾಲು ಇಲ್ಲದಿದ್ದರೆ ಬದುಕಲಾರದು. ತಾಯಿಯು ಹೊಲದಾಲಿನಲ್ಲಿದ್ದಷ್ಟ ಪೋಷಕ ಪದಾರ್ಥವು ಉಳಿದ ಯಾವ ವಸ್ತುವಿನಲ್ಲಿಯೂ ಇರುವದಿಲ್ಲ. ಮಾಂಸವನ್ನು ಭಕ್ಷಿಸುವ ಸ್ತ್ರೀಯಿಂದ ಕೂಸಿಗೆ ಸಾಕಾಗುವಷ್ಟು ಹಾಲು ಸಿಗುವದಿಲ್ಲ. ಆದ್ದರಿಂದ ಯುರೋಪಿಯನ್ ಜನರಲ್ಲಿ ಮಕ್ಕಳಿಗೆ ಹಾಲು ಕುಡಿಸುವವಕ್ಕೆ ದಾಯಿಗಳನ್ನು ಉಪಯೋಗಿಸುವ ನಡತೆಯು ಇರುತ್ತದೆ, ಮತ್ತು ಪು

ಕ್ಕಳನ್ನು ಜೋಪಾನ ಮಾಡುವ ಇಡಿಕೆಲಸವು ಅವರನ್ನೆ
ಅವಲಂಬಿಸಿ ಇರುತ್ತದೆ. ಮಾಂಸಾಹಾರಿಯಾದ ಸ್ತ್ರೀಯರಿಂ
ಮಕ್ಕಳಿಗೆ ಸಾಕಷ್ಟು ಹಾಲು ಸಿಗುವದಿಲ್ಲೀಟ ಸಂಗತಿಯಿ
ದ ಮಾಂಸಾಹಾರವು ಕೆಲಸವನ್ನಲ್ಲೆಂದು ಸ್ಪಷ್ಟವಾಗುತ್ತದೆ.

ಈ ಸಂಬಂಧವಾಗಿ ರಸಾಯನ ಶಾಸ್ತ್ರ ರೀತಿಯಿಂದ ವಿಚ
ರಮಾಡಿದರೂ ಮಾಂಸಾಹಾರವು ಅವಶ್ಯವಾದದ್ದೆಂದು ಕಂಡು
ಬರುವದಿಲ್ಲ. ಅನ್ನಾಸಾರು ಉಣ್ಣುವ ಮನುಷ್ಯನು ಮಾ
ಸಾಹಾರಿಯಾದ ಪಾಶ್ಚಾತ್ಯನೆನ್ನು ಸರಿಗಟ್ಟಲಾರನೆಂದು ಹೆ
ಳುವದು ರಸಾಯನ ಶಾಸ್ತ್ರದ ಅಜ್ಞಾನವನ್ನು ಸೂಚಿಸುತ್ತ
ಅಕ್ಕಿಯ ಅನ್ನದಲ್ಲಿ ಅನ್ನ ಸತ್ವದ ಅಂಶವು ತೀರ ಕಡಿಮೆ
ಇರುವದರಿಂದ ಉಳಿದ ಪದಾರ್ಥಗಳಲ್ಲಿ ಸಹ ಅದು ಕಡಿಮೆ
ಪ್ರಮಾಣದಿಂದ ಇರುತ್ತದೆಂದು ಹೇಳುವದು ಸರಿಯಾದದ್ದಲ್ಲ
ಮಾಂಸಾಹಾರಿಯಾದ ಜನರಷ್ಟೇ ಬಲವನ್ನು ಧಾನ್ಯವನ್ನ
ತಿಂದು ಬದುಕುವ ಜನರು ಸಹ ಪಡಕೊಳ್ಳಬಹುದು. ಇ
ದಕ್ಕೆ ಯಾವ ಯಾವ ಪದಾರ್ಥಗಳಲ್ಲಿ ಅನ್ನದ ಸತ್ವಾಂಶ
ಪ್ರಮಾಣವು ಹೆಚ್ಚಿಗೆ ಇರುತ್ತದೇಂಬದನ್ನು ಅರಿತುಕೊಂಡಾ
ತೀರಿತು. ಮಾಂಸವು ಎಷ್ಟೋ ರೋಗಗಳ ಉತ್ಪತ್ತಿ
ಸ್ಥಾನವಾಗಿರುತ್ತದೆಂದು ವೈದ್ಯ ಶಾಸ್ತ್ರವು ಹೇಳುತ್ತದೆ. ಈ
ಮಾತಿನ ಅನುಭವವು ಇತ್ತಿತ್ತಲಾಗ ಯುರೋಪ ಖಂಡ
ದಲ್ಲಿ ಬರಹತ್ತಿದೆ. ಅಲ್ಲಿ ಶಾಕಾಹಾರಿಗಳ ಸಂಖ್ಯೆಯು ದಿನ
ದಿನೇ ಬೆಳೆಯುತ್ತಲಿದೆ. ಇದಲ್ಲದೆ ಮಾಂಸವನ್ನು ತಿನ್ನು
ವದು ನೀತಿ ಶಾಸ್ತ್ರಕ್ಕೆ ಅಸಮ್ಮತವಾದ ಮಾತು. ಮನು
ಷ್ಯನು ತನ್ನ ಹೊಟ್ಟೆಗೆ ಭರತೀ ಹಾಕಲಿಕ್ಕೆ ದಿಕ್ಕಿಲ್ಲದ
ಎಷ್ಟೋ ಮೂಕ ಬಡಪ್ರಾಣಿಗಳನ್ನು ಕೊಲ್ಲುವದು ಅಧಿಕ
ಖಂಡಪೂಳಗಿನ ಕಾಡು ಜನರಿಗಿಂತ ಈ ಜನರ ಸ್ಥಿತಿಯು
ಹೆಚ್ಚು ಕೆಟ್ಟದ್ದೆಂದು ಸೂಚಿಸುತ್ತದೆ. ಈ ಎಲ್ಲ ಸಂಗತಿ
ಗಳನ್ನು ಜನ್ಮಾಗಿ ವಿಚಾರ ಮಾಡಿ ನೋಡಿದರೆ ಮಾಂಸಾಹಾ

ಬ ಅವಶ್ಯಕತೆಯು ರವಷ್ಟಾದರೂ ಅಲ್ಲಿಂದು ಸಮೀಜಸ ಮನುಷ್ಯನು ಬಿಟ್ಟಿಕೊಳ್ಳದೆ ಇರಲಾರನು.

ಪಾರ್ಲಮೆಂಟ ಸಭೆಯಲ್ಲಿ ಬಹಳ ತೀವ್ರ ಮಾತಾ ಡುವವರು—ಈಗಿನ ಪಾರ್ಲಮೆಂಟದಲ್ಲಿ ಬಹಳ ತೀವ್ರ ಮಾತಾಡುವಂಥ ಸಭಾಸದರು ಸರ್ ಚಾಲ್ಸ್‌ಥಾರ್ನೂರ್ ಪಾಲ್ಟರ ಎಂಬವರು ಇರುತ್ತಾರೆ. ಇವರು ಒಂದು ಮಿನಿಟಿನಲ್ಲಿ ಪಾ ಠಿಕೆಯಾಗಿ ೬೦೦ ಶಬ್ದಗಳನ್ನು ನುಡಿಯುತ್ತಾರೆ. ಆರ್ಡರ್ ಸಂಡಾಲ್ಫ್ ಚರ್ಚಿಲ್ ಇವರು ಬಹಳ್ಮೆಲ್ಲ ಒಂದು ಮಿನಿಟಿ ನಲ್ಲಿ ೧೯೦ ಶಬ್ದಗಳನ್ನು ಉಚ್ಚರಿಸುತ್ತಾರೆ; ಆದರೆ ಅವರು ಸಾಧಾರಣವಾಗಿ ಮಾತಾಡುತ್ತಿರುವಾಗ್ಗೆ ಮಿನಿಟಿಗೆ ೧೫೦ ಶ ಬ್ದಗಳನ್ನು ನುಡಿಯುತ್ತಾರೆ. ಮಿ. ನೆವ್ಸಟನ್ ಮತ್ತು ಮಿ. ಡಿಲನ್ ಇವರು ಸಹ ತೀವ್ರ ಮಾತಾಡುವವರಲ್ಲಿ ಹೆಸರಾ ಗಿದ್ದಾರೆ. ಗ್ಲಾಡಸ್ಟನ್ ಸಾಹೇಬರ ಭಾಷಣವು ಯಾವಾ ಗಲೂ ಸ್ಪಷ್ಟವಾದದ್ದೂ ವಿಚಾರಪೂರ್ಣವಾಗಿ ಮಾತಾಡಿ ದ್ದೂ ಇರುತ್ತದೆ. ಅವರು ಸಹ ಒಂದು ಮಿನಿಟಿನಲ್ಲಿ ೧೫೦ ಶಬ್ದಗಳನ್ನು ನುಡಿಯುತ್ತಾರೆ. ಮಿ. ಬಾಲ್‌ಫೋರ ಇವ ರು ತುಸು ಹಿಚ್ಚು ಒತ್ತರದಿಂದ ಮಾತಾಡುತ್ತಾರೆ. ಅವರು ಒಂದು ಮಿನಿಟಿಗೆ ೧೬೦ ಶಬ್ದಗಳನ್ನು ಉಚ್ಚರಿಸುತ್ತಾರೆ ಮಿ. ಜೋಸೆಫ್ ಚೆಂಬರಲೇನ ಇವರು ವಾಡಿಕೆಯಾಗಿ ಮಾ ತಾಡುವಾಗ್ಗೆ ಮಿನಿಟಿಗೆ ೧೨೦ ಶಬ್ದಗಳನ್ನೂ, ಬಹಳ ತೀವ್ರ ವಾಗಿ ಮಾತಾಡುವಾಗ್ಗೆ ಮಿನಿಟಿಗೆ ೧೫೦ ಶಬ್ದಗಳನ್ನೂ ನು ಡಿಯುತ್ತಾರೆ. ಮಿ. ಜಾಕ್ಸನ್ ಇವರು ಎಲ್ಲ ಸಭಾಸದರಿ ಗಿಂತ ಸಾವಕಾಶವಾಗಿ ಮಾತಾಡುತ್ತಾರೆ. ಈ ಹೊತ್ತಿನ ತರಿಗೆ ಮುಗ್ಧಂಡ ವೇಳೆವಲ್ಲಿ ಆಗಿಹೋದವಂಥ ಎಲ್ಲ ವಕ್ತಾಗ ರಿಗಿಂತ ರೆಪ್ಪೆ. ಫಿಲಿಪ್ಸ ಹೂಕ್ಸ ಎಂಬವರು ಹಿಚ್ಚು ತ್ವರೆ ದುಗಿ ಮಾತಾಡುತ್ತಿದ್ದರು. ಅವರು ಒಂದು ಮಿನಿಟಿನಲ್ಲಿ ೨೧೦ ಶಬ್ದಗಳನ್ನು ನುಡಿಯುತ್ತಿದ್ದರಂತೆ

ನಮ್ಮ ಇಲಾಖೆಯ ಡೈರೆಕ್ಟರರಾದ ಮೆ॥ ಜಾಪ್‌ಫೀ
ದೊರೆಗಳು ಸುಮಾರು ಮೂರು ತಿಂಗಳ ಹಿಂದೆ ಡಂಬಳ
ನೆರೆಯಲ್ಲಿರುವ ಗುಡ್ಡಗಳಲ್ಲಿ ಬೇಟೆಗೆ ಹೋದಾಗ್ಗೆ ಬಂದ
ಹೊನಿಗನ ಮೇಲೆ ಗುಂಡು ಹಾಕಿದರು. ಗುಂಡು ತಗ
ಅದರದೊಂದು ಕಾಲು ಮುರಿಯಲು ಅದು ಹಾಗೆಯೇ ಕು
ಟುತ್ತ ಹೋಯಿತು. ಅವರ ಬೆನ್ನು ಹತ್ತಿ ತುಸು ಮು
ದಕ್ಕೆ ಹೋದಕೂಡಲೆ ಅದು ತಿರುಗಿ ಬಂದು ಸಹಿಸಪದಲ್ಲಿದ್ದ
ಶಿಕಾರಿಯನ್ನು ಹಿಡಿಯಿತು. ಆಷ್ಟರಲ್ಲಿ ಸಾಹೇಬರು ಅದ
ಹತ್ತರ ಹೋಗಿ ಕಾಲಿನಿಂದ ಬದ್ದು ಕೆಳಗೆ ಕೆಡಿವಿ ಶಿಕಾ
ಯ ಪ್ರಾಣವನ್ನು ಉಳಿಸಿದರು. ಆ ಬಿದ್ದ ಮೃಗವು ಸಿಟ್ಟಿ
ನಿಂದ ಎದ್ದು ಸಾಹೇಬರ ಮೈಮೇಲೆ ಬಂತು. ಆಗ್ಗೆ ಅ
ರು ತಮ್ಮ ಎಡಗೈಯನ್ನು ಅದರ ಬಾಯಿಯಲ್ಲಿ ಕೊಟ್ಟು ಬ
ನಃ ಬದ್ದು ಅದನ್ನು ಹಿಡಿಸಿದರು. ಆದರೆ ಅದರ ಬಾಯಿಂದೊ
ಳಗೆ ಸಿಕ್ಕಂಥ ಕೈಯು ಎಲುವು ಮುರಿದು ಬಹಳ ಘಾಯವಾ
ಗಿತ್ತು. ಆದದ್ದರಿಂದ ಅವರು ಯುರೋಪಿಯನ್ ಸಿವ್ಹಿಲ್
ಸರ್ಜನ್ನರ ಉಪಚಾರವನ್ನು ಬಯಸಿ ಧಾರವಾಡಕ್ಕೆ ಬಂದು
ತುಸು ಕಡಿಮೆ ಮೂರು ತಿಂಗಳ ತನಕ ಧಾರವಾಡದಲ್ಲಿಯೇ
ಇದ್ದರು. ಕೈಯು ತುಸು ಗುಣವಾಯಿತು. ಆದರೆ ಅ
ರ ಆರೋಗ್ಯವು ಕೆಟ್ಟದ್ದರಿಂದ ಅದನ್ನು ಸುಧಾರಿಸಿಕೊಳ್ಳು
ವದಕ್ಕಾಗಿ ೬ ತಿಂಗಳ ರಜೆ ಪಡೆದು ತಮ್ಮ ಕೆಲಸದ ಭಾ
ರ್ಜವನ್ನು ಮುಂಬಯಿ ಎಲಫಿನಸ್ಟನ್ ಕಾಲೇಜಿನ ಪ್ರಿನ್ಸಿಪಾ
ಲರಾದ ಮೆ॥ ಆರ್. ಜಿ. ಆಗ್ಜನ್‌ಹ್ಯಾಮ ದೊರೆಗಳಿಗೆ ಮೇ
೬ನೇ ತಾರೀಖಿನ ದಿವಸ ಕೊಟ್ಟು ವಿಲಾಯತಿಗೆ ತೆರಳಿದರು.
ಅವರಿಗೆ ಬೇಗನೆ ಗುಣವಾಗಲೆಂದು ನಾವು ಕೋರುತ್ತೇವೆ.

ಪ್ರತಿಯೊಂದು ದೇಶದಲ್ಲಿ ಹುಟ್ಟುವ ಕೌತುಕದ ಹಣ

ಫರ್ನಗಳನ್ನು ಅನ್ಯ ದೇಶದವರಿಗೆ ತೋರಿಸಿ ಆ ಸರಕುಗಳನ್ನು ಕೊಂಡುಕೊಳ್ಳುವವರ ಸಂಖ್ಯೆಯನ್ನು ಹೆಚ್ಚಿಸುವದಕ್ಕಾ ಆ ಸರಕುಗಳಲ್ಲಿ ಸುಧಾರಣೆಯನ್ನು ಮಾಡಲಿಕ್ಕಾ ಪ್ರದರ್ಶನವು ಬಂದು ಮೇಲಾದ ಸಾಧನವಾಗಿದುತ್ತದೆ. ಸದ್ಯ ಮಹಾರಾಣೀ ಸಾಹೇಬರ ಪ್ರಿಯಪಡಿಗಳಾದ ಪ್ರಿನ್ಸಲೆಬ್ಬರ್ಟ್ ದೊರೆಗಳು ಈ ಪದವು ಸುಸೆಗಂಡು "ಇಂಟರನ್ಯಾಶನಲ್ ಎಗ್ಸಿಬಿಶನ್" ಅಂದರೆ ಸಾರ್ವರಾಷ್ಟ್ರಪ್ರದರ್ಶನವೆಂಬ ಬಂದು ದೊಡ್ಡ ಪ್ರದರ್ಶನವನ್ನು ೧೮೫೧ ರಲ್ಲಿ ಮಂಡಿಸಿದರು. ಮುಂದೆ ಬ್ರಿಟಿಷ ರಾಜ್ಯದ ವೈಭವವೂ ವಿಸ್ತಾರವೂ ಜೆಳೆದದ್ದರಿಂದ ಯಾವತ್ತು ಸಾಮಾಜ್ಯದ ಬಡವೆಗಳನ್ನು ಸಂಗ್ರಹಿಸಲಿಕ್ಕೆ ಯೋಗ್ಯವಾದ ಬಂದು ಕಟ್ಟಡವು ಇರುವದು ಅವಶ್ಯವೆಂದು ಮಹಾರಾಣೀ ಸಾಹೇಬರ ಪ್ರಿಯ ಪತ್ರರಾದ ಪ್ರಿನ್ಸಆಫ್‌ವೇಲ್ಸ ಇವರು ಪ್ರಕಟಿಸಿದರು. ಈ ಕೆಲಸಕ್ಕಾಗಿ ಹಿಂದುಸ್ತಾನದೊಳಗಿನ ಸಂಸ್ಥಾನಿಕರಿಂದಲೂ ಸಂಯುಕ್ತ ರಾಜ್ಯದ ನಿವಾಸಿಗಳಿಂದಲೂ ಗ್ರೇಟಬ್ರಿಟನ್ನಿನ ಜನರಿಂದಲೂ, ಬ್ರಿಟಿಷ ಸಾಮ್ರಾಜ್ಯಕ್ಕೆ ಸೇರಿದ ಬೇರೆ ಜನರಿಂದಲೂ ವರ್ಗಣಿಯ ಹಣವನ್ನು ಕೂಡಿಸಿ, ಆ ಪ್ರದರ್ಶನಾಲಯದ ಸಾಯುವ ಕಲ್ಲನ್ನು ಜುಬಿಲಿಯ ಮಹೋತ್ಸವದ ಸುಮುಹೂರ್ತದಲ್ಲಿ ಕೂಡಿಸಿದರು. ಈ ಕಟ್ಟಡವು ಪೂರ್ಣವಾದದ್ದರಿಂದ ವಿಕ್ಟೋರಿಯಾ ಚಕ್ರವರ್ತಿನಿಗಳು ಕಳೆದ ಮೇ ತಿಂಗಳ ೧೦ನೇ ತಾರೀಖಿನ ದಿವಸ ಬಹು ಸಮಾರಂಭದೊಂದಿಗೆ ಈ ಮಂದಿರವನ್ನು ಬ್ರಿಟಿಷ ಸಾಮ್ರಾಜ್ಯದ ಯಾವತ್ತು ವಸ್ತುಗಳ ಪ್ರದರ್ಶನಕ್ಕಾಗಿ ಇನ್ಸ್ಟಿಟ್ಯೂಟಿನ ಅಧಿಕಾರಿಗಳ ವಶಕ್ಕೆ ಕೊಟ್ಟರು. ಈ ಕೆಲಸಕ್ಕಾಗಿ ಒಟ್ಟು, ೪, ೧೩, ೦೦೦ ಪೌಂಡು ಹಣ ಕೂಡಿರು

ತ್ತದೆ. ಇದರಲ್ಲಿ ೧,೦೦,೦೦೦ ಪೌಂಡನ್ನು ಹಿಂದೂ ಅರಸರು ಕೊಟ್ಟಿದ್ದಾರೆ.

ಹಿಂದುಸ್ತಾನದಲ್ಲಿ ಮತ್ತು ಅನ್ಯವಸಾಹತಗಳಲ್ಲಿ ಹುಟ್ಟಿದ ಕೌತುಕದ ಬಡವೆಗಳನ್ನು ಸಂಗ್ರಹಿಸಿ ಇಲ್ಲಿ ಪ್ರದರ್ಶನಕ್ಕೆ ಮಂಡಿಸುವ ಉದ್ದೇಶವಿರುತ್ತದೆ, ಮತ್ತು ಇಂಗ್ಲಂಡಕ್ಕೆ ಹೋಗುವಂಥ ಹಿಂದೂ ವಿದ್ಯಾರ್ಥಿಗಳಿಗೆ ಅವರ ಅಭ್ಯಾಸದ ಎಲ್ಲ ಮಾಹಿತಿಯು ಸಿಗುವಂತೆ ಮಾಡಿರುವದಲ್ಲದೆ, ಅಸಿಯಾ ಖಂಡದೊಳಗಿನ ಹಲವು ಭಾಷೆಗಳನ್ನು ಕಲಿಸುವ ವ್ಯವಸ್ಥೆಯನ್ನು ಸಹ ಮಾಡಿರುತ್ತಾರೆ. ಇಲ್ಲಿ ಬಂದು ಪುಸ್ತಕಾಲಯವಿರುತ್ತದೆ. ಅದರಲ್ಲಿ, ಹಿಂದುಸ್ತಾನಕ್ಕೂ ಬ್ರಿಟಿಷ ವಸಾಹತಗಳಿಗೂ ಸಂಬಂಧಿಸಿದ ವ್ಯಾಪಾರ, ಕಲಾಕೌಶಲ್ಯ ಮುಂತಾದ ಎಷ್ಟೋ ಉಪಯುಕ್ತ ವಿಷಯಗಳನ್ನು ಕುರಿತು ಬರೆದಂಥ ಪುಸ್ತಕಗಳನ್ನು ಇಟ್ಟಿರುತ್ತಾರೆ.

ಇಂಥ ಪ್ರದರ್ಶನಾಲಯವನ್ನು ಹಿಂದುಸ್ತಾನದಲ್ಲಿ ಸ್ಥಾಪಿಸಿದರೆ, ಅವರಿಂದ ನಮಗೆ ಬಹಳೇ ಲಾಭವಾಗುವದು.

ಪಿರಿಯಂಟಲ ಟ್ರಾನ್ಸಲೇಟರರಾದ ರಾಮಬಿಡಾದೂರ ಯಶವಂತ ಮೋರೇಶ್ವರ ಉರ್ಫ ಭಾವೂ ಸಾಹೇಬ ಕೇಳಕರ ಇವರು ತಮ್ಮ ತಂದೆಗಳಿಗೆ ಬಹಳ ಪಡ್ಡಾಗಿರೋದು ವರ್ತಮಾನ ಕೇಳಿ ಮುಂಬಳೇಶ್ವರದಿಂದ ಹೊರಟು ತಾ॥ ೧೦ ನೇ ಮೇ ದಿವಸ ಧಾರವಾಡಕ್ಕೆ ಬಂದು ಮರುದಿವಸವೆ ಸ್ವರ್ಗಸ್ಥರಾದರು. ಈ ಸುದ್ದಿಯನ್ನು ತಿಳಿಸಲಿಕ್ಕೆ ನಾವು ಬಹಳ ದುಃಖ ಪಡುತ್ತೇವೆ. ಇವರು ಜಾಣರೂ ಕಾರ್ಯದಕ್ಷರೂ ಸಮ್ಮಣಿಗಳೂ ಇದ್ದರು. ಇವರ ಸಂಪೂರ್ಣ ಚರಿತ್ರವನ್ನು ಮುಂದಿನ ಸಂಚಿಕೆಯಲ್ಲಿ ಕೊಡುವೆವು.

METHODS OF TEACHING.
ಕಲಿಸುವ ಪದ್ಧತಿಗಳು.
WRITING.
ಲೇಖನ.

(ಗಾಳಿನೇ ಪುಟದಿಂದ ಮುಂದೆ ಸಾಗಿದ್ದು.)

ಬೆಳಕು—ಲೇಖನಾಭ್ಯಾಸಕ್ಕೆ ಹಿಂದಿನ ಬೆಳಕು ನಿಷ್ಪ್ರಯೋಜನವಾದದ್ದು, ಎದುರಿನ ಬೆಳಕು ಅಪಾಯಕರವಾದದ್ದು, ಬಲಪಾರ್ಶ್ವದ ಬೆಳಕಿನಿಂದ ತಕ್ಕಷ್ಟು ಲಾಭವಾಗುವದಿಲ್ಲ. ಎಡಪಾರ್ಶ್ವದ ಬೆಳಕೂ ಮೇಲಿನ ಬೆಳಕೂ ಪ್ರಯೋಜನಕರವಾದವುಗಳಾಗಿರುವದರಿಂದ ಅವು ತಕ್ಕಷ್ಟು ಸಿಗುವಂತೆ ಯತ್ನಮಾಡಬೇಕು.

೫. ಪಾಠ ಸಾಗಿಸುವ ಕ್ರಮ—ಪಾಠ ಸಾಗಿಸತಕ್ಕ ಕ್ರಮದಲ್ಲಿ ವಿದ್ಯಾರ್ಥಿಗಳು ಬರೆಯುತ್ತಿರುವಾಗ ಮಾಸ್ತರನು ಎಹಳ ಎಚ್ಚರದಿಂದ ನೋಡುತ್ತಿರಬೇಕೆಂದು ಈ ಪೂರ್ವದ ಶ್ಲೋಕದಲ್ಲಿಯೇ ಸೂಚಿಸಿರುತ್ತೇವೆ. ಆ ಮೇರೆಗೆ ಲೆಕ್ಕಣಿಕೆಗಳನ್ನು ಕೆತ್ತುವ ಮುಂತಾದ ಕೆಲಸಗಳನ್ನು ಮುಂದಾಗಿಯೇ ಮಾಡಿ ಇಡತಕ್ಕದ್ದು. ವಿದ್ಯಾರ್ಥಿಗಳು ಬರೆಯುವಾಗ ಸೋಲ್ಪವಿಚಾರಣೆಯು ಕೆಲಸದ ಹೊರತು ಎರಡನೆಯ ಕೆಲಸವನ್ನು ಮಾಡಕೂಡದು. ಮಾಸ್ತರನು ತಕ್ಕಷ್ಟು ಲಕ್ಷ ಕೊಡದ ಕಾಲೆಗಳಲ್ಲಿ ವಿದ್ಯಾರ್ಥಿಗಳಿಗೆ ಬಂದೇ ಬಳಣವು ಹತ್ತುವದು ಅಪರೂಪ. ಯಾವದೊಂದು ವರ್ಗದ ಎರಡು ಕಾಲೇ ಪುಸ್ತಕಗಳನ್ನು ತೆಗೆದುಕೊಂಡು ನೋಡಲು, ಬಂದರಲ್ಲಿ ಸಣ್ಣಕ್ಷರ, ಮತ್ತೊಂದರಲ್ಲಿ ದೊಡ್ಡಕ್ಷರ, ಬಂದರಲ್ಲಿ ಉದ್ದಕ್ಷರ ಮತ್ತೊಂದರಲ್ಲಿ ದುಂಡಕ್ಷರ, ಈ ಪ್ರಕಾರ ಹೆಚ್ಚು ಕಡಿಮೆಯು ತಪ್ಪದೆ ಕಣ್ಣಿಗೆ ಬೀಳುವವು. ಬಳ್ಳೇ ಲಕ್ಷ ಪೂರ್ವಕವಾಗಿ ಕೆಲಸ ಮಾಡುತ್ತಿರುವ ಶಿಕ್ಷಕನ ವರ್ಗದಲ್ಲಿ ಈ ಪ್ರಕಾರವ ದೋಷಗಳು ಸಂಭವಿಸಲಾರವು. ಎಲ್ಲ ಹು

ಹುಗರಿಗೆ ಬಂದೇ ಬಳಿಕವು ಹತ್ತುವದಲ್ಲದೆ ಬವ್ಮೊವ್ಮೆ ಮೇಲಿನ ವರ್ಗದಲ್ಲಿ ಬಬ್ಬನೇ ಎಲ್ಲ ಕಾಪಿಗಳನ್ನು ಬರೆದಿರುವನೋ ಎನೋ ಎಂಬ ಸಂಶಯವು ಬರುವದು. ಈ ಪ್ರಕಾರ ಕೆಲಸ ಮಾಡುವದು ಕಠಿಣವಾಗಿ ತೋರುವದಷ್ಟೇ ಹೊರತು ಉಳಿವ ಸಂಗತಿಗಳು ಅನುಕೂಲವಾಗಿದ್ದರೆ ಸ್ಥಿರ ಸ್ವಭಾವದವನೂ, ಚುರುಕನೂ, ದಕ್ಷನೂ ಆದ ಮಾಸ್ತರನು ಇದನ್ನು ಸಹಜವಾಗಿಯೇ ಕೈಗೂಡಿಸುವನೆಂಬದಕ್ಕೆ ಏನೂ ಸಂದೇಹವಿಲ್ಲ. ಈ ಕೆಲಸಕ್ಕೆ ಎರಡೇ ಸಂಗತಿಗಳು ಅವಶ್ಯವಾಗಿರುತ್ತವೆ. ಅವು ಯಾವವೆಂದರೆ:—೧ ವಿದ್ಯಾರ್ಥಿಗಳು ತಮ್ಮ ಕೆಲಸವನ್ನು ಎಚ್ಚರದಿಂದ ಮನಃಪೂರ್ವಕವಾಗಿ ಮಾಡಬೇಕು. ೨ ಮಾಸ್ತರನು ಅವರಿಂದ ಬಳ್ಳೇ ಜಾಗ್ರತೆಯಿಂದ ಕೆಲಸ ಮಾಡಿಸಬೇಕು.

ಲೇಖನಾಭ್ಯಾಸದಲ್ಲಿ ಹುಡುಗರು ತಮ್ಮ ಕೆಲಸವನ್ನು ಉಲ್ಲಾಸದಿಂದಲೂ ಜಾಗ್ರತೆಯಿಂದಲೂ ಮಾಡಲಿಕ್ಕೆಬೇಕು ಎಂಬದು ಸ್ಪಷ್ಟವದೆ. ಈ ಗುಣಗಳು ವಿದ್ಯಾರ್ಥಿಗಳಲ್ಲಿ ಹುಟ್ಟಬೇಕಾದರೆ ಮಾಸ್ತರನು ಉಲ್ಲಾಸವೃತ್ತಿಯವನೂ ಕೆಲಸದಲ್ಲಿ ವೃಥಾಸಕ್ತಿಯುಳ್ಳವನೂ ಸ್ಥಿರ ಸ್ವಭಾವದವನೂ ಇರಲಿಕ್ಕೆಬೇಕು. ವಿದ್ಯಾರ್ಥಿಗಳು ಕಾಪಿ ಪುಸ್ತಕಗಳನ್ನು ಬರೆವ ಬಳಿಕ ಅವುಗಳೊಳಗಿನದೊಂದು ಕಾಪಿ ಪುಸ್ತಕವನ್ನು ತೆಗೆದುಕೊಂಡು ವಾರಕ್ಕೊಮ್ಮೆಯಾದರೂ ಅದರ ಬಗ್ಗೆ ಚರ್ಚಿಸಲಿಕ್ಕೆ ವಿದ್ಯಾರ್ಥಿಗಳನ್ನು ಹಚ್ಚಬೇಕು. ಅದರೊಳಗಿನ ದೋಷಗಳನ್ನು ವಿಂಗಡಿಸಿ ನಿರ್ದುಷ್ಟವಾದ ಅಕ್ಷರಗಳನ್ನು ವಿದ್ಯಾರ್ಥಿಗಳಿಂದ ಕರಿಯ ಹಲಿಗೆಯ ಮೇಲೆ ಬರಿಸುತ್ತಿರಬೇಕು. ಚಲೋ ಅಕ್ಷರ ಬರೆದವನನ್ನು ಆಗಾಗ್ಗೆ ಹೊಗಳುತ್ತಿರಬೇಕು. ಈ ಹೊಗಳಿಕೆ ಎಂಬ ಸಾಧನವು ಮೇಲಾದದ್ದು. ಉಲ್ಲಾಸವೃತ್ತಿಯನ್ನು ಹುಟ್ಟಿಸಲಿಕ್ಕೆ ಇದ

ರಂಥ ಸಾಧನವು ಬೇರೆಯಾವದೂ ಇಲ್ಲ. ಬವ್ಮೊವ್ಮೆ ೧೦ ಮಿನಿಟನಲ್ಲಿ ಯಾರು ಉತ್ತಮ ಅಕ್ಷರಗಳನ್ನು ಬರೆಯುವದಲ್ಲದೆ ಹೆಚ್ಚಿಗೆ ಬರೆಯುವರೋ ನೋಡುವಾ ಎಂದು ಹುರಿದುಂಬಿಸಿ ಅವರನ್ನು ಬರೆಯಲಿಕ್ಕೆ ಹಚ್ಚಬೇಕು; ಮತ್ತು ಉತ್ತಮ ಅಕ್ಷರಗಳನ್ನು ಬಹಳ ಬರೆದವರನ್ನು ಹೊಗಳಬೇಕು. ಮನೆಯಲ್ಲಿ ಬರೆದು ತಂದಂಥ ಪುಸ್ತಿಗಳನ್ನು ಸಹ ಎಚ್ಚರದಿಂದ ನೋಡಬೇಕು.

ಈ ವಿಷಯ ಸಂಬಂಧವಾಗಿ ನಾವು ಬರೆಯತಕ್ಕದ್ದನ್ನೆಲ್ಲ ಬರೆದಿರುತ್ತೇವೆ. ಆದರೆ ಜಾಕ್ಸನ್ನನೆಂಬ ಪಾಶ್ಚಾತ್ಯ ಪಂಡಿತನು ಕೆಲವು ನಿಯಮಗಳನ್ನು ಸೂಚಿಸುತ್ತಾನೆ. ಅವನ್ನು ನಮ್ಮ ವಾಚಕರ ಸಲುವಾಗಿ ಇದರಡಿಯಲ್ಲಿ ಕೊಡುತ್ತೇವೆ.

ಮೂಸ್ತರರೆ ಸಂಬಂಧವಾಗಿ.

೧. ಬರೆಯ ತಕ್ಕವರು ತಕ್ಕ ರೀತಿಯಿಂದ ಕೂತಿರುವರೋ ಇಲ್ಲೋ, ಕಾಪಿ ಪುಸ್ತಕವನ್ನೂ ಲೆಕ್ಕಣಿಕೆಯನ್ನೂ ಸರಿಯಾಗಿ ಹಿಡಿದಿರುವರೋ ಇಲ್ಲೋ ಎಂಬದನ್ನು ಎಚ್ಚರದಿಂದ ನೋಡಬೇಕು.

೨. ಎಲ್ಲರ ಹತ್ತರ ಬೇಕಾದ ಯಾವತ್ತು ಉಪಕರಣಗಳು ಇರುತ್ತವೊ ಇಲ್ಲೋ ಎಂಬವನ್ನು ನೋಡಬೇಕು.

೩. ಪಾಠಾರಂಭದ ಪೂರ್ವದಲ್ಲಿ ಎಲ್ಲರು ಕಿತ್ತೆಯಂತೆ ಎಚ್ಚರದಿಂದ ಬರೆಯಿರಿ ಎಂದು ಹೇಳಬೇಕು.

೪. ತ್ವರೆಯಿಂದ ಮನಬಂದಂತೆ ಬರೆಯುವದನ್ನು ಆಗ್ರಹ ಪೂರ್ವಕವಾಗಿ ನಿರಾಕರಿಸಬೇಕು.

೫. ಅಕ್ಷರಗಳ ಸ್ವರೂಪವನ್ನು ತೋರಿಸಲಿಕ್ಕೂ, ಆವುಗಳ ಬೇರೆ ಬೇರೆ ಅವಯವಗಳನ್ನು ವಿಂಗಡಿಸಿ ತಿಳಿಸಲಿಕ್ಕೂ, ತಪ್ಪು ತಿದ್ದಲಿಕ್ಕೂ, ತಪ್ಪುಗಳನ್ನು ತಿಳಿಸಿ ಹೇಳ

ಲಿಕ್ಕೂ, ಕರಿಯ ಹಲಿಗೆಯ ಉಪಯೋಗವನ್ನು ಆಗಾಗ್ಗೆ ಮಾಡಬೇಕು.

೬. ಕೆಲವು ಹುಡುಗರು ತಮ್ಮ ಗೆಳೆಯರ ಹಾದಿಯ ನೋಡುತ್ತ ಬಹಳ ಸಾವಕಾಶವಾಗಿ ತಮ್ಮ ಪುಸ್ತಿಗಳನ್ನು ಬರೆಯುವರು, ಅಥವಾ ಬರಹವನ್ನು ಮುಗಿಸಿ ಕೈಮುಚ್ಚಿ ಕೊಂಡು ಸುಮ್ಮನೆ ಕೂಡುವರು. ಈ ಚಟವು ಒಳ್ಳೆಯ ದಲ್ಲ. ಪ್ರತಿಯೊಬ್ಬ ವಿದ್ಯಾರ್ಥಿಯು ತನ್ನ ಕೆಲಸವನ್ನು ತಕ್ಕ ವೇಳೆಯಲ್ಲಿ ಮುಗಿಸಬೇಕು. ಎರಡನೆಯವರ ಸಂ ಬಂಧವು ಅದಕ್ಕೆ ಎಳ್ಳಷ್ಟು ಸಹ ಇರಬಾರದು.

೭. ಬರಹವು ಚಿತ್ರ ವಿದ್ಯೆಯು ಬಂದು ಪ್ರಕಾರವು. ಚಿ ತ್ರಗಳನ್ನು ತೆಗೆಯುವಂತೆ ಮುಖಪಂಕ್ತಿಯನ್ನು ಹೋಲು ವಂಥ ಅಕ್ಷರಗಳನ್ನು ತೆಗೆಯುವದು ಅವಶ್ಯವಾದದ್ದೆಂದು ವಿದ್ಯಾರ್ಥಿಗಳಿಗೆ ಆಗಾಗ್ಗೆ ತಿಳಿಸಬೇಕು.

೮. ಕೆಟ್ಟ ಬರಹವನ್ನು ಹಳಿಯುವದಕ್ಕಿಂತ ಚಲೋ ಬರಹವನ್ನು ಕೊಂಡಾಡಬೇಕು.

೯. ಮಸಿ ಎದ್ದಿದ ಲೆಕ್ಕಣಿಕೆಗಳನ್ನು ಜಾಡಿಸ ಬಾರದು ಅಥವಾ ಮಸಿಯನ್ನು ನೆಲದ ಮೇಲೆ ಚಲ್ಲಬಾರದು.

೧೦. ಕೆಲವು ವಿದ್ಯಾರ್ಥಿಗಳು ಅಕ್ಷರಗಳನ್ನು ಬರೆದ ಮೇಲೆ ತಿದ್ದುವರು. ಈ ನಡತೆಯು ಒಳ್ಳೆಯದಲ್ಲ. ಕಾರ ಣ ಈಕೆಟ್ಟ ಚಟವು ಬೀಳದಂತೆ ಎಚ್ಚರ ಪಡಬೇಕು.

೧೧. ಬರೆಯುವವರ ವಯಸ್ಸು ಯೋಗ್ಯತೆಗಳನ್ನು ಅನುಲಕ್ಷಿಸಿ ಪುಸ್ತಿಗಳಿಗೆ ಗುಣಗಳನ್ನು ಕೊಡಬೇಕು.

೧೨. ಪಕ್ಷಪಾತ ಮಾಡಬಾರದು. ಕೆಟ್ಟ ಅಕ್ಷರ ಬರೆ ಯುವವರನ್ನು ಹಗಲೆಲ್ಲ ಹಳಿಯಬಾರದು. ಅವರಿಗೆ ಉ ಮೇದು ಬರುವಂತೆ ಮಾಡಬೇಕು. ದುರ್ಲಕ್ಷವು ಹುಟ್ಟು ವಂತೆ ತುಂಬಾ ಎಚ್ಚರ ಪಡಬೇಕು. ಬಂದು ವೇಳೆ ಅದು ತಲೆದೋರಿದರೆ ಬಮ್ಮಲೇ ಅದನ್ನು ಕಿತ್ತು ಹಾಕಬೇಕು.

೧೩. ಸುಲಭಾಕ್ಷರಗಳನ್ನೇ ಮೊದಲು ಬರಿಸಬೇಕು. ಮುಂದೆ ಕ್ರಮದಿಂದ ಕಠಿಣಾಕ್ಷರಗಳ ಅಭ್ಯಾಸ ಮಾಡಿಸ ಬೇಕು.

೧೪. ಸರ್ವ ಪ್ರಯತ್ನದಿಂದ ವಿದ್ಯಾರ್ಥಿಗಳನ್ನು ಹುರಿ ದುಂಬಿಸಬೇಕು. ಶಿಕ್ಷೆ ಇನಾಮುಗಳು ಈ ಕೆಲಸಕ್ಕೆ ತಕ್ಕ ಸಾಧನಗಳು.

೧೫. ವರ್ಗದಲ್ಲಿ ಕೆಟ್ಟಕ್ಷರಗಳನ್ನು ಬರೆಯುವ ಹುಡು ಗರನ್ನು ಗೊತ್ತು ಹಚ್ಚಿ ಅವರನ್ನು ತಿದ್ದಲಿಕ್ಕೆ ಎಷ್ಟಾಶಕ್ತಿ ಪ್ರಯತ್ನ ಮಾಡಬೇಕು.

೧೬. ಉತ್ತಮು ಬರೆಯುವವರನ್ನೂ ಲಕ್ಷಪೂರ್ವಕ ವಾಗಿ ಬರೆಯುವವರನ್ನೂ ಹೊಗಳುವದಲ್ಲದೆ ಅವರ ಹೆಸರು ಗಳ ಪಟ್ಟಿಯನ್ನು ಒಡೆದು ಕಾಣಿಸುವಂಥ ಸ್ಥಳದಲ್ಲಿ ತೂಗ ಹಾಕಬೇಕು.

೧೭. ದವತಿಗಳಲ್ಲಿ ಲೆಕ್ಕಣಿಕೆಯನ್ನು ಪೂರಾ ಎದ್ದುವದು ಬಳ್ಳಿಯವಲ್ಲೆಂಬ ಮಾತನ್ನು ವಿದ್ಯಾರ್ಥಿಗಳಿಗೆ ಚೆನ್ನಾಗಿ ತಿಳಿಸಬೇಕು.

೧೮. ಬರೆಯುವ ಕೆಲಸವನ್ನೇ ಬಹಳ ಹೊತ್ತು ಸಾಗಿ ಬಾರದು. ನಡು ನಡುವೆ ಕರಿಯ ಹಲಿಗೆಯ ಮೇಲೆ ತ ಪ್ಪುಗಳನ್ನು ತಿದ್ದುತ್ತಾ ಅಕ್ಷರಗಳ ನಿಜಸ್ವರೂಪಗಳನ್ನು ತಿಳಿಸುತ್ತಾ ಪಾಠಮಾಡಿಸಬೇಕು; ಅಂದರೆ ವಿದ್ಯಾರ್ಥಿಗಳಿಗೆ ವಿಶ್ರಾಂತಿ ಸಿಗುವದಲ್ಲದೆ ಅನಾದರವು ತಪ್ಪುವದು.

೧೯. ಲೇಖನ ಪಾಠದಲ್ಲಿ ಎಲ್ಲರೂ ಉಲ್ಲಾಸವೃತ್ತಿಯಿಂದ ಇರಲಿಕ್ಕೆ ಬೇಕು. ಈ ಸಂಗತಿಯನ್ನು ಮರೆಯಬಾರದು.

ವಿದ್ಯಾರ್ಥಿಗಳ ಸಂಬಂಧವಾಗಿ.

೧. ಅಕ್ಷರಗಳನ್ನು ನೀಟಾಗಿ ಬರೆಯಬೇಕು.

೨. ಎಲ್ಲ ಅಕ್ಷರಗಳು ಬಂದೇ ಆಕಾರದವು ಇರಲಿಕ್ಕೆ ಬೇಕು.

೩. ಸಾವಕಾಶವಾಗಿ ಬರೆಯಬೇಕು.

೪. ಅಕ್ಷರಗಳು ಸಾದಾ ಇರಬೇಕು.

೫. ಬತ್ತಿ ಬರೆಯಬಾರದು.

೬. ಲೆಕ್ಕಣಿಕೆಯನ್ನು ಬತ್ತಿ ಹಿಡಿಯಬಾರದು.

೭. ಕೆತ್ತಿದ ಭಾಗದ ಹಿಂದೆ ಲೆಕ್ಕಣಿಕೆಯನ್ನು ಹಿಡಿಯಬೇಕು; ಅಂದರೆ ಕೆತ್ತಿದ ಭಾಗದ ಮೇಲೆ ಬೊಟ್ಟುಗಳು ಬರಬಾರದು.

೮. ಲೆಕ್ಕಣಿಕೆಗಳು ತಕ್ಕಂಥವು ಇರಬೇಕು. ಅಂದರೆ ಅವು ಬಹಳ ಉದ್ದಾಗಲಿ ಬಹಳ ಕಿರಿದಾಗಲಿ ಇರಬಾರದು.

೯. ದವತಿಯ ತಳಕ್ಕೆ ಹೋಗಿ ಮುಟ್ಟುವಂತೆ ಲೆಕ್ಕಣಿಕೆಯನ್ನು ಎದ್ದಬಾರದು.

೧೦ ಲೆಕ್ಕಣಿಕೆಯನ್ನು ಬರಿಸಲಿಕ್ಕೆ ಸ್ಪಂಜದ ತುಂಡಾಗಲಿ, ಬಟ್ಟೆಯ ಆರಿವೆಯಾಗಲಿ ಇರಬೇಕು.

೧೧. ಟಾಕಿನ ಎರಡೂ ಮಗ್ಗಲುಗಳು ಕಾಗದಕ್ಕೆ ಹತ್ತುವಂತೆ ಲೆಕ್ಕಣಿಕೆಯನ್ನು ಹಿಡಿಯಬೇಕು.

೧೨. ಬರೆ ಬರೆದಂತೆ ಕಾಗದವನ್ನು ಮೇಲಕ್ಕೆ ಸರಿಸಬೇಕು.

೧೩. ಶರೀರಕ್ಕೆ ಶ್ರಮವಾಗದಂತೆ ತಕ್ಕ ಆಸನದಿಂದ ಕೂಡ್ರಬೇಕು.

೧೪. ಕಿತ್ತೆಯನ್ನು ಅದಷ್ಟು ಕಣ್ಣು ಮುಂದೆ ಇಡಬೇಕು ಕಿರುಬೊಟ್ಟಿನ ತುದಿಯ ಮೇಲೆ ಕೈಯನ್ನು ಹಿಂದುಮುಂದು ಸರಿಸುತ್ತಿರಬೇಕು, ಮತ್ತು ಕಾಗದದ ಪಾತಳಿಗೆ ಅಂಗೈಯು ಲಂಬವಾಗಲಿ ಸ್ವಲ್ಪ ಬಲಿದದಾಗಲಿ ಇರಬೇಕು.

೧೪. ಕಣ್ಣಿಗೂ ಪುಸ್ತಿಗೂ ಅಂತರ ೧೦ ರಿಂದ ೧೪ ಇಂಚು ಇರಬೇಕು.

THE GOVERNMENT OF INDIA.

ಹಿಂದುಸ್ತಾನದ ರಾಜ್ಯಪದ್ಧತಿಯು.

ಈಗಿನ ಸಾರ್ವಭೌಮರಾದ ಇಂಗ್ಲಿಷರು ಸದ್ಯಕ್ಕೆ ನಮ್ಮ ಹಿಂದುಸ್ತಾನದ ರಾಜ್ಯ ಕಾರಭಾರವನ್ನು ನಡಿಸುತ್ತಾ ಇದ್ದಾರೆ. ಆದರೆ ಅವರು ಯಾರು, ಎಲ್ಲಿಯವರು, ಈ ದೇಶಕ್ಕೆ ಯಾಕೆ ಬಂದರು, ಈ ದೇಶವು ಅವರಿಗೆ ಹ್ಯಾಗೆ ಅಂಕಿತನಾಯಿತು, ಅವರು ಎಂದಿನಿಂದ ಆಳಹತ್ತಿದರು, ಅವರ ಆಳ್ವಿಕೆಯ ಪೂರ್ವದಲ್ಲಿ ಇಲ್ಲಿಯ ಸ್ಥಿತಿಯು ಹ್ಯಾಗಿತ್ತು, ಈಗಿನ ರಾಜ್ಯಪದ್ಧತಿಯ ಕ್ರಮವು ಹ್ಯಾಗಿದೆ, ಅರಸಿನ ಮತ್ತು ಪ್ರಜೆಗಳ ಹಕ್ಕುಗಳು ಯಾವವು ಎಂಬೀ ಗಾರವದ ಸಂಗತಿಗಳಲ್ಲಿ ಅನೇಕ ಸಂಗತಿಗಳು ನಮ್ಮಲ್ಲಿ ಇನ್ನೂ ಎಷ್ಟೋ ಜನರಿಗೆ ಗೊತ್ತಿಲ್ಲ. ಆವದ್ದರಿಂದ ಅವರು ಈ ವಿಷಯವಲ್ಲಿ ತಮ್ಮ ಮನಸ್ಸಿಗೆ ಬಂದಂತೆ ಮಾತಾಡುವರು. ಹಲವು ಮೂಢ ಜನರು ಸಂಕಾರದವರೆಂದರೆ ಯುಕ್ತಿ ಪ್ರಯುಕ್ತಿಗಳನ್ನು ಮಾಡಿ ನಮ್ಮಿಂದ ಹಣ ತೆಗೆದುಕೊಂಡು ಹೋಗಲಿಕ್ಕೆ ಬಂದಂಥ ಪರದ್ವೀಪಸ್ಥರೆಂದು ಭಾವಿಸುವರು. ಆದರೆ ತುಸು ಸಮಂಜಸ ಜನರು ಮಾತ್ರ ಇವರ ಆಳ್ವಿಕೆಯಲ್ಲಿ ಸುಖ ಶಾಂತಿಗಳು ನೆಲೆಗೊಂಡಿರುವವೆಂತಲೂ ಇವರಷ್ಟು ಪ್ರಜೆಗಳ ಕಲ್ಯಾಣಕ್ಕಾಗಿ ಶ್ರಮಿಪಟ್ಟ ಅರಸರು ಹಿಂದುಸ್ತಾನವಲ್ಲಿ ಹಿಂದಕ್ಕೆ ಯಾರೂ ಆಗಲಿಲ್ಲೆಂತಲೂ ಹೇಳುವರು. ಈಮೇರೆಗೆ ಹಲವರು ಹಲವು ಬಗೆಯಾಗಿ ಮಾತಾಡುವರು. ಕೆಲವು ಹಳ್ಳಿವಾಡದ ಜನರು ತಮ್ಮ ಸೊತ್ತನ್ನು ಕಾವಾಡುವಂಥ, ದೇಶದೊಳಗಿನ ತುಡುಗರನ್ನೂ ತುಂಟರನ್ನೂ ಕೊಳ್ಳಿಗಾರರನ್ನೂ ಅಣಿಗಿಸಿ, ಶಾಂತತೆಯನ್ನುಂಟು

ಮಾಡುವಂಥ ಉದ್ಯೋಗಸ್ಥರಾದ ಪೋಲೀಸ ಶಿಪಾಯಿಗಳ
ನ್ನು ಕಂಡ ಕೂಡಲೆ ಹೆದರಿಕೊಂಡು ಮನೆಯ ಬಾಗಿಲ
ಬಿಟ್ಟು ಹೊರಬೀಳದ್ದನ್ನೂ, ತಮ್ಮ ಸುಖವನ್ನೂ ಹಿತಕ
ನ್ನೂ ಬಯಸುವಂಥ ಯುರೋಪಿಯನ್ ಮುಲ್ಕೀ ಅಮೇ
ದಾರರನ್ನು ತಮ್ಮ ಊರಲ್ಲಿ ಕಂಡರೆ, ಮನೆಯ ಬಾಗಿಲ
ಇಕ್ಕಿ ಕೂತುಕೊಳ್ಳುವದನ್ನೂ ನಾವು ಈಗ್ಲೆ ಸಹ ನೋಡಬ
ಹುದು. ಇವೆಲ್ಲ ರಾಜ್ಯಪದ್ಧತಿಯ ಅಜ್ಞಾನದ ಪರಿಣಾಮಗ
ಳಾಗಿವೆ. ಆದರೆ ನಾವು ಈ ಸಾರ್ವಭೌಮರಾದ ಇಂಗ್ಲಿಷ
ಜನರು ಹಿಂದುಸ್ತಾನಕ್ಕೆ ಬರಲಿಕ್ಕೆ ಕಾರಣವಾದದ್ದನ್ನೂ
ಅವರು ಈ ದೇಶವನ್ನು ತಮ್ಮ ವಶಮಾಡಿಕೊಂಡು ಆಳಿ
ತ್ತಿದ್ದನ್ನೂ, ಅವರ ರಾಜ್ಯಪದ್ಧತಿಯ ಕ್ರಮವನ್ನೂ, ಆ
ರ ರಚನೆಯನ್ನೂ, ಅದು ಈಗಿನ ಸ್ಥಿತಿಗೆ ಬರಬೇಕಾದರೆ
ಅವರಲ್ಲಿ ಕ್ರಮೇಣ ಆಗುತ್ತ ಬಂದಂಥ ಅದಲುಬದಲುಗಳ
ನ್ನೂ, ಅವರ ಆಳ್ವಿಕೆಯಿಂದ ನಮಗೆ ಆಗುತ್ತಿರುವ ಹಿತಗಳ
ನ್ನೂ, ಅರಸರಿಗೂ ಪ್ರಜೆಗಳಿಗೂ ಇರುವ ಸಂಬಂಧವನ್ನೂ
ಕುರಿತು ಸ್ವಲ್ಪದರಲ್ಲಿಯೇ ಬರೆಯುವೆವು. ಈ ಬ್ರಿಟಿಷ
ರಾಜ್ಯಪದ್ಧತಿಯ ಜ್ಞಾನವು ಪ್ರಜೆಗಳಿಗೆ ತಕ್ಕಷ್ಟು ಇರಬೇ
ಕೆಂಬ ಉದ್ದೇಶದಿಂದ ಮುಲ್ಕೀಪರೀಕ್ಷೆಯ ವಿಷಯಗಳಲ್ಲಿ
ಇದನ್ನು ಸೇರಿಸಿರುತ್ತಾರೆ. ಆದರೆ ಈ ವಿಷಯವನ್ನು
ಕುರಿತು ಬರೆದಂಥ ಸ್ವತಂತ್ರ ಪುಸ್ತಕವು ಕನ್ನಡ ಭಾಷೆ
ಯಲ್ಲಿ ಇಲ್ಲದ್ದರಿಂದ ಬಹಳ ತೊಂದರೆಯಾಗುತ್ತಲಿದೆ. ಇದ
ನ್ನು ಸಹ ದೂರಮಾಡುವದು ಅವಶ್ಯವೆಂದು ತಿಳಿದು, ನಾವು
ಈ ವಿಷಯವನ್ನು ಕೈಕೊಂಡಿದ್ದೇವೆ. ಇದನ್ನು ಕುರಿತು
ಬರೆಯಲಿಕ್ಕೆ ಆರಂಭಿಸುವ ಮೊದಲು ಹಿಂದುಸ್ತಾನದ ಪೂರ್ವ
ಸ್ಥಿತಿಯು ಆಂದರೆ ಇಂಗ್ಲಿಷ ಸಾಮ್ರಾಜ್ಯವು ಇಲ್ಲಿ ನೆಲೆಗೊ

ಳ್ಳುವದಕ್ಕಿಂತ ಮೊದಲು ಹ್ಯಾಗಿತ್ತೆಂಬದನ್ನು ತುಸು ವಿವರಿಸುವದು ತಕ್ಕದ್ದಾಗಿದೆ.

ಈ ತ್ರಿಕೋನಾಕೃತಿಯು ವಿಶಾಲವಾದ ಹಿಂದುಸ್ತಾನದಲ್ಲಿ ಉನ್ನತವಾದ ಪರ್ವತಶ್ರೇಣಿಗಳೂ, ದೊಡ್ಡ ದೊಡ್ಡ ನದಿಗಳೂ, ಗಿರಿ ಕಂದರಗಳೂ ಅಲ್ಲಲ್ಲಿಗೆ ಇರುವದರಿಂದ ಇದು ಸ್ವಾಭಾವಿಕವಾಗಿಯೇ ಹಲವು ಭಾಗಗಳಲ್ಲಿ ಹಂಚಲ್ಪಟ್ಟಿರುತ್ತದೆ. ಪ್ರತಿಯೊಂದು ಭಾಗದಲ್ಲಿ ವಾಸಿಸುವ ಜನರು ತಮ್ಮಷ್ಟಕ್ಕೆ ತಾವೇ ಸ್ವತಂತ್ರರೆಂದು ಎಣಿಸುವರು. ಬಂದು ಭಾಗದವರು ಮತ್ತೊಂದು ಭಾಗದವರನ್ನು ಕದನಗಳಲ್ಲಿ ಸೋಲಿಸಿ ಅವರ ಪ್ರದೇಶವನ್ನು ಹಿಡುಕೊಳ್ಳುವರು. ಬಲಶಾಲಿಯಾದವರು ದುರ್ಬಲರನ್ನು ಕಾಳಗದಲ್ಲಿ ಗೆಲ್ಲುವರು. ಈ ಮೇರೆಗೆ ಎಲ್ಲಿ ನೋಡಿದರೂ ನೆರೆಹೊರೆಯ ಎರಡು ಪ್ರಾಂತಗಳು ಮಿತ್ರಭಾವದಿಂದ ಇರದೆ ಬಹುಶಃ ಶತ್ರುಭಾವವನ್ನೇ ತೋರಿಸುವವು. ಸುಮಾರು ೭೦|೮೦ ವರುಷದ ಬಬ್ಬ ಮುದುಕ ಮನುಷ್ಯನನ್ನು ಅವನ ಬಾಲ್ಯದಲ್ಲಿದ್ದ ದೇಶದ ಸ್ಥಿತಿಯ ಬಗ್ಗೆ ವಿಚಾರಿಸಿದರೆ, ಸುಮಾರು ೬೦ ವರ್ಷದ ಹಿಂದೆ ದಕ್ಷಿಣಭಾಗದ ಸ್ಥಿತಿಯು ಹ್ಯಾಗಿತ್ತೆಂಬದು ಸಾಧಾರಣವಾಗಿ ತಿಳಿಯುವದು. ಆಗ್ಗೆ ಜನರು ಹಗಲಿರಳು ಚಿಂತೆಯಲ್ಲಿಯೇ ಮುಳುಗಿರುವರು. ಮನಸಿನ ಶಾಂತತೆಯು ಅವರಲ್ಲಿ ರವಷ್ಟಾದರೂ ಇದ್ದಿಲ್ಲ. ಈಹೊತ್ತು ಪೇಶ್ವೇನ ದಂಡು ಆ ಊರನ್ನು ಸುಲಿಗೆ ಮಾಡಿತು, ಹೈದ್ರತರಾಯನು ಈ ಊರನ್ನು ಸುಟ್ಟನು, ಸಂಗೊಳ್ಳಿರಾಯನು ಇಂಥ ಊರನ್ನು ಬಡಿವನು, ಇಂಥ ಪಾಳೇಗಾರನು ಇಂಥ ಗ್ರಾಮವನ್ನು ಹಿಡುಕೊಂಡನು ಇವೇ ತರದ ಸುದ್ದಿಗಳು ಯಾವಾಗಲೂ ಕೇಳಬರುತ್ತಿದ್ದವು. ಜನರು ಊರಿಂದ ಬೇರೂರಿಗೆ ಹೋಗು

ಮಾಡುವಂಥ ಉದ್ಯೋಗಸ್ಥರಾದ ಪೋಲೀಸ ಶಿಪಾಯಿಗಳ
ನ್ನು ಕಂಡ ಕೂಡಲೆ ಹೆದರಿಕೊಂಡು ಮನೆಯ ಬಾಗಿಲ
ಬಿಟ್ಟು ಹೊರಬೀಳದ್ದನ್ನೂ, ತಮ್ಮ ಸುಖವನ್ನೂ ಹಿತವ
ನ್ನೂ ಬಯಸುವಂಥ ಯುರೋಪಿಯನ್ ಮುಲ್ಕೀ ಅಮಲ
ದಾರರನ್ನು ತಮ್ಮ ಊರಲ್ಲಿ ಕಂಡರೆ, ಮನೆಯ ಬಾಗಿಲ
ಇಕ್ಕಿ ಕೂತುಕೊಳ್ಳುವದನ್ನೂ ನಾವು ಈಗ್ಲೆ ಸಹ ನೋಡಬ
ಹುದು. ಇವೆಲ್ಲ ರಾಜ್ಯಪದ್ಧತಿಯ ಅಜ್ಞಾನದ ಪರಿಣಾಮಗ
ಳಾಗಿವೆ. ಆದರೆ ನಾವು ಈ ಸಾರ್ವಭೌಮರಾದ ಇಂಗ್ಲಿಷ
ಜನರು ಹಿಂದುಸ್ತಾನಕ್ಕೆ ಬರಲಿಕ್ಕೆ ಕಾರಣವಾದದ್ದನ್ನೂ
ಅವರು ಈ ದೇಶವನ್ನು ತಮ್ಮ ವಶಮಾಡಿಕೊಂಡು ಆಳಹ
ತ್ತಿದ್ದನ್ನೂ, ಅವರ ರಾಜ್ಯಪದ್ಧತಿಯ ಕ್ರಮವನ್ನೂ, ಆ
ರ ರಚನೆಯನ್ನೂ, ಅದು ಈಗಿನ ಸ್ಥಿತಿಗೆ ಬರಬೇಕಾದರೆ
ಅವರಲ್ಲಿ ಕ್ರಮೇಣ ಆಗುತ್ತ ಬಂದಂಥ ಅದಲುಬದಲುಗಳ
ನ್ನೂ, ಅವರ ಆಳ್ವಿಕೆಯಿಂದ ನಮಗೆ ಆಗುತ್ತಿರುವ ಹಿತಗಳ
ನ್ನೂ, ಅರಸರಿಗೂ ಪ್ರಜೆಗಳಿಗೂ ಇರುವ ಸಂಬಂಧವನ್ನೂ
ಕುರಿತು ಸ್ವಲ್ಪವರಲ್ಲಿಯೇ ಬರೆಯುವೆವು. ಈ ಬ್ರಿಟಿಷ
ರಾಜ್ಯಪದ್ಧತಿಯ ಜ್ಞಾನವು ಪ್ರಜೆಗಳಿಗೆ ತಕ್ಕಷ್ಟು ಇರಬೇ
ಕೆಂಬ ಉದ್ದೇಶದಿಂದ ಮುಲ್ಕೀಪರೀಕ್ಷೆಯ ವಿಷಯಗಳಲ್ಲಿ
ಇವನ್ನು ಸೇರಿಸಿರುತ್ತಾರೆ. ಆದರೆ ಈ ವಿಷಯವನ್ನು
ಕುರಿತು ಬರೆವಂಥ ಸ್ವತಂತ್ರ ಪುಸ್ತಕವು ಕನ್ನಡ ಭಾಷೆ
ಯಲ್ಲಿ ಇಲ್ಲದ್ದರಿಂದ ಬಹಳ ತೊಂದರೆಯಾಗುತ್ತಲಿದೆ. ಇದ
ನ್ನು ಸಹ ದೂರಮಾಡುವದು ಅವಶ್ಯವೆಂದು ತಿಳಿದು, ನಾವು
ಈ ವಿಷಯವನ್ನು ಕೈಕೊಂಡಿದ್ದೇವೆ. ಇದನ್ನು ಕುರಿತು
ಬರೆಯಲಿಕ್ಕೆ ಆರಂಭಿಸುವ ಮೊದಲು ಹಿಂದುಸ್ತಾನದ ಪೂರ್ವ
ಸ್ಥಿತಿಯು ಅಂದರೆ ಇಂಗ್ಲಿಷ ಸಾಮ್ರಾಜ್ಯವು ಇಲ್ಲಿ ನೆಲೆಗೊ

ಳ್ಳುವದಕ್ಕಿಂತ ಮೊದಲು ಹ್ಯಾಗಿತ್ತೆಂಬದನ್ನು ತುಸು ವಿವರಿಸುವದು ತಕ್ಕದ್ದಾಗಿದೆ.

ಈ ತ್ರಿಕೋನಾಕೃತಿಯು ವಿಶಾಲವಾದ ಹಿಂದುಸ್ತಾನದಲ್ಲಿ ಉನ್ನತವಾದ ಪರ್ವತಶ್ರೇಣಿಗಳೂ, ದೊಡ್ಡ ದೊಡ್ಡ ನದಿಗಳೂ, ಗಿರಿ ಕಂದರಗಳೂ ಅಲ್ಲಲ್ಲಿಗೆ ಇರುವದರಿಂದ ಇದು ಸ್ವಾಭಾವಿಕವಾಗಿಯೇ ಹಲವು ಭಾಗಗಳಲ್ಲಿ ಹೆಂಚಲ್ಪಟ್ಟಿರುತ್ತದೆ. ಪ್ರತಿಯೊಂದು ಭಾಗದಲ್ಲಿ ವಾಸಿಸುವ ಜನರು ತಮ್ಮಷ್ಟಕ್ಕೆ ತಾವೇ ಸ್ವತಂತ್ರರೆಂದು ಎಣಿಸುವರು. ಒಂದು ಭಾಗದವರು ಮತ್ತೊಂದು ಭಾಗದವರನ್ನು ಕದನಗಳಲ್ಲಿ ಸೋಲಿಸಿ ಅವರ ಪ್ರದೇಶವನ್ನು ಹಿಡುಕೊಳ್ಳುವದು. ಬಲಶಾಲಿಯಾದವರು ದುರ್ಬಲರನ್ನು ಕಾಳಗದಲ್ಲಿ ಗೆಲ್ಲುವರು. ಈ ನೇರೆಗೆ ಎಲ್ಲಿ ನೋಡಿದರೂ ನೆರೆಹೊರೆಯ ಎರಡು ಪ್ರಾಂತಗಳು ಮಿತ್ರಭಾವದಿಂದ ಇರದೆ ಬಹುಶಃ ಶತ್ರುಭಾವವನ್ನೇ ತೋರಿಸುವವು. ಸುಮಾರು ೫೦।೬೦ ವರುಷದ ಬಬ್ಬು ನುದುಕ ಮನುಷ್ಯನನ್ನು ಅವನ ಬಾಲ್ಯದಲ್ಲಿದ್ದ ದೇಶದ ಸ್ಥಿತಿಯ ಬಗ್ಗೆ ವಿಚಾರಿಸಿದರೆ, ಸುಮಾರು ೬೦ ವರ್ಷದ ಹಿಂದೆ ದಕ್ಷಿಣಭಾಗದ ಸ್ಥಿತಿಯು ಹ್ಯಾಗಿತ್ತೆಂಬದು ಸಾಧಾರಣವಾಗಿ ತಿಳಿಯುವದು. ಆಗ್ಗೆ ಜನರು ಹಗಲಿರಳು ಚಿಂತೆಯಲ್ಲಿಯೇ ಮುಳುಗಿರುವರು. ಮನಸಿನ ಶಾಂತತೆಯು ಅವರಲ್ಲಿ ರವಷ್ಟಾದರೂ ಇದ್ದಿಲ್ಲ. ಈಹೊತ್ತು ಪೇಶ್ವೇನ ದಂಡು ಆ ಊರನ್ನು ಸುಲಿಗೆ ಮಾಡಿತು, ಹೈದರಾಯನು ಈ ಊರನ್ನು ಸುಟ್ಟನು, ಸಂಗೊಳ್ಳಿರಾಯನು ಇಂಥ ಊರನ್ನು ಬಡಿವನು, ಇಂಥ ಪಾಳೇಗಾರನು ಇಂಥ ಗ್ರಾಮವನ್ನು ಹಿಡುಕೊಂಡನು ಇವೇ ತರದ ಸುದ್ದಿಗಳು ಯಾವಾಗಲೂ ಕೇಳಬರುತ್ತಿದ್ದವು. ಜನರು ಊರಿಂದ ಬೇರೂರಿಗೆ ಹೋಗು

ವದು ಕಠಿಣವಾಗಿತ್ತು. ರೈತರು ಶ್ರಮಪಟ್ಟು ಬೆಳಿಸಿದ ಹೊಲದೊಳಗಿನ ಪೈರು ಮನೆಗೆ ಬಂದು ಬೀಳುವತನಕ ಅ ದು ತಮ್ಮದೆಂದು ಅವರು ತಿಳಿಯುತ್ತಿದ್ದಿಲ್ಲ. ಸುಗ್ಗಿಯ ದಿವ ಸಗಳು ಬಂದ ಕೂಡಲೆ ಸುಲುಕೊಳ್ಳುವವರೂ, ಹಳ್ಳಿಯ ಬಡಿಯುವವರೂ, ದರೋಡೇಖೋರರೂ ಗುಂಪುಗುಂಪಾ ಗಿ ಹೊರಬಿದ್ದು ದಾರಿಯಲ್ಲಿ ಸಿಕ್ಕವರನ್ನು ಸುಲುಕೊಳ್ಳುವ ರು, ಹಳ್ಳಿಗಳನ್ನು ಹೊಕ್ಕು ಸುಲಿಗೆ ಮಾಡುವರು, ಬೆಳೆ ದು ನಿಂತ ಹೊಲಗಳೊಳಗಿನ ಪೈರನ್ನು ಕೊಯ್ದುಕೊಂಡು ಹೋಗುವರು. ಪ್ರತಿಯೊಬ್ಬನು ತನ್ನ ಶ್ರಮದ ಫಲವನ್ನು ತಾನು ಉಣ್ಣುವನೆಂಬ ಭರವಸವು ಇದ್ದಿಲ್ಲ. ಅಗಿನ ಅರ ಸರು ಸಹ ಇಂಥ ದುಷ್ಟರನ್ನು ಮುರಿಯುವಷ್ಟು ಬಲಿಷ್ಠ ರಾಗಿದ್ದಿಲ್ಲ. ಬಮ್ಮೊಮ್ಮೆ ಅವರೇ ಈ ದುಷ್ಟರಿಗೆ ಸಹಾಯ ಮಾಡಿ ಅವರ ಕೊಳ್ಳೆಯ ಹಣದೊಳಗಿಂದ ಪಾಲು ತೆಗೆದು ಕೊಳ್ಳುವರು. ಆ ಕಾಲದಲ್ಲಿ ಯಾವನಾದರೊಬ್ಬನು ಬ ಳ್ಳೀ ಬಟ್ಟೆಗಳನ್ನು ಧರಿಸಿದರೆ ಸಾಕು, ಅವನಲ್ಲಿ ದುಡ್ಡು ಬ ಹಳ ಇರುತ್ತದೆಂದು ಅರಸರೇ ಅವನನ್ನು ಹೊಡಿಸಿ ಬಡಿಸಿ ಅವನಿಂದ ಹಣವನ್ನು ಬಲಾತ್ಕಾರದಿಂದ ಎಳೆಯುವರು. ಬ ಕ್ಕಲಿಗರು ತಮ್ಮ ಹೊಲದ ಪ್ರಾಪ್ತಿಯೊಳಗಿನ ದೊಡ್ಡ ಭಾ ಗವನ್ನು ಯಜಮಾನನಿಗೆ ಸಲ್ಲಿಸಬೇಕಾಗುತ್ತಿತ್ತು. ಮುಸ ಲ್ಮಾನರ ಆಳ್ವಿಕೆಯಲ್ಲಿ ಪ್ರಜೆಗಳು ಇದಕ್ಕೂ ಹೆಚ್ಚು ತೊಂ ದರೆಗಳಿಗೆ ಬಳಗಾದರು. ಮಹ್ಮದೀ ಬಾದಶಹಗಳಲ್ಲಿ ಎ ಷ್ಟೋ ಜನರು ಕಂದಾಯದ ಹಣವನ್ನು ಮಿತಿಮೀರಿ ಹೆಚ್ಚಿ ಸಿದ್ದಲ್ಲದೆ ಹಿಂದೂ ಧರ್ಮಕ್ಕಾಗಿ ಪ್ರಜೆಗಳನ್ನು ಬಹಳವಾಗಿ ಗೋಳಾಡಿಸಿದರು. ಅವರು ಎಷ್ಟೋ ಜನರನ್ನು ಬಲಾ ತ್ಕಾರದಿಂದ ಮಹ್ಮದೀ ಧರ್ಮಕ್ಕೆ ಸೇರಿಸಿಕೊಂಡರು. ಹಿಂ

ದು ದೇವಾಲಯಗಳನ್ನು ನೆಲಸಮಮಾಡಿ ಅಲ್ಲಿ ಮಸೂತಿಗಳನ್ನು ಕಟ್ಟಿಸಿದರು, ಸಾವಿರಾರು ಹಿಂದೂ ಜನರನ್ನು ಕ್ರೂರತನದಿಂದ ಕೊಂದುಹಾಕಿದರು. ಎಲ್ಲಿ ನೋಡಿದರೂ ಕೊಲೆಸುಲಿಗೆಗಳೂ ಘಂದಫಿತೂರುಗಳೂ ನಡೆದಿದ್ದವು. ಸರಕಾರದ ಎಲ್ಲ ಸಣ್ಣದೊಡ್ಡ ಉದ್ಯೋಗಸ್ಥರು ರೈತರಿಂದ ಅನ್ಯಾಯವಾಗಿ ಹಣವನ್ನು ಸೆಳೆಯುವದೇ ಅವರ ಕೆಲಸವಾಗಿತ್ತು. ಆದದ್ದರಿಂದ ಪ್ರಜೆಗಳು ತಮ್ಮಲ್ಲಿದ್ದ ಹಣವನ್ನು ಭೂಮಿಯಲ್ಲಿ ಹೂಳಿಡುತ್ತಿದ್ದರು. ಹೀಗಾಗಿ ದೇಶದೊಳಗಿನ ವ್ಯಾಪಾರವೃದ್ಧಿಗಂತೂ ಮಾರ್ಗವೇ ಇಲ್ಲದಂತೆ ಆಗಿಹೋಗಿತ್ತು. ಪ್ರತಿಯೊಬ್ಬನು ತನ್ನ ಬಳಿಯಲ್ಲಿ ಬೇಕಾದಷ್ಟು ಹಣವಿದ್ದರೂ ಅದನ್ನು ಒಳಗೇ ಬಚ್ಚಿಟ್ಟುಕೊಂಡು ಹೊರಗೆ ಒಬ್ಬ ಬೀರ ಬಡವನಂತೆ ಕಾಣಿಸಿಕೊಳ್ಳುತ್ತಿದ್ದನು. ಇದೇ ಮಾತನ್ನು " ಅಡಗಿಯ ಮನೆಯಲ್ಲಿ ಅನ್ನಾಹಾಲು ಉಂಡು ಕೋಣಿಯಿಂದ ಬಾಯಿ ಒರಿಸಿಕೊಳ್ಳುತ್ತ ಹೊರಗೆ ಬರಬೇಕು'' ಎಂದು ಈಗ್ಗೆ ಹಿರಿಯರು ಹೇಳುವ ಬುದ್ಧಿಯಮಾತು ಸೂಚಿಸುತ್ತದೆ. ಇಂಥ ಸ್ಥಿತಿಯಲ್ಲಿ ರೈತರಿಗೆ ಸುಖವು ಹ್ಯಾಗೆ ದೊರಕಬಹುದು? ತಾನು ತಿನ್ನಲಿಕ್ಕಾಗಿ ಕೈಯಲ್ಲಿ ಹಿಡಿದ ರೊಟ್ಟಿಯು ಬಾಯಿಯಲ್ಲಿ ಬೀಳುವ ತನಕ ಅದು ತನ್ನದೆಂದು ಹೇಳಲಿಕ್ಕೆ ಬರುತ್ತಿದ್ದಿಲ್ಲ. ಇವನು ದೊಡ್ಡವನು, ಇವನು ಸಣ್ಣವನು ಎಂಬ ಭೇದವೇ ಇದ್ದಿಲ್ಲ. ಈದಿವಸ ಬಳ್ಳೀ ಶ್ರೀಮಂತನಾಗಿದ್ದ ಮನುಷ್ಯನು ನಾಳೆ ಬೀರ ಬಡವನಾಗುವನು. ಈಹೊತ್ತು ಬಹಳ ಬಡವನಿದ್ದವನು ಮರು ದಿವಸ ಲಕ್ಷಾಧೀಶನಾಗುವನು. ಇದು ನನ್ನ ಸೊತ್ತು, ಇದು ನನ್ನ ಬಡವೆ ಎಂದು ಹೇಳುವ ಧೈರ್ಯವು ಯಾರಿಗೂ ಇದ್ದಿಲ್ಲ. ಪ್ರಜೆಗಳು ಈಹೊತ್ತು ಪಾರಾದದ್ದೇ ದೊಡ್ಡದು

ನಾಳಿಗೆ ಏನು ಬರುವದೋ ಎಂದು ಚಿಂತಿಸುವರು. ಹಿಂದು
ಸ್ತಾನದ ಬೇರೆ ಬೇರೆ ಭಾಗಗಳಲ್ಲಿದ್ದ ಅರಸರು ಒಮ್ಮನಸಿನ
ವರಾಗಿರದೆ ತಮ್ಮ ತಮ್ಮೊಳಗೆ ಜಗಳಾಡುತ್ತಿದ್ದದರಿಂದಲೇ
ಮುಸಲ್ಮಾನ ಜನರು ಈ ದೇಶವನ್ನು ಆಕ್ರಮಿಸಿ ದಿಲ್ಲಿಯ
ತಖ್ತುವನ್ನು ಸ್ಥಾಪಿಸಲಿಕ್ಕೆ ಅನುವಾಯಿತು. ಮುಸಲ್ಮಾನರು
ಬಹುಶಃ ಹಿಂದುಸ್ತಾನದ ಎಲ್ಲ ಭಾಗಗಳಲ್ಲಿಯೂ ತಮ್ಮ ಸ್ವಾ
ಮಿತ್ವವನ್ನು ನೆಲೆಗೊಳಿಸಿದರು. ಮುಂದೆ ಈ ದೇಶದ ಐ
ಶ್ವರ್ಯದ ಸುದ್ದಿಯನ್ನು ಕೇಳಿದಂಥ ಯುರೋಪ ಖಂಡದ
ಜನರು ವ್ಯಾಪಾರದ ಉದ್ದೇಶದಿಂದ ಇಲ್ಲಿಗೆ ಬರಹತ್ತಿದರು
ಅವರಲ್ಲಿ ಇಂಗ್ಲಿಷರು ಈಸ್ಟ ಇಂಡಿಯಾ ಕಂಪನಿ ಎಂಬ
ಬಂದು ವ್ಯಾಪಾರದ ಸಂಘವನ್ನು ಸ್ಥಾಪಿಸಿ, ಇಲ್ಲಿಗೆ ೧೬೦೦ನೇ
ಇಸ್ವಿಯಲ್ಲಿ ಬಂದರು. ಆ ಕಾಲಕ್ಕೆ ಇಲ್ಲಿಯ ಅರಸರಲ್ಲಿ ನ
ಡೆದಿದ್ದ ಅಂತಸ್ಥ ಕಲಹಗಳನ್ನು ನೋಡಿ, ಅವರು ತಮ್ಮ
ವ್ಯಾಪಾರದ ಸರಕುಗಳನ್ನು ಕಾಯುವದಕ್ಕಾಗಿ ಇಟ್ಟುಕೊಂ
ಡಿದ್ದ ತಮ್ಮ ಶಿಪಾಯಿಗಳನ್ನು ಬಂದು ಪಕ್ಷದವರಿಗೆ ಕೊಟ್ಟು
ಅವರಿಂದ ತುಸು ಸ್ವಾಸ್ಥ್ಯವನ್ನು ಪಡೆದರು. ಹೀಗೆ ಮಾ
ಡುತ್ತ ಮಾಡುತ್ತ ಸ್ವಲ್ಪ ಕಾಲದಲ್ಲಿಯೇ ಅವರು ಬಂಗಾಲದ
ಲ್ಲಿಯೂ, ಮದ್ರಾಸದಲ್ಲಿಯೂ, ಮುಂಬಯಿಯಲ್ಲಿಯೂ ತ
ಮ್ಮ ಸ್ವಾಸ್ಥ್ಯವನ್ನು ತಕ್ಕಮಟ್ಟಿಗೆ ಬೆಳಿಸಿದರು. ಸಃ
೧೭೫೭ ಇಸವಿಯಲ್ಲಿ ಪಲ್ಸಿ ಎಂಬ ಊರಲ್ಲಿ ಅವರು ಪಡೆ
ದೊಡ್ಡ ಜಯದಿಂದ ಇಂಗ್ಲಿಷರ ನಿಜವಾದ ಸಾಮ್ರಾಜ್ಯವ
ಹಿಂದುಸ್ತಾನದಲ್ಲಿ ಸ್ಥಾಪಿತವಾಯಿತೆಂದು ಹೇಳಬಹುದು. ಆ
ಕಾಲಕ್ಕೆ ಕಂಪನಿಯವರೇ ಸ್ವತಂತ್ರವಾಗಿ ಆಳುತ್ತಿದ್ದರು
ಕಂಪನಿಯವರು ತಮ್ಮೊಳಗಿನ ಕೆಲವು ಜನರನ್ನು ಆರಿಸಿ
ಕೊಂಡು ಅವರಿಗೆ "ಕೋರ್ಟ ಆಫ ಡೈರೆಕ್ಟರ್ಸ" ಎಂಬ

ಪೆಸರಿಟ್ಟು ಹಿಂದುಸ್ತಾನದ ಇಡಿ ಅಧಿಕಾರವನ್ನು ಅವರಿಗೆ ಕೊಟ್ಟರು.

(ಮುಂದಕ್ಕೆ ಸಾಗುವದು.)

DEPARTMENTAL NOTICES.

ನೋಟೀಸುಗಳು.

ಧಾರವಾಡ ಟ್ರೇನಿಂಗ ಕಾಲೇಜದ ಪ್ರವೇಶ ಪರೀಕ್ಷೆಯು ಬರುವ ಸಪ್ಟಂಬರ ತಿಂಗಳ ಎಂಟನೇ ತಾರೀಖಿನ ದಿವಸ ಕನ್ನಡ ಒನೇ ಇಯತ್ತೆಯಂತೆ ಆಗುವದು. ಪರೀಕ್ಷೆಗೆ ಬರುವವರು ಎನೇ ಅಥವಾ ಸಿನೇ ಗ್ರೇಡ ಮುಲ್ಕೀ ಸರ್ಟೀಫಿಕೇಟು ಪಡೆದವರೂ, ಸರಕ್ಕಾರೂ, ವ್ಯಂಗರಹಿತರಾಗಿ. ಐದು ಫೂಟಿಗಿಂತ ಎತ್ತರವಿರುವಂಥವರೂ, ಪದವೀಧರರ ಮೇಲೆ ಇಪ್ಪತ್ತೆರಡರ ಒಳಗೆ ವಯಸ್ಸಿನವರೂ ಇರಬೇಕು, ಮತ್ತು ಪದವಿಸ್ಸಿನ ದಾಖಲೆಯನ್ನೂ ಮುಲ್ಕೀ ಸರ್ಟೀಫಿಕೇಟನ್ನೂ ಸಂಗಡ ತಕೊಂಡು ಮೇಲೆ ಕಾಣಿಸಿರುವ ಮುಸ್ತಿನ ಒಳಗಾಗಿ ನಮ್ಮ ಕಡೆಗೆ ಬಂದು ಹಾಜರಾಗಬೇಕು. ಪರೀಕ್ಷೆಗೆ ಬರುವವರು ಅಸಿಸ್ಟಂಟರೇ ಇರಲಿ, ಉಪೋದವಾರರೇ ಇರಲಿ ಅವರಲ್ಲಿ ಉತ್ತಮ ರೀತಿಯಿಂದ ಪಾಸಾದ ೪೦ ಜನರನ್ನು ಪಗಾರೀ ವಿದ್ಯಾರ್ಥಿಗಳಾಗಿ ತೆಗೆದುಕೊಳ್ಳುವೆವು.

೨. ಸದರಿ ಇನೇ ಇಸವಿಯಲ್ಲಿ ಆಗುವ ಮುಲ್ಕೀ ಪರೀಕ್ಷೆಗೆ ಕೂತ ಉಪೋದವಾರರು ಸಹ ಈ ಪರೀಕ್ಷೆಗೆ ಬರಬಹುದು. ಅವರು ಪ್ರವೇಶ ಪರೀಕ್ಷೆಯಲ್ಲಿ ಪಾಸಾಗಿ ಒಂದುವೇಳೆ ಮುಲ್ಕೀ ಪರೀಕ್ಷೆಯಲ್ಲಿ ನಾಪಾಸಾದರೆ ಅವರನ್ನು ಕಾಲೇಜದಲ್ಲಿ ತೆಗೆದುಕೊಳ್ಳಲಿಕ್ಕಿಲ್ಲ.

೩. ಪರೀಕ್ಷೆಗೆ ಬರುವ ಎಲ್ಲ ಉಪೋದವಾರರು ತಮ್ಮ ಅಭ್ಯಾಸದ ಪುಸ್ತಕಗಳನ್ನೂ ಹೊದಿಕೆಗಳನ್ನೂ ಹಾಸಿಕೆ ಮುಂತಾದವುಗಳನ್ನೂ ತೆಗೆದುಕೊಂಡು ಬರಬೇಕು. ಕಾಲೇಜದಲ್ಲಿ ಸೇರಿಸಿಕೊಳ್ಳಲ್ಪಟ್ಟವರು ದಸ್ತ್ಯವಜನ್ನು ಬರಕೊ

ಇಬೇಕಾಗುತ್ತದಷ್ಟೇ. ಅದಕ್ಕೆ ೧೫೦ ರೂಪಾಯಿಗಳ ಇ
ಬ್ಬರು ಜಾಮೀನದಾರರು ಬೇಕಾಗುವರು. ಅವರನ್ನು ಸಹ
ಕೊತ್ತು ಮಾಡಿಕೊಂಡು ಬರಬೇಕು. ಕಾಲೇಜದಲ್ಲಿ ಇಟ್ಟು
ಕೊಳ್ಳಲ್ಪಟ್ಟವರು ಕಾಲೇಜದ ನಿಯಮದಂತೆ ೬ರೂ. ಅಡ್ವಾ
ನ್ಸು, ಸ್ಟ್ಯಂಪಿಗಾಗಿ ೧॥ರೂ. ಇಷ್ಟು ಹಣವನ್ನು ಕೊಡಬೇಕಾ
ಗುವದು. ಈ ಹಣವನ್ನೂ ತಮ್ಮ ಖರ್ಚು ವೆಚ್ಚಕ್ಕಾಗಿ
ಅವಶ್ಯವಾದ ಹಣವನ್ನೂ ತೆಗೆದುಕೊಂಡು ಬರಬೇಕು.
ಕಾಲೇಜದ ಪಗಾರವು ೧ನೇ ದಿವಂಬರದಿಂದ ಪ್ರಾರಂಭವಾ
ಗುವದು. ತಿಳಿಯುವದು.

ಧಾರವಾಡ.
ತಾ॥ ೧೬-೫-೯೬. } (Sd.) Raoji B. Karandikar,
ಪ್ರಿನ್ಸಿಪಾಲ ಟ್ರೇನಿಂಗ ಕಾಲೇಜ.

ನೋ ಟೀ ಸು .

ಮೆ. ಕ್ಯೂರೇಟರ ಗವರ್ನಮೆಂಟ ಸೆಂಟ್ರಲ್ ಬುಕ್ಕ
ಡಿಪೋ ಮುಂಬಯಿ ಇವರಿಂದ ತಿಳಿಸಲ್ಪಡುವದೇನಂದರೆ:—

ತಾ॥ ೧ನೇ ಫೆಬ್ರುವರಿ ಸನ ೧೮೯೫ನೇ ಇಸವಿಯಿಂದ
ತಾರೀಖು ೩೦ನೇ ಎಪ್ರಿಲ ಸನ ೧೮೯೫ನೇ ಇಸವಿಯ ವ
ರೆಗೆ ಮುದ್ರಿಸಲ್ಪಟ್ಟ ಸೆಂಟ್ರಲ್ ಬುಕ್ಕಡಿಪೋಕ್ಕೆ ಮಾರಾಟ
ಕ್ಕಾಗಿ ಬಂದ ಪುನ್ತಕಗಳ ವಿವರವು ಕೆಳಗೆ ಬರೆದಂತೆ:—

೧. ಇಂಗ್ಲಿಷ ಪೇಟು ಹೆಲ್ಥ ಜೆಲೆ ೧೧೯
ಡ್ರಾಯಿಂಗದ ಬಾಬತ್ತು.
೧. ಡ್ರಾಯಿಂಗಕಾರ್ಡ ನಂಬರ ೧ರಿಂದ ೩೦ರ ವರೆಗೆ ,, ೧೫೪
೧. ಮುಂಬಯಿ ಸಂಸ್ಕೃತ ಸಿರೀಜ ನಂಬರು ೪೩
ಪರಾಶರ ಸ್ಮೃತಿ ವ್ಹಾಲ್ಯೂಮ ೧ ಭಾಗ ೧ ,, ೪೫೮

ಮುಂಬಯಿ.
ತಾ॥ ೧೩।೫।೯೬. } (Sd.) N. V. Patwardhan,
ಆಕ್ಟಿಂಗ ಕ್ಯೂರೇಟರ ಗವರ್ನಮೆಂಟ
ಸೆಂಟ್ರಲ್ ಬುಕ್ಕಡಿಪೋ ಮುಂಬಯಿ

EXCURSION TO MYSORE

ಮೈಸೂರ ಪ್ರವಾಸವು.

(ಕಟ್ಟನೆಯ ಪುಟದಿಂದ ಮುಂದೆ ಸಾಗಿದ್ದು.)

ನಾವು ತಾ. ೨೪-೧೦-೯೦ ಇ. ದಿವಸ ಹೊರಡಬೇಕೆಂದು ಮೊದಲೇ ಗೊತ್ತಾಗಿತ್ತು. ಆ ವೇಳೆಗೆ ಸರಿಯಾಗಿ ನಮ್ಮೆಲ್ಲರು ಪ್ರವಾಸವ ಸಿದ್ಧತೆಯಿಂದ ಹೊರಡಲುದ್ಯುಕ್ತರಾದೆವು ಮತು ಅವ್ವೊತ್ತೇ ಧಾರವಾಡದ ಹಾಗೂ ಬೇರೂರ ಶಾಲಾ ಗುರುಗಳೂ ಕಾಲೇಜದ ಉಪಾಧ್ಯಾಪಕರಾದ ತಾಲಿಮ್ ಮಾಸ್ತರರೂ ಡ್ರಾಯಿಂಗ ಮಾಸ್ತರರೂ ಗಣಿತ ಗುರುಗಳೂ ಶಾಸ್ತ್ರಿಯ ಗುರುಗಳಾವ ಸವದೀರಾಯರೂ ಒಟ್ಟುಗೂಡಿದರು. ಒಟ್ಟು ೩೬ ಜನರಾದೆವು. ಅಮೇಲೆ ವಿದ್ಯಾರ್ಥಿಗಳಾದ ನಾವೆಲ್ಲರು ಆನಂದದಿಂದ ತಾಲಿಮ್ ಮಾಸ್ತರರೊಡನೆ ವ್ಯವಸ್ಥೆಯಿಂದ ಸ್ಟೇಶನ್ನಿಗೆ ನಡೆದೆವು. ಅಲ್ಲಿ ನಮಗೋಸ್ಕರ ಕಾದಿಟ್ಟ ಬಂಡಿಯಲ್ಲಿ ಟಿಕೀಟು ತೆಗೆದುಕೊಂಡು ಕುಳಿತೆವು. ಅವ್ವೊತ್ತು ಉಗಿಬಂಡಿಯು ತಡವಾಗಿ ಬಂದದರಿಂದ ಪ್ರವಾಸ ಸಂಬಂಧವ ನಮ್ಮ ಆತುರತೆಯೂ ಕುತೂಹಲವೂ ಆವೇಶವೂ ಇಮ್ಮಡಿಯಾದವು. ಈ ಪ್ರವಾಸದಲ್ಲಿ ನಿಯಮಿತತನ, ಸಮಯನಿಷ್ಠತೆ, ಕಾರ್ಯದಕ್ಷತೆ, ಶರೀರರಕ್ಷಣೆಗಳೆಂಬವುಗಳೇ ನಾವು ಪಾಲಿಸತಕ್ಕ ಮುಖ್ಯ ಸಂಗತಿಗಳಾಗಿದ್ದವು. ಇವುಗಳ ಉಪಯೋಗವು ವ್ಯವಹಾರದಲ್ಲಿ ಎಷ್ಟಿರುತ್ತದೆಂಬದನ್ನು ವರ್ಣಿಸಲಳವಲ್ಲ.

ಬಳಿಕ ೬ ಗಂಟೆಗೆ ಸರಿಯಾಗಿ ನಾವು ಧಾರವಾಡವನ್ನು ಬಿಟ್ಟೆವು. ಎಷ್ಟೋ ಜನರು ಮಾರ್ಗದಲ್ಲಿ ತಾವು ಹಸಿವಿನಿಂದ ಕಂಗೆಡಬಾರದೆಂದು ನಿರ್ದೋಷವಾದ ಫಲಾಹಾರದ ಸ್ವಾನಸ್ಥೆಯನ್ನು ಮೊದಲೇ ಮಾಡಿಕೊಂಡು ಹೋಗಿದ್ದರು.

ಬೇರೆ ಕೆಲವರು ಹೊದಿಯಲ್ಲಿರುವ ಸ್ಟೇಕನುಗಳಲ್ಲಿ ಫಲಾಪೇ
ರಗಳನ್ನು ತಕ್ಕೊಳ್ಳುವ ಎಣಿಕೆಯಿಂದ ಪಾಗೇ ಬಂದರು. ನ
ಮ್ಮ ಆರಂಭವ ಮಾರ್ಗಕ್ರಮಣವು ರಾತ್ರಿಯಲ್ಲಿಯೇ ಆಯಿ
ತು. ಆಗ ನಮ್ಮ ಗುರುಗಳು ಮೇಲಿಂದ ಮೇಲೆ ಇಳಿದು
ನಮ್ಮ ಸಮೂಹಕಾರವನ್ನು ತೆಗೆದುಕೊಳ್ಳುತ್ತಿದ್ದರು. ಇದ
ರಿಂದ ಅವರ ಜಾಗರೂಕತೆಯೂ ವಿದ್ಯಾರ್ಥಿಗಳ ಮೇಲಿರುವ
ವಿಕಾಗ್ರಲಕ್ಷ್ಯವೂ ಅಕೃತ್ರಿಮಪ್ರೀತಿಯೂ ವ್ಯಕ್ತವಾಗುತ್ತವೆ.
ಈ ಗುಣಗಳ ಮೂಲಕವಾಗಿಯೇ ಪ್ರವಾಸದಲ್ಲಿ ನಮ್ಮಲ್ಲಿ
ಬುಬ್ಬನಿಗಾದರೂ ಯಾವತರದ ಕಷ್ಟವೂ ಸಂಭವಿಸಲಿಲ್ಲ.

ಮಾರ್ಗದಲ್ಲಿ ಆರಂಭಕ್ಕೆ ಹತ್ತಿದ ಸ್ಟೇಕನುಗಳಲ್ಲಿ ಹು
ಬ್ಬಳ್ಳಿಯ ಸ್ಟೇಕನ್ನು ಮಾತ್ರ ಮಿಗಿಲು ತೋರ್ಪಟ್ಟಿಯುಳ್ಳದಿರು
ತ್ತದೆ. ಇವನ್ನು ನಮ್ಮ ಪಾಠಕರಲ್ಲಿ ಎಷ್ಟೋ ಜನರು
ನೋಡಿದವರೇ ಇರಬಹುದು. ಬಳಿಕ ಪರಿಹಾರದ ಸ್ಟೇಕ
ನ್ನು ತಕ್ಕಮಟ್ಟಿಗೆ ಚೆನ್ನಾಗಿರುತ್ತದೆ. ಅದರ ಹತ್ತಿರ ಅ
ದರ ವಿಶಾಲ ಪಾತ್ರೆಯುಳ್ಳ ತುಂಗಭದ್ರೆಯು ನೇತುಮೆಯಾ
ರೂ ತಕ್ಕಮಟ್ಟಿಗೆ ಬೊಡ್ಡದಿರುತ್ತದೆ. ಅದಕ್ಕೆ ಎಳ್ಳಷ್ಟಿಂತ
ಹೆಚ್ಚು ಕಮಾನುಗಳಿರುತ್ತವೆ. ಬಳಿಕ ಕಿವಸಿ ಎಂಬ ಸ್ಟೇ
ಷನ್ನಿಗೆ ಬೆಳಗಾಯಿತು. ಆಗ ನೇತ್ರಗಳ ಉಪಯೋಗವ
ನ್ನು ಮಾಡಿ ನಮ್ಮ ಅವಲೋಕನ ಶಕ್ತಿಯು ಸದಾಯದಿಂದ
ಸೃಷ್ಟಿಸೌಂದರ್ಯವನ್ನು ನೋಡಲಿಕ್ಕೆ ಬಹಳ ಅನುವಾಯ
ತು. ನಮ್ಮ ಮಾರ್ಗದ ಬದಿಗಳ ಅವಲೋಕನದಿಂದ ತಿ
ಳಿದ ಸಂಗತಿಗಳು ಯಾವವೆಂದರೆ:—

ಈ ದೇಶದ ಭೂಮಿಯು ಗುಡ್ಡಗಾಡು; ಅಲ್ಲಲ್ಲಿ ಗುಡ್ಡಗಳ
ಮೇಲೆ ದುರ್ಗಕೋಟೆಗಳುಂಟು. ಆ ಗುಡ್ಡಗಳ ನೆರೆಯ

ಲ್ಲಿಯೇ ದೊಡ್ಡ ದೊಡ್ಡ ಬಂಡೆಗಳ ಗುಂಪುಗಳುಂಟು. ಆ
ವು ದೂರಿಂದ ಸಣ್ಣ ಹಳ್ಳಿಗಳಂತೆ ಕಾಣುತ್ತವೆ. ಅವುಗಳ
ಲ್ಲಿ ಕೆಲವು ಬಾವರಮೇಲೊಂದರಂತೆ ೪೫ ಬಂಡೆಗಳು ತಮ್ಮ
ಗುರುತ್ವಮಧ್ಯವನ್ನು ಕಳೆದುಕೊಳ್ಳದೆ ಬಹು ದಿವಸಗಳಿಂದ
ನಿಂತಿರುತ್ತವೆ. ಅವನ್ನು ನೋಡಿ ನಮ್ಮ ಮಿತ್ರರಿಗೆ ಬಹು
ಚಮತ್ಕಾರ ತೋರಿದ್ದರಿಂದ ಅವರು ಆನಂದದಿಂದ ಜಪ್ಪಾಳ
ಗಳನ್ನು ಬಾರಿಸಿದರು. ಮಾರ್ಗದಲ್ಲಿ ಎಷ್ಟೋ ದೊಡ್ಡ
ದೊಡ್ಡ ಕೆರೆಗಳುಂಟು. ಅವುಗಳಲ್ಲಿ ಕೆಲವುಗಳ ಮಧ್ಯ
ದೊಳಗಿಂದಲೇ ಲೋಹಪಮಾರ್ಗವನ್ನು ಬಯ್ದಿರುತ್ತಾರೆ.
ಆ ಕೆರೆಗಳ ನಡೆಯಲ್ಲಿಯೇ ಅಡಿಕೆ, ತೆಂಗು, ಬಾಳೆಗಳ ಬ
ನಗಳೂ ಈಚ್ಚಿನ ತೋಟಗಳೂ ಇರುತ್ತವೆ. ಕೆಲವೆಡೆಗಳಲ್ಲಿ
ಈಚಲ ಮರಗಳ ಮಧ್ಯವಲ್ಲಿ ಹೊಸದಾಗಿ ಸಾಗುವಾಡಿದ
ಭೂಮಿಯಲ್ಲಿರುವ ಅಡಿಕೆ ಬಾಳೆಗಳ ಬನಗಳು ದುರ್ಜನರ
ಸಮೂಹದಲ್ಲಿರುವ ಸಜ್ಜನರಂತೆ ಬಹ್ವತ್ತವೆ. ಅವುಗಳ ನ
ಡೆಯಲ್ಲಿಯೇ ಬತ್ತದ ಗದ್ದೆಗಳು ಇರುತ್ತವೆ. ಅವುಗಳಲ್ಲಿ
ಕೆಲವು ಇನ್ನೂ ಕೊಯ್ಲಿಗೆ ಬಂದಿದ್ದಿಲ್ಲ. ಮುಂಗಾರಿಯು ಬಿ
ತ್ತಿಗೆಯವು ಮಾತ್ರ ಪೀತಾಂಬರವನ್ನುಟ್ಟುಕೊಂಡ ಭೂದೇ
ವಿಯಂತೆ ಅರಿಶಿನ ಬಣ್ಣದಿಂದ ಕಂಗೊಳಿಸುತ್ತಿತ್ತು. ಮು
ತ್ತೊಂದು ಕಡೆಗೆ ನಮ್ಮ ದೇಶದಲ್ಲಿ ವಿಶೇಷವಾಗಿ ಮಾಲ್ಬಿ ಮಾ
ಳ್ವರ ಕಟ್ಟಡಗಳಲ್ಲಿ ಮಾತ್ರ ತೋರುವ 'ವನಸುಂದರಿ'
ಎಂಬ ವೃಕ್ಷಗಳು ಅಲ್ಲಲ್ಲಿ ಪಟ್ಟಾಗಿ ಬೆಳೆದು ನೋಟಕ್ಕೆ ಬ
ರು ಸೊಗಸನ್ನುಂಟು ಮಾಡುತ್ತಿದ್ದವು. ಅದರೆ ಅತ್ತಕ
ತಿಗೆ, ರೊಕ್ಕದ ಸೈರುಗಳಾದ ಜೋಳ, ಗೋದಿ, ಹತ್ತಿ
ಮುಂತಾದವುಗಳ ವಿಶಾಲವಾದ ಹೊಲಗಳು ವಿಶೇಷವಾಗಿ ಇ
ಲವಿಲ್ಲ. ಮತ್ತು ಕರ್ಲಭೂಮಿಯಿರುವದರಿಂದ ಈ

ಬೆಳೆಗಳೂ ವಿಸ್ತಾರವಾಗಿ ಬರುವದಿಲ್ಲ. ಆದಕಾರಣ ಇತ್ತಕಡೆಯ ರೈತ ಜನರು ಇರತಕ್ಕಷ್ಟು ಧನಾಢ್ಯರಿರುವದಿಲ್ಲ.

ಹೀಗೆ ಬಗೆ ಬಗೆಯ ಚಮತ್ಕಾರಗಳನ್ನೂ ಸೃಷ್ಟಿಸಾಂದರ್ಯವನ್ನು ಸೋಡುತ್ತ ಸುಮಾರು ೬೦ ತಾಸುಗಳವರೆಗೆ ಉಗಿಬಂಡಿಯಲ್ಲಿ ಕುಳಿತು ನಡೆದೆವು. ಮಾರ್ಗದಲ್ಲಿ ತುಮಕೂರು, ಅರಸೀಕೇರಿ, ಮೊದಲಾದ ಹಲಕೆಲವು ದೊಡ್ಡ ಸ್ಟೇಶನುಗಳು ಇರುತ್ತವೆ. ಅವುಗಳಲ್ಲಿ ಫಲಾಹಾರದ ವ್ಯವಸ್ಥೆಯು ತಕ್ಕಮಟ್ಟಿಗೆ ಇರುತ್ತದೆ. ಅಂಗಡಿಕಾರರು ೪ ಪೈಗಳಿಗೆ ೧ ಮುಡ್ಡಿನ್ನುವರು. ಮತ್ತು ಪೈಗೆ ಕಾಸೆನ್ನುವರು. ಜೀನಸುಗಳ ಹೆಸರುಗಳಾದರೂ ಸ್ಥಳಭೇದದಿಂದ ತುಸು ಬೇರೆಯಾಗಿರುತ್ತವೆ. ಈ ಕಾರಣಗಳಿಂದ ನಮ್ಮ ಎಷ್ಟೋ ಮಿತ್ರರಿಗೆ ವ್ಯಾಪಾರದಲ್ಲಿ ತುಸು ತೊಂದರೆಯಾಗುತ್ತಿತ್ತು. ಬೇರೆ ಹಲವು ಸಣ್ಣ ಸ್ಟೇಶನುಗಳಲ್ಲಿ ಉಗಿಬಂಡಿಯು ನಿಲ್ಲದೆ ಮುಂದಕ್ಕೆ ಹೋಗುತ್ತಿತ್ತು. ಹೀಗೆ ಬಹಳ ಬೇಳೆಯವರೆಗೆ ಒಂದೇ ಕಡೆಯಲ್ಲಿದ್ದದರಿಂದ ಮನುಷ್ಯನು ಬೇಸರಿಯುವದು ಸಹಜವು. ಆದರೆ ನಾವು ನೋಡುವ ದೇಶವು ದರ್ಶನೀಯವಾದದ್ದೆಂದು ಕೇಳಿದ್ದರಿಂದಲೂ, ಅದರಲ್ಲಿ ಏನಾದರೂ ಕೌತುಕದ ಸಂಗತಿಗಳನ್ನು ಕಾಣುವೆಂತಲೂ, ನಮ್ಮೊಡನೆ ಗುರುಗಳಿದ್ದದರಿಂದಲೂ ಮತ್ತೂ ಹೆಚ್ಚಿನ ಸಂಗತಿಗಳು ತಿಳಿಯುವವೆಂತಲೂ ನೆನಸಿದ್ದರಿಂದ ನಮಗೆ ಬಹಳ ಆನಂದವಾಯಿತು. ಮತ್ತು ಯಾವಾಗ ಬೆಂಗಳೂರ ಸ್ಟೇಶನವನ್ನು ಕಾಣುವೆವೆಂದು ಆತುರಪಟ್ಟಿದ್ದೆವು.

(ಮುಂದಕ್ಕೆ ಸಾಗುವದು)

ಶಾಲಾಪತ್ರಿಕೆ.

ಪದ್ಯಂ.

ಪ್ರಿಯವಿದ್ಯಾಗುರುವರ್ಯರುನ್ನತಿಕೆಯಂ ಸಚ್ಛಿಕ್ಷಣೋತ್ಕರ್ಷಮಂ ।
ಭಯಸುತ್ತಂ ಪ್ರತಿವಾಸದಾದಿಗೊಲವಿಂದೀಪತ್ರಮಂ ಮುದ್ರಿಸಿ ॥
ನಯದಿಂದಿತ್ತಪೆವೋದುವರ್ಗೆನುಗುಣಂ ತೋರಲ್ಕೆಕೈಕೊಂಬುದೈ ।
ದಯೆಯಿಂದೋಷವತಿದ್ದವೇಳ್ವುದುಬುಧರ್ಜ್ಞಾನಾಭಿವೃದ್ಧಿಪ್ರಿಯರ್॥೧॥

EDUCATIONAL INTELLIGENCE AND USEFUL NOTES.

ವಿದ್ಯಾಸುಧಾರಣಾ ಸಂಬಂಧದ ವೃತ್ತಾಂತಗಳು.

ಶ್ರೀಮಂತ ಸಯಾಜಿರಾವ ಮಹಾರಾಜ ಇವರ ಆಶ್ರಯದಿಂದ ರಚಿಸಲ್ಪಡುವ ಗ್ರಂಥಸಂಗ್ರಹವು.

ರಾಜಾ ಮತ್ತು ಪ್ರಜಾ ಇವರ ಸಂಬಂಧವು ತಂದೆ ಮಕ್ಕಳಿಗಿರುವ ಸಂಬಂಧವನ್ನು ಹೋಲುತ್ತದೆಂಬ ಕಲ್ಪನೆಯು ಬಹು ಪ್ರಾಚೀನಕಾಲದ್ದೂ ಸಯುಕ್ತಿಕವಾದದ್ದೂ ಇರುತ್ತದೆ. ಚಿಕ್ಕಂದಿನಲ್ಲಿ ಮಕ್ಕಳು ದುರ್ಬಲರೂ ಜ್ಞಾನಶೂನ್ಯರೂ ಇರುತ್ತಾರೆ. ಆದದ್ದರಿಂದ ಅವರ ಸಾಮರ್ಥ್ಯಾಭಿವೃದ್ಧಿಗೂ ಬುದ್ಧಿವಿಕಾಸಕ್ಕೂ ತಕ್ಕ ಏರ್ಪಾಡುಗಳನ್ನು ಮಾಡುವ ಭಾರವು ತಂದೆಯಮೇಲೆ ಇರುತ್ತದೆ. ಆದನ್ನು ಅವನು ಹೆಚ್ಚು ಕಡಿಮೆ ಜರಗಿಸಿದಂತೆ ಮಕ್ಕಳು ಬುದ್ಧಿವಂತರು ಇಲ್ಲವೆ ಬುದ್ಧಿಹೀನರು ಆಗುವರು. ಇದೇಮೇರಿಗೆ ಪ್ರಜೆಗಳ ಸಜ್ಞಾನಸ್ಥಿತಿಗೆ ಅರಸನೇ ಹೊಣೆಗಾರನು. ಮಗನ ಶರೀರ ಸಾಮರ್ಥ್ಯವನ್ನು ಬೆಳಸುವದು ತಂದೆಗೆ ಅವಶ್ಯವಿದ್ದಂತೆ ಅವನ ಭಾಷಾಜ್ಞಾನವನ್ನು ಸಹ ಬಗೆಬಗೆಯ ಉತ್ತ

ಮು ಮಾರ್ಗಗಳಿಂದ ಬೆಳೆಯುವಂತೆ ಮಾಡುವದು ತಂದೆಯ ಕರ್ತವ್ಯವು. ಹುಡುಗನು ಶಬ್ದಗ್ರಹಣ ಮಾಡುವ ಸ್ಥಿತಿಗೆ ಬಂದು ಮುಟ್ಟಿದ ಕೂಡಲೆ ಅವನೆದುರಿಗೆ ಉತ್ತಮವಾದ ಶಬ್ದಗಳನ್ನಷ್ಟೇ ನುಡಿಯಬೇಕು. ಕೆಟ್ಟನುಡಿಗಳ ಗಾಳಿಯು ಸಹ ಅವನ ಕಿವಿಗೆ ಬೀಳದಂತೆ ಎಚ್ಚರವಾಗಿರಬೇಕು. ಅವನು ತುಸು ದೊಡ್ಡವನಾಗಿ ಅತ್ತಿತ್ತ ನಡಿದಾಡ ಹತ್ತಿದನೆಂದರೆ ಅವನಬಗ್ಗೆ ಹೆಚ್ಚು ಜಪ್ತಿಸಬೇಕಾಗುತ್ತದೆ. ಈ ಎಲ್ಲ ಮಾತುಗಳು ಪ್ರಜಾ ಮತ್ತು ರಾಜಾ ಇವರ ಸಂಬಂಧಕ್ಕೆ ಸರಿಯಾಗಿ ಹತ್ತುತ್ತವೆ. ಪ್ರಜೆಗಳು ಅಜ್ಞಾನಾವಸ್ಥೆಯಲ್ಲಿರುವಾಗ್ಗೆ ಅವರಿಗೆ ಉಳಿದ ಮಾತುಗಳೊಂದಿಗೆ ಸುನೀತಿಶಿಕ್ಷಣ, ಸುವಿಚಾರಶಿಕ್ಷಣ, ಸುಶಬ್ದಶಿಕ್ಷಣ, ಇವುಗಳ ಅವಶ್ಯಕತೆಯಾವದೂ ಇರುತ್ತದೆ. ತಂದೆಯು ತನ್ನ ಮಗನಸಲುವಾಗಿ ತಕ್ಕಷ್ಟು ಲಕ್ಷ್ಯಗೊಡದಿದ್ದರೆ, ಆ ಹುಡುಗನು ತುಂಟನಾಗಿ ಓಣಿ ಓಣಿ ಅಡ್ಡಾಡುತ್ತ ಕಿವಿಗೆಬಿದ್ದ ಅಪಶಬ್ದಗಳನ್ನು ನುಡಿಯುತ್ತ ಕೆಟ್ಟ ಹುಡುಗರೊಳಗೆ ಸೇರಿ ತಾನೂ ಅವರಂತೆ ದುರ್ಮಾರ್ಗಿಯಾಗಿ ಕೆಟ್ಟುಹೋಗುವನು. ಅದೇಮೇರೆಗೆ ತಂದೆಯು ಸ್ಥಳದಲ್ಲಿರುವ ಅರಸನು ತನ್ನ ಪ್ರಜೆಗಳಬಗ್ಗೆ ದುರ್ಲಕ್ಷ್ಯ ಮಾಡಿದರೆ, ಅವರು ಸಹ ಅಪಶಬ್ದಗಳನ್ನು ನುಡಿಯಲಿಕ್ಕೂ ಅಯೋಗ್ಯ ವಿಚಾರಗಳನ್ನು ಮಾಡಲಿಕ್ಕೂ ಸಹಜವಾಗಿಯೇ ಪ್ರವರ್ತಿಸುವರು. ಈ ಸ್ಥಿತಿಯು ಒಳ್ಳೆಯದೆಂದು ಯಾರು ಹೇಳುವರು? ಇಂಥ ಸ್ಥಿತಿಯಿಂದ ಮಗನನ್ನು ಕಾಪಾಡಿದ ತಂದೆಯೇ ನಿಜವಾದ ತಂದೆಯು. ಅದೇಮೇರೆಗೆ ಹೀನಸ್ಥಿತಿಯಿಂದ ಪ್ರಜೆಗಳನ್ನು ಸಂರಕ್ಷಿಸಿದ ಅರಸನೇ ಅರಸನೆಂಬ ಪೆಸರಿಗೆ ತಕ್ಕವನು. ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡಲಿಕ್ಕೆ ಯತ್ನಿಸುವಂಥ ತಂದೆ

ಗಳು ನಮ್ಮ ದೇಶದಲ್ಲಿ ಈಗ್ಗೆ ಬಹು ಕಡಿಮೆ; ಪ್ರಜೆಗಳ ಸುಧಾರಣೆ ಬಯಸುವ ದೇಶಿಯ ಅರಸರಂತೂ ತೀರ ಅಪರೂಪ. ಆದರೆ ನಮ್ಮ ಸುದೈವದಿಂದ ಬಡೋದೆಯ ಮಹಾರಾಜರು ತಮ್ಮ ಹೆಸರಿಗೆ ತಕ್ಕಂತೆ ಪ್ರಜಾಪಾಲನ ಕ್ರಮ ನಡಿಸಿದ್ದಾರೆ. ವಿದ್ಯೆಯ ಅಭಿರುಚಿಯು ಪ್ರಜೆಗಳಲ್ಲಿ ಹುಟ್ಟುವವರೆಗೆ ವಿದ್ಯಾದಾನವನ್ನು ಧರ್ಮಾರ್ಥವಾಗಿ ಮಾಡುವದು, ಗ್ರಂಥಕರ್ತರಿಗೆ ದ್ರವ್ಯದ್ವಾರದಿಂದಲೂ ಸನ್ಮಾನದಿಂದಲೂ ಉತ್ತೇಜನ ಕೊಡುವದು, ಶಿಕ್ಷಣಕ್ಕೆ ಮನಸನ್ನು ಒಲಿಸುವ ಮತ್ತು ಜ್ಞಾನಾಭಿವೃದ್ಧಿಯ ಲವಲವಿಕೆಯನ್ನು ಕ್ರಮೇಣ ಹೆಚ್ಚಿಸುವ ಸದ್ಗ್ರಂಥಗಳನ್ನು ನಿರ್ಮಿಸುವದು ಇವೇ ಮೊದಲಾದ ಪ್ರಯತ್ನಗಳನ್ನು ನಡಿಸಿ, ತಮ್ಮ ಅಧಿಕಾರದ ಮತ್ತು ಜ್ಞಾನದ ಉಪಯೋಗವನ್ನು ಒಳ್ಳೇ ರೀತಿಯಿಂದ ಮಾಡತೊಡಗಿದ್ದಾರೆ. ಈ ಮಹಾರಾಜರ ಆಶ್ರಯದಿಂದ ಎಷ್ಟೋ ಉಪಯುಕ್ತವಾದ ಪುಸ್ತಕಗಳು ಸಿದ್ಧವಾಗಿರುತ್ತವೆ. ಇದು ಅವರಿಗೆ ಭೂಷಣವೆಂದು ಇಲ್ಲಿ ಹೇಳುವ ಕಾರಣವಿಲ್ಲ.

ಈಗಿನ ಯಾವದೊಂದು ವರ್ತಮಾನಪತ್ರವನ್ನು ತೆಗೆದು ನೋಡಿದರೆ ಸಾಕು, ಅದರಲ್ಲಿ ತಂತಿಯ ಹೊಸ ಸುದ್ದಿ ಎಂಬ ಸದರಿನ ಶಿರೋಭಾಗದಲ್ಲಿ "ರೂಟರ" ಎಂಬ ಅಕ್ಷರಗಳು ದೃಷ್ಟಿಗೆ ಬೀಳುತ್ತವೆ. ಈ ರೂಟರ ನೆಂಬ ಗೃಹಸ್ಥನ ವೃತ್ತಾಂತವು ತುಸು ಸೋಜಿಗವಾದದ್ದೂ ವಾಚನಾರ್ಹವಾದದ್ದೂ ಇರುವದರಿಂದ ಅದನ್ನು ಇಲ್ಲಿ ಹೇಳುವೆವು. ಹೇರ್ನರ ಫಾನ್ ಸೀಮೆನ್ಸನೆಂಬ ಒಬ್ಬ ಜರ್ಮನೀದೇಶದ ಪೆಸರಾದ ಇಂಜಿನಿಯರನು ಮೊನ್ನೆ ಮೊನ್ನೆ ತೀರಿಕೊಂಡನು. ಅವನು ಬರೆದಿಟ್ಟ ತನ್ನ ಚರಿತ್ರದಲ್ಲಿ ಕೆಳಗಿನ ಸಂಗತಿಯು ವಿವರಿಸಲ್ಪಟ್ಟಿದೆ.

ಈ ಇಂಜಿನಿಯರನು ವಿಶ್ವವಿದ್ಯಾಲಯದಲ್ಲಿ ಬಳ್ಳಿಜಾಣನಾಗಿದ್ದರಿಂದ ೧೮೫೦ನೆಯ ವರ್ಷದಸುಮಾರಿನಲ್ಲಿ ವೈಫ್ವಿರ್ಯರ್ ಮತ್ತು ಕಲೋನ್ ಇವೆರಡು ಪಟ್ಟಣಗಳ ನಡುವೆ ತಾರಾಯಂತ್ರವನ್ನು ನಡಿಸುವ ಅಪ್ಪಣೆಯು ಅವನಿಗೆ ದೊರೆಯಿತು. ಅವನು ಈ ಕೆಲಸದಲ್ಲಿ ತೊಡಗಿರುವಾಗ್ಗೆ ಒಂದುದಿವಸ ಬಬ್ಬ ಹೆಂಗಸು ಅವನ ಬಳಿಗೆ ಬಂದು ಕಣ್ಣೀರು ಸುರಿಸುತ್ತ ಅಂದದ್ದು:—"ಮಹಾರಾಯಾ, ನೀನು ಈ ತಂತಿಗಳನ್ನು ಹಾಕಿ ನಮ್ಮಂಥ ಬಡವರ ಹೊಟ್ಟೆಯ ಮೇಲೆ ಮಾತ್ರ ಕಾಲು ಕೊಟ್ಟ. ನನ್ನ ಗಂಡನು ಪಾರಿವಾಳಗಳನ್ನು ಸಾಕಿ ಅವುಗಳ ಕೊರಳಿನಲ್ಲಿ ಚೀಟಿಗಳನ್ನು ಕಟ್ಟಿ ಬಂದು ಊರಿನ ಸುದ್ದಿಯನ್ನು ಮತ್ತೊಂದೂರಿಗೆ ಮುಟ್ಟಿಸುವ ಉದ್ಯೋಗವನ್ನು ಮಾಡುತ್ತಿರುವನು. ಬ್ರುಸೆಲ್ಸ ಮುಂತಾದ ಪಟ್ಟಣಗಳ ಕೂಡ ಈ ಅವನ ಉದ್ಯೋಗವು ಚನ್ನಾಗಿ ಸಾಗಿ, ಅವನಿಗೆ ತಕ್ಕಮಟ್ಟಿಗೆ ಹಣವು ದೊರೆಯುವದು. ಆದರೆ ಈ ನಿನ್ನ ಯಂತ್ರದಿಂದ ನಮ್ಮ ಉದ್ಯೋಗವು ತೀರ ಕಟ್ಟಾಗಿ ಬಾಯಿಲೆ ಗಡ್ಡೀಕೊಟ್ಟಂತೆ ಆಗುವದು." ಈ ಹೆಂಗಸಿನ ನುಡಿಕೇಳಿ ಸೀಮೆಸ್ಸನು ಆಶ್ಚರ್ಯಪಟ್ಟು ನಗುತ್ತ ಹೇಳಿದ್ದು:—"ಮಗಳೇ, ಇನ್ನುಮೇಲೆ ಆ ನಿಮ್ಮ ಹಕ್ಕಿಗಳನ್ನೆಲ್ಲ ಕೊಂದು ತಿಂದುಬಿಡಿರಿ. ನೀವಿಬ್ಬರು ಲಂದನ ಪಟ್ಟಣಕ್ಕೆ ಹೋಗಿ ಅಲ್ಲಿ ತಂತಿಯು ಮುಖಾಂತರವಾಗಿ ಸುತ್ತಲು ಸುದ್ದಿಯನ್ನು ಮುಟ್ಟಿಸುವದೊಂದು ಸಂಸ್ಥೆಯನ್ನು ಸ್ಥಾಪಿಸಿದರೆ, ನಾನು ನಿಮಗೆ ಚನ್ನಾಗಿ ಸಹಾಯ್ಯ ಮಾಡುವೆನು." ಅವಳ ಗಂಡನ ಹೆಸರು ಹೇರ ರಾಯಟೇರ (ರೂಟರ) ನೆಂಬದಿತ್ತು. ಅವನು ಪ್ರಾಯವವನಿದ್ದನು. ಇಂಜೆನಿಯರನ ಉಪದೇಶವು ಆ ತರುಣ ದಂಪತಿಗಳ ಮನಸಿಗೆ ನಟ್ಟು,

ಅವರು ಕೂಡಲೆ ಲಂದನದ ಹಾದಿಯ ಹಿಡಿದರು. ಅವನು ಅಲ್ಲಿಗೆ ಹೋಗಿ ತಂತಿಯಿಂದ ಸುದ್ದಿಯನ್ನು ಕಳುಹುವ ಬಂದು ಸ್ವತಂತ್ರವಾದ ಏಜನ್ಸಿಯನ್ನು ಸ್ಥಾಪಿಸಿದನು. ಬರಬರುತ್ತ ಅವರ ಉದ್ಯೋಗಕ್ಕೆ ಕಳೆಯೇರಿ ಅದು ಈಗ ಬಹಳೇ ಬೆಳೆದಿರುತ್ತದೆ. ಸದ್ಯಕ್ಕೆ ಪೃಥ್ವಿಯ ಬೇರೆ ಬೇರೆ ಭಾಗಗಳಲ್ಲಿ ಪ್ರಸಿದ್ಧವಾಗುತ್ತಿರುವ ದೊಡ್ಡದೊಡ್ಡ ಎಲ್ಲ ವರ್ತಮಾನ ಪತ್ರಗಳಿಗೆ ಈ ಏಜನ್ಸಿಯಿಂದಲೇ ತಂತಿಯ ಮುಖಾಂತರವಾಗಿ ಸುದ್ದಿಯು ಮುಟ್ಟಿಸಲ್ಪಡುತ್ತದೆ. ಸುದ್ದಿಯನ್ನು ತರಿಸಲಿಕ್ಕೆ ಅನುಕೂಲವಿರುವ ಪೃಥ್ವಿಯ ಎಲ್ಲ ಭಾಗಗಳಿಂದಲೂ ಅವರು ಸುದ್ದಿಯನ್ನು ತರಿಸದೆ ಬಿಡುವದಿಲ್ಲ. ಈಪ್ರೊತ್ತಿನದಿವಸ ಎಲ್ಲಿಯಾವರೂ ಬಂದು ಸಂಗತಿಯು ವರ್ತಿಸಿದ ತಾಸು ಎರಡು ತಾಸುಗಳಲ್ಲಿಯೇ ಅದು ಇಡಿ ಪೃಥ್ವಿಯ ಮೇಲೆಲ್ಲ ಹರಹಲ್ಪಡುತ್ತದೆ. ತೀರ ಬಡ ಸ್ಥಿತಿಯಲ್ಲಿದ್ದ ರೂಟರನು ತನ್ನ ಉದ್ಯೋಗದ ಬಲದಿಂದ 'ಬ್ಯಾರನ' ಎಂಬ ಗೌರವದ ಪದವಿಯನ್ನು ಪಡೆದು, ಬಳ್ಳೆ ಶ್ರೀಮಂತನಾಗಿ ದಿಗಂತ ಕೀರ್ತಿಯನ್ನು ಪಡೆದನು. ಇದು ಉದ್ಯೋಗದ ಫಲ.

ಹೊಸ ಕೌನ್ಸಿಲ ಆಕ್ಟಿನಂತೆ ೮ ಸಭಾಸದರನ್ನು ಆರಿಸುವ ಹಕ್ಕು ಈ ಇಲಾಖೆಯ ಬೇರೆ ಬೇರೆ ಭಾಗದ ಜನರಿಗೂ ವ್ಯಾಪಾರದ ಸಂಘಗಳಿಗೂ ವಿದ್ಯಾಪೀಠದವರಿಗೂ ಕೊಡಲ್ಪಟ್ಟಿತ್ತು. ಆಮೇರೆಗೆ ವಿದ್ಯಾಪೀಠದವರು ಹೊರತಾಗಿ ಉಳಿದ ಜನರು ತಮ್ಮ ತಮ್ಮ ಪಕ್ಷದಿಂದ ಯೋಗ್ಯರಾದ ಸಭ್ಯಗೃಹಸ್ಥರನ್ನು ಆರಿಸಿ ಅವರ ಹೆಸರುಗಳನ್ನು ಸರಕಾರದವರಿಗೆ ಸೂಚಿಸಿದರು. ಆ ಗೃಹಸ್ಥರು, ಮತ್ತು ಸರಕಾರ

ಹವರು ನೇಮಿಸಿದ ಬೇರೆ ಗೃಹಸ್ಥರು, ಜುಲೈ ತಿಂಗಳಿನ
ಎಂಟನೆಯ ತಾರೀಖಿಗೆ ಪುಣೆಯಲ್ಲಿ ಸಭೆಗೂಡಿ ತಮ್ಮ ಕೆಲಸ
ನನ್ನು ಕೈಕೊಂಡರು. ಜನರು ಆರಿಸಿದ ಮತ್ತು ಸರಕಾರದ
ನರು ನೇಮಿಸಿದ ಸಭಾಸದರ ವಿವರವು ಕೆಳಗೆ ಬರೆದಂತೆ:—

ಯುರೋಪಿಯನ್.	ನೇಟಿವ್ಹ.
ಬಿ. ಆ. ಲಾರ್ಡ ಹಾರಿಸ. (ಅಧ್ಯಕ್ಷ).	ಆ. ರಾ. ಬ. ಉಧಾರಾನು ಮುಳಚಂದ.
ಬಿ. ಮಿ. ಬರ್ಡವುಡ.	ಆ. ರಾ. ಬ. ರಣಛೋಡಲಾಲ.
ಬಿ. ಮಿ. ಟ್ರೆವ್ಹಾರ.	ಆ. ಖಾ ಬ. ದೊರಾವಜೀ ಪ
ಬಿ. ಮಿ. ಲ್ಯಾಂಗ.	ಟವುಜೀ.
ಬಿ. ಮಿ. ನ್ಯೂಜಂಟ.	ಆ. ಮಿ. ಪೀ. ಎಮ್. ಮೇಥ್ಹಾ.
ಬಿ. ಮಿ. ಮಕೆನ್‌ಜೀ.	ಆ. ಮಿ. ಗ. ದಾ. ಮಾನಶೇ.
ಬಿ. ಮಿ. ಕರೀ.	ಆ. ಮಿ. ವಿ. ರ. ನಾತೂ.
ಬಿ. ಮಿ. ಮಕೊಡ್ನಲ್.	ಆ. ರಾ. ಬ. ಮ. ಗೋ. ರಾನಡೆ
ಬಿ. ಮಿ. ಬ್ಯಾಟೀ.	ಆ. ಮಿ. ಜೆ. ಹ. ಸೆಟಲವಾಡ.
ಬಿ. ಮಿ. ಆಗ್ಲೀನಮ್.	ಆ. ಖಾ. ಬ. ಹಸನ ಅಲ್ಲೀ
ಬಿ. ಮಿ. ಕಟಲವರ್ಥ.	ಎಫೆಂಡಿ.
ಬಿ. ಮಿ. ಕೊೀ.	ಆ. ಮಿ. ವಾಡಿಯಾ.

ಮೇಲಿನ ಗೃಹಸ್ಥರ ಹೊರ್ತು ಯುರೋಪಿಯನ ಜನ
ರಲ್ಲಿ ಸೇನಾಪತಿಗಳು ಮತ್ತು ನೇಟಿವ್ಹ ಜನರಲ್ಲಿ ವಿದ್ಯಾಪೀ
ಠದವರಿಂದ ಆರಿಸಲ್ಪಟ್ಟ ಆ. ಮಿ. ಯಾಜ್ಞಿಕ ಇವರಿಬ್ಬರು
ಸಾಜರು ಇದ್ದಿಲ್ಲ. ನೆರೆವ ಸಭಿಕರಲ್ಲಿ ಆನರೆಬಲ ಮೇಥ್ಹಾ,
ನಾತೂ, ಆಗ್ಲೀನಮ್ ಮುಂತಾದವರು ಸದ್ಯಕ್ಕೆ ವಿದ್ಯಾಖಾ
ತೆಯ ಸಂಬಂಧವಾಗಿ ಸರಕಾರದವರು ಮಾಡುವ ಪೆಚ್ಚಟ್ಟವು
ಕಡಿಮೆಯಾಗಿದೆ, ಅದನ್ನು ಹೆಚ್ಚಿಸಬೇಕೆಂದು ಸೂಚಿಸಿದರು.
ಇದಕ್ಕೆ ಇಲಾಖಾಧಿಪತಿಗಳ ಬಪ್ಪಿಗೆಯಾದರೂ ಅದೆ. ಇವ
ರಿಂದ ಪ್ರಾಥಮಿಕ ವರಿಷ್ಠ ಶಿಕ್ಷಣಗಳು ಮುಂದೆ ಭರದಿಂದ
ಸಾಗುವ ಚಿಹ್ನವು ತೋರುತ್ತದೆ.

ಅನಿಷ್ಟ ಚಿಹ್ನಗಳು.—ಬಕರೀದದಿಂದಿತ್ತಲಾಗಿ ಹಿಂದೂ ಮುಸಲ್ಮಾನರಲ್ಲಿ ನಿಕರವ ಜಗಳಗಳು ಈ ದೇಶದ ಬೇರೆ ಬೇರೆ ಭಾಗಗಳಲ್ಲಿ ನಡದಿರುವ ಸುದ್ದಿಗಳನ್ನು ಕೇಳುತ್ತಿದ್ದೆವಷ್ಟೇ; ಆದರೆ ದೈವದುರ್ವಿಲಾಸದಿಂದ ಅವುಗಳ ಘಾಳಿ ತಗಲಿ ಪೊಹರಮುದಲ್ಲಿ ನಮ್ಮ ಇಲಾಖೆಯಲ್ಲಿ ಸದ ಜ್ಞಾನಾಗಡ ಸಂಸ್ಥಾನದೊಳಗಣ ಪ್ರಭಾಸಪಟ್ಟಣದಲ್ಲಿ ಹಿಂದೂ ಮುಸಲ್ಮಾನರೊಳಗೂ ಕಿಡಿಕಿಡಿಯಾದ ಕದನವೆಸಗಿ ಗುಡಿ ಗುಂಡಾರಗಳು ಹಾಳಾದದ್ದಲ್ಲದೆ ಕೆಲವು ಬಡ ಸನ್ಯಾಸಿಗಳೂ ಮಹಾಂತರೂ ಕ್ರೂರತನದಿಂದ ಕೊಲ್ಲಲ್ಪಟ್ಟರು. ಈ ಹಿಂಸೆಯು ದಾದು ಮುಟ್ಟಿಸುವದಕ್ಕಾಗಿ ಕೆಲವು ಮುಂಬಯಿಯ ಸದ್ಗೃಹಸ್ಥರು ಉದ್ಯೋಗ ಮಾಡುವಷ್ಟರಲ್ಲಿಯೇ ಮುಂಬಯಿಯೊಳಗೆಯೇ ಮೊದಲ ಅಮಾವಾಸಿಯ ದಿವಸ ಭಯಂಕರವಾದ ದಂಗೆ ಎದ್ದು ೩।೪ ದಿವಸ ಆ ದೊಡ್ಡ ಪಟ್ಟಣದ ವ್ಯಾಪಾರವು ಪೂರಾ ಕಟ್ಟಾಗಿ ನೋಡಿದವರ ಕೊಲೆ ಸುಲಿಗೆಗಳೇ ನಡೆದಿದ್ದವು. ಈ ದಂಗೆಯ ಸುಳುವು ಪೋಲಿಸರಿಗೆ ಮೊದಲೇ ಬಿತ್ತಿತ್ತು. ಆದರೆ ಅವರ ಬಗ್ಗೆ ಯೋಚನೆಯ ವ್ಯವಸ್ಥೆಯನ್ನು ಅವರು ಮಾಡಲಿಲ್ಲ. ದಂಗೆ ಎದ್ದಾಗಿನಿಂದ ಪೊಲೀಸರು ಬಹು ಶ್ರಮದಿಂದ ಅದನ್ನು ನಿಲ್ಲಿಸುವದಕ್ಕೆ ಯತ್ನಿಸಿದರೂ ಅದು ಅವರಿಗೆ ಅಸಾಧ್ಯವಾದದ್ದರಿಂದ ಕಡೆಗೆ ದಂಡಿನ ಸಹಾಯ್ಯವನ್ನು ಬೊರಕಿಸಬೇಕಾಯಿತು. ಈ ದಂಗೆಯು ಮೂರು ದಿವಸಗಳವರೆಗೆ ಬಂದೋಬಸ್ತನ್ನು ನಡೆದಿತ್ತು. ಅದರಲ್ಲಿ ಸುಮಾರು ೫೦ ಜನರು ಯಮನೂರು ಕಂಡರೆಂತಲೂ, ನೂರಾರು ಜನರು ಅದೇ ಪಟ್ಟಣದ ಹಾದಿಯನ್ನು ಹಿಡಿದಿರುವರೆಂತಲೂ ಎಷ್ಟೋಜನರು ಶಾಶ್ವತ ಪಟ್ಟರುವರೆಂತಲೂ ಕೇಳಿ ಯಾರಿಗಾವರೂ ವಿಷಾದವಾಗ

ಬಹುದು. ಈ ಸುದ್ದಿಯನ್ನು ಕೇಳಿದ ಕೂಡಲೆ ರಾಣೀ ಸಾಹೇಬರು ತಮಗಾದ ದುಃಖವನ್ನು ಸೂಚಿಸಿ ತೀವ್ರ ಸ್ವಸ್ಥತೆಯುಂಟಾಗುವದೆಂಬ ಕೋರಿಕೆಯನ್ನು ಪ್ರಕಟಿಸಿರುತ್ತಾರೆ. ಇಲಾಖಾಧಿಪತಿಗಳು ನಾಲ್ಕೂ ಕಡೆಯಿಂದ ಪೋಲೀಸರನ್ನೂ ದಂಡಿನವರನ್ನೂ ಕಳುಹಿಸಿ, ಶಾಂತತೆಯನ್ನು ನೆಲೆಗೊಳಿಸುವದಕ್ಕೆ ತಕ್ಕ ಉಪಾಯಗಳನ್ನು ಮಾಡಿರುತ್ತಾರೆ. ಈ ದಂಗೆಯ ಪ್ರವರ್ತಕರು ಬಹುತರ ಅಶಿಕ್ಷಿತ ಹಿಂದೂ ಮುಸಲ್ಮಾನ ಜನರಿರುತ್ತಾರೆ. ಒಟ್ಟಿಗೆ ಅಜ್ಞಾನದಿಂದ ಅನರ್ಥಗಳು ಒದಗುತ್ತವೆ.

ಬ್ರಹ್ಮದೇಶದ ದಕ್ಷಿಣಕ್ಕೆ ಸಯಾಮವೆಂಬದೊಂದು ಸ್ವತಂತ್ರ ಸಂಸ್ಥಾನವಿರುತ್ತದಷ್ಟೇ. ಈ ಸಂಸ್ಥಾನದ ದಕ್ಷಿಣಕ್ಕೂ ಪೂರ್ವಕ್ಕೂ ಫ್ರೆಂಚರ ಸ್ವಂತ ಸಂಸ್ಥಾನಗಳೂ ಆಶ್ರಿತ ಸಂಸ್ಥಾನಗಳೂ ಇರುತ್ತವೆ. ಈ ಸಂಸ್ಥಾನಗಳಲ್ಲಿ ಸಯಾಮದ ಜನರು ಕೊಲೆ ಸುಲಿಗೆಗಳನ್ನು ಮಾಡಿದರಿಂದ ಫ್ರೆಂಚ ಸೈನಿಕನು ಸಯಾಮದ ಅಖಾತವನ್ನು ಸೇರಿ ಬೆಂಕಾಕ ರಾಜಧಾನಿಯನ್ನು ತಗೆದುಕೊಳ್ಳುವ ಉಪಕ್ರಮ ನಡಿಸಿದನು. ಆಗ್ಗೆ ಸಯಾಮದವರು ಕಣ್ಣು ತೆರೆದು ತಮ್ಮ ಅಲ್ಪ ಸಾಮರ್ಥ್ಯವನ್ನು ತಿಳುಕೊಂಡು, ಫ್ರೆಂಚರು ತಮ್ಮ ಲುಕ್ಷ್ಯಾನದ ಭರ್ತಿಗಾಗಿಯೂ ಇತರ ವೆಚ್ಚಕ್ಕಾಗಿಯೂ ಬೇಡಿದಷ್ಟು ಧನವನ್ನು ಕೆಲವು ಸೀಮಾಂತರಗಳನ್ನೂ ಕೊಡಲಿಕ್ಕೆ ಒಪ್ಪಿಕೊಂಡು ತಂಟೆ ಮುಗಿಸಿದರು. ತನ್ನ ಅಳವನ್ನು ತಿಳಿದುಕೊಳ್ಳದೆ ಬಲಿಷ್ಠರ ಕೂಡ ಕಾಲು ಕೆದರಿ ಜಗಳ ತೆಗೆದರೆ ಅದರ ಪರಿಣಾಮವು ಹೀಗೆ ಆಗುವದು.

METHODS OF TEACHING.

ಕಲಿಸುವ ಪದ್ಧತಿಗಳು.

ನಿ ಬಂ ಧ.

(೧೪೬ನೆಯ ಪುಟದಿಂದ ಮುಂದೆ ಸಾಗಿದ್ದು.)

೩. ಈಗಿನ ಪುಸ್ತಕಗಳು ಓದುವವರಿಗೆ ಚೆನ್ನಾಗಿ ಅನು ಕೂಲವಾಗುವಂತೆ ಕಟ್ಟಲ್ಪಡುತ್ತವೆ. ಬೇಕಾದ ಪುಸ್ತಕದ ಯಾವ ಭಾಗವನ್ನಾದರೂ ಕೂಡಲೇ ತೆರೆಯಬಹುದು. ಓಲೆಗಳನ್ನು ಒಟ್ಟುಗೂಡಿಸಿ ಆ ಪುಟಗಳ ಮೇಲೆ ದಪ್ಪ ಕಾಗದದ ರಟ್ಟುಹಾಕಿ ಪುಸ್ತಕಗಳನ್ನು ಕಟ್ಟುತ್ತಾರೆ. ಸಾ ಧಾರಣವಾಗಿ ಬೆಲೆಯುಳ್ಳ ಪುಸ್ತಕಗಳಿಗೆ ಭಂಗಾರದ ಮೊಲಾ ಮಿನಿಂದ ಕೊರೆದ ಅಕ್ಷರಗಳುಳ್ಳ ಗೊಂಡೆಯು ಹೂಗಳಿಂದ ಅಲಂಕೃತವಾದ ಹದಮಾಡಿದ ದಪ್ಪಚರ್ಮದ ಅಚ್ಛಾದನೆಗ ಳಿರುತ್ತವೆ. ಅವುಗಳ ಒಣಿಗೆ ಭಂಗಾರದ ಮೊಲಾಮು ಕೊಟ್ಟಿರುತ್ತದೆ. ಪುಸ್ತಕಗಳನ್ನು ಭದ್ರವಾಗಿ ಮುಚ್ಚಲಿ ಕ್ಕೆಬರುವಂತೆ ಅವಕ್ಕೆ ಲೋಹದ ಕೊಂಡೆಗಳಿರುತ್ತವೆ. ಉಳಿ ದ ಪುಸ್ತಕಗಳು ಇಷ್ಟುಚೆನ್ನಾಗಿ ಕಟ್ಟಲ್ಪಡುವದಿಲ್ಲ. ಅದರಿಂದ ಅವುಗಳನ್ನು ಕಟ್ಟುವದಕ್ಕೆ ಅಷ್ಟು ವೆಚ್ಚ ಹತ್ತುವದಿಲ್ಲ. ಎರಡೂಬದಿಗಳ ಮೇಲೆ ಬರೆಸಿದ ಓಲೆಯ ಪ್ರತಿಯೊಂದು ಬದಿಗೆ ಪುಟವೆಂಬ ಹೆಸರು. ಪುಟಗಳ ಮೇಲೆ ಅಂಕೆಗಳು ಬರೆಸಲ್ಪಡುತ್ತವೆ. ಪುಸ್ತಕದ ಮೊದಲನೆಯ ಓಲೆಯು ಸಾಧಾ ರಣವಾಗಿ ಬರಿದಾಗಿರುವದು. ಎರಡನೆಯ ಪುಟದ ಮೇಲೆ ಪುಸ್ತಕದ ಹೆಸರೂ ಗ್ರಂಥಕರ್ತನ ಹೆಸರೂ ತತ್ಸಂಬಂಧ ವಾದ ಸಂಗತಿಗಳೂ ಮುಂದೆ ಕೆಲವು ಓಲೆಗಳ ಬಿಟ್ಟು ಪುಸ್ತ ಕದ ಅನುಕ್ರಮಣಿಕೆಗಳೂ ಸಂಪ್ರಾಪ್ತವಾಗಿ ವಿವರಿಸಿರುತ್ತ ವೆ. ಅಮೇಲೆ ಪುಸ್ತಕದ ಮುಖ್ಯ ಭಾಗವು ಆರಂಭವಾಗು

ತ್ತದೆ. ಪುಸ್ತಕದಲ್ಲಿರುವ ಆಯಾಸಂಬಂಧದ ವಿಷಯಗಳನ್ನು ತೋರಿಸುವದಕ್ಕಾಗಿ ಅಂತ್ಯದಲ್ಲಿ ಸೂಚಿಕೆ ಇರುವದು. ಪ್ರಾಚೀನಕಾಲದ ಪುಸ್ತಕಗಳು ಸಾಧಾರಣವಾಗಿ ದೊಡ್ಡವಾಗಿಯೂ ಭಾರವಾಗಿಯೂ ಇರುವವು. ಆದರೆ ಈಗ ಬೊಕ್ಕಣದೊಳಗೆ ಹಾಕಲಿಕ್ಕೆ ಬರುವಂತೆ ಸಣ್ಣ ಪುಸ್ತಕಗಳನ್ನು ಕಟ್ಟುತ್ತಾರೆ. ಛಾಪಿಸುವ ಕಾಗದದ ಹಾಳೆಯನ್ನು ಒಮ್ಮೆ ಮಡಚಿದ ಅಳತೆಯ ಪುಸ್ತಕಗಳಿಗೆ ಇಂಗ್ಲಿಷದಲ್ಲಿ "ಫೋಲಿಯೊ" ಎಂದೆನ್ನುತ್ತಾರೆ. ಹಾಳೆಯನ್ನು ಇಮ್ಮಡಿಯಾಗಿ ಮಡಿಚಿದ ಅಳತೆಯ ಪುಸ್ತಕಗಳಿಗೆ ಚತುಷ್ಪತ್ರಿಕಗಳೆಂತಲೂ ಅವರ ಅರ್ಧ ಅಳತೆಯುಳ್ಳ ಪುಸ್ತಕಗಳಿಗೆ ಅಷ್ಟಪತ್ರಿಕೆಗಳೆಂತಲೂ ಅನ್ನುತ್ತಾರೆ. ಕೆಲವು ಶತಕಗಳ ಹಿಂದೆಯು ರೋಪ ದೇಶದಲ್ಲಿ ಹಿಂದುಸ್ತಾನದಂತೆ ಪುಸ್ತಕಗಳನ್ನು ಕೈಯಿಂದ ಬರೆಯುತ್ತಿದ್ದರು. ಅವುಗಳನ್ನು ಬರೆಯುವದಕ್ಕೆ ಬಹಳ ಕಷ್ಟವಾಗುತ್ತಿತ್ತು. ಆವದ್ದರಿಂದ ಪುಸ್ತಕಗಳ ಸಂಖ್ಯೆಯು ಕಡಿಮೆಯಾಗಿಯೂ ಬೆಲೆಯು ಹೆಚ್ಚಾಗಿಯೂ ಇತ್ತು. ಮಧ್ಯಕಾಲದಲ್ಲಿ ಮಠವಾಸಿಗಳಾದ ಸನ್ಯಾಸಿಗಳು ಪುಸ್ತಕಗಳನ್ನು ಕೈಯಿಂದ ಬರೆಯುತ್ತಿದ್ದರು. ಮತ್ತು ಇಂಥಹ ಮಠಗಳಲ್ಲಿ ಬಳ್ಳೀ ಹಸ್ತಲಿಪಿಗಳ ಮೂದರಿಗಳು ಇನ್ನೂ ಅನೇಕ ಉಂಟು ಯುರೋಪದಲ್ಲಿ ಮುದ್ರಿಸುವ ಯುಕ್ತಿಯು ಹೊರಟಂದಿನಿಂದ ಪುಸ್ತಕ ಮಾಡುವ ಕಲೆಗೆ ಬಹು ಪ್ರೋತ್ಸಾಹ ಉಂಟಾಗಿರುತ್ತದೆ. ಸಾವಿರಾರು ಪುಸ್ತಕಗಳ ಪ್ರತಿಗಳನ್ನು ಸ್ವಲ್ಪಹೊತ್ತಿನಲ್ಲಿ ಮುದ್ರಿಸಿ ಅಗ್ಗವಾಗಿ ಮಾರುತ್ತಾರೆ. ಶೀಘ್ರಛಾಪೆಯ ಪದ್ಧತಿಯು ಹೊರಟಂದಿನಿಂದ ಅಚ್ಚು ಮೊಳೆಗಳನ್ನು ಜೋಡಿಸುವ ಶ್ರಮವು ಹತ್ತುವದಿಲ್ಲ.

೪. ಸದೊಬ್ಬೀಧನೆಗಾಗಿಯೂ, ಮನೋರಂಜನೆಗಾಗಿಯೂ ನಾನಾತರದ ವಿಷಯಗಳ ಮೇಲೆ ಪುಸ್ತಕಗಳನ್ನು ಬರೆಯುತ್ತಾರೆ. ಮತ್ತು ಕೆಲವು ಪುಸ್ತಕಗಳನ್ನು ಭಾಷಾಜ್ಞಾನದ ಸಲುವಾಗಿಯೇ ಬರೆಯುತ್ತಾರೆ. ಕೋಶಗಳು, ವ್ಯಾಕರಣಗಳು, ವಿಧವಿಧದ ಓದುವ ಪುಸ್ತಕಗಳು ಈ ವರ್ಗದಲ್ಲಿ ಬರುತ್ತವೆ. ಇವಲ್ಲದೆ ಕೆಲವು ಪುಸ್ತಕಗಳಲ್ಲಿ ಮುಂದಿನ ಜನರಿಗೆ ತಿಳಿಯುವಪಕ್ಕಾಗಿ ರಾಜವಂಶಾವಳಿ, ಯುದ್ಧ, ರಾಜ್ಯಪರಿವರ್ತನೆ ಮುಂತಾದ ಭೂತಕಾಲದಲ್ಲಿ ನಡೆದಿರುವ ಸಂಗತಿಗಳು ಬರೆದಿರುತ್ತವೆ. ಕೆಲವುಗಳಲ್ಲಿ ನಾನಾಪ್ರಕಾರದ ಶಾಸ್ತ್ರಕಲಾವಿದ್ಯೆಗಳ ಬೋಧನೆಗಳಿರುವವು. ಇವು ಉತ್ತಮರಿಗೆ ಹೆಚ್ಚಾಗುತ್ತ ನಡೆದಿವೆ.

೫. ಪುಸ್ತಕಗಳಿಂದ ಜನರಿಗೆ ಬಹಳ ಹಿತ ಉಂಟಾಗಿದೆ. ಸುಧಾರಣೆಯು ಹೆಚ್ಚಾದಹಾಗೆ ಪುಸ್ತಕಗಳು ಹೆಚ್ಚಿಗೆ ಬರೆಯಲ್ಪಡುತ್ತವೆ. ಪುಸ್ತಕಗಳಿಂದ ಚಿಕ್ಕವರಿಗೆ ಕಲಿಯುವಿಕ್ಕೆ ಅನುಕೂಲವಾಗುತ್ತದೆ. ಜೀವಕಾಪಸ್ಟ ತಕ್ಕ ಪುಸ್ತಕಗಳು ಸಿಗದೆ ಇದ್ದರೆ ಈಗಿರುವ ನಮ್ಮ ಶಾಲೆಗಳು ನಡೆಯುತ್ತಿದ್ದಿಲ್ಲ. ಪುಸ್ತಕಗಳಿಂದ ಜ್ಞಾನವು ಬಹಳ ಬೆಳೆಯುತ್ತದೆ. ಪರನಾಡುಗಳ ಸ್ಥಿತಿ, ಬೇರೆ ಬೇರೆ ಜನಾಂಗದವರ ನಡೆ ನುಡಿಗಳು, ಪ್ರಾಣ್ಯುದ್ಭಿಜ್ಜಕೋಟಿಗಳ ವಿಷಯವಾಗಿ ಇಲ್ಲೇ ತಿಳುವಳಿಕೆ, ಇವು ಪೂರ್ವಕಾಲದಲ್ಲಿ ರಾಜರಿಗೆ ಸಹ ತಿಳಿಯುತ್ತಿದ್ದಿಲ್ಲ. ಅವರೆ ಈಗ ಪುಸ್ತಕಗಳ ಸಹಾಯದಿಂದ ಇವುಗಳನ್ನೆಲ್ಲ ಹಳ್ಳಿಯ ಕುರುಬನಾದರೂ ತಿಳುಕೊಳ್ಳಬಹುದು. ಕೆಲವು ಪುಸ್ತಕಗಳಿಂದ ಮನಸಿಗೆ ಬೇಸರವಾಗುತ್ತದೆ. ಕೆಲವುಗಳಿಂದ ಹಿತವೂ ಮನೋರಂ

ಜನವೂ ಉಂಟಾಗುತ್ತದೆ.ಹುಡುಗರೂ ಪ್ರಾಯಸ್ಥರೂ ಕಥೆಗಳ ಪುಸ್ತಕಗಳನ್ನು ಓದಲಿಕ್ಕೆ ಬಹು ಸಂತೋಷ ಪಡುತ್ತಾರೆ. ಕೆಲವರು ಹರೆಯದವರು ಜಲಪರ್ಯಟನ, ಪ್ರವಾಸಗಳ ಕಥೆಗಳನ್ನು ಓದುವದರಲ್ಲಿ ತಮ್ಮ ಪುರಸೊತ್ತಿನ ವೇಳೆಯನ್ನು ಕಳೆಯುತ್ತಾರೆ. ಬಂದು ತಲಾಂತರದ ಜನರು ತಮ್ಮನ್ನಮುಂದೆ ಆಗುವ ಜನರ ಕಲ್ಯಾಣಾರ್ಥವಾಗಿ ಜ್ಞಾನ ಸಂಪಾದನೆ ಮಾಡಿಟ್ಟ ಸಂಗ್ರಹಾಲಯಂಗಳೇ ಪುಸ್ತಕಗಳು. ಅವುಗಳಿಂದ ಅವರು ಸ್ವಾಭಾವಿಕವಾಗಿ ಜ್ಞಾನವನ್ನು ಪಡಕೊಳ್ಳುವದಲ್ಲದೆ ಜ್ಞಾನದ ಬೆಳವಣಿಗೆಯ ಕಾರ್ಯಕ್ಕೆ ಅನುಕೂಲವಾಗುವಂತೆ ತಮಗೆ ತಿಳಿವದ್ದನ್ನು ಬರೆದಿಡುತ್ತಾರೆ.

೬. ಯಾವತ್ತು ಸುಧಾರಿಸಿದ ಜನಾಂಗದವರಲ್ಲಿ ಧರ್ಮ ಸಂಬಂಧವಾದ ಪುಸ್ತಕಗಳಕಡೆಗೇ ಮೊದಲು ಲಕ್ಷ್ಯಕೊಟ್ಟದ್ದು ಕಂಡುಬರುತ್ತದೆ. ಅವುಗಳಲ್ಲಿ ದೇವರ ಆಜ್ಞೆಗಳೂ ಕಟ್ಟಳೆಗಳೂ ಇರುತ್ತವೆಂದು ತಿಳಕೊಳ್ಳುವಕಾರಣ, ಜನರು ಅವುಗಳನ್ನು ಜಾಗ್ರತೆಯಿಂದಲೂ ಪೂಜ್ಯಬುದ್ಧಿಯಿಂದಲೂ ಓದುತ್ತಾರೆ. ಈತರವ ಪುಸ್ತಕಗಳು ಬರಬರಹರೂಪವಾಗಿದ್ದಾಗ್ಗೆ ಉಪಾಧ್ಯಾಯರುಗಳೇ ಇವುಗಳನ್ನು ಓದುತ್ತಿದ್ದರು. ಈಗಲೂ ಅನೇಕ ಧರ್ಮಗಳಲ್ಲಿ ಅವರೇ ಓದಿ ಜನರಿಗೆ ಬೋಧ ಮಾಡುತ್ತಾರೆ. ಯಹೂದೀಜನರು ಚೆನ್ನಾಗಿ ಅಲಂಕರಿಸಿದ ಭಂಗಾರದ ಪೆಟ್ಟಿಗೆಯಲ್ಲಿ ಜೈಬಲ ಎಂಬ ಧರ್ಮ ಪುಸ್ತಕವನ್ನಿಡುತ್ತಿದ್ದರು.

೭. ಈಗ ಪ್ರತಿವರುಷ ಅನೇಕ ಪುಸ್ತಕಗಳು ಮುದ್ರಿಸಲ್ಪಡುತ್ತವೆ. ಅದರೆ ಅವುಗಳಲ್ಲಿ ಮೇಲಾದ ಪುಸ್ತಕಗಳು ತೀರ ಕಡಿಮೆ. ಮೊದಲು ಪುಸ್ತಕ ಬರಿಯಲಿಕ್ಕೆ ಬಹು

ಕಷ್ಟವಾಗುತ್ತಿದ್ದದರಿಂದ ಧನವಂಡಿತರೇ ಗ್ರಂಥಕರ್ತರಾಗ ಲಿಕ್ಕೆ ಯತ್ನಿಸುತ್ತಿದ್ದರು. ಆದರೆ ಈಗ ಯಾವದಾದ ರೊಂದು ವಿಷಯದಲ್ಲಿ ಕೊಂಚಜ್ಞಾನವುಳ್ಳವರು ಸಹ ಪುಸ್ತ ಕ ಮಾಡಿ ಮುದ್ರಿಸಿ ತಮ್ಮ ಪಾಂಡಿತ್ಯವನ್ನು ತೋರಿಸುವ ಲವಲವಿಕೆಯುಳ್ಳವರಾಗಿರುತ್ತಾರೆ. ಇಂಥ ಗ್ರಂಥಗಳ ಹೆಸ ರುಗಳು ಸ್ವಲ್ಪಕಾಲದಲ್ಲಿಯೇ ಅಳಿದು ಹೋಗುತ್ತವೆ.

೮. ಈಗ ಅಲ್ಪಜ್ಞಾನಿಗಳು ಬರೆದ ಪುಸ್ತಕಗಳು ಹಲವು ಉಂಟು. ಮತ್ತು ಓದಕೂಡದಂಥ ಬೀಭತ್ಸವಾದ ಪುಸ್ತಕ ಗಳಾದರೂ ಕಡಿಮೆ ಇಲ್ಲ. ಧರ್ಮಸಿದ್ಧಾಂತಗಳಿಗೆ ವಿರುದ್ಧ ವಾದ ಪುಸ್ತಕಗಳನ್ನು ಓದುವದರಿಂದ ಸಜ್ಜನರು ಮಹ ಜನರು ತಮ್ಮ ಮತವನ್ನು ಬಿಟ್ಟು ಅನ್ಯಮಾರ್ಗದಿಂದ ನಡೆಯುತ್ತಾರೆ. ಮತ್ತೂ ನೀತಿ ಸದ್ಗುಣಗಳಿಗೆ ಬಾಧಕ ವಾದ ಅನೇಕ ಪುಸ್ತಕಗಳಿರುತ್ತವೆ. ಇಂಥ ಪುಸ್ತಕಗ ಳನ್ನು ದಯವುಳ್ಳ ಸರಕಾರವು ಮುದ್ರಿಸಗೊಡುವದಿಲ್ಲ. ಮು ದ್ರಿಸಿದವರು ದಂಡನೆಗೆ ಪಾತ್ರರಾಗುತ್ತಾರೆ.

೯. ಜಗತ್ತಿನಲ್ಲಿ ಪುಸ್ತಕಗಳ ಮಾರಾಟವು ಬಹು ಮಹ ತ್ವವುಳ್ಳದ್ದಾಗಿರುತ್ತದೆ. ಪುಸ್ತಕಗಳನ್ನು ಬರೆಯು, ಛಾಪಿಸಿ, ವಿಕ್ರಯ ಮಾಡಿ, ಅನೇಕ ಜನರು ತಮ್ಮ ಉಪಜೀವನ ನಡೆಸುತ್ತಾರೆ. ಪ್ರತಿಯೊಂದು ದೊಡ್ಡ ಪಟ್ಟಣದಲ್ಲಿ ಪುಸ್ತ ಕ ಮಾರುವವರ ಅಂಗಡಿಗಳು ಅನೇಕವಿರುತ್ತವೆ. ಇಂ ಗ್ಲಂಡನಲ್ಲಿ ಅವುಗಳ ಮಾರಾಟವು ಬಹಳ ಇರುವದರಿಂದ ಪುಸ್ತಕ ಮಾರುವವರೆಷ್ಟೋಜನರು ಲಕ್ಷಾಧೀಶರಾಗುತ್ತಾ ರೆ. ಪುಸ್ತಕ ಮಾರುವವರಲ್ಲಿ ಒಬ್ಬ ಧನವಂತ ಸಾಮಾಜಿ ಕನು ಕೆಲವು ದಿವಸಗಳ ಹಿಂದೆ ವ್ಹಿಕ್ಟೋರಿಯಾ ಮಹಾರಾಣಿ ಯವರ 'ಕ್ಯಾಜಿನೇಟ' ಎಂಬ ಸಭೆಯ ಮಂತ್ರಿಯಾಗಿದ್ದನು.

೧೦. ಪುಸ್ತಕಗಳ ಮೇಲೆ ಬಹಳ ಲಕ್ಷ್ಯವುಳ್ಳವರು ಅವುಗಳನ್ನು ಕೂಡಹಾಕಿ ಪುಸ್ತಕ ಬೌಕುಗಳಲ್ಲಿ ಸಾಲಾಗಿಯೂ ಸರಿಯಾಗಿಯೂ ಹಚ್ಚಿಡುತ್ತಾರೆ. ಎಷ್ಟೋ ದೊಡ್ಡ ಪಟ್ಟಣಗಳಲ್ಲಿ ಸಾರ್ವಜನಿಕ ಹಿತಾರ್ಥವಾಗಿ ದೊಡ್ಡದೊಡ್ಡ ಗ್ರಂಥಾಲಯಗಳಿರುತ್ತವೆ. ಬೇಕಾದವರು ಅಲ್ಲಿಗೆ ಹೋಗಿ ಸ್ವಲ್ಪ ಚಂದಾಯ ಕೊಟ್ಟು ಪುಸ್ತಕಗಳನ್ನು ಓದಬಹುದು. ಈ ಗ್ರಂಥಾಲಯಗಳು ದೈವಯೋಗದಿಂದ ಸರ್ವಜ್ಞಕ್ಕೆ ಬೆಳೆಯುತ್ತ ನಡೆದಿವೆ. ಪೂರ್ವಕಾಲದಲ್ಲಿ ಇಜಿಪ್ತ ದೇಶದಲ್ಲಿರುವ ಅಲೆಗ್ಜಾಂಡ್ರಿಯಾ ಎಂಬ ಪಟ್ಟಣದಲ್ಲಿ ಅಪರೂಪವಾದ ಒಳ್ಳೇ ಪುಸ್ತಕಗಳುಳ್ಳ ಒಂದು ಗ್ರಂಥಾಲಯವಿತ್ತೆಂದು ಹೇಳುತ್ತಾರೆ. ಆದರೆ ಒಬ್ಬ ಮತಭ್ರಾಂತನಾದ ತುರ್ಕಿಯ ಬಾದಶಹನು ಆ ಪಟ್ಟಣವನ್ನು ತಕ್ಕೊಂಡು ತನ್ನ ಕುದುರೆಗಳಿಗೆ ಹುಲ್ಲು ಆಯುವವರಾರೆ ಸಾಕೆಂದು ಅಂದುಕೊಂಡು ಆ ಗ್ರಂಥಾಲಯಕ್ಕೆ ಬೆಂಕಿಹಚ್ಚಿಸಿದನು. ಈಪ್ರಕಾರ ಜನರಿಗೆ ಉಪಯೋಗವಾಗುವ ಜ್ಞಾನಭಾಂಡಾರವು ಲಯವಾಯಿತು. ಆದರೆ ಈಗಿನಕಾಲದ ರಾಜರ ಸ್ಥಿತಿಯು ಹೀಗು ಸುಧಾರಿಸಿದ್ದುಂಟು. ಸರಕಾರದವರು ಗ್ರಂಥಾಲಯಗಳಿಗೆ ಉತ್ತೇಜನೆ ಕೊಡುತ್ತಾರೆ. ಯಾರಾದರು ಒಳ್ಳೇ ಪುಸ್ತಕ ಬರೆಸಿದರೆ ಅವುಗಳ ಅನೇಕ ಪ್ರತಿಗಳನ್ನು ಕೊಂಡು ಗ್ರಂಥಾಲಯಗಳಿಗೆ ಉಚಿತವಾಗಿ ಕಳಿಸುತಾರೆ.

POETRY BOOKS EXAMINED-COMMUNICATED.

ಪದ್ಯದೋಷ ವಿವರಣೆವು.

(ಬರೆದು ಬಂದದ್ದು.)

ಶಾಲಾವಿದ್ಯಾರ್ಥಿಗಳು ಕಲಿಯುತ್ತಿರುವ ಪದ್ಯಗಳಲ್ಲಿ ಹಲವು ದೋಷಗಳುಂಟು. ಅವನ್ನು ಮಾಸ್ತರಜನರು ಲಕ್ಷಿಸದೆ ಇದ್ದಕ್ಕಿದ್ದಹಾಗೆ ಹುಡುಗರಿಗೆ ಕಲಿಸುತ್ತಾರೆ. ಪರೀಕ್ಷಕರು ಏನೂ ವಿಚಾರ ಮಾಡದೆ ಪರೀಕ್ಷಿಸುತ್ತಾರೆ. ಆದರೆ ಇಂತಹ ಕೆಲವು ದೋಷಗಳನ್ನು ಇಲ್ಲಿ ವಿವರಿಸಿದರೆ ಕವಿತೆಗಳನ್ನು ಕಲಿಸುವ ಮಾಸ್ತರಜನರಿಗೆ ನೆರವಾದಂತೆ ಆಗುವದೆಂದು ನೆನಿಸುತ್ತೇವೆ.

ಶಾಲಾಪುಸ್ತಕಗಳಲ್ಲಿರುವ ಪದ್ಯದೋಷಗಳು ಎರಡು ಬಗೆಯಾಗಿವೆ:—(೧) ಕವಿಗಳ ದೋಷಗಳು. (೨) ಈಗಿನ ಜನರು ಪಾಠಾಂತರಗಳನ್ನು ಮಾಡಿದ್ದರಿಂದ ಉಂಟಾದ ದೋಷಗಳು.

(೧) ಕೆಲವರು ಕವಿಗಳು ಪ್ರಾಸ ಯಮಕಗಳನ್ನು ಸಾಧಿಸಬೇಕೆಂತಲೂ, ಕೆಲವರು ತಿಳುವಳಿಕೆ ಇಲ್ಲದ ರಿಂದಲೂ ದೋಷಗಳನ್ನು ಮಾಡಿದ್ದಾರೆ ಅವನ್ನು ಮುಂದೆ ಹೇಳುತ್ತೇವೆ.

(೨) ಈಗಿನ ಜನರು ಪಾಠಾಂತರ ಮಾಡಿದ್ದರಿಂದುಂಟಾದ ದೋಷಗಳು:— ಪಾಠಾಂತರಗಳನ್ನು ಕಲ್ಪಿಸಲಿಕ್ಕೆ ಹಲವು ಕಾರಣಗಳಿರಬಹುದು. ನಮಗೆ ತೋರುವದು ಅವ ವೆಂದರೆ—(೧) ಸ್ತ್ರೀವಿಷಯದ ಶೃಂಗಾರ ವರ್ಣನೆಯುಳ್ಳ ಪದ್ಯಗಳನ್ನು ವಿದ್ಯಾರ್ಥಿಗಳಿಗೆ ಕಲಿಸಿದರೆ ಅವರು ವಿಚಾರಿಗಳಾಗುವರು. (೨) ಹಿಂದೂಜನರ ದೇವರ ಹೆಸರುಗಳುಳ್ಳ ಪದ್ಯಗಳನ್ನು ಹುಡುಗರು ಉಚ್ಚರಿಸಕೂಡದು. ಉಚ್ಚರಿಸಿದರೆ ಧರ್ಮಸಂಬಂಧವಾದಹಾಗಿ ಜನರು ಜಗಳಾಡುವರು. (೩) ಹಳೆಗನ್ನಡ ವ್ಯಾಕರಣ ವಿಷಯದ ಅಜ್ಞಾನ.

ಈ ಮೂರು ಕಾರಣಗಳಲ್ಲಿ ಮೊದಲಿನ ಕಾರಣವು ಸಣ್ಣ ಮಕ್ಕಳು ಕಲಿಯುವ ಪದ್ಯಗಳ ವಿಷಯದಲ್ಲಿ ಬಲವತ್ತರವಾಗಿದೆ. ಪ್ರೌಢ ವಿದ್ಯಾರ್ಥಿಗಳು ಕಲಿಯುವ ಪದ್ಯಗಳ ವಿಷಯದಲ್ಲಿ ಅಷ್ಟು ಬಲವತ್ತರವೆಂದು ನಮಗೆ ತೋರುವದಿಲ್ಲ. ಬಲವತ್ತರವೆಂದು ತೋರಿದಪಕ್ಷದಲ್ಲಿ ಅಂತಪ ಪದ್ಯಗಳನ್ನೇ ಬಿಟ್ಟು ಬೇರೆ ನೀತಿಯ ಪದ್ಯಗಳನ್ನು ಪಾಲಾಪ್ರಸ್ತಕಗಳಲ್ಲಿ ಸೇರಿಸಬೇಕು. ಮೂಲಪದ್ಯಗಳಲ್ಲಿರುವ ಕೆಲವು ಶಬ್ದಗಳನ್ನು ತೆಗೆದುಹಾಕಿ ಬೇರೆ ಶಬ್ದಗಳನ್ನು ಇಟ್ಟು ಪದ್ಯಗಳ ಛಂದವನ್ನು ಕೆಡಿಸಿ, ಅವನ್ನು ನೆರೆಮನೆಯಲ್ಲಟ್ಟ ಅಪರಾಧಿಗಳಂತೆ ಮಾಡುವದು ವಿದ್ವಜ್ಜನರಿಗೆ ತಕ್ಕದೆಂದು ನಮಗ ತೋರುವದಿಲ್ಲ. ಲಕ್ಷಾವಧಿ ಪದ್ಯ ಗ್ರಂಥಗಳು ತುಂಬಿರಲು, ಶಾಲಾ ವಿದ್ಯಾರ್ಥಿಗಳಿಗೆ ಕಲಿಸುವಂತಹ ಕೇವು ಪದ್ಯಗಳು ದೊರೆಯಲಿಕ್ಕಿಲ್ಲವೆ? ದೊರೆದಾವು; ಆದರೆ ಆವುಗಳನ್ನು ಶೋಧುವರಾರು? ತೆಗೆದು ಜೋಳುವರಾರು? ಕನ್ನಡ ಪದ್ಯ ಗ್ರಂಥಗಳು ತಿಳಿಯುವವರಿಗೆ? ಕಣ್ಣು ಮುಂದಿನ ಪದ್ಯಗಳನ್ನೇ ತುಸು ಹೆಚ್ಚು ಕಡಿಮೆ ಮಾಡಿ ಕಲಿಸಿದರಾಯಿತು. ಎಂಬೀಜೇಸರಿಕೆಯಿಂದ ಇಂತಹ ಪಾಠಾಂತರ ಕಲ್ಪನೆಗಳುಂಟಾಗುತ್ತವೆ. ಈಗ ಶಾಲೆಯಲ್ಲಿ ಪರೀಕ್ಷೆಯು ಹುಡುಗರಿಗೆ ಜಯಮಿನಿಯು ೧೧-೧೦-೦೫ನೆಯ ಸಂಧಿಗಳನ್ನು ಕಲಿಸಬೇಕೆಂದು ವಿದ್ಯಾಪೀಠದವರ ಹುಕುಮುಂಟು. ಹಸ್ತಿನಾಪುರದನೆಯ ಸಂಧಿಯಲ್ಲಿ ಸ್ತ್ರೀಪುರುಷರ ಶೃಂಗಾರದ ಮಿತಿಮೀರಿದ ವರ್ಣನೆಯಿದೆ. ಇದರಿಂದ ಮೇಲಿನ ನಮ್ಮ ಗ್ರಹಿಕೆಯು ಸುಳ್ಳೋ ಏನೋ ಎಂಬ ಸಂಶಯ ಉಂಟಾಗುತ್ತದೆ. ತಾತ್ಪರ್ಯವೇನೆಂದರೆ, ಈ ಬಗೆಯ ಅವ್ಯವಸ್ಥೆಯು ಪದ್ಯಗಳ ವಿಷಯದಲ್ಲಿ ತೋರುತ್ತದೆ.

೨. ದೇವರ ಹೆಸರುಗಳನ್ನು ಉಚ್ಚರಿಸಬಾರದು:—ಜನರು ಬರಬರುತ್ತ ವಿದ್ಯದ ಹೆಮ್ಮೆಯಿಂದ ದೇವರನ್ನು ಮರೆತು ಮಾತಾಪಿತೃಗಳ ಭಕ್ತಿಯನ್ನು ತ್ಯಜಿಸಿ, ಗುರುಹಿರಿಯರನ್ನೂ ಅಧಿಕಾರಿಗಳನ್ನೂ ಜರೆದಾಡಿ ನೀತಿಗೆಟ್ಟವರಾಗಹತ್ತಿದ್ದಾರೆಂಬ ಮಾತು ಸರಕಾರದವರೆಗೆ ತಿಳಿದು, ನೀತಿ ಶಿಕ್ಷಣವನ್ನು ಸಾಲೆಗಳಲ್ಲಿ ಆರಂಭಿಸಬೇಕೆಂದು ವಿಚಾರ ನಡೆದದ್ದು ಎಲ್ಲರಿಗೂ ಗೊತ್ತಿದೆ. ದೇವರ ಹೆಸರುಗಳು ಪದ್ಯಗಳಲ್ಲಿದ್ದಿ ಬಂಪರೆ ದೋಷವಾಗುವದೋ? ನಮಗೆ ತಿಳಿಯುವದಿಲ್ಲ. ಶಿವ, ಹರಿ, ವಿಷ್ಣು, ಬ್ರಹ್ಮ ಎಂಬ ಹೆಸರುಗಳು ಜಗದೊಡೆಯನಿಗುಂಟೆಂದು ಹೇಳಿದರಾಯಿತು. ಪಾತಾಂತರಗಳನ್ನು ಹಲ್ಬಿಸುವದರಿಂದ ಅರ್ಥವು ಹೀಗೆ ಕೆಡುವದೆಂಬದನ್ನು ತೋರಿಸುವದಕ್ಕಾಗಿ ಕೆಲವು ಉದಾಹರಣಗಳು:—

ಪದ್ಯದ ಎನೆಯ ಪುಸ್ತಕದ ಪುಟ ೨೮ ಪದ್ಯ ೧೬೫.

ಮೂಲ—ಮುದಮುಲರ್ವಂತೆ ಮೊಯ್ದಿ ಪಿಡಿದಂ ವರವೀವ
ಕರಾಬ್ಜದಿಂದೆ ನೋ। ದಿದನಖಿಲಾಘಮುಂತೆವು
ರ್ದ ಕಣ್ಗಳಿಂ ॥

ಈ ಪದ್ಯದಲ್ಲಿ ಶಿವನೆ ಮಹಪ್ಪನನ್ನು ಪರ್ಜನ್ಯ, ಅದರಿಂದ ಅರ್ಜುನನ ಕೃತಾರ್ಥತ್ವವನ್ನು ಹೊಸ್ಮಾಡಿ ಹೇಳಿದ್ದಾನೆ. ಇದು ಉಲ್ಲೇಖಾಲಂಕಾರವಾಗುತ್ತದೆ. ಹೇಗಂದರೆ;—ಪರವ ಈವ ಕರಾಬ್ಜದಿಂದ ಮುದಂ ಅಲರ್ವಂತೆ ಮೊಯ್ದಿ ಪಿಡಿದಂ ಅಂದರೆ—ಶಿವನು ಬೇಕಾದವರ (ಉಪಾಸ್ಯರ್ಥ) ಗಳನ್ನು ಕೊಡುವ ತನ್ನ ಕಯ್ದಾವರೆಯಿಂದ ಅರ್ಜುನನ ಮಯ್ಮೇಲೆ ಕಯ್ಯಾಡಿಸಿದನು. ಅಖಿಲಾಘಮುಂ=ಎಲ್ಲ ಪಾಪವನ್ನು, ತೆವು ರ್ದ=ಪಿಡಿಸುವ, ಕಣ್ಗಳಿಂ=ಕಣ್ಣುಗಳಿಂದ, ನೋಡಿದಂ=

ನೋಡಿದನು. ಅಂದಮೇಲೆ ಆ ಅರ್ಜುನನು ಏನು ಧನ್ಯ ನೋ? ಎಂದು ಮೂಲದ ಅರ್ಥವದೆ.

ಅದರಲೆ ಪೂತಾಂತರದಲ್ಲಿ—ವರಚಾರುಕರಾಬ್ಜದಿಂದ=ಶ್ರೇಷ್ಠವಾದ ಚಂದವಾದ ಕಯ್ದಾವರೆಯಿಂದ, ಮೈದಡವಿದಂ=ಮೈಮೇಲೆ ಕಯ್ಯಾಡಿಸಿದನು, ಅಖಿಲಾಲಸಂತೆವುರ್ಮ=ಎಲ್ಲ ಆಲಸ್ಯವನ್ನು ಕಳೆವಕಣ್ಗಳಿಂ=ಕಣ್ಣುಗಳಿಂದ ನೋಡಿದನು.

ಈಯಿರಡು ಅರ್ಥಗಳಲ್ಲಿ ಎಷ್ಟು ಅಂತರ ಉಂಟು ನೋಡಿರಿ. ದೇವರ ಕಯ್ಗೆ ಇಷ್ಟಾರ್ಥವನ್ನು ಕೊಡುವದು ಅನ್ನುವದು ಯುಕ್ತವೋ ಮನೋಹರವಾದದ್ದು ಎಂಬದು ಯುಕ್ತವೋ, ಇಲ್ಲಿ ಶಿವನ ಸೌಂದರ್ಯವನ್ನು ವರ್ಣಿಸಬೇಕಾಗಿಲ್ಲ, ಆತನ ಮಹತ್ವವ ವರ್ಣನೆಯದೆ. ಸುಂದರವಾದ ಕಯ್ಗಳು ಮನುಷ್ಯರಿಗೂ ಉಂಟು. ಅವುಗಳ ಮಹತ್ವ ವೇನು? ದೇವರ ಕಣ್ಣುಗಳಿಗೆ ಎಲ್ಲ ಪಾಪವನ್ನೊರೆಸುವದು ಎಂಬದು ಯುಕ್ತವೋ, ಎಲ್ಲ ಆಲಸ್ಯವನ್ನು ದೂರ ಮಾಡುವದು ಎಂಬುಯುಕ್ತವೋ. ಇಲ್ಲಿ ಅರ್ಜುನನ ಎಲ್ಲ ಪಾಪಗಳು ಹೋದವೆಂದೂ ಅತನ ಎಲ್ಲ ಬಯಕೆಗಳನ್ನು ಶಿವನು ಕೊಟ್ಟನೆಂದೂ ತೀರ್ಮಾನವು ಪ್ರಸ್ತುತವದೆ. ಈ ಪ್ರಸ್ತುತ ಸಾಧನಗ ಸುಂದರತ್ವವೂ ಆಲಸ್ಯನಿರೀಕರಣಾ ಣವೂ ಏನು ಉಪಯೋಗವು? ಆದೇವಸ್ಥಲದಲ್ಲಿ ಶಿವನ ತೋಳಿಗೆ "ಗಜಚರ್ಮಾಂಬರನಪ್ಪವ" ಎಂದೂ, ಬಾಯ್ಗಳಿಗೆ "ನಿಗಮಾಂಗಳವಿತ್ರ" ಎಂದೂ ಸಾಭಿಪ್ರಾಯವು ವಿಶೇಷಣಗಳಿವೆ. ಅಷ್ಟಿರಡು ವಿಶೇಷಣಗಳಂತೆ "ಪರಮೇಷ್ಠ" ಆಪ್ತಾಪ್ತಮಂ ತೆಮುರ್ಮ ಎಂಬೀ ಎರಡಾದರೂ ಸಾಭಿಪ್ರಾಯ ವಿಶೇಷಣಗಳಾಗಿವೆ. ಸಾಭಿಪ್ರಾಯ ವಿಶೇಷಣಗಳನ್ನು ಪ್ರಯೋಗಿಸುವದು ಪರಿಷ್ಕಾರಲಕ್ಷಣವಾಗುತ್ತದೆ.

ಆಲಸ ಎಂಬ ಪದಕ್ಕೆ ಆಲಸ್ಯ ಎಂಬರ್ಥವಾದರೂ ಹಾ
ಟ್ಟುವದಿಲ್ಲ. ಆಲಸ್ಯ ಎಂಬ ಪದವು ಬೇಕಾಗುತ್ತದೆ. ಹಾಗ
ಟ್ಟರೆ ಛಂದೋಭಂಗವಾಗುತ್ತದೆ. ಇದಲ್ಲದೆ ತೆಮುರ್ವ
ಕ್ರಿಯೆಗೆ ಆಲಸಂ ಕರ್ಮಪದವಾಗಿದೆ. ಆದರೆ ಅದಕ್ಕೆ
ದ್ವಿತೀಯಾವಿಭಕ್ತಿಯ ಅಮ್ ಪ್ರತ್ಯವಿಲ್ಲ. ಆಲಸಂ ಪ್ರಥಮಾ
ವಿಭಕ್ತಿಯದೆ. ಆಲಸಂತೆಮುರ್ವ ಎಂಬದು ಕ್ರಿಯಾಸಮಾಸ
ವೆಂದು ತಿಳಿಯೋಣವೆಂದರೆ ತಕಾರಕ್ಕೆ ದಕಾರಾದೇಶವಾಗಿ
ಸಂಧಿಯಾಗಿಲ್ಲ. ಬಳ್ಳೀದು ಇದೆಲ್ಲವನ್ನು ತಾಳಿಕೊಂಡು
ಪಾತಾಂತರವನ್ನು ಒಪ್ಪಿಕೊಳ್ಳಬೇಕಾದರೆಮೂಲದಲ್ಲಿ ಸ್ತ್ರೀ
ವಿಷಯ ಶೃಂಗಾರವಿಲ್ಲ, ದೇವರ ಹೆಸರಿಲ್ಲ. ಹೀಗೆ ಸುಮ್ಮ
ಸುಮ್ಮನೆ ಪಾತಾಂತರಗಳನ್ನು ಕಲ್ಪಿಸಿ ಪದ್ಯಾರ್ಥವೆನ್ನು
ಕೆದಿಸುವವರಲ್ಲಿ ಏನು ಪ್ರಯೋಜನವೋ ನಮಗೆ ತಿಳಿಯು
ವದಿಲ್ಲ.

ಪದ್ಯದ ೨ನೆಯ ಪುಸ್ತಕ ಪುಟ ೫೪ ಪದ್ಯ ೧೪೯.

ಧರಣಿಮಂಡಲಮಂ ಚತುರ್ಬಲಂ ಪಕ್ಷಿಗಳ।
ಸರಣಿಮಂಡಲಮಂ ಧ್ವಜ ಛತ್ರಚಾಮರಂ।
ತರಣಿಮಂಡಲಮಂ ಚಮೂಪವಹತೋದ್ಧೂತ
ರೇಣುವ್ರಜಂ ಮುಸುಕಲು ॥ ೧ ॥

ಈ ಪದ್ಯದೊಳಗಿನ "ಪಕ್ಷಿಗಳ" ಎಂಬ ಪದದ ಸ್ಥಳ
ದಲ್ಲಿ ಮೂಲದಲ್ಲಿ "ಗೀರ್ವಾಣ" ಶಬ್ದವಿದೆ. ಅದನ್ನು
ತೆಗೆದುಹಾಕಿ "ಪಕ್ಷಿಗಳ" ಎಂಬ ಪದವನ್ನಿಟ್ಟರು. ಗೀ
ರ್ವಾಣ ಶಬ್ದವು ಏಕೆ ನಿಷಿದ್ಧವಾಯಿತೋ ತಿಳಿಯುವದಿಲ್ಲ.
ಗೀರ್ವಾಣ ಶಬ್ದದ ವಾಚಕಗಳಾಗಿರುವ ಸುರ, ದೇವ, ಅಮ
ರ ಮುಂತಾದ ಕೆಲವು ಶಬ್ದಗಳು ಇದೇಪುಸ್ತಕದಲ್ಲಿ ಬಹಳ

ಸ್ಥಳಗಳಲ್ಲಿ ಬಂದಿರುತ್ತವೆ. ಗೀರ್ವಾಣಸರಣಿ ಅಂದರೆ ಆಕಾಶವು. ಅಮರಕೋಶದಲ್ಲಿ ಸುರವರ್ತ್ಮವೆಂಬ ಹೆಸರು ಆಕಾಶಕ್ಕಿದೆ. ಅದರ ಪ್ರತಿಶಬ್ದವೇ ಗೀರ್ವಾಣಸರಣಿ. ಪಕ್ಷಿಗಳು ನೆಲದಲ್ಲಿಯೂ ಆಕಾಶದಲ್ಲಿಯೂ ಸಂಚರಿಸುತ್ತವೆ. ಗೀರ್ವಾಣರು ಅಂದರೆ ದೇವತೆಗಳು ನೆಲವಮೇಲೆ ಕಾಲಿಕ್ಕುವದಿಲ್ಲೆಂದು ಪುರಾಣಪ್ರಸಿದ್ಧವಿದೆ. ಅದರಿಂದ ಗೀರ್ವಾಣಸರಣಿಯೆಂಬ ಶಬ್ದವು ಆಕಾಶಕ್ಕೆ ಒಪ್ಪಿದಂತೆ ಪಕ್ಷಿಗಳ ಸರಣಿ ಎಂಬ ಹೆಸರು ಒಪ್ಪುವದಿಲ್ಲ. ಇದಲ್ಲದೆ ಸಮಾಸದಲ್ಲಿಲ್ಲದ ಪಕ್ಷಿಗಳ ಎಂಬ ಪದದ ಸಂಬಂಧವು ಸರಣಿಮಂಡಲ ಎಂಬ ಸಮಾಸದೊಳಗಿನ ಸರಣಿ ಶಬ್ದಕ್ಕೆ ಹತ್ತುವದಿಲ್ಲ. ಅದರಿಂದ ಪಕ್ಷಿಗಳ ಸರಣಿ ಮಂಡಲವೆಂಬ ಶಬ್ದವು ಆಕಾಶಕ್ಕೆ ವಾಚಕವಾಗುವದಿಲ್ಲ.

ಇದಲ್ಲದೆ ಈ ಒಟನೆಯ ಪಾಠದ ಶಿರೋಲೇಖವು ಬಭ್ರುವಾಹನನ ಯುದ್ಧವೆಂದಿದೆ. ಆದರೂ ಆ ಬಭ್ರುವಾಹನನ ಯುದ್ಧದ ಸಂಬಂಧವನ್ನು ವಿದ್ಯಾರ್ಥಿಗಳಿಗೆ ತಿಳಿಸುವಂತಹ:—

ಅರಸಕೇಳರ್ಜುನಂ ಬಯ್ದು ನೂಕಿದ ಬಳಿಕ ।
ತರಿಸಿವಸುವಸ್ತ್ರಗಳನಧ್ವರದ ತುರಗಮುಂ ।
ತಿರುಗಿ ನಿಜನಗರಿಗೆ ಕಳುಹಿ ಬಭ್ರುವಾಹನಂ
ಸಮರಕನುವಾಗಿ ನಿಲಲು ॥

ಈ ನೊವಲಿನ ಅರ್ಧರುಚಿಯನ್ನೆ ಬಿಟ್ಟು, ಇದರ ಮುಂದಿನ "ಧರಣಿಮಂಡಲಮುಂ" ಎಂಬ ಮುಂದಿನ ಅರ್ಧರುಚಿಯನ್ನು ಮಾತ್ರ ಸ್ವೀಕರಿಸಿದ ಕಾರಣವೇನೋ ತಿಳಿಯುವದಿಲ್ಲ. ಇದರಿಂದ ಮೊದಲಿನರ್ಧವು ಕಲಿಸಲಿಕ್ಕೆ ಯೋಗ್ಯವಲ್ಲೆಂದು ತಿಳಿದಂತೆ ತೋರುತ್ತದೆ.

EXCURSION TO MYSORE.

ಮೈಸೂರ—ಪ್ರವಾಸವು.

(ಸಂಖ್ಯೆಯ ಪುಟದಿಂದ ವ್ಯಾಪಿಸಿರುವುದು.)

ಈ ಬಗೆಯ ೧೦।೨೦ ಛತ್ರಗಳು ಬೆಂಗಳೂರಲ್ಲಿರುತ್ತವೆ. ಅದರಿಂದ ಇಲ್ಲಿ ಪಾಂಥಸ್ಥರಿಗೆ ನಮ್ಮ ಕಡೆಯ ಪೊಳಲುಗಳಲ್ಲಿ ಸ್ಥಳಕ್ಕೊಂದಿಸುಗ ಆಗುವಷ್ಟು ತೊಂದರೆಯಾಗುವದಿಲ್ಲ. ಈ ಬಗೆಯ ಛತ್ರಗಳಲ್ಲಿ ಪೂರ್ಣಯ್ಯನ ಛತ್ರವು ರಮ್ಯವಾದದ್ದೂ ಮೇಲಾದ ಕಟ್ಟಡವುಳ್ಳದ್ದೂ ಇರುತ್ತದೆ. ಇಲ್ಲಿ ದಾರಿಹೋಕರಿಗೆ ೩ ದಿವಸಗಳವರೆಗೆ ಭೋಜನ ಮಾಡುವ ಅನುಕೂಲತೆಯುಂಟು. ಈ ಪೂರ್ಣಯ್ಯನ ಛತ್ರವು ನಾವಿಳಿದ ಛತ್ರದ ನೆರೆಯಲ್ಲಿರುವ ಕೆರೆಯ ಕೆಳಗೆ ತೆಂಕಣ ಬದಿಯಲ್ಲಿರುತ್ತದೆ. ಈ ಛತ್ರದ ಸುತ್ತಲು ಹಲವು ಮಂದಿರಗಳೂ ಅವುಗಳ ಸುತ್ತು ರಮ್ಯವಾದ ಉಪವನಗಳೂ ತರತರದ ಹೂವಿನ ಗಿಡಗಳಿಂದ ಸುತ್ತುಗಟ್ಟಲ್ಪಟ್ಟ ಅಡುವ ಸ್ಥಳಗಳೂ ಇರುತ್ತವೆ. ಅವುಗಳ ಶೋಭೆಯು ಮಿಗಿಲಾಗಿರುತ್ತದೆ ಈ ಉಪವನಗಳಲ್ಲಿ ಅಲ್ಲಲ್ಲಿ ವಿಶ್ರಾಂತಿಗೋಸ್ಕರ ಕೂಡ್ರಲಿಕ್ಕೆ ಕಲ್ಲಿನ ಆಸನಗಳಿಡಲ್ಪಟ್ಟವೆ. ಇಲ್ಲಿರುವ ಗಿಡಗಳ ರಚನೆಯೂ ವ್ಯವಸ್ಥೆಯೂ ಕಿರಿಯಗಲವಾದ ಮಾರ್ಗಗಳ ಸ್ವಚ್ಛತೆಯೂ ನೋಡುವವರ ಕಣ್ಣಿಗೆ ಬಮ್ಮೆಲೆ ಬೀಳುವದರಿಂದ ಮನಸಿಗೆ ಆತ್ಯಾಲ್ಹಾದವಾಗುತ್ತದೆ. ಬೆಳದಿಂಗಳಲ್ಲಂತು ಈ ಉಪವನಗಳು ವಸಂತರಾಜನ ಕ್ರೀಡಾವನಗಳಂತೆ ಕಂಗೊಳಿಸುತ್ತವೆ. ಆಗ ಅಲ್ಲಿಯ ಜನರು ಇವುಗಳಲ್ಲಿ ಆನಂದದಿಂದ ಗಾಯನ ಮಾಡುತ್ತ ಅಡ್ಡಾಡುತ್ತಿರುತ್ತಾರೆ. ಇಲ್ಲಿಯೇ ತುಳಸಿಯ ತೋಟವೆಂಬದೊಂದು ನಾಟಕ ಗೃಹವದೆ. ಅವರ ಬಳಗಿನ ಸ್ಥಿತಿಯನ್ನು ನೋಡಲಿಕ್ಕೆ ನಮಗೆ ಅನುಕೂಲವಾಗಿಲ್ಲ.

ಮರುದಿನ ತಾ| ೨೬.೧೦.೯೦ ದಿವಸ ಮುಂಜಾ
೬ ಗಂಟೆಗೆ ನಾವು ಸಾ. ಕಾದಿ ನಿತ್ಯಕೃತ್ಯಗಳನ್ನು ನೆರವೆ
ರಿಸಿಕೊಂಡು ಸ್ವಚ್ಛವಾದ ಉಡಿಗೆತೊಡಿಗೆಗಳನ್ನು ಧರಿಸಿ
ಬರಣದಿಂದ ಪಟ್ಟಣದೊಳಗಿನ ಮುಖ್ಯ ಮುಖ್ಯ ಸ್ಥಳಗಳ
ನ್ನು ನೋಡಲಿಕ್ಕೆ ಹೊರಟ್ಟೆವು.

ಅಂದು ನಾವು ೧ ರತ್ನಕಂಬಳಿಯ ಕಾರಖಾನೆ, ೨ ಕೊ
ಟೆ, ೩ ಲಾಲಬಾಗ, ೪ ಮ್ಯೂಝಿಯಮ್ಮು, ೫ ಅಠರಾಕಚೇರಿ
೬ ಗೆರ್ಲಸ್ಕೂಲ ಇಷ್ಟು ಸ್ಥಳಗಳನ್ನು ನೋಡಿದೆವು.

೧ ರತ್ನಕಂಬಳಿಯ ಕಾರಖಾನೆ—ಈ ಕಾರಖಾನೆಗಳಲ್ಲಿ
ಹಲವು ಮಗ್ಗಗಳಿರುತ್ತವೆ. ಅವು ಉತ್ತಕಣಿಯ ಅರಿವೆಯ
ಮಗ್ಗಗಳಂತೆ ನೆಲಕ್ಕೆ ಹಾಸಿರದೆ ಅವನ್ನು ಮೇಲಕ್ಕೆ ತೂಗಿ
ಕಟ್ಟಿರುವರು. ಅವುಗಳಲ್ಲಿ ಕಂಬಳಿಗಳನ್ನು ನೆಯ್ಯುವವ
ರು ತಮ್ಮ ಕೆಲಸವನ್ನು ತ್ವರೆಯಿಂದಲೂ ಮೇಲಾದ ಹಸ್ತ
ಕೌಶಲ್ಯದಿಂದಲೂ ಏಕಾಗ್ರ ಲಕ್ಷದಿಂದಲೂ ಮಾಡುವರು
ನೆಯ್ಗೆಯಲ್ಲಿ ತುಸು ಉಣ್ಣೆಯನ್ನು ಹಾಕದೆ ಬಿಟ್ಟರೆ ರತ್ನ
ಗಂಬಳಿಯು ಅಂದವೇ ಕೆಡುವಂತಿರುತ್ತದೆ. ನೆಯ್ಯುವವರು
ಹಾಗಾಗದಂತೆ ಬಹು ಜಾತುರ್ಯದಿಂದ ಉಣ್ಣೆಯನ್ನು
ಯೋಜಿಸುತ್ತಿರುವರು. ಅದಕ್ಕೆ ಅವರ ರೂಢಿಯೇ ಕಾರ
ಣವು. ಹೀಗೆಯೇ ಯಾವದೊಂದು ಕೆಲಸವು ಅಚ್ಚುಕಟ್ಟಾಗಿ
ಬೇಗನೆ ಆಗಬೇಕಾದರೆ ಆ ಕೆಲಸವಲ್ಲಿ ಚೆನ್ನಾಗಿ ನುರುತಿರ
ಲಿಕ್ಕೆಬೇಕೆಂಬ ಮಾತನ್ನು ಮನಗಂಡೆವು. ಈ ಮಾತ
ನಾವಾಗಿಯೇ ಅರಿಸಿಕೊಂಡ ಶಿಕ್ಷಕರ ಉದ್ಯೋಗಕ್ಕೆ ಸಂ
ಬಂಧಿಸಿರುತ್ತದೆ. ಈ ಕಾರಖಾನೆಯಲ್ಲಿ ಪ್ರತಿಯೊಬ್ಬನು
ಬಾದು ದಿನವಲ್ಲಿ ೧ ಸಾಧಾರಣವಾದ ಕಂಬಳಿಯನ್ನು ನೆಯ್ಯು
ವನು. ಇಲ್ಲಿ ಆಗುವ ಉತ್ತಮ ಕಂಬಳಿಗಳ ಬೆಲೆಯು

ಂದಿಂದ ೫೦ ರೂ. ಗಳವರೆಗೆ, ಪ್ರಮಾಣ ತರದ ಕಂಬಳಿ
ಗಳ ಬೆಲೆ ೫೦೦ ಯಿಂದ ೪ ರೂ. ಗಳವರೆಗೆ ಇರುತ್ತದೆ.
ಈ ಕಂಬಳಿಗಳ ಮಾರಾಟವು ಚಡ ರಡಿ (ಬೌ. ಪೂ.) ಗಳ
ಮೇಲಿಂದ ಆಗುತ್ತದೆ. ಇವು ಧಿಮ್ಮಕಡೆಗೆ ಅಗ್ಗವಾಗಿ
ಬೇಕಾದಷ್ಟು ದೊರೆಯುವದಿಲ್ಲ. ಆದದ್ದರಿಂದ, ನಮ್ಮಲ್ಲಿ
ಹಲವರು, ಬಡವೆಗಳ ಹುಟ್ಟುವಳಿಯ ಸ್ಥಳಗಳಲ್ಲಿ ಕೊಂ
ಡರೆ ಉಳಿತಾಯವಾಗುವದೆಂದು ಅವುಗಳನ್ನು ಕೊಂಡರು.
ಈ ಕಾರಖಾನೆಯವರು ತಮಗೆ ತಕ್ಕಷ್ಟು ಲಾಭವಾಗುವ
ದಿಲ್ಲೆಂತಲೂ ನಿಮ್ಮ ದೇಶದಲ್ಲಿ ಯಾರಾದರೂ ಕೆಲಸ ಮಾಡ
ಲಿಕ್ಕೆ ಕರೆದರೆ ಸಂಬಳಕ್ಕೆ ನಿಲ್ಲುವೆವೆಂತಲೂ ಹೇಳಿದರು.

ಈ ಕಾರಖಾನೆಗೆ ಬೇಕಾಗುವ ತರತರದ ಬಣ್ಣದ ಉಣ್ಣೆ
ಯನ್ನು ಪೂರಯಿಸುವದಕ್ಕೆ ಮೈಸೂರ ಶ್ರೀಮನ್ಮಹಾ
ರಾಜರವರು, ಆಸ್ಟ್ರೇಲಿಯಾದಿಂದ ಕುರಿಗಳನ್ನು ತರಿಸಿ ಲಾಲ
ಬಾಗಿನಲ್ಲಿ ಇಡಿಸಿರುವರು. ಮುಂದೆ ಆ ಕುರಿಗಳ ಉಣ್ಣೆ
ಯು ದೊರೆಯುವದರಿಂದ ಕಾರಖಾನೆಯವರಿಗೆ ಈಗ ಸಿಗು
ವಷ್ಟಕ್ಕಿಂತ ಹೆಚ್ಚು ಲಾಭ ದೊರೆಯುವದೆಂಬದರಲ್ಲಿ ಸಂಶ
ಯವಿಲ್ಲ. ಹೀಗೆ ದೇಶದಲ್ಲಿ ಕಲಾಕೌಶಲ್ಯವು ಬೆಳೆಯಬೇ
ಕಾದರೆ ಅದಕ್ಕೆ ದೊರೆಗಳಾಶ್ರಯವು ಅತ್ಯವಶ್ಯವಾಗಿ ಬೇ
ಕು. ಅದರಿಂದ ಕಯ್ಯಾರಿಕೆಯ ಕೆಲಸಗಳು ದೇಶದಲ್ಲಿ
ಹೆಚ್ಚಾಗಿ, ಸಂಪದಭಿವೃದ್ಧಿಯಾಗುವದು. ಮೈಸೂರ ಸರ
ಕಾರದವರು ಈ ಸಂಗತಿಯಕಡೆಗೆ ಲಕ್ಷ್ಯಕೊಟ್ಟದ್ದು ಬಹು
ಶ್ಲಾಘನೀಯ ಸಂಗತಿಯಾಗಿದೆ. ಹೀಗೆ ನಮ್ಮ ಈ ಮುಂ
ಬಯಿ ಕರ್ನಾಟಕದೊಳಗಾದರೂ ಕೆಲವು ಧನವಂತರು
ಈಗ ಉಳಿದಿರುವ ಕಯ್ಯಾರಿಕೆಯಲ್ಲಿ ಕುಶಲರಾದವರಿಗೆ ತಕ್ಕ
ಅನುಕೂಲತೆಯನ್ನೂ ಪ್ರೋತ್ಸಾಹವನ್ನೂ ಕೊಡುವದ

ನಲ್ಲಿ ಎತ್ತುಗಡೆಯಾಗಿ ಹಬ್ಬುತ್ತ ಪೇಕಾಭಿಮಾನವನ್ನು ವ್ಯಕ್ತ
ಪಡಿಸುವರು, ಪೂರ್ವದ ಅದಲ್ಲಿ ಬಲುಹೆಸರುವಾಸಿಯಾದಂಥ
ನವ್ಮ ಕಯ್ಗಾರಿಕೆಯ ಲಸವು ಬೇಗ ಬೆಳಕಿಗೆ ಬರುವದು.
ಆದರೆ ಅದರಂತೆ ಕಕ್ಕ ಎತ್ತುಗಡೆಮಾಡುವ ಉದಾರಪುರು
ಷರು ಹುಟ್ಟಲಿಕ್ಕೆ ಬೇಕು.

—ಆ ಕೋಟೆಯು—ಬಳಿಕ ನಾವು ಕೋಟೆಯನ್ನು ನೋ
ಡಲಿಕ್ಕೆ ಹೊರಟೆವು. ಈ ಕೋಟೆಯು ೩ ಸುತ್ತುಳ್ಳದ್ದು
ಅದೆ. ಇದಕ್ಕೆ ೩ ಹೆಬ್ಬಾಗಿಲುಗಳೂ ೫ ದಿಡ್ಡಿಬಾಗಿಲುಗ
ಳೂ ಅವೆ. ಇವರ ಸುತ್ತುಗಳ ನಡುವೆ ಅಲ್ಲಲ್ಲಿ ಅಡಗುವ
ಸ್ಥಳಗಳುಂಟು. ಅವುಗಳಲ್ಲೊಂದರಲ್ಲಿ ಸರ್ಜಾಪ್ಪನಾಯಕ
ನೆಂಬ ತಳ್ಳಿಗಾರನನ್ನು ಬಲವು ವರ್ಷಗಳ ಹಿಂದೆ ಸೆರೆಯಲ್ಲಿ
ಟ್ಟಿದ್ದರಂತೆ. ಈಗ ಬಾಗಿಲುಗಳಲ್ಲಿ ದುರ್ಗಂಧಿಯೂ ಕತ್ತಲೆ
ಯೂ ತುಂಬಿದೆ. ಬಂದುಕಡೆಯಲ್ಲಿ ಕುಸ್ತಿಯಾಡುವ ಸ್ಥಳ
ವುಂಟು. ಕೆಲವು ದಿನಗಳ ಹಿಂದೆ ಅದರಲ್ಲಿ ಸುಬ್ಬಜಟ್ಟ
ಯೆಂಬವನು ಧಾರವಾಡದಕಡೆಯ ಬಬ್ಬ ಜಟ್ಟಯನ್ನು ಕಡ
ವಿದನೆಂದು ಗೊತ್ತಾಯಿತು. ಈ ಕೋಟೆಯ ವೃತ್ತಾಂತ
ವೇನೆಂದರೆ,—ಇದನ್ನು ೧೫೩೭ನೆಯ ಇಸವಿಯಲ್ಲಿ ಕೆಂಪೆಗೌ
ಡನೆಂಬ ಪಾಳ್ಯಗಾರನು ಕಟ್ಟಿಸಿದನು. ರೋಮನಟ್ಟಣ
ಮತ್ತು ಅದನ್ನು ಕಟ್ಟಿಸಿದ ರಾಮ್ಯುಲಸನೆಂಬ ಪ್ರಸಿದ್ಧಪುರು
ಷ ಇವರಬಗ್ಗೆ ಆಖ್ಯಾಯಿಕವಿದ್ದಂತೆ ಬೆಂಗಳೂರ ಕೋಟೆ
ಮತ್ತು ಕೆಂಪೆಗೌಡ ಇವರಬಗ್ಗೆ ಸಹ ಹೇಳುವದುಂಟು.
ಅದೆಂತೆಂದರೆ, "ಕೆಂಪೆಗೌಡನೊಂದುದಿನ ಮಲಗಿದಾಗ ಅತನ
ಇಷ್ಟದೇವತೆಯು ಕನಸಿನಲ್ಲಿ ಬಂದು ಬಂದು ಸ್ಥಳವನ್ನು
ತೋರಿಸಿದಳು. ಕೆಂಪೆಗೌಡನು ಎಚ್ಚತ್ತು ಆ ಯೆಡೆಯ
ನ್ನೆಗಿಸಲು ಅವನಿಗೆ ಅಪರಿಮಿತದ್ರವ್ಯ ಪ್ರಾಪ್ತಿಯಾಯಿತು.

ಸಿದ್ಧನಾಥ ವಾಚನ ಮಂದಿರ.
ಮೊರಬ. ಜಿ. ಧಾರವಾಡ.

ಪದ್ಯಂ.

ಪ್ರಯವಿದ್ಯಾಗುರುವರ್ಯರುನ್ನತಿಕೆಯಂ ಸಚ್ಛಿಕ್ಷಣೋತ್ಕರ್ಷಮಂ !
ಯಸುತ್ತಂ ಪ್ರತಿವಾಸದಾದಿಗೊಲವಿಂದೀಪತ್ರಮಂ ಮುದ್ರಿಸಿ ॥
ಯದಿಂದಿತ್ತಪೆವೋದುವರ್ಗಸುಗುಣಂ ತೋರಲ್ಕೆ ಕೈಕೊಂಬುದೈ !
ಯಿಂದೋಷವತಿದ್ದವೇಳ್ವುದುಬುಧರ್ಜ್ಞಾನಾಭಿವೃದ್ಧಿಪ್ರಿಯರ್॥೧॥

ಪುಸ್ತಕ ೨೪.] ದಿಶಂಬರ ೧೮೮೯. [ಸಂಚಿಕೆ ೧೦.

EDUCATIONAL INTELLIGENCE AND USEFUL NOTES.

ವಿದ್ಯಾಸುಧಾರಣಾ ಸಂಬಂಧದ ವೃತ್ತಾಂತಗಳು.

ನಮ್ಮ ಇಲಾಖೆಯ ವಿದ್ಯಾಖಾತೆಯ ಡೈರೆಕ್ಟರರಾದ ಎ. ಚಾಟಫಿಲ್ಡ ದೊರೆಗಳು ತಮ್ಮ ಆರೋಗ್ಯಕ್ಕಾಗಿ ವಿಲಾಯತಿಗೆ ಹೋಗಿದ್ದ ಸಂಗತಿಯು ನಮ್ಮ ವಾಚಕರಿಗೆ ಗೊತ್ತಿರುತ್ತದಷ್ಟೇ. ಅವರೆ ಈಗ ಅವರು ಆರೋಗ್ಯವನ್ನು ಹೊಂದಿ, ಮರಳಿ ಈದೇಶಕ್ಕೆ ಬಂದು, ನವಂಬರ ತಿಂಗಳ ೬ನೇ ತಾರೀಖಿನ ದಿವಸ ತಮ್ಮ ಕೆಲಸದ ಚಾರ್ಜವನ್ನು ತೆಗೆದುಕೊಂಡರೆಂದು ತಿಳಿಸಲಿಕ್ಕೆ ನಾವು ತುಂಬಾ ಸಂತೋಷಪಡುತ್ತೇವೆ.

ಅಮೇರಿಕದಲ್ಲಿಯ ಕ್ಯಾಲಿಫೋರ್ನಿಯ ಎಂಬ ಪ್ರಾಂತದಲ್ಲಿ "ಸ್ಟ್ಯಾನಫೋರ್ಡ ಪಟ್ಟಣದಲ್ಲಿರುವಷ್ಟು ಶ್ರೀಮಂತವಾದ ವಿದ್ಯಾಲಯವು ಪೃಥ್ವಿಯಲ್ಲಿ ಮತ್ತೊಂದಿಲ್ಲ. ಈವಿದ್ಯಾಲಯದ ಪ್ರತಿವರ್ಷದ ಆದಾಯವು ೨೦ ಲಕ್ಷ ಪೌಂಡು ಇರುತ್ತದೆ. ಯುರೋಪಖಂಡದೊಳಗಿನ ಎಲ್ಲ ವಿಶ್ವವಿದ್ಯಾಲಯಗಳ ಆದಾಯವನ್ನು ಒಟ್ಟುಗೂಡಿಸಿದರೂ ಇದರಷ್ಟು

ಉತ್ಪನ್ನವಾಗುವದಿಲ್ಲ. ಇದರ ಕಾರಣವೇನೆಂದರೆ:—ಆ ಮೇರಿಕದೊಳಗಿನ ಎಷ್ಟೋ ಲಕ್ಷಾಧೀಶರು ಮರಣಕಾಲದಲ್ಲಿ ತಮ್ಮ ಸಂಪತ್ತನ್ನೆಲ್ಲ ಈ ವಿದ್ಯಾಲಯಕ್ಕೆ ಕಾಣಿಕೆಯಾಗಿ ಕೊಟ್ಟದ್ದಾರೆ. ಇಷ್ಟು ಔದಾರ್ಯವುಳ್ಳ ಜನರನ್ನು ನಮ್ಮ ದೇಶದಲ್ಲಿ ಕಾಣುವದು ತೀರ ಅಪರೂಪ.

ಕೈ. ನಾನುದಾರ ಮಿ. ತೆಲಂಗ ಇವರ ಅಕಾಲಿಕಮೃತ್ಯುವಿನಿಂದ ತೆರವಾದ ಮುಂಬಯಿ ಹೈಕೋರ್ಟಿನ ಜಾಗೆಯು ರಾವಬಹಾದೂರ ಮಹಾದೇವ ಗೋವಿಂದ ರಾನಡೆ ಇವರಿಗೆ ದೊರೆತದ್ದು ನೋಡಿ, ನಮಗೆ ಬಹಳ ಸಂತೋಷವಾಗುತ್ತದೆ. ಇವರಷ್ಟು ಅನುಭವಿಕರೂ, ಸಹನಶೀಲರೂ, ದೂರದೃಷ್ಟಿಯವರೂ, ಬುದ್ಧಿವಂತರೂ ನಮ್ಮ ಜನರಲ್ಲಿ ಸಿಗುವದು ಅಪರೂಪ. ಸರಕಾರದವರು ಇಂಥ ವಿದ್ವನ್ಮಣಿಗಳಿಗೆ ಮಾನ ಮಾಡಿದ್ದು ಭೂಷಣವೇ ಸರಿ.

ಪ್ರಾವಿನ್ಸಿಯಲ ಸರ್ವೀಸ ಕಮಿಶನ್ನದವರು ಸೂಚಿಸಿದಂತೆ ಸರಕಾರದವರು ಇಂತಿಂಥ ಹುದ್ದೇದಾರಿಯ ನೌಕರಿಗಳನ್ನು ಏತದ್ದೇಶಿಯ ಜನರಿಗೆ ಕೊಡತಕ್ಕದ್ದೆಂದು ಗೊತ್ತುಮಾಡಿದ ಜಾಗೆಗಳಲ್ಲಿ ಹೈಕೋರ್ಟಿನ ರಜಿಸ್ಟ್ರರ ಕೆಲಸವು ಬಂದಾಗಿದೆ. ಇವನ್ನು ವಿಲಾಯತಿಗೆ ಹೋಗಿ ಅಭ್ಯಾಸ ಮಾಡಿ 'ಬ್ಯಾರಿಸ್ಟರ' ಎಂಬ ಗೌರವದ ಪದವಿಯನ್ನು ಪಡೆದುಕೊಂಡು ಮರಳಿ ಹಿಂದುಸ್ತಾನಕ್ಕೆ ಬಂದಂಥ ಆರ್. ಡಿ. ಸೆಟ್ನಾ ಎಂಬ ಪಾರ್ಸಿ ಗೃಹಸ್ಥರಿಗೆ ಕೊಟ್ಟರು. ಇದನ್ನು ತಿಳಿಸಲಿಕ್ಕೆ ನಾವು ಬಹಳ ಸಂತೋಷಪಡುತ್ತೇವೆ.

ಗ್ಯಾಂಟವೆಡಿಕಲ್ ಕಾಲೇಜದ ಕಡೆಯ ಪರೀಕ್ಷೆಗೆ ೬ ಜನ ಸ್ತ್ರೀಯರು ಕೂತಿದ್ದರು. ಅವರಲ್ಲಿ ಮಿಸ್. ಈ. ಎಸ್. ಸ್ಮಿಥ ಮತ್ತು ಎಲ್‌ಬೌನ ಎಂಬವರಿಬ್ಬರು ಶೇರ್ಗಡೆ ಹೊಂದಿದರು. ಮಿಸ್. ಸ್ಮಿಥ ಎಂಬವಳು ೧ನೇ ನಂಬರು ಪಡೆದದ್ದರಿಂದ, ಅವಳಿಗೆ ನಾವುದಾರ ವ್ಹಾಯಿಸರಾಯರು ಇಟ್ಟಂಥ ಚಿನ್ನದ ಪದಕವು ಇನಾಮು ಕೊಡಲ್ಪಟ್ಟಿತು.

ದಿನಮಾನಗಳನ್ನು ಗೊತ್ತುಮಾಡುವ ಸುಲಭರೀತಿಯು— ಸೂರ್ಯೋದಯದ ವೇಳೆಯನ್ನು ಇಮ್ಮಡಿಸಲು ರಾತ್ರಿಯ ಮಾನವೂ ಸೂರ್ಯಾಸ್ತದ ವೇಳೆಯನ್ನು ಇಮ್ಮಡಿಸಲು ಹಗಲಿನ ಮಾನವೂ ಸರಿಯಾಗಿ ಹೊರಡುವವು.

ದೀಪಾವಳಿಯದೆಸೆಯಿಂದ ಬಂದಾಗಿದ್ದ ಇಲ್ಲಿಯ ಹೈಸ್ಕೂಲು ನವಂಬರ ೧೦ನೇ ತಾರೀಖಿನ ದಿವಸ ಮತ್ತು ಟ್ರೇನಿಂಗ ಕಾಲೇಜವು ೧೪ನೇ ತಾರೀಖಿನ ದಿವಸ ಪ್ರಾರಂಭವಾದವು. ಮೊದಲು ಸೋಟೀಸು ಕೊಟ್ಟವೇರೆಗೆ ಕಾಲೇಜದ ಪ್ರವೇಶ ಪರೀಕ್ಷೆಯು ೧೪ನೇ ತಾರೀಖಿನ ದಿವಸ ಪ್ರಾರಂಭವಾಯಿತು. ಪರೀಕ್ಷೆಗೆ ಒಟ್ಟು ೧೪೫ ಉಮೇದವಾರರು ಕೂಡಿರುವರು. ಅವರಲ್ಲಿ ಧಾರವಾಡದವರು ೯೧, ಬೆಳಗಾಂವಿಯವರು ೧೫, ವಿಜಾಪೂರದವರು ೧೮, ಕಾರವಾರದವರು ೧೧.

ನಮ್ಮ ವ್ಹೈಸರಾಯರಾದ ಲಾರ್ಡ್‌ಲ್ಯಾನ್ಸ್‌ಡೌನ್‌ಪ್ರಭುಗಳು ಕೆಲವು ದಿವಸಗಳ ಹಿಂದೆ ಗೋವಧ ಸಂಬಂಧವಾಗಿ ಆಗ್ರಾ ಪಟ್ಟಣದಲ್ಲಿ ಮಾಡಿದ ಸಂಭಾಷಣೆಯು ಬಹು ಮಹತ್ವವುಳ್ಳದ್ದಾಗಿರುವದರಿಂದ ಅದರೊಳಗಿನ ಮುಖ್ಯಮುಖ್ಯ ಭಾಗಗಳನ್ನು ಸಾರಾಂಶರೂಪದಿಂದ ಕೆಳಗೆ ಬರೆದಿದ್ದೇವೆ.

"ಆಗ್ರಾ ಪಟ್ಟಣಸ್ಥರೇ, ನಾವು ನಿಮಗೆ ಸ್ಪಷ್ಟವಾಗಿ ತಿಳಿಸುವದೇನಂದರೆ:—ನಮ್ಮ ಆಡಳಿತದ ತತ್ವವು ತಟಸ್ಥವೃತ್ತಿಯದೂ ದ್ವೇಷರಹಿತತ್ವದ್ದೂ ಆಗಿದ್ದರೂ, ನಾವು ದೇಶದಲ್ಲಿ ಅನಾಯಕತನವನ್ನೂ ಪುಂಡಾಟವನ್ನೂ ಆಗಗೊಡಲಿಕ್ಕಿಲ್ಲ. ಬಂದುವೇಳೆ ಆದರೆ ಅವುಗಳನ್ನು ಅಂಜದೇ ಮುರಿಬಡಿಯುವೆವು. ರಾಣೀಸಾಹೇಬರ ಬ್ರಿಟಿಷ್ ಮತ್ತು ಏತದ್ದೇಶೀ ಪ್ರಜೆಗಳ ಶರೀರವಿತ್ತಗಳನ್ನು ಸಂರಕ್ಷಿಸುವದು ನಮ್ಮ ಕರ್ತವ್ಯವಾಗಿದೆ. ಹಿಂದೂ ಮುಸಲ್ಮಾನ ಎಂಬ ಈ ಎರಡು ಮತದವರ ಧರ್ಮಾಚರಣೆಗೆ ಸಂಭವಿಸುವ ಛಲನೋಪದ್ರವಗಳು ಆಗದಂತೆ ಮಾಡುವದು ಸಹ ನಮ್ಮ ಕರ್ತವ್ಯವು. ಮಹಮ್ಮದಿಯರು ಬಹುಕಾಲದಿಂದ ನಡೆದುಬಂದ ತಮ್ಮ ಧರ್ಮಪದ್ಧತಿಯಂತೆ ಆಚರಿಸಬಹುದೆಂತಲೂ, ನಿಮಿತ್ತವಿಲ್ಲದೆಯೂ ಬಹಿರಂಗವಾಗಿಯೂ ತೊಂದರೆಗೊಳಿಸುವಂತೆಯೂ ಗೋವಧಮಾಡಿ, ಹಿಂದು ಜನರ ಮನಸ್ಸು ನೊಯಿಸಬಾರದೆಂತಲೂ ನಿರ್ಬಂಧನೆಗಳು ವಿಧಿಸಲ್ಪಟ್ಟವೆ. ಈಯೆರಡೂ ಮತದ ಜನರು ಈ ಕಟ್ಟಳೆಗಳನ್ನು ಮೀರಿ ಅಪರಾಧಗಳನ್ನು ಮಾಡಿದರೆ, ನಾವು ನ್ಯಾಯಪಥದಿಂದ ಬಂದು ಹೆಜ್ಜೆಯನ್ನಾದರೂ ಹೊರಗಿಡದೆ ಅಪರಾಧಿಗಳಿಗೆ ತಕ್ಕ ಶಿಕ್ಷೆಗಳನ್ನು ಬಿಡದೆ ಮಾಡುವೆವೆಂಬ ಸಂಗತಿಯನ್ನು ಎರಡೂ ಮತಸ್ಥರು ಸ್ಪಷ್ಟವಾಗಿ ತಿಳುಕೊಳ್ಳತಕ್ಕದ್ದು.

ಮೊನ್ನಿಮೊನ್ನಿನಂಥ ಸಣ್ಣದೊಡ್ಡ ದಂಗೆಗಳು ಬೇಕಾದಷ್ಟಾಗಲಿ ನಾವು ಯಾರ ಹಕ್ಕುಗಳನ್ನಾದರೂ ಮುಳುಗಿಸಲಿಕ್ಕಿಲ್ಲ, ಅಥವಾ ಅಧಿಕ ಸಂಖ್ಯಾಕರಾದ ಯಾವದೊಂದು ಮತಸ್ಥರು ಕಡಿಮೆ ಸಂಖ್ಯೆಯ ಬೇರೆ ಮತದವರ ಮೇಲೆ ಬಿದ್ದು ಅವರಿಗೆ ಛಲನೋಪದ್ರವಗಳನ್ನು ಮಾಡಹೋದರೆ,

ನಾವು ಹಾಗೆ ಮಾಡಗೊಡಲಿಕ್ಕಿಲ್ಲ. ಬಂದು ಸ್ಥಳದಲ್ಲಿ ಬಂದು ಮತದವರು ಹೆಚ್ಚಿದ್ದಂತೆ ಎಲ್ಲ ಸ್ಥಳಗಳಲ್ಲಿಯೂ ಇರುವದಿಲ್ಲ. ಆದದ್ದರಿಂದ ಬಂದು ಸ್ಥಳದಲ್ಲಿಯ ಬಹು ಸಂಖ್ಯಾಕರಾದ ವಂಗೆಗಾರರು ಬೇರೆ ಸ್ಥಳಗಳಲ್ಲಿರುವ ಅಲ್ಪ ಸಂಖ್ಯಾಕರಾದ ಸ್ವಧರ್ಮದವರ ಸಂರಕ್ಷಣೆಯನ್ನು ಕುರಿತು, ತಾವು ಜಾಗರೂಕರಾಗಿರಬೇಕೆಂಬದನ್ನು ಮರೆಯಲಾಗದು. ನಮ್ಮ ತಟಸ್ಥವೃತ್ತಿಯನ್ನು ಔದಾಸಿನ್ಯವೆಂದು ಗ್ರಹಿಸಲಾಗದು. ಈ ದೇಶದ ಜನರ ಧರ್ಮಬುದ್ಧಿಯು ಬಲವಾದದ್ದೂ, ಅನಾದಿಕಾಲದಿಂದ ನಡೆಗೊಂಡದ್ದೂ ಎಂಬ ಸಂಗತಿಯನ್ನು ನಾವು ಚನ್ನಾಗಿ ಬಲ್ಲೆವು. ಈ ದೇಶದಲ್ಲಿ ಬಹಳ ಮಾಡಿ ಎಲ್ಲ ಜನರು ಆಕಳು ಪವಿತ್ರವಾದದ್ದೆಂತಲೂ ಪೂಜ್ಯವಾದದ್ದೆಂತಲೂ ಗ್ರಹಿಸಿ, ಅವರು ಅದನ್ನು ಪೂಜಿಸುತ್ತಿರುವದರಿಂದ ಅವರ ಪ್ರೇಮಾತಿಶಯವು ಅದರಲ್ಲಿ ಎಷ್ಟಿರುತ್ತದೆಂಬದನ್ನು ತಿಳಿಯುವದು ಅಶಕ್ಯ. ಆಕಳು ಪವಿತ್ರವಾದದ್ದೆಂಬ ಧರ್ಮಸಂಬಂಧದ ತಿಳುವಳಿಕೆ ಇರುವದರಿಂದಲೂ ಆ ಪ್ರಾಣಿಯಿಂದ ದೇಶಕ್ಕೆ ಬಹಳ ಪ್ರಯೋಜನವಾಗುವದರಿಂದಲೂ, ಅವರು ಅದನ್ನು ಪೂಜಿಸುತ್ತಾರೆಂಬದನ್ನು ನಾವು ಚನ್ನಾಗಿ ಬಲ್ಲೆವು. ಹಿಂದುಧರ್ಮದಲ್ಲಿರುವ ಪೂರ್ವಾಪರವಿರೋಧಗಳನ್ನು ಲಕ್ಷಕ್ಕೆ ತಾರದೆ, ಆಕಳಿನ ವಿಷಯವಾಗಿ ೩೦ ಕೋಟಿ ಹಿಂದು ಜನರ ತಿಳುವಳಿಕೆಯು ಮೇಲೆ ಕಾಣಿಸಿದ ಪ್ರಕಾರದ್ದಾಗಿರುವದರಿಂದ, ಆ ತಿಳುವಳಿಕೆಗೆ ಬಾಧಬರುವ ಯಾವ ಸಂಗತಿಯನ್ನಾದರೂ ಯಾರಾದರೂ ಬೇಕೆಂದು ಮಾಡತೊಡಗಿದರೆ ನಾವು ಹಾಗೆ ಮಾಡಗೊಡಲಿಕ್ಕಿಲ್ಲ. ಅದೇಮೇರೆಗೆ ಆ ತಿಳುವಳಿಕೆಯುಮೂಲಕ ಹಿಂದುಜನರು ಮುಸಲ್ಮಾನರಿಗೆ ಬಾಧಿಸಲಾಗಿ ಶಾಸನ ಹಪ್ಪದು.

ಹಿಂದುಸ್ತಾನದಲ್ಲಿ ಹಿಂದು ಮುಸಲ್ಮಾನರೆಂಬ ಉಭಯ ಜಾತಿಯ ಸಭ್ಯಗೃಹಸ್ಥರು ಸಾಂಪ್ರತದ ಸ್ಥಿತಿಯನ್ನೆರಿತು,

ಜನರ ಕ್ಷುಬ್ಧವಾದ ಮನಸನ್ನು ತಮ್ಮಣಿ ಮಾಡುತ್ತಿರುವ ಪ್ರಯತ್ನಗಳನ್ನು ನೋಡಿ ನಾವು ಆನಂದಪಡುತ್ತೇವೆ. ಈ ದೇಶದಲ್ಲಿ ನಡೆಯುವ ಇಂಗ್ಲಿಷ ಮತ್ತು ಏತದ್ದೇಶೀಯ ವರ್ತಮಾನ ಪತ್ರಕರ್ತರಿಗೂ ಅವುಗಳ ಯಜಮಾನರಿಗೂ ನಾವು ಮನಃಪೂರ್ವಕವಾಗಿ ಸೂಚಿಸುವದೇನೆಂದರೆ:—ಅವರು ದಂಗೆಗಳ ಸಂಗತಿಗಳನ್ನು ಕುರಿತು ಬರೆಯುವಾಗಾಗಲಿ, ಅವುಗಳ ಸಂಬಂಧದಿಂದ ತಮ್ಮ ವಿಚಾರಗಳನ್ನು ಪ್ರಕಟಿಸುವಾಗಾಗಲಿ ಬಹಳ ಎಚ್ಚರಿಕೆಯಿಂದಲೂ ಮಿತಭಾವದಿಂದಲೂ ಅವುಗಳನ್ನು ಕುರಿತು ಬರೆಯಬೇಕಲ್ಲದೇ ಅಜ್ಞಾನಿಗಳಾದ ಯಾವದೊಂದು ಮತಸ್ಥರ ಮನಸಿನಲ್ಲಿ ಅವಿಚಾರಗಳು ಹುಟ್ಟಿ, ಅವರು ದಂಗೆ ಮುಂತಾದ ಅನ್ಯಾಯ ಕಾರ್ಯಗಳಲ್ಲಿ ಪ್ರವರ್ತಕರಾಗುವಂಥ ಬರಹಗಳನ್ನು ಸರ್ವಥಾ ಬರೆಯಕೂಡದು. ಯಾಕೆಂದರೆ, ವರ್ತಮಾನಪತ್ರವೆಂಬ ಆಯುಧವು ಒಳಿತಕ್ಕಷ್ಟೇ ಅಷ್ಟೇ ಕೇಡಿಗೂ ಅನುಕೂಲಿಸುವ ಸಾಧನವಾಗಿರುತ್ತದೆ. ಬ್ರಿಟಿಷಹಿಂದುಸ್ತಾನದೊಳಗಿನ ವರ್ತಮಾನಪತ್ರಗಳು ಅನುಭವಿಸುವ ಸ್ವಾತಂತ್ರ್ಯವು ಬೇರೆ ಎಲ್ಲಿಯೂ ಇರುವದಿಲ್ಲ. ಆದ್ದರಿಂದ ಈ ಪಕ್ಷಗಳನ್ನು ಕಾಯ್ದುಕೊಳ್ಳುವಂತೆ ಆವುಗಳ ಚಾಲಕರು ನಡೆಯುತಕ್ಕದ್ದು. ಅವರು ಜನರಲ್ಲಿ ತಾಳ್ಮೆ ಹುಟ್ಟುವಂತೆಯೂ, ಅತಿಶಯೋಕ್ತಿ ಅನೃತಗಳು ಬಯಲಿಗೆ ಬೀಳುವಂತೆಯೂ, ಜಗಳಗಳು ನಿಂತು ಹೋಗುವಂತೆಯೂ, ದ್ವಿಮತಸ್ಥರಲ್ಲಿ ಅನ್ಯೋನ್ಯ ಪ್ರೀತಿಯು ಇಲ್ಲದಿರುವಲ್ಲಿ ತಿರುಗಿ ತಲೆದೋರುವಂತೆಯೂ ಬರಹಗಳನ್ನು ಬರೆಯತಕ್ಕದ್ದು. ಈ ಮೇರೆಗೆ ವರ್ತಿಸುವ ವರ್ತಮಾನಪತ್ರಕಾರರನ್ನು ನೋಡಿ ಸರಕಾರಕ್ಕೆ ಸಂತೋಷವಾಗುವದು. ಯಾಕೆಂ

ಸರಿ ದೇಶವಲ್ಲಿ ಶಾಂತತೆ ಇಲ್ಲದೆ ಹೋದರೆ ದೇಶದ ಏಳ್ಗೆಯು ಕುಗ್ಗುವದು.

ಭಿನ್ನ ಭಿನ್ನ ಮತಸ್ಥರ ಮಧ್ಯದಲ್ಲಿ ಬಡಕು ಹುಟ್ಟಿಸುವ ಪಕ್ಷಾಗಿ ಹಿಂದುಸ್ತಾನ ಸರಕಾರವು ವಂಗೆಗಳಿಗೆ ಉತ್ತೇಜನ ಕೊಡುತ್ತದೆಂದು ಕೆಲವು ಜನರು ಹೇಳುವ ಮಾತು ತೀರ ಸುಳ್ಳು. ಈ ಸುಳ್ಳನ್ನು ಹರಡುವ ದುಷ್ಟ ಜನರ ಕುಬುದ್ಧಿಯನ್ನು ಎಷ್ಟು ಕಠಿಣೋಕ್ತಿಗಳಿಂದ ಜರೆದರೂ ಸಾಲದು. ಈ ದುಷ್ಟ ಜನರು ತಾವೇ ನಂಬದ ಸುಳ್ಳು ಸುದ್ದಿಗಳನ್ನು ದೇಶವಲ್ಲಿ ಹಬ್ಬಿಸುತ್ತಾರೆ, ಮತ್ತು ಈ ದೇಶದಲ್ಲಿ ಅವು ನಿಜವಾದ ಸಂಗತಿಗಳೆಂದು ಯಾರೂ ನಂಬುವದಿಲ್ಲೆಂಬ ಮಾತಿನ ಬಗ್ಗೆ ಸರಕಾರದವರು ತಮ್ಮ ಮನವರಿಕೆಯನ್ನು ಮಾಡಿಕೊಂಡಿದ್ದಾರೆ. ನಾವು ಮಹಮ್ಮದೀಯ ಮತಸ್ಥರಿಗೆ ಹೇಳುವದೇನೆಂದರೆ:—ನೀವು ನಿಮ್ಮ ಧರ್ಮಕೃತ್ಯಗಳನ್ನು ನೆರವೇರಿಸುವಾಗ, ಹಿಂದು ಜನರ ಧರ್ಮಶ್ರದ್ಧೆಯನ್ನರಿತು, ನಿಮ್ಮ ಧರ್ಮಾಚರಣೆಯನ್ನು ಪೂಜ್ಯಭಾವದಿಂದಲೂ, ಪರರಿಗೊಡವೆಗೆ ಹೋಗದೆಯೂ, ನಿಮ್ಮ ನೆರೆಯವರಾದ ಹಿಂದು ಜನರ ಮನಸನ್ನು ನೊಯಿಸದೆಯೂ ಮಾಡುತ್ತಾ ಹೋಗಿರಿ. ಅದರಂತೆಯೇ ಹಿಂದು ಜನರಿಗೆ ಹೇಳುವದೇನೆಂದರೆ:—ನೀವು ಗೋಸಂರಕ್ಷಕ ಸಭೆಗಳನ್ನು ಕೈಲಾದಮಟ್ಟಿಗೆ ಸ್ಥಾಪಿಸಿರಿ. ಅನ್ಯಜನರು ಗೋವುಗಳ ಕೂಡ ವಯುದ್ಧಾಪ್ತಿಗಿಂತ ನಡೆಯುಬೇಕೆಂಬದಾಗಿಯೂ ಅವು ಮುದುಕತನದಿಂದ ಆಗಿ ಇಲ್ಲವೆ ಶ್ರಮದಿಂದ ಸೊರಗಿ ಮರುಮರುಗಿ ಸಾಯುವ ಹಾದಿಯನ್ನು ಹಿಡಿದಾಗ ಅವುಗಳನ್ನು ಅನ್ಯರು ಕ್ರೂರತನದಿಂದ ನಡಿಸಿಕೊಳ್ಳುವದನ್ನು ನಿಲ್ಲಿಸಿಬಿಡುವದಕ್ಕಾಗಿಯೂ ನೀವು ಮಾಡತಕ್ಕ ಶ್ರಮದಲ್ಲಿ ಎಳ್ಳಷ್ಟಾದರೂ ಕಡಿಮೆ ಮಾಡ

ಬೇಡಿರಿ; ಆದರೆ ನಿಮ್ಮ ಗೋರಕ್ಷಕ ಸಭೆಗಳಿಂದ ನಿಮ್ಮ ನೆರೆಯವರಿಗೆ ಹೆದರಿಕೆ ಉಂಟಾಗದಂತೆಯೂ, ಖಾಂತಿಗೆ ತವರಮನೆಗಳಾದ ಪಳ್ಳಿಪಳ್ಳಿಗಳಲ್ಲಿರುವ ನಿವಾಸಿಗಳಲ್ಲಿ ಜಾತಿ ದ್ವೇಷವೆಂಬ ವಿಷವನ್ನು ಬೀರದಂತೆಯೂ ಅವುಗಳನ್ನು ನೀವು ನಡಿಸತಕ್ಕದ್ದು. ಕೊನೆಯಲ್ಲಿ ನಾವು ಹಿಂದೂ ಮುಸಲ್ಮಾನರಿಗೂ ಕೂಡಿ ಹೇಳುವದೇನಂದರೆ:—ನಮ್ಮ ಕೈಕೆಳಗಿನ ಉದ್ಯೋಗಸ್ಥರು ತಮ್ಮ ಕೆಲಸ ನಡಿಸುವಾಗ ಪಕ್ಷಪಾತವನ್ನು ಮಾಡಿದರೆ, ಇಲ್ಲವೆ ಅವರು ಶಾಸನಗಳನ್ನು ಅತಿಕ್ರಮಿಸಿ ನಡಿದರೆ, ಅವುಗಳ ಸಂಬಂಧವಾಗಿ ನೀವು ಸರಕಾರಕ್ಕೆ ತಿಳಿಸಿರಿ, ನ್ಯಾಯಕೋರ್ಟುಗಳು ನಿಮಗೆ ಯಥಾನ್ಯಾಯನಿರ್ಣಯಗಳನ್ನು ಕೊಡುವವು, ರಾಜ್ಯದಾಡಳಿತೆಯು ಪ್ರಯತ್ನಕ ಅಧಿಕಾರಿಗಳು ನಿಮಗೆ ತಕ್ಕ ಸಹಾಯ ಮಾಡುವರು.

THE MORAL TRAINING OF CHILDREN.

ಮಕ್ಕಳ ನೀತಿಶಿಕ್ಷಣವು.

(ಟಿಳಿನೆಯ ಪುಟದಿಂದ ಮುಂದೆ ಸಾಗಿದ್ದು.)

ಎಷ್ಟೋ ಜನರು ತಾಯಂದಿರು ತಮ್ಮ ಚಿಕ್ಕ ಬಾಲಕರಿಗೆ ಶೈಯಲಿಕ್ಕೂ ಬಡಿಯಲಿಕ್ಕೂ ಕಲಿಸುತ್ತಾರೆ. ಅವರು ತಾವು ಕೀಳಿವಂತೆ ಮಾಡಿದರೆ ಬಹಳ ಸಂತೋಷಪಡುತ್ತಾರೆ, ಬಸ್ಸೊಮ್ಮೆ ತಮ್ಮನ್ನಲ್ಲದೆ ತಮ್ಮ ಗಂಡರನ್ನು ಸಹ ಬಡಿಯಲಿಕ್ಕೆ ಕಲಿಸುತ್ತಾರೆ. ಬಂದು ದಿವಸ ಒಬ್ಬ ಸಣ್ಣ ಮಗಳು ಚಿಕ್ಕಿಯನ್ನು ತಳಿಸುತ್ತ ಕೂತಿರುವಾಗ, ಅವಳ ಗಂಡನು ಬಾಯಲ್ಲಿಯೇ ಆತುತ್ತಿರುವ ತನ್ನ ಚಿಕ್ಕ ಬಾಲಕನಿಗೆ—"ಮಗನೇ ಆಕೆಯ ಹತ್ತರಹೋಗಿ ಏಳು ಕತ್ತೆಯೇ ಇಲ್ಲಿಂದ; ನನ್ನ ಮನೆಯು ಬಿಟ್ಟು ಹೋಗು; ನಿಮ್ಮಪ್ಪನ ಗಂಟು ಇಲ್ಲಿ

ನಿನು ಇಟ್ಟಿದ್ದಿ? ತವರಮನೆಗೆ ಹೊರಟುಹೋಗು" ಎಂದು ಬೈಯು ಹೇಳಿದನು. ಅಹುಡುಗನು ಅದರಂತೆಯೇ ತಾಯಿಗೆ ಬೈಯಲು, ಅವಳು ನಗುತ್ತಾ ಅಮುಗಂವಿಗೆ "ನೀನು ಹೋಗಿ ನಿನ್ನ ಹಡೆದವನ ಕೆನ್ನೆಯಮೇಲೆ ಬಳಿತಾಗಿ ಗುದ್ದು" ಎಂದು ಹೇಳಿದಳು. ಅವನು ತಾಯಿಯ ಈಮಾತಿಯನ್ನು ಕೇಳಿ, ಓಡುತ್ತೋಡುತ್ತಾ ಹೋದವನೇ ತಂದೆಯ ಗಲ್ಲಕ್ಕೆ ಬಂದು ತಪರಾಕಿ ಕೊಟ್ಟನು. ತಾಯಿತಂದೆಗಳ ಈತರದ ನಡತೆಗಳು "ಜಾಲಿಯಬಿತ್ತಿ ಕಾಲಿಗೆ ಮೂಲಪರಾಡಿಕೊಂಡ" ಎಂಬ ಗಾದೆಯಂತೆ ಮುಂದೆ ತಾಯಿತಂದೆಗಳಿಗೆ ಕೇಡನ್ನುಂಟು ಮಾಡುವವೆಲ್ಲದೆ ಅಹುಡುಗರನ್ನು ಕೇಡಿಗೆ ಗುರಿಮಾಡುತ್ತವೆ.

ಕೆಳಗೆಬರೆದ ಮೂರು ಮಾದರಿಯ ಮಕ್ಕಳು ಕೆಟ್ಟುಹೋಗುವ ಸಂಭವವು ವಿಶೇಷವಿರುತ್ತದೆ. ಅವರು ಯಾರೆಂದರೆ:—

೧. ಚಲುವನು:—ಪ್ರಾಚೀನಕಾಲದಲ್ಲಿ ದಾವೀದನೆಂಬೊಬ್ಬ ಹಸರಾದ ಅರಸನಿದ್ದನು. ಅವನಿಗೆ 'ಆಬೋಸಿಜಾ' ಎಂಬ ಬಹಳ ಚಲುವನಾದ ಮಗನಿದ್ದನು. ತಂದೆಯು ಮಗನ ಮೇಲಿನ ವ್ಯಾಮೋಹದಿಂದ ಅವನನ್ನು ಬಹಳ ಅಚ್ಚಿಯಿಂದ ಬೆಳಿಸಿ, ಅವನನ್ನು ಮನಬಂದಂತೆ ನಡೆಯಗೊಟ್ಟನು. ಇದರ ಪರಿಣಾಮವೇನಾಯಿತೆಂದರೆ:—ಅಮುಗನು ತಂದೆಯನ್ನು ಸಿಂಹಾಸನದಿಂದ ತಳ್ಳಿ ತಾನೇ ಅರಸನಾದನು.

೨. ಏಕಪುತ್ರವಿಷಯವಾದವರು—ಈವಿಷಯದಲ್ಲಿಂದು ಬಹಳ ಭಯವಿರುತ್ತದೆ. ಈಸಂಬಂಧದ ಬಂದು ಉದಾಹರಣೆಯನ್ನು ಕೆಳಗೆ ಹೇಳುತ್ತೇವೆ.

ಬಬ್ಬ ಧನವಂತನಿಗೆ ಬಬ್ಬನೇ ಮಗನಿದ್ದನು. ಅವನ ತಾಯಿತಂದೆಗಳು ಅವನಿಗೆ ಬಹಳ ಅಚ್ಚಿ ಮಾಡುತ್ತಿದ್ದರಿ

ಷ್ಟೇಅಲ್ಲ, ಅವನನ್ನು ಕಂಡಕಂಡವರ ಮುಂದೆ ಬಹಳ ಬೆಳಿಸಿ ಹೇಳುತ್ತಿದ್ದರು. ಅವನು ತಕ್ರಾರುಮಾಡಿದರೂ ಬಂದು ತುಟಿ ಎರಡು ಮಾಡುತ್ತಿದ್ದಿಲ್ಲ. ಅವನು ಸುಳ್ಳುಸುಳ್ಳೇ ತಲೆ ನೋಯುತ್ತದೆಂದು ನೆವಹೇಳಿ, ಬಂದೊಂದು ದಿವಸ ಸಾಲೆಗೆ ಹೋಗುತ್ತಿದ್ದಿಲ್ಲ. ಮನೆಯಲ್ಲಿ ಸಹ ಪುಸ್ತಕವನ್ನು ತೆರೆದುನೋಡದೆ, ಹೊತ್ತನ್ನೆಲ್ಲ ಅಟವಲ್ಲಿಯೇ ಕಳೆಯುತ್ತಿದ್ದನು. ಅವನು ಕೆಟ್ಟ ಹುಡುಗರೊಂದಿಗೆ ತಿರುಗಾಡಲಿಕ್ಕೆ ಹೋದರೂ ಅವನ ತಾಯಿತಂದೆಗಳು ಸಿಟ್ಟುಮಾಡುತ್ತಿದ್ದಿಲ್ಲ. ಈರೀತಿಯಿಂದ ಅವನು ಸ್ವೇಚ್ಛೆಯಿಂದ ನಡೆಯಲು, ಮುಂದೆ ಕುಡಕನೂ, ಜೂಜುಗಾರನೂ ಆದನು.

ಕೆಲವು ದಿವಸಗಳಹಿಂದೆ ಕಲಕತ್ತೆಯಲ್ಲಿ ಬಬ್ಬ ಶ್ರೀಮಂತಮನುಷ್ಯನು, ಮಗನು ಬೇಡಿದ್ದನ್ನು ಕೊಡದಿರಲು, ಅವನನ್ನು ಮಗನು ಸಿಟ್ಟಿನಿಂದ ಕೊಂದುಹಾಕಿದನು.

೩. ಬೇನೆಯುಹುಡುಗರು--ಇಂಥ ಹುಡುಗರ ತಾಯಿತಂದೆಗಳು ಮಾಡಿಕೆಯಾಗಿ ಅವರು ಬೇಡಿದ್ದನ್ನು ಕೊಡುವರು, ಹೇಳಿದ್ದನ್ನು ಕೇಳುವರು. ಇದರಿಂದ ಮಕ್ಕಳು ಹಟಮಾರಿಗಳೂ ಉದ್ಧಟರೂ ಆಗುವರು. ಬಬ್ಬ ಹುಡುಗನು ಬೇನೆಬಿದ್ದಿದ್ದನು. ಅವನ ತಾಯಿಯು ಔಷಧವನ್ನು ತೆಗೆದುಕೊಂಡು ಅವನ ಹಾಸಿಗೆಯಹತ್ತರ ಹೋದಳು. ಮುಂದೆ ಅವರ ನಡುವೆ ನಡೆದ ಸಂಭಾಷಣೆಯನ್ನು ಕೆಳಗೆ ಬರೆಯುತ್ತೇವೆ.

ತಾಯಿ—ತಮ್ಮಾ, ಔಷಧ ತಂದಿದ್ದೇನೆ. ಇದನ್ನು ತೆಗೆದುಕೋ.

ಮಗ—ಅಮ್ಮಾ, ಅದನ್ನು ನಾನೊಲ್ಲೆ.

ತಾಯಿ—ಹೀಗೆ ಅನ್ನಬೇಡಪ್ಪಾ, ಇದನ್ನು ಕುಡಿದರೆ ನಿನಗೆ ಗುಣವಾಗುವದು.

ಮಗ—ಅಪ್ಪಾ, ಇಲ್ಲವೆಂದು ಹೇಳಬೇಡ. ಇದರಿಂದ ಏನೂ ಗುಣವಾಗುವದಿಲ್ಲ.

ತಾಯಿ—ಮಗನೇ, ಇದರಿಂದ ದಿಟವಾಗಿ ಗುಣವಾಗುವದೆಂದು ವೈದ್ಯನು ಹೇಳಿದ್ದಾರೆ. ತೆಗೆದುಕೋ, ಇದು ನಿನಗೆ ಗುಣಕೊಡುವದು.

ಮಗ—ಹೋಗು, ನನ್ನ ಎದುರಿಗೆ ನಿಲ್ಲಬೇಡ. ನಾನು ಅವನ್ನು ಕುಡಿಯುವದಿಲ್ಲ. ಸುಮ್ಮನೆ ನನ್ನನ್ನು ಪೀಡಿಸಬೇಡ.

ಅಮೇಲೆ ಔಷಧವನ್ನು ಬಲಾತ್ಕಾರದಿಂದ ಕುಡಿಸುವಷ್ಟು ಧೈರ್ಯವೂ ಸ್ಥಿರಮನಸ್ಸೂ ಅವಳಲ್ಲಿ ಇಲ್ಲದ್ದರಿಂದ, ಅವಳು ಉಪಾಯವಿಲ್ಲದೆ ಅವನ್ನು ಒಕ್ಕಲ್ಲಿಬಿಟ್ಟಳು. ಮೂರುದಿವಸ ವೈದ್ಯನು ಬಂದಾಗ, ಮುನ್ನಾದಿವಸ ನಡೆದ ಸಂಗತಿಯನ್ನು ಅವನ ಮುಂದೆ ಹೇಳಲಿಕ್ಕೆ ನಾಚಿಕೊಂಡು, ಅಪ್ರಸ್ತುತವನ್ನೇ ತೆಗೆಯಲಿಲ್ಲ. ವೈದ್ಯನು ಹುಡುಗನ ನಾಡಿಯನ್ನು ಪರೀಕ್ಷಿಸಿ, ಅವನ ಪ್ರಕೃತಿಯು ಹೆಚ್ಚು ಕೆಟ್ಟಿರುವದನ್ನು ನೋಡಿ, ನಿನ್ನಿನ ಔಷಧವು ಹೊಟ್ಟೆಯಲ್ಲಿ ಹೋಗಿದೆ ಎಂಬ ನಂಬಿಗೆಯಿಂದ ಮತ್ತೊಂದು ಔಷಧವನ್ನು ಅಕೆಯ ಕೈಯಲ್ಲಿ ಕೊಟ್ಟು, ಇವನ್ನು ಅವನಿಗೆ ಕುಡಿಸೆಂದು ಹೇಳಿ, ಹೊರಟು ಹೋದನು. ಅದಿವಸ ಸಹ ಅವನು ಅವನ್ನು ಕುಡಿಯುವದಿಲ್ಲೆಂದು ಹಟಹಿಡಿದನು. ತಿಳಿಗೇಡಿಯಾದ ಆತಾಯಿಯು ಅವನ್ನು ಸಹ ಚೆಲ್ಲಿಬಿಟ್ಟಳು. ಇದರಿಂದ ಮಡುಗನ ಬೇನೆಯು ಬಲಿಯಿತು. ಮೂರುದಿವಸ ವೈದ್ಯನು ಬಂದು ನೋಡಿ ತ್ತಾನೆ:—ಹುಡುಗನ ಪ್ರಕೃತಿಯು ತೀರಾ ಕೆಟ್ಟಹೋಗಿದ್ದು. ತನ್ನ ಔಷಧದಿಂದ ಅವನಿಗೆ ಏನೂ ಗುಣವಾಗದ್ದನ್ನು ನೋಡಿ, ಇನ್ನು ಮೇಲೆ ನನ್ನ ಉಪಾಯವು ನೀತಿಕ್ಕು

ನಿನ್ನ ಮಗನ ಆಸೆಯನ್ನು ಬಿಡೆಂದು ಅವಳಿಗೆ ಬೋಳಿದನು. ಅವನ್ನು ಕೇಳಿ ಅವಳು ದುಃಖದಿಂದ ಹಿಂದೆನಡೆದ ವೃತ್ತಾಂತವನ್ನು ಹೇಳಿದಳು. ಆದರೆ ದೊಕ್ಕು ಹಾರಿದಮೇಲೆ ಮಾಡುವದೇನು? ಆಹುಡುಗನು ತುಸು ಹೊತ್ತಿನಲ್ಲಿಯೇ ಪ್ರಾಣವ ಬಿಟ್ಟನು.

ಮತ್ತೊಂದು ಹುಡುಗನಿಗೆ ಬಂದು ದೊಡ್ಡ ಜೇನೆ ಬಂತು. ಅವನನ್ನು ಅವನ ತಾಯಿತಂದೆಗಳು ಬಹಳ ಪ್ರೀತಿಸುತ್ತಿದ್ದರು. ಅವನು ಅವರ ಅಪ್ಪಣೆಯನ್ನು ಪಾಲಿಸುವ ಹುಡುಗನಾಗಿದ್ದರೂ, ಜೇನೆಯತಾಪದಿಂದಲೂ ನೋವಿನಿಂದಲೂ ಔಷಧವನ್ನು ತೆಗೆದುಕೊಳ್ಳುವದಿಲ್ಲೆಂದು ಹಟಹಿಡಿದನು. ಅವರೆ ಔಷಧವು ಅವನ ಹೊಟ್ಟೆಯಲ್ಲಿ ಹೋಗದೆಇದ್ದರೆ, ಅವನು ಬದುಕುವಂತೆ ಇದ್ದಿಲ್ಲ. ಆಗ್ಗೆ ಅವನ ತಂದೆಯು ಜೇನೆಯಿಂದ ಜೋರಾದ ಮಗನನ್ನು ಶಿಕ್ಷಿಸಿ ಬಲಾತ್ಕಾರದಿಂದ ಅವನಿಗೆ ಔಷಧವ ಕುಡಿಸಿದನು. ಇದರಿಂದ ಆ ಹುಡುಗನು ತನ್ನ ಜಾಡಿತನವನ್ನು ಬಿಟ್ಟು, ಕೊಟ್ಟಔಷಧ ತೆಗದು ಕೊಳ್ಳಹತ್ತಿದ್ದರಿಂದ, ಅವನಿಗೆ ಬೇಗನೆ ಗುಣವಾಯಿತು.

ಜೇನೆಯು ಮಕ್ಕಳು ಸಹ ತಮಗೆ ವಿಧೇಯರಾಗಿರುವಂತೆ ಮಾಡುವದು ತಾಯಿತಂದೆಗಳ ಕರ್ತವ್ಯವು. ಈಮೇರೆಗೆ ಮಾಡದವರು ತಾಯಿತಂದೆಗಳು ಮಕ್ಕಳ ಹಿತ ಬಯಸುವವರಲ್ಲ; ಆದರೆ ಅವರ ಅಹಿತ ಬಯಸುವವರೆಂದು ತಿಳುಕೊಳ್ಳಬೇಕು. ಬಸ್ಮೊಮ್ಮೆ ಮಕ್ಕಳು ತೀರ ಸಣ್ಣವರೂ ತೀರ ಅಶಕ್ತರೂ ಇರುವದರಿಂದ ಕಹಿದಾದ ಔಷಧವನ್ನು ಹ್ಯಾಗೆ ಕುಡಿಪಾರು ಎಂದು ಕೆಲವರು ತಾಯಿತಂದೆಗಳು ನೆವಹೇಳುತ್ತಿರುತ್ತಾರೆ. ಇದು ಸರಿಯಲ್ಲ. ಈತರದ ಸಂದರ್ಭಗಳೇ ಅವರಿಗೆ ಅನಿವಾರ್ಯವೆಂದನು. ಹೇಳುವಷ್ಟ

ವಿಶೇಷತ್ವವನ್ನುಂಟುಮಾಡುವದಕ್ಕೆ ಬಂದು ನಿಯಮ
ವಿರುತ್ತದೆ. ಅನಿಯಮವನ್ನನುಸರಿಸಿ ತಾಯಿತಂದೆಗಳು ನ
ಡೆದರೆ ಮಕ್ಕಳಲ್ಲಿ ಈಮೇಲಾದ ಗುಣವು ಹುಟ್ಟುವದು. ಅ
ನ ಯಾವದೆಂದರೆ:—ಹುಸಿಪೋಗುವ ಅಪ್ಪಣೆಯನ್ನು
ಎಂದೂ ಕೊಡಬಾರದು. ತಾವು ಬಮ್ಮಿ ಕೊಟ್ಟ ಅಪ್ಪ
ಣೆಯನ್ನು ಅವರು ಪಾಲಿಸಲಿಕ್ಕೇಬೇಕೆಂದು ತಿಳುಕೊಳ್ಳಬೇ
ಕು. ಯಾವದಾವರೊಂದು ಕೆಲಸವನ್ನು ಮಾಡಲಿಕ್ಕೆ ಮಕ್ಕ
ಳಿಗೆ ಹೇಳುವ ಮೊದಲೇ ತಾಯಿತಂದೆಗಳು ಚೆನ್ನಾಗಿ ವಿಚಾ
ರಮಾಡಬೇಕು. ಬಲಾತ್ಕಾರದಿಂದ ಸಹ ಮಾಡಿಸಲಿಕ್ಕೆ ಆಗ
ದಂಥ ಅಥವಾ ಮಕ್ಕಳ ಕೈಯಿಂದ ನೀಗದಂಥ ಅಪ್ಪಣೆಗಳ
ನ್ನು ಎಂದೂ ಕೊಡಬಾರದು. ಮಗುವು ಭಯಪಟ್ಟು ಚಿಟ್ಟು
ಚೀರಿ ಅಳುವಾಗ್ಗೆ, ಅದನ್ನು ಬಮ್ಮಿಲೆ ನಿಲ್ಲಿಸು ಎಂದು
ಹೇಳುವದು ತಕ್ಕದ್ದಲ್ಲ. ಬಂದು ವೇಳೆ ಹೇಳಿದರೆ ಆಮ ನಿ
ರರ್ಥಕವಾಗುವದು.

ಮುಂದಕ್ಕೆ ಸಾಗುವದು.

POETRY BOOKS EXAMINED-COMMUNICATED.

ಪದ್ಯಪೆಟ್ಟಿಗೆವಿಮರ್ಶನವು.

(ಒಟ್ಟಿನೆಯ ಪುಟದಿಂದ ಮುಂದೆ ಸಾಗಿದ್ದು.)

ಅಲ್ಲಿಂದಮುಂದೆನಚೆಮುದಗ್ರೀಷ್ಮಕಾಲದೊಳು । ಸಲ್ಲಲಿತ
ವಾಜಿವಿನಮಣಿಯುರಿಗೆಭೂತಳದೊ । ಳೆಲ್ಲಿಯುಂಕರೆತೊರೆಗ
ಳೊರತೆಬರತುದುನೀರ್ನೆಗಳಲ್ಲಳನರನೆವಂತಪರು ॥

ಫುಲ್ಲಿಸುವಬೇಸಿಗೆಯಬಿಸಲಿಂದಮೂಜಗಂ । ತಲ್ಲಣಿಸಿತಿಳ
ಯುಕಾವೇರಿದುದುಸೂರ್ಯನವಿ । ಪುಲ್ಲಿತಕೋಧಾಕ್ಷಿಯುಂ
ಬಿಯಬಾಣಗಳಂದುಹಾರದಲೆವಾಣವುಕಣಾ ॥ ೧ ॥

ಈ ಪದ್ಯದ ಮೂಲಪು ಜಯಪಿನಿಯಲ್ಲಿ

ಅಲ್ಲಿಂದಮುಂದೆನಡೆದುಗ್ರೀಷ್ಮಕಾಲದೊಳ್ । ಸಲ್ಲಲಿ
ತಾಪೆಪರಿಪ್ಲವನರಿತ್ರಿಯಿಂ । ದೆಲ್ಲಿಯುಂಕೆರೆತೊರೆಗಳೊ
ಕಿಬರತುಮಸೀನೆರ್ದಳ್ಳಳನವಸೆಪಾಂಥರು ॥

ಫಲ್ಲಿಸುವಬೇಸಗೆಯಬಿಸಿಲಿಂದಮೂಜಗಂ । ತಲ್ಲಣಿಸಿತೀ
ನುಕಾಹೇರಿಪತಾಳದಹಿ । ವಲ್ಲಭನಪೆಜೆವಣಿಯರುಬಿಗಳಾ
ತಪವಂತೆಕಾಣಿಸದೆಪೊಣಪೆನಲು ॥ ೧ ॥

ಈ ಎರಡು ಪದ್ಯಗಳನ್ನು ನೋಡಿದರೆ ಮೂಲಪದ್ಯದ
ಲ್ಲಿ ಪಾರಿಪ್ಲವಫರಿತ್ರಿಯಿಂದ ಎಂಬ ಪದವನ್ನು ತೆಗೆದು
ದಿನಮಣಿಯುರಿಗೆ ಭೂತಳದೊಳ್ ಎಂಬ ಪಾಠಾಂತರವನ್ನು
ಮಾಡಿದರೆಂಬದು ತೋರುತ್ತದೆ. ಇನ್ನು ಮೂಲದರ್ಥಕ್ಕೂ
ಪಾಠಾಂತರದ ಅರ್ಥಕ್ಕೂ ಏನುಹೆಚ್ಚುಕಡಿಮೆಯಾಯಿತೇ
ನವನ್ನು ನೋಡೋಣ.

ಅರ್ಜುನನ ಅಸ್ತ್ರಪ್ರಯೋಗದ ಕಾಮರೆಯು ಪಾರಿಪ್ಲವವೆಂಬ
ಶಬ್ದದಿಂದ ಮುಂದಕ್ಕೆ ಹೋಯಿತೆಂದು ಮೂಲದ ಅರ್ಥವ
ಶ. ಈಅರ್ಥವನ್ನು ತೆಗೆದಕಾರಣವೇನೋ ತಿಳಿಯುವದಿಲ್ಲ.
ಗ್ರೀಷ್ಮಕಾಲದ ವರ್ಣನೆಯಲ್ಲಿ ಪಾರಿಪ್ಲವದ ಹೆಸರೇಕೆ? ಎಂ
ತು ತಿಳಿವರೇನು? ಹೀಗಿದ್ದರೆ ಅಲ್ಲಿಂದ ಮುಂದೆ ನಡೆದುದು
ಸಲ್ಲಲಿತವಾಜಿ ಎಂಬ ವಾಕ್ಯವು ನಿಷ್ಕಾರಣವಾಗುತ್ತದೆ. ಅದ
ನ್ನು ಯಾಕೆ ತೆಗೆಯಲಿಲ್ಲ ಅದನ್ನು ಇಟ್ಟಪಕ್ಷದಲ್ಲಿ ಪಾರಿಪ್ಲವ
ರಿತ್ರಿಯಿಂದ ಎಂಬ ಪದವನ್ನು ಇಡದಿದ್ದರೆ ಇದಕ್ಕೆ ಸಂಬಂಧ
ಪಿಸಿದ ಅಲ್ಲಿಂದ ಎಂಬಪದಕ್ಕೆ ಅರ್ಥ ಹೇಳುವದು ಬಿಗಿಯಾ
ಗುತ್ತದೆ. ಇದೇ ಪಾಠಾಂತರದ ಫಲವು. ದಿನಮಣಿಯುರಿಗೆ
ಭೂತಳದೊಳ್ ಎಂಬ ಎರಡು ಪದಗಳನ್ನು ಇಡದೆ ಹೋ
ದರೆ ಪದ್ಯಾರ್ಥಕ್ಕೆ ಏನು ತೊಂದರೆ ತಟ್ಟುತ್ತದೆ? ದಿನಮಣಿ

ಯುರಿಗೆ ಎಂಬ ಪದದ ಸ್ಥಳದಲ್ಲಿ ಗ್ರೀಷ್ಮಕಾಲದೊಳ್ ಚೇಸಿ ಗೆಯಬಿಸಲಿಂದ ಎಂಬೆರಡುಪದಗಳು ಪದ್ಯವಲ್ಲಿ ಉಂಟೀವ್ರಂ ಟು ಮತ್ತೊಂದು ಹೆಚ್ಚಿಗೆ ಹಾಕುವದೂ ಪ್ರಯೋಜನವಲ್ಲ ಪದವನ್ನು ತೆಗೆದು ಹಾಕುವದೂ ಸಯುಕ್ತಿಕವೇದು ತೋರು ದಿಲ್ಲ. ಭೂತಳದೊಳ್ ಎಂಬ ಪದದ ಸ್ಥಳದಲ್ಲಿ ಮೂಲದೊ ಳಗೆ ಇಳಿಯು ಎಂಬ ಪದವುಂಟು. ಅದರಿಂದ ಭೂತಳದೊಳ್ ಎಂಬ ಹೊಸಪಾಠಾಂತರವಿಟ್ಟದ್ದು ನಿಷ್ಕಾರಣವದೆ.

ಇನ್ನು ನಾಲ್ಕನೆಯ ಚರಣವನ್ನೆಲ್ಲ ಬದಲಿಸಿ ಅಸ್ಥಳದಲ್ಲಿ ಸೂರ್ಯನ ವಿಸ್ಫುಲ್ಲಿತ ಕ್ರೋಧಾಗ್ನಿಯುರಿಯ ಬಾಣಗಳಂದು ಹಾರದಲೆ ಮೂಣವುಕಣಾ ಎಂಬ ಪಾಠಾಂತರವನ್ನು ಇಟ್ಟ ದ್ದಾರೆ—ಅದರ ಅರ್ಥವು ಏನಂದರೆ—ಸೂರ್ಯನ ಅರಳಿದ ಕ್ರೋಧಯುಕ್ತವಾದ ಕಣ್ಣುಗಳಿಂದ ಹೊರಡುವ ಉರಿಯು ಬಾಣಗಳು ಹಾರದೆ ಬಿಡವು ಕಂಡೆಯಾ. ಈಯರ್ಥವು ಎಷ್ಟು ಸಯುಕ್ತಿಕವಾಗಿದೆ ನೋಡಿರಿ: ಸೂರ್ಯನಿಗೆ ಸಿಟ್ಟು ಬರಕ್ಕೆ ಕಾರಣವೇನು. ಬಂದು ಪಕ್ಷದಲ್ಲಿ ಸಿಟ್ಟು ಬಂತೆಂದು ತಿಳಿದ ರೆ ಅವನ ಕಣ್ಣುಗಳೊಳಗಿಂದ ಬಾಣಗಳು ಹೇಗೆ ಹಾರು ತ್ತವೆ. ಈಯೆಲ್ಲ ಸಂಗತಿಗಳು ವಿಚಿತ್ರವಾಗಿವೆ. ಇನ್ನು ಮೂ ಲದ ಅರ್ಥವೇನೆಂದರೆ-ಪ್ರಬಲವಾದ ಚೇಸಿಗೆಯ ಬಿಸಿಲಿನಿಂದ ನೆಲವುಕಾಯ್ದು ಆಕಾವಿನಿಂದ ನೆಲವನ್ನು ಹೊತ್ತಿರುವ ಪಾ ತಾಳದ ಮಹಾಶೇಷನ ಹೆಡೆಯ ರತ್ನಗಳಕಾಂತಿಗಳು ಬಿಸಿ ಲಿನಂತೆ ಕಾಣಿಸದೆ ಇರವು ಎಂಬಂತೆ ಆಯಿತು.

೧೭೦ ಪದ್ಯವು.

ಪುಸವವೊಂದೊಂದರೊಳು ಮಧುವಾಸೆಯುವಯಾದ್ರಿ ।
ಸಿಸೆಯುಂತೆಖಿತಿಯುಂತೆಧನವಂತೆಜಸವಂತೆ । ಪಸುರುವಳ
ಗಂತೆಕೆಂಪಸಿತಪಳದಿಪಳಕುಪಚ್ಚೆಗಳಬಣ್ಣದೀದಾ ॥

ಈಪದ್ಯವಲ್ಲಿ **ಮೂಲದೊಳಗಿದ್ದ ಅಂಗಜನೆ** ಎಂಬಪದ ವನ್ನು ತೆಗೆದು ಉದಯಾದ್ರಿ ಎಂಬ ಪಾಠಾಂತರವನ್ನು ಇಟ್ಟಿ ದ್ದಾರೆ. ಅವರೆ ಅಂಗಜನ ಈಶಬ್ದದ ಸಂಬಂಧವು ದೆಸೆ ಖತಿ ಧನ ಜಸ ಪಸುರ್ವೆಳಗು ಎಂಬ ಅಯ್ದು ಪದಗಳಿಗೆ ಉಂಟು. ಇವನ್ನು ತಿಳಿಯಕೊಳ್ಳದೆ ಅಂಗಜ ಶಬ್ದವು ಕಾಮನ ಹೆಸ ರೆಂಬ ನಿಮಿತ್ತದಿಂದ ಅದನ್ನು ತೆಗೆದು ಹಾಕಿ ಅವರ ಸ್ಥಳ ದಲ್ಲಿಟ್ಟ ಉದಯಾದ್ರಿ ಎಂಬ ಪದದ ಸಂಬಂಧವು ದೆಸೆ ಎಂಬ ಒಂದು ಪದಕ್ಕೆ ಮಾತ್ರ ಹತ್ತುವದು. ಈ ಎಂದಿನ ಖತಿ ಧನ ಜಸ ಪಸುರ್ವೆಳಗು ಎಂಬ ನಾಲ್ಕು ಪದಗಳು ಅತಂತ್ರವಾಗಿ ಉಳಿಯುತ್ತವೆ; **ಇದೇ** ಪಾಠಾಂತರದ ಫಲವು. ಅಂಗಜಶ ಬ್ದವನ್ನಿಟ್ಟರೆ ದೋಷವೇನು? ಅಂಗಜನೆಂಬಾತನು ಒಬ್ಬ ದೇವತೆಯೆಂದು ಹೇಳಿದರಾಯಿತು.

ಗದ್ಯಾನುವಾದ.

ಕಿರುವೆಲರೊಳ್ತಳಿರಂ ಸೂರಿಸುತ **ಮಲ್ಲಿಗೆಯ** । ನೆರಗಿಸು ತಜಿಹ್ವಾಚ್ಛೈಲ್ಯಮಂಪೀಡಿಸಿವಸಂತನೃಪಪೌರಮಟ್ಟುವಾಗಿ ಯನ್ನಿಷುಗಿಸಿ ಸಮಸ್ತವನರಾಷ್ಟ್ರಮಂ ಕೈಕೊಂಡಪನು ॥

ಈ ಪದ್ಯದಲ್ಲಿ "ಮಲ್ಲಿಗೆಯನೆರಗಿಸುತ" ಎಂಬದು ಪಾ ಠಾಂತರವಾಗಿದೆ. ಇದರ ಸ್ಥಳದಲ್ಲಿ **ಮೂಲದೊಳಗೆ** "ವಿರಹಿ ಗಳನೆರಗಿಸುತ" ಎಂದುಂಟು. ವಿರಹಿಗಳೆಂದರೆ ತಮ್ಮ ಪ್ರಿಯರನ್ನು ಅಗಲಿದವರು (**ಸ್ತ್ರೀ**ಯರು ಅಥವಾ ಪುರುಷರು) ವಸಂತಕಾಲದಲ್ಲಿ ತಂಗಾಳಿ, ಹೂಗಳು, ಬೆಳದಿಂಗಳು, ಚಿಗ ರುಗಳು, ಪಕ್ಷಿಗಳ ಮಧುರಧ್ವನಿ, ಇವೆಲ್ಲ ಜನರ **ಮನ**ಸಿಗೆ ಆನಂದಕರವಾಗಿವೆ. ಅವರೆ ವಿರಹಿಗಳಿಗೆ ಇವನ್ನು ಕಂಡರೆ ಬಹುದುಃಖವಾಗುತ್ತದೆ. ಏಕಂದರೆ ತಮ್ಮ ಪ್ರಿಯರೊಡನೆ ಇಂತಹ ಸುಖದ ಒಡವೆಗಳನ್ನು ಸೇವಿಸುವದು ದುರ್ಲಭ ವಾಯ್ತೆಂದು ಅವರು ಚಿಂತಿಸಿ ನೆಲಕ್ಕೆ ಬೀಳುತ್ತಾರೆ ಅಂದರೆ

ಬಹು ದುಃಖಪಡುತ್ತಾರೆ. ಅವರಿಂದ ಅವರು ವಸಂತಕಾಲವನ್ನು ತಮ್ಮ ವೈರಿಯೆಂದು ತಿಳಿಯುತ್ತಾರೆ. ಕಾರಣ ವಸಂತರಾಜನು ವಿರಹಿಗಳನ್ನು ಎರಗಿಸುತ್ತಾ ಅಂದರೆ ದುಃಖಪಡಿಸುತ್ತ ಬಂದನು ಎಂದು ಕವಿಯು ವರ್ಣಿಸಿದ್ದಾನೆ. ಆದರೆ "ಮಲ್ಲಿಗೆಯನೆರಗಿಸುತ" ಎಂಬ ಪಾಠಾಂತರದಿಂದ ಆಗುವ ಅರ್ಥವು ವಿಪರೀತವದೆ. ವಸಂತರಾಜನು ಮಲ್ಲಿಗೆಯನ್ನು ಎರಗಿಸುತ್ತಾ ಅಂದರೆ ನೆಲಕ್ಕೆ ಕೆಡುವುತ್ತ ಬಂದನು. ಎಂದು ಹೇಳುವದು ಅಶ್ಯುತಪೂರ್ವವಾಗಿದೆ. ಕಾರಣವೇನೆಂದರೆ ವಸಂತಕಾಲದಲ್ಲಿ ಮಲ್ಲಿಗೆಯ ಬಳ್ಳಿಯು ಚಿಗಿತು ಮೊಗ್ಗೆಗಳನ್ನೂ, ಹೂವುಗಳನ್ನೂ ಧರಿಸಿ ಬಹುಚೆಂದ ಕಾಣುವದೇ ಹೊರತು ದುರ್ದಶೆಯಲ್ಲಿರುವದಿಲ್ಲ.

ಜೋತ್ಸ್ನೆಯಂ ಪೇರ್ಚಿಸಿ ಅಂದರೆ ಬೆಳದಿಂಗಳನ್ನು ಪೆಚ್ಚಿಸಿ ಎಂಬವು ಮತ್ತೊಂದು ಪಾಠಾಂತರವು. ಇದರ ಸ್ಥಳವಲ್ಲಿ ಮೂಲದೊಳಗೆ ಜೊನ್ನವರಸಂಪೇರ್ಚೆ ಎಂದುಂಟು. ಜೊನ್ನವ=ಬೆಳವಿಂಗಳ ಅರಸಂ=ಒಡೆಯನು ಅಂದರೆ ಚಂದ್ರನು, ಪೇರ್ಚಿ ಅಂದರೆ ತೇಜಸ್ವಿಯಾಗುತ್ತಿರಲು ವಸಂತರಾಜನು ಬಂದನು ಎಂಬ ಅಭಿಪ್ರಾಯವು. ಪೊಸಪಾಠಾಂತರದ ಅರ್ಥವು ಜೋತ್ಸ್ನೆಯಂ ಪೇರ್ಚಿಸಿ=ಬೆಳದಿಂಗಳನ್ನು ಪೆಚ್ಚುಗೊಳಿಸಿ ವಸಂತರಾಜನು ಬಂದನು. ಎಂದು ಆಗುತ್ತದೆ. ವಸಂತಕಾಲದಲ್ಲಿ ಮೋಡಗಳಿಲ್ಲದೆ ಮುಗಿಲು ಸ್ವಚ್ಛವಾಗಿರುವದರಿಂದ ಚಂದ್ರನು ಚೆನ್ನಾಗಿ ಪ್ರಕಾಶಿಸುತ್ತಾನೆ. ಆದರಿಂದ ಬೆಳದಿಂಗಳು ನಿಚ್ಚಳವಾಗಿ ಬೀಳುತ್ತದೆ. ಕಾರಣ ಕವಿಯು ಚಂದ್ರನನ್ನು ಕಾಂತಿಗೊಳಿಸಿ ವಸಂತಕಾಲವು ಬಂತೆಂದು ವರ್ಣಿಸಿದ್ದಾನೆ. ಪೊಸಪಾಠಾಂತರದಲ್ಲಿ ಚಂದ್ರನ ಮಾತೆತ್ತಿಲ್ಲ. ಚಂದ್ರನು ಪ್ರಕಾಶಿಸಿದನೆಂದು ಪೇಳಿದರೆ ಬೆಳ

ದಿಂಗಳು ಇತ್ತೆಂಬಅರ್ಥವು ತಾನೇ ಉಂಟಾಗುತ್ತದೆ; ಹೀಗಿರಲು ಜೊನ್ನವರಸಂಪೇರ್ಕೆ ಎಂಬವಾಕ್ಯವನ್ನು ತೆಗೆದು ಜೊತ್ಸ್ನೆಯುಂಪೆರ್ಚಿಸಿ ಎಂಬ ಪಾಠಾಂತರವನ್ನು ಮಾಡುವದು ಕಾರಣವಿಲ್ಲ.

ಗಟಿಕೆನೆಯ ಪದ್ಯವು.

ಹೊಳಹೊಳವ ಕೊಳಕನದಪಂಕ್ತಿಗಳಬಣ್ಣವು। ಜ್ವಳದಿಂ ವ್ರಚಾಪದಾಕಾರಮುಂಸಂತತಂ । ಪಳವಂತೆಕೊಳದೊಳುರಾಜಿಸುತುಹಿನಗಿರಿಗಾಡಿನಂತರ್ಯದೊಳಗೆ ॥

"ತುಹಿನಗಿರಿಗಾಡಿನಂತರ್ಯದೊಳಗೆ" ಎಂಬುದು ಪಾಠಾಂತರವು. ಇದರ ಸ್ಥಳದಲ್ಲಿ ಮೂಲದೊಳಗೆ "ತುಹಿನಗಿರಿರಾಜನಂದನೆಯಕಣ್ಗೆ" ಎಂದು ಉಂಟು.

ಮೂಲಕ್ಕೆ ಅರ್ಥವೇನೆಂದರೆ ಕೊಳದಲ್ಲಿ ಹೊಳೆಹೊಳೆಯುವ ಕೆಂದಾವರೆಗಳ ನಾನಾಪ್ರಕಾರದ ಬಣ್ಣವು ಇಂದ್ರಧನುಷ್ಯದ ಆಕಾರವನ್ನು ತಿರಸ್ಕರಿಸುವಂತೆ ಹಿಮವತ್ಪರ್ವತನ ಮಗಳಾದ ಪಾರ್ವತಿಯು ಕಣ್ಗೆ ಬಿದ್ದಿತು.

ಪಾಠಾಂತರದ ಅರ್ಥವು "ತುಹಿನಗಿರಿಗಾಡಿನ=ಹಿಮವತ್ಪರ್ವತದ ಅರಣ್ಯದ, ಅಂತರ್ಯದೊಳಗೆ=ಮಧ್ಯಭಾಗದಲ್ಲಿ, ಕೊಳದೊಳಗೆ ಕೆಂದಾವರೆಗಳ ನಾನಾಪ್ರಕಾರದ ಬಣ್ಣವು ಇಂದ್ರಧನುಷ್ಯದ ಆಕಾರವನ್ನು ತಿರಸ್ಕರಿಸುವಂತೆ ಒಪ್ಪಿತು. ಹಿಂದಕ್ಕೆ ಪಾರ್ವತಿಯು ತಪಸ್ಸು ಮಾಡಬೇಕೆಂದು ಹಿಮವತ್ಪರ್ವತದ ಅರಣ್ಯಕ್ಕೆ ಹೋಗಿದ್ದಳು; ಆಗ ಅವಳು ಬಂದು ಸರೋವರವನ್ನು ಕಂಡಳು. ಎಂಬ ವರ್ಣನೆಯು ಜಯಮಿನಿಭಾರತದಲ್ಲಿ ಉಂಟು. ಈಯರ್ಥವು ಪಾಠಾಂತರದಿಂದ ಹೇಗೆ ಹೊರಡುತ್ತದೆ. ಮತ್ತು "ತುಹಿನಗಿರಿರಾಜನಂದನೆಯಕಣ್ಗೆ" ಎಂಬಪದವನ್ನು ಇಟ್ಟರೆ ಏನು ದೋಷವಾಗುತ್ತದೆ? ದೇವರೇ ಬಲ್ಲ. ಇದಲ್ಲದೆ ಹೊಸಪಾಠಾಂತರದಲ್ಲಿ

ಗಿರಿಗಾಡು ಎಂಬದೊಂದು ಅರೆಸನಾಸೆವು ಉಂಟು. ಅದಕ್ಕೆ ವ್ಯಾಕರಣದ ಆಧಾರವಿಲ್ಲ.

DEPARTMENTAL NOTICE.

ನೋ ಟೀ ಸು.

ಸನ್ ೧೮೯೪–೯೫ನೆಯ ವರ್ಷ ದಕ್ಷಿಣಭಾಗದಲ್ಲಿ ಅಂದರೆ ಬೆಳಗಾವಿ, ಧಾರವಾಡ, ವಿಜಾಪುರ, ಕಾನಡಾ, ಕುಲಾಬಾ, ರತ್ನಾಗಿರಿ ಜಿಲ್ಲೆಗಳಲ್ಲಿಯೂ ಕೊಲ್ಲಾಪುರ ಮತ್ತು ನೆರೆಯ ಸಂಸ್ಥಾನಗಳ ಸಂಬಂಧದಿಂದ ಕೊಲ್ಹಾಪುರದಲ್ಲಿಯೂ ಆಗುವ ೩ನೆಯ ಮತ್ತು ೫ನೆಯ ಗ್ರೇಡಿನ ಮುಲ್ಕೀ ಪರೀಕ್ಷೆಗಳಿಗಾಗಿ ಕೆಳಗೆ ಕಾಣಿಸಿದ ಪುಸ್ತಕಗಳು ನೇಮಿಸಲ್ಪಟ್ಟಿರುತ್ತವೆ.

೨. ಬೆಳಗಾವಿ ಪಟ್ಟಣದಲ್ಲಿ ಆಗುವ ಪರೀಕ್ಷೆಗಳು ಕನ್ನಡ ಮತ್ತು ಮರಾಠಿ ಭಾಷೆಗಳಲ್ಲಿ ನಡೆಯುವವು. ಧಾರವಾಡ, ವಿಜಾಪುರ, ಕಾರವಾರ ಪಟ್ಟಣಗಳಲ್ಲಿ ಕನ್ನಡ ಭಾಷೆಯಲ್ಲಿ ನಡೆಯುವವು. ರತ್ನಾಗಿರಿ, ಕುಲಾಬಾ, ಕೊಲ್ಹಾಪುರ ಪಟ್ಟಣಗಳಲ್ಲಿ ಮರಾಠಿ ಭಾಷೆಯಲ್ಲಿ ನಡೆಯುವವು.

೩. ಮರಾಠೀ ಭಾಷೆಯಲ್ಲಿ ಪರೀಕ್ಷೆ ಕೊಡಲಪೇಕ್ಷಿಸುವ ಧಾರವಾಡ, ವಿಜಾಪುರ, ಕಾನಡಾ ಜಿಲ್ಲೆಗಳೊಳಗಿನ ಉಮೇದವಾರರು ಮೊದಲು ನಮ್ಮ ಅಪ್ಪಣೆಯನ್ನು ಪಡಕೊಂಡು ಬೆಳಗಾವಿ, ಸೊಲ್ಲಾಪುರ, ರತ್ನಾಗಿರಿ, ಕೊಲ್ಹಾಪುರ, ಸಾತಾರಾ ಈ ಐದು ಪಟ್ಟಣಗಳಲ್ಲಿ ತಮಗೆ ಸಮೀಪವಾಗಿಯೂ ಅನುಕೂಲವಾಗಿಯೂ ಇರುವಂಥ ಯಾವದಾದರೊಂದರಲ್ಲಿ ಆಗುವ ಪರೀಕ್ಷೆಗೆ ಕೂಡ್ರಬಹುದು.

ತಿನೆಯಗ್ರೆಡ ಸರ್ಟಿಫಿಕೇಟಿನ ಪರೀಕ್ಷೆಗಾಗಿ ನೇಮಿಸಲ್ಪಟ್ಟ ಪುಸ್ತಕಗಳು

(ಈ ಪರೀಕ್ಷೆಯು ಮುಖ್ಯವಾಗಿ ಇಂಗ್ಲಿಷವಲ್ಲಿ ಆಗುವದು)

ಇಂಗ್ಲಿಸ ಸಾಹೇಬರ ಪುಸ್ತಕದಲ್ಲಿ ಅಥವಾ ಬೇರೆ ಅಂಥ
ದೇ ಪುಸ್ತಕದಲ್ಲಿ ಇಲ್ಲವೆ ಯಾವದಾದರೊಂದು ಕ್ರಮಿಕ ಪು
ಸ್ತಕದಲ್ಲಿ ಹೇಳಿವ ದುಬೇರಿಜೇ ಜನಾಖರ್ಚಿನ ಮೂಲ
ತ್ವಗಳು.

ಇಂಗ್ಲಿಷಗದ್ಯ—"ವಿಕಾರ ಆಫ್‌ವೇಕ್‌ಫೀಲ್ಡ" ವೊ
ವಲಿನ ೨೦ ಅಧ್ಯಾಯಗಳು ಅಥವಾ "ಟೇಲ್ಸಫ್ರಮ ಶೇಕ್ಸ
ಪಿಯರ" ದೊಳಗಿನ ಮೊದಲಿನ ೫೦ ಪುಟಗಳು ಅಂದರೆ
ದಿಟೆಂಪೆಸ್ಟ, ಟೇಮಿಂಗ ಆಫ ದಿಷ್ರೂ ರೋಮಿಯೋ ಎಂದ
ಜೂಲಿಯಟ್, ಟ್ವೆಲ್ಥನಾಯಿಟ್.

ಇಂಗ್ಲಿಷಪದ್ಯ—"ಗೋಲ್ಡಸ್ಮಿಥ" ನ ಡೆಜರ್ಟೆಡ ವಿ
ಲೇಜ ಅಥವಾ "ಕೌಪರ" ನ ನೋಫಾವ ಮೊದಲಿನ
೪೦೦ ಪಂಕ್ತಿಗಳು.

ಮರಾಠೀ ಗದ್ಯ—ಕೃಷ್ಣಶಾಸ್ತ್ರೀ ಚಿಪಳೂಣಕರಕೃ
ತ "ಅನೇಕ ವಿದ್ಯಾಮೂಲತತ್ವಸಂಗ್ರಹ"

ಕನ್ನಡ ಗದ್ಯ—ಕನ್ನಡ ೬ನೆಯ ಪುಸ್ತಕ ಪೂರ್ವಾರ್ಧ.

ದಿ ಸಾನಿಟರಿ ಪೈ್ರಮರ—"ದಿವೇಟುಹೆಲ್ಥ"

ಮಿಶ್ರವಿಷಯ—ಈವಿಷಯವನ್ನು ಉಮೇದವಾರರು
ಇಚ್ಛಾನುಸಾರವಾಗಿ ತೆಗೆದುಕೊಳ್ಳಬಹುದು. ಸರಕಾರಿಯ
ಕೆಲಸಗಳನ್ನು ಕೊಡುವಕಾಲಕ್ಕೆ ಈವಿಷಯದಲ್ಲಿ ಅಥವಾ ಚಿ
ತ್ರಕಲಾ, ಕೃಷಿಕರ್ಮ, ವೋಜಿಣಿಯ ಕೆಲಸ (ಅಂದರೆ
ಲೆವ್ಹಲಿಂಗ ಮತ್ತು ಸರ್ವೆಯಿಂಗ) ಜೀವನೇಂದ್ರಿಯಶಾಸ್ತ್ರ,
ಉದ್ಭಿಜ್ಜಶಾಸ್ತ್ರ ಇವುಗಳೊಳಗಿನ ಯಾವದೊಂದು ವಿಷಯ

ದಲ್ಲಿ ಪಾಸಾದ ಉಮೇದವಾರರಿಗಿಂತ ಹೆಚ್ಚು ಹಕ್ಕು ಇರುತ್ತದೆಂದು ಎಣಿಸಲಾಗುವದು.

ಟಿಪ್ಪಣಿ—ಉರ್ದು ಭಾಷೆಯು ನಡೆಯುತ್ತಿರುವ ಕಚೇರಿಗಳಲ್ಲಿ ಕೆಲಸ ಮಾಡಲಪೇಕ್ಷಿಸುವ ಉಮೇದವಾರರು ೭ನೆಯ ಅಥವಾ ೩ನೆಯ ಗ್ರೇಡಿನ ಪರೀಕ್ಷೆಗಳಿಗೆ ನೇಮಿಸಿರುವ ಕನ್ನಡ ಅಥವಾ ಮರಾಠಿ ವಿಷಯಕ್ಕೆ ಬದಲಾಗಿ ಉರ್ದು ಭಾಷೆಯಲ್ಲಿ ಪರೀಕ್ಷೆ ಕೊಡಬಹುದು.

೩ನೆಯಗ್ರೇಡ ಮುಲ್ಕೀಸರ್ಟಿಫಿಕೇಟ ಪರೀಕ್ಷೆಗಾಗಿ ನೇಮಿಸಲ್ಪಟ್ಟ ಪುಸ್ತಕಗಳು.

(ಈ ಪರೀಕ್ಷೆಯನ್ನು ಮುಖ್ಯವಾಗಿ ಮಹಾರಾಷ್ಟ್ರ ಅಥವಾ ಕನ್ನಡ ಭಾಷೆಯಲ್ಲಿ ಕೊಡತಕ್ಕದ್ದು.)

ಗದ್ಯ—ಮರಾಠಿಯ ೬ನೆಯ ಪುಸ್ತಕದೊಳಗಿನ ಗದ್ಯಭಾಗವನ್ನು ಮಾತ್ರ ಓದುವದೂ ವಿವರಿಸುವದೂ; ಅಥವಾ ಕನ್ನಡ ೬ನೆಯ ಪುಸ್ತಕ ಸಂಪೂರ್ಣ.

ಆರೋಗ್ಯವಿದ್ಯ—"ವೆಟಿಹೆಲ್ಥ" ಎಂಬ ಇಂಗ್ಲಿಷ ಪುಸ್ತಕದ ಭಾಷಾಂತರ.

ಮಹತ್ವವೂಪನವನ್ನು ಐಚ್ಛಿಕ ವಿಷಯವಾಗಿ ತೆಗೆದುಕೊಳ್ಳಬಹುದು. ಸರಕಾರಿಯ ನೌಕರಿಯನ್ನು ಕೊಡುವಾಗ್ಗೆ ಈ ವಿಷಯದಲ್ಲಿ ಅಥವಾ ಚಿತ್ರಕಲೆ ಇಲ್ಲವೆ ಕೃಷಿಕರ್ಮದಲ್ಲಿ ಪರೀಕ್ಷೆಪಾಸಾದ ಉಮೇದವಾರರಿಗೆ ಬರಿಯ ಮುಲ್ಕೀ ಪರೀಕ್ಷೆಯ ಉಳಿದ ವಿಷಯಗಳಲ್ಲಿ ತೇರ್ಗಡೆಹೊಂದಿದವರಿಗಿಂತ ಹೆಚ್ಚು ಪಕ್ಕುಂಟೆಂದು ಎಣಿಸಲಾಗುವದು.

ಟಿಪ್ಪಣಿ—(೧) ೭ನೆಯ ಸದರಿನ ಬದಲಾಗಿ ಕೆಳಗೆ ಬರದ ವಿಷಯಗಳಲ್ಲಿ ಪರೀಕ್ಷೆ ಕೊಡಬಹುದು.

ಗದ್ಯ—ಮರಾಠಿಯ ೬ನೆಯ ಪುಸ್ತಕ ಅಥವಾ ಕನ್ನಡ

೬ನೆಯ ಪುಸ್ತಕ ಮತ್ತು ಅಖ್ಲಾಕಿ ಕಾಪೀ; ಉರ್ದುವ್ಯಾಕರಣ ಪೂರಾ.

ಮೆರಾಠಿ ಅಥವಾ ಕನ್ನಡ ಇಲ್ಲವೆ ಉರ್ದು ಸರಕಾರಿಯು ಕೈಬರಹದ ಕಾಗದಗಳನ್ನು ಸರಳವಾಗಿ ಓದುವದು.

(೨) ಉರ್ದು ಭಾಷೆಯು ನಡೆಯುತ್ತಿರುವ ಕಚೇರಿಗಳಲ್ಲಿ ಕೆಲಸ ಮಾಡಲಪೇಕ್ಷಿಸುವ ಉಮೇದವಾರರು ೩ನೆಯ ಗ್ರೆಡ ಮುಲ್ಕೀ ಪರೀಕ್ಷೆಯನ್ನು ಉರ್ದುಭಾಷೆಯಲ್ಲಿ ಕೊಡಬಹುದು.

ಗಮ್ಯ—ಅಖ್ಲಾಕೀಕಾಪಿ.

ಧಾರವಾಡ,
ತಾ|| ೧೦–೧೧–೧೮೯೩.

S. V. Patwardhan,
ಎಜ್ಯುಕೇಶನಲ್ ಇನಸೆಕ್ಟರ
ದಕ್ಷಿಣಭಾಗ.

DHARWAR TRAINING COLLEGE CERTIFICATE EXAMINATION—1893.

ಕಾಲೇಜಿನ ಸರ್ಟಿಫಿಕೇಟ ಪರೀಕ್ಷೆಯಪ್ರಶ್ನಗಳು. ೯ಸಿ.

ಶಿಕ್ಷಣಪದ್ಧತಿ. ೨ನೆಯ ವರ್ಷ.

ಶಿಕ್ಷಣಪದ್ಧತಿ.

೧. ಶಾಲೆಯಲ್ಲಿ ಉತ್ತಮವಾದ ವ್ಯವಸ್ಥೆಯನ್ನು ಕಾಯ್ದುಕೊಳ್ಳಬೇಕಾದರೆ ಶಿಕ್ಷಕನು ಲಕ್ಷದಲ್ಲಿ ಇಡತಕ್ಕ ಸಂಗತಿಗಳು ಯಾವವು? ೧೦

೨. ಶಾಲೆಯಲ್ಲಿ ಗದ್ದಲಗೊಂದಲಗಳು ಮೂಲತಃ ಯಾರಿಂದಾಗುವವು? ಶಾಂತತೆಯನ್ನು ಹ್ಯಾಗೆ ಕಾಯ್ದುಕೊಳ್ಳಬಹುದು. ೧೦

೩. ಸುಶಿಕ್ಷಣದ ತತ್ವಗಳನ್ನು ವಿವರಿಸಿರಿ. ೧೦

೪. ಗೃಹಪಾಠಗಳನ್ನು ಕುರಿತು ಸಾಧಕಪ್ರಮಾಣಗಳನ್ನು ಹೇಳಿರಿ ೧೦

೫. ಏಕೀಕರಣ ಪದ್ಧತಿ ಪೃಥಕ್ಕರಣ ಪದ್ಧತಿ ಎಂಬವೆರ ೧೦
ಡು ಪದ್ಧತಿಗಳಲ್ಲಿ ಯಾವ ಪದ್ಧತಿಯಿಂದ ಗಣಿತಶಾಸ್ತ್ರ ಸೃ
ಷ್ಟ ಪದಾರ್ಥ ಶಾಸ್ತ್ರಗಳು ಕಲಿಸಲ್ಪಡುತ್ತವೆ? ಯಾಕೆ ?
ಪೂರ್ಣವಾಗಿ ವಿವರಿಸಿರಿ.

೬. ಕಲಿಸತಕ್ಕ ಪಾಠಗಳನ್ನು ಮೊದಲೇ ಸಿದ್ಧ ಮಾಡಿ ೧೦
ಟ್ಟುಕೊಳ್ಳುವದರಿಂದಾಗುವ ಲಾಭಗಳನ್ನು ವಿವರಿಸಿರಿ.

೭. ವಾಗರ್ಥಭೇದವನ್ನು ಯಾವ ಕ್ರಮದಿಂದ ಕಲಿಸು ೧೦
ವಿರಿ? "ಸರ್ವನಾಮ" ಈ ಪಾಠದ ಟಿಪ್ಪಣಿಯನ್ನು ತ
ಯಾರಿಸಿರಿ.

೮. ತರ್ಕದಿಂದ ಉತ್ತರ ಕೊಡುವ ಚಟದಿಂದಾಗುವ ೧೦
ಕೇಡುಗಳು ಯಾವವು? ಅವನ್ನು ಹ್ಯಾಗೆ ಪ್ರತಿಬಂಧಿಸಬಹುದು?

೯. ವೇಳಾಪತ್ರಕದಲ್ಲಿ ವಿಷಯಗಳು ಯಾವ ಅನುಕ್ರಮ ೧೦
ದಿಂದಿರಬೇಕೆಂಬದನ್ನು ಕುರಿತು ನಿಯಮಗಳನ್ನು ಬರೆಯಿರಿ.

೧೦. ಒಂದು ಶಾಲೆಯ ದರನಾಹೀ ಪತ್ರವನ್ನು ಬರೆಯಿ ೧೦
ರಿ; ಅದರ ವಿವರ:—

(೧) ತಿಂಗಳ ಆರಂಭದಲ್ಲಿ ಸಾಲೆಯಲ್ಲಿ ೬೦ ಹುಡುಗರು
ಅವೆ.

(೨) ಆ ತಿಂಗಳಲ್ಲಿ ಹೊಸದಾಗಿ ಬಂದವರು ೧೨, ಬಿಟ್ಟು
ಹೋದವರು ೧೦.

(೩) ಫೀ ದರ–ಸೆಸ್ ಕೊಡುವವರಿಗೆ ೯೧, ಸೆಸ್ ಕೊಡ
ದವರಿಗೆ ೯೨

೪. ಬಡ ಹುಡುಗರಿಗೆ ಸಹಾಯ ಮಾಡುವದಕ್ಕಾಗಿ
ಒಬ್ಬ ಗೃಹಸ್ಥನು ೧೦ ರೂಪಾಯಿ ಕೊಟ್ಟನು.

(೫) ಮಾಸ್ತರ ಜನರ ಪಗಾರ ೧೪ನೇ ತಾ॥ ಗೆ ಮುಟ್ಟಿತು.

೩ನೆಯ ವರ್ಷ.

ಶಿಕ್ಷಣಪದ್ಧತಿ.

೧. ವಿದ್ಯಾರ್ಥಿಗಳ ಒಲವುಗಳನ್ನು ಬರೆದು ಜ್ಞಾನಾಭ ೧೦
ವೃದ್ಧಿಗೆ ಅನುಕೂಲನಾದ ಒಲವನ್ನು ಕುರಿತು ನಿನಗೆ
ಗೊತ್ತಿದ್ದದ್ದನ್ನು ಬರೆಯಿರಿ.

೩. ಆಟದ ಸ್ಥಳದಲ್ಲಿ ಹುಡುಗರು ಆಡುತ್ತಿರುವಾಗ್ಗೆ ಶಿ ೧೦
ಕ್ಷಕನು ಹಾಜರಿರುವದು ಅವಶ್ಯವಾಗಿರುವದೋ? ನಿಮ್ಮ
ಉತ್ತರವನ್ನು ಕಾರಣಸಹಿತವಾಗಿ ಬರೆಯಿರಿ.

೪. ವಿದ್ಯಾರ್ಥಿಗಳಿಗೆ ಸಭ್ಯತನದ ನಡತೆಯನ್ನು ಹ್ಯಾಗೆ ೧೦
ಹಚ್ಚುವಿರಿ.

೫. ಮೇಲಾದ ಶಿಕ್ಷಣಪದ್ಧತಿಯು ಯಾವದು? ಯಾ ೧೦
ಕೆ? ಸರಿಯಾದ ಉತ್ತರದ ಲಕ್ಷಣಗಳನ್ನು ಹೇಳಿರಿ.

೬. ವಿದ್ಯಾರ್ಥಿಗಳಲ್ಲಿ ಸ್ವಪ್ರಯತ್ನದಿಂದ ಜ್ಞಾನಸಂಪಾ ೧೦
ದನೆಯ ಅಭಿರುಚಿಯು ಬಲಪಡುವಂತೆ ಶಿಕ್ಷಕನು ಯಾವ
ನಾಲ್ಕು ಉಪಾಯಗಳ ಧೋರಣದಿಂದ ಶಿಕ್ಷಣನನ್ನು ಸಾ
ಗಿಸತಕ್ಕದ್ದು.

೭. ಆಲಸ್ಯವನ್ನು ಸಾಲೆಯಿಂದ ಕಿತ್ತು ಹಾಕಲಿಕ್ಕೆ ಉ ೧೦
ತ್ತಮ ಉಪಾಯವು ಯಾವದು.

೮. "ಬೆಲೆಯುಳ್ಳ ಶಿಕ್ಷಣಕ್ಕೆ ಶಿಕ್ಷಕನ ಕಣ್ಣಿನ ಸಹಾ ೧೦
ಯವಿರಲಿಕ್ಕೆ ಬೇಕು ಅಂದರೆ ಹುಡುಗರ ಲಕ್ಷ ಹತ್ತಿ ಅಭ್ಯಾಸ
ಸರಸಾಗಿ ಸಾಗುವದು" ಈ ಅಭಿಪ್ರಾಯವನ್ನು ಪೂರ್ಣ
ನಾಗಿ ವಿವರಿಸಿರಿ.

೯. ತೀರ ಸ್ವಲ್ಪ ವಿದ್ಯಾರ್ಥಿಗಳು ಉತ್ತರ ಕೊಡಲಿಕ್ಕೆ ೧೦
ಹವಣಿಸುವಂಥ ಪ್ರಶ್ನವನ್ನೂ ಇಂಥ ಪ್ರಸಂಗಗಳು ಮೇ
ಲಿಂದಮೇಲೆ ಬರುವಂಥ ಶಿಕ್ಷಣನನ್ನೂ ಕುರಿತು ನಿಮ್ಮ ಅ
ಭಿಪ್ರಾಯವನ್ನು ಕಾರಣಸಹಿತವಾಗಿ ಬರೆಯಿರಿ.

೧೦. ವಿದ್ಯಾರ್ಥಿಗಳು ಏನೂ ಪಾಠ ಮಾಡಕೂಡದೆಂಬ ೧೦
ಅಭಿಪ್ರಾಯವು ಭ್ರಾಂತಿಮೂಲಕವಾದದ್ದೆಂಬ ಮಾತು ಸಿ
ದ್ಧ ಮಾಡಿರಿ. ನುತ್ತು ಬೇರೆ ಬೇರೆ ವಿಷಯಗಳ ಪಾಠಮಾ
ಡತಕ್ಕ ಅಂಶಗಳನ್ನು ವಿವರಿಸಿರಿ.

೧೧. ೧೦೦ ಹುಡುಗರಿಗೆ ಸಾಕಾಗುವ ಶಾಲಾಗೃಹದ ೧೦
ವಾರ್ಷಿಕ ರಿಪೇರಿಯ ಅಂದಾಜ ಪತ್ರಕನನ್ನು ತಯಾರಿಸಿರಿ.
ಶಾಲಾಗೃಹದಲ್ಲಿ ಒಟ್ಟು ಮೂರು ಕೋಣೆಗಳುಂಟು.

ಸಿದ್ಧನಾಥ ವಾಚನ ಮಂದಿರ.
ಮೊರಬ. ಜಿ. ಧಾರವಾಡ.

ಶಾಲಾ ಪತ್ರಿಕೆ

ಪದ್ಯಂ.

ಪ್ರಿಯವಿದ್ಯಾಗುರುಪರ್ಯಾರುನ್ನತಿಕೆಯಂ ಸಚ್ಛಿಕ್ಷಣೋತ್ಕರ್ಷಮುಂ ।
ಬಯಸುತ್ತಂ ಪ್ರತಿವಾಸದಾವಿಗೊಲವಿಂದೀಪತ್ರಮಂ ಮುದ್ರಿಸಿ ॥
ನಯದಿಂದಿತ್ತಪೆವೋದುವರ್ಗೆಸಗುಣಂ ತೋರಲ್ಕೆ ಕೈಕೊಂಬುದೈ ।
ದಯೆಯಿಂದೋಷವತಿದ್ದ ಪೇಳ್ವುದುಬುಧರ್ ಜ್ಞಾನಾಭಿವೃದ್ಧಿಪ್ರಿಯರ್॥೧॥

ಪುಸ್ತಕ ೨ನೆ.] ಆಗಷ್ಟ ೧೮೮೯. [ಸಂಚಿಕೆ ೮.

EDUCATIONAL INTELLIGENCE AND USEFUL NOTES.

ವಿದ್ಯಾಸುಧಾರಣಾ ಸಂಬಂಧವ ವೃತ್ತಾಂತಗಳು.

ಗೋಹಾನಾ ಸರೋವರ—ಈ ಸರೋವರದ ಸಂಬಂಧವಾಗಿ ತಂತಿಯ ಸುದ್ದಿಗಳು ಸದ್ಯಕ್ಕೆ ಮೇಲಿಂದ ಮೇಲೆ ಪ್ರಸಿದ್ಧವಾಗುತ್ತವೆ. ಇಷ್ಟ ದಿವಸಗಳ ವರೆಗೆ ಈ ಸರೋವರದ ಸುದ್ದಿಯೇ ಇದ್ದಿಲ್ಲ. ಈಗ ಇದರ ವಿಷಯವಾಗಿ ತಂತಿಯಿಂದ ಸುದ್ದಿಯನ್ನು ಕಳಿಸುವಷ್ಟ ಮಹತ್ವವು ಇದಕ್ಕೆ ಯಾಕೆ ಬಂದಿರುತ್ತದೆ, ಎಂಬ ವೃತ್ತಾಂತವನ್ನು ನಾವು ನಮ್ಮ ವಾಚಕರ ಸಲುವಾಗಿ ಸ್ವಲ್ಪದರಲ್ಲಿಯೇ ಇಲ್ಲಿ ಹೇಳುತ್ತೇವೆ. ನಯಿನಿತಾಲದ ಉತ್ತರಕ್ಕೆ ಸುಮಾರು ೧೩೦ ಮೈಲಿನ ಮೇಲೆ, ಹರಿದ್ವಾರದಿಂದ ೧೬೦ ಮೈಲಿನ ಮೇಲೆ ಇರುವ ಜ್ರಿಟಿಶ ಗವರ್ನಮೆಂಟಿನ ಸೀಮೆಯಲ್ಲಿ ಗೋಹಾನಾ ಎಂಬ ಹೆಸರಿನದೊಂದು ಊರು ಇರುತ್ತದೆ. ಈ ಊರು ಜಿಹಾರೀಗಂಗಾ ಎಂಬ ನದಿಯ ಮೇಲೆ ಸ್ಥಿತವಾಗಿದೆ. ಹೋದ ಸಪ್ಟಂಬರ ೬ನೇ ತಾರೀಖಿನ ದಿವಸ

ಈ ನದಿಯು ಒತ್ತಲು ಗುಡ್ಡದ ಬುಂಡು ದೊಡ್ಡ ಭಾಗವ ನದಿಯುಲ್ಲಿ ಅಡ್ಡ ಬಿದ್ದು ಪ್ರವಾಹವು ಕಟ್ಟಾಯಿತು. ಆದರಿಂ ದ ನದಿಯ ನೀರು ಸಪಜವಾಗಿ ಹೆಚ್ಚು ತ್ತಾ ಹೆಚ್ಚು ತ್ತಾ ಹೋಗಿ ಬುಂದು ಕೆರೆಯಾಯಿತು. ಈ ನದಿಯು ಹಿಮಾಲಯ ಪರ್ವತದಲ್ಲಿ ಹುಟ್ಟಿರುವದರಿಂದಲೂ ಬೇಸಿಗೆ ಕಾಲದಲ್ಲಿ ಪರ್ವತದ ಮೇಲಿನ ಬರ್ಫ ಕರಿಗಿ ನೀರಾಗಿ ಪ್ರವಾಹಕ್ಕೆ ಹೊಡುವದರಿಂದಲೂ ಇದರ ನೀರು ಬಹಳವಾಗಿ ಹಬ್ಬುತ್ತದೆ. ಜಿಯೂಲಾಜಿಕಲ್ ಸರ್ವೆಯ ಅಧಿಕಾರಸ್ಥನಾದ ಟಾಮಸ್‌ಹಾ ಲಂಡನೆಂಬವನು ಗೋಹನಾ ಸರೋವರದ ನೀರು ಅಗಪ್ಪ ಒಳನೇ ತಾರೀಖಿನ ಸುಮಾರಕ್ಕೆ ಒಡ್ಡಿನ ಮೇಲೆ ಹಾದು ಹೋಗುವದೆಂದು ಕಾಯಾಸ ಕಟ್ಟಿದ್ದಾನೆ. ಕಳೆದ ಮಾಚರ್ ದ ಆರಂಭಕ್ಕೆ ಈ ಸರೋವರವು ೩೬ ಮೈಲು ಉದ್ದ ೧ ಮೈಲು ಅಗಲು, ೩೭೦ ಎಕರು ಕ್ಷೇತ್ರವುಳ್ಳದ್ದಾಗಿತ್ತು. ಅದು ಈಗ ದಿನ ಬುಂದಕ್ಕೆ ೬ ಇಂಚಿನಂತೆ ಹೆಚ್ಚುತ್ತಲಿದೆ. ಸರ್ವಕ್ಕೆ ಬರ್ಫ ಕರಗುವ ಕ್ರಮವು ಭರದಿಂದ ಸಾಗಿರುವದರಿಂದ ಸರೋವರದ ನೀರಾದರೂ ಹೆಚ್ಚು ಹೆಚ್ಚು ಪ್ರಮಾಣದಿಂದ ಜಿಳೆಯುತ್ತಲಿದೆ. ಅದು ಪೂರ್ಣವಾಗಿ ತುಂಬಿದ ಮೇಲೆ, ನೀರು ಒಡ್ಡಿನ ಪೃಷ್ಟಭಾಗದ ಮೇಲಿಂದ ಕೆಳಗೆ ಅಂದರೆ ೫೦೦೦ ಫೂಟು ಎತ್ತರದಿಂದ ಬಿದ್ದು ಹರಿಯುವದು. ಬುಂದು ವೇಳೆ ಇದೇ ಮೇರೆಗೆ ವರ್ತಿಸಿದರೆ ಇದೊಂದು ದೊಡ್ಡ ತಪಸೆಲವಾಗಿ ಅವರ ಅಮೋಘ ಪ್ರವಾಹವು ಹರಿಯು ಜತ್ತಿನ ಲ್ಲೆಲ್ಲ ಬಹಳ ನಷ್ಟವುಂಟಾಗುವದು. ಮೂರು ದಿಕ್ಕುಗಳ ಲ್ಲಿರುವ ಹಿಮಾಚ್ಛಾದಿತ ದೊಡ್ಡ ದೊಡ್ಡ ಪರ್ವತಗಳೂ ಸುತ್ತಲಿನ ಹಸುರಾದ ವನಗಳೂ ಕೂಡಿ ಈ ಸರೋವ ರಕ್ಕೆ ಅತಿಶಯ ರಮಣೀಯತ್ವವನ್ನುಂಟು ಮಾಡಿವೆ. ಜಾನ

ಎಷ್ಟೇ ತಾರೀಖಿನ ದಿವಸ ಈ ಸರೋವರದ ನೀರು ಬಿಸ್ಮಿಂ ಬೊಮ್ಮೆ ೧೩ ಫೂಟು ಏರಿತು. ಇಷ್ಟಾದರೂ ಅವರ ಬಡ್ಡಿಗೆ ಎಲ್ಲಿಯೂ ತೂತು ಬಿದ್ದಂತೆ ತೋರುವದಿಲ್ಲ. ಈಗ ಅವರ ನೀರು ಬಡ್ಡಿನ ಪೃಷ್ಠ ಭಾಗದಿಂದ ೬೦೦ ಫೂಟಿನ ಕೆಳಗೆ ಇರುತ್ತದೆ. ಬಡ್ಡಿ ಬಜೆಯುವ ಅಥವಾ ನೀರು ಬಡ್ಡಿನಮೇಲೆ ಹಾದು ಹೋಗುವ ಸಂಭವವು ಬಹಳ ಕಡಿಮೆ ಇದ್ದರೂ ಜನರು ಅಂಜಿಕೆಯಿಂದ ಊರ ಬಿಟ್ಟು ಹೋಗ ಹತ್ತಿದ್ದಾರೆ. ತಂತೀ ಖಾತೆಯ ಅಲ್ಲಿಯ ಅಧಿಕಾರಸ್ಥರಿಗೆ ಅನ್ನ ಸಾಮಗ್ರಿಯು ಸಹ ದೊರೆಯುವಂತೆ ಆಗಿದೆ.

ನಾಲಿಗೆಯ ಎಲ್ಲ ಭಾಗಗಳಿಗೂ ರುಚಿಯು ಸರಿಯಾಗಿ ತಿಳಿಯುವದಿಲ್ಲ. ಅವರಲ್ಲಿ ಮೂರು ಭಾಗಗಳಿರುತ್ತವೆ. ಅದೂ ಭಾಗಗಳಲ್ಲಿ ಬೇರೆ ಬೇರೆ ಪದಾರ್ಥಗಳ ರುಚಿಯು ತಿಳಿಯುತ್ತದೆ. ನಾಲಿಗೆಯ ತುದಿಗೆ ಬಗರು, ಕಾರ, ಹುಳಿ ಪದಾರ್ಥಗಳ ರುಚಿಯು ಬೇಗ ತಿಳಿಯುತ್ತದೆ. ನಾಲಿಗೆಯ ಮಧ್ಯ ಭಾಗವು ಕಹೀ ನೀ ಪದಾರ್ಥಗಳ ಸ್ವಾದವನ್ನು ತಿಳಿಸುತ್ತದೆ. ಅವರ ಹಿಂದಿನ ಭಾಗವು ಜಿಂದ ಅನ್ನ, ಬೆಣ್ಣೆ, ತುಪ್ಪ ಮುಂತಾವ ಸ್ನಿಗ್ಧ ಪದಾರ್ಥಗಳ ರುಚಿಯನ್ನು ತಿಳಿಸುತ್ತದೆ. ಮೊದಲನೇ ಪರೀಕ್ಷೆಯಿಂದ ಬಾಯಿಗೂ ಪರೀರವ ಅಂತ ಭಾಗಗಳಿಗೂ ತಕ್ಕವುಗಳಲ್ಲದಂಥ ಪದಾರ್ಥಗಳ ಜ್ಞಾನವಾಗಿ ಅವನ್ನು ತ್ಯಜಿಸಲಿಕ್ಕೆ ಸೂಚನೆಯಾಗುತ್ತದೆ. ಎರಡನೇ ಪರೀಕ್ಷೆಯಿಂದ ಅವುಗಳಲ್ಲಿ ವಿಷ ಪದಾರ್ಥ ಯಾವದು, ಆರೋಗ್ಯ ಪದಾರ್ಥ ಯಾವದು ಎಂಬದು ತಿಳಿಯುತ್ತದೆ. ಮೂರನೇ ಪರೀಕ್ಷೆಯು ಅಷ್ಟು ಮಹತ್ವದ್ದಲ್ಲ. ಅದರಿಂದ ನಾವು ತಿನ್ನುವ ಪದಾರ್ಥಗಳು ನಿಕಯುವಾಗಿ ಪರಿಪಾಕವಾ

ವಾದವುಗಳೂ ಬೇಗ ಪಚನವಾಗುವಂಥವೂ ಇಲ್ಲವೆ ಪಚನವಾಗದಂಥವೂ ಎಂಬ ಜ್ಞಾನವಾಗುತ್ತದೆ. ಸಾರಾಂಶ ರಸನೇಂದ್ರಿಯವು ಶರೀರಕ್ಕೆ ಹಿತಕರವಾದ ಪದಾರ್ಥಗಳನ್ನು ತಿನ್ನಲಿಕ್ಕೆ ಸಹಾಯ ಮಾಡುತ್ತದೆ.

ತುಸು ದಿವಸಗಳ ಹಿಂದೆ ಆದಂಥ ಚಿಕಾಗೋ ಪ್ರದರ್ಶನಕ್ಕೆ ಹಿಂದುಸ್ಥಾನದ ಬಡವೆಗಳು ಕಳಿಸಲ್ಪಟ್ಟಿದ್ದವು. ಅವುಗಳಲ್ಲಿ ಕೆಲವು ಬಡವೆಗಳು ಮೇಲಾದವುಗಳೆಂದು ಪ್ರದರ್ಶನದಲ್ಲಿ ನಿರ್ಣಯವಾದದ್ದರಿಂದ, ಅವುಗಳನ್ನು ಕಳಿಸಿದ ಜನರಿಗೆ ಇನಾಮುಗಳು ದೊರೆದವು. ಅದರ ವಿವರ ಹ್ಯಾಗೆಂದರೆ:—

ಲಿಮಡಿಯದ ಠಾಕೂರರಾದ ಸರ್ ಜಯವಂತಸಿಂಗಜಿ ಇವರಿಗೆ ರಾಗಿ, ಬೆಂಡ್ಲ, ಹತ್ತಿ, ವನಸ್ಪತಿಯ ಪದಾರ್ಥಗಳಿಗಾಗಿ, ಸುರತದ ಮಿ. ಮೂಲಚಂದ ಕಾಶೀರಾಮ ಇವರಿಗೆ ಚಂದನ ಕಟ್ಟಿಗೆಯ ಮೇಲೆ ಮಾಡಿದಂಥ ಸುಳುವಿನ ಕೆಲಸಕ್ಕಾಗಿ, ಕಲಕತ್ತೆಯೊಳಗಿನ ಡಾಕ್ಟರ ಡಿ. ಎನ್. ಬಾನರ್ಜಿ ಇವರಿಗೆ ಹಿಂದುಸ್ಥಾನದ ವನಸ್ಪತಿಗಳಿಂದ ಮಾಡಿದ ಔಷಧಗಳಿಗಾಗಿ, ಸಯಾಜೀರಾವ ಗಾಯಕವಾಡ ಇವರಿಗೆ ಮನೆಕೆಲಸಕ್ಕೆ ಉಪಯುಕ್ತವಾದ ಬಡವೆಗಳು, ಕಟ್ಟಿಗೆಯ ಮೇಲೆ ಮತ್ತು ಹಸ್ತಿದಂತದ ಮೇಲೆ ಕೊರೆದ ಅಥವಾ ಕೆತ್ತಿದ ಕೆಲಸಗಳು, ಅಭರಣಗಳು, ಹಸ್ತಕೌಶಲ್ಯದ ಬಡವೆಗಳು ಮತ್ತು ಹಿಂದೂ ದೇವತೆಗಳ ಚಿತ್ರದ ಪುಸ್ತಕಗಳು ಇವುಗಳಿಗಾಗಿ, ಮೈಸೂರಿನ ಮಹಾರಾಜರಿಗೆ ಚಂದನದ ಕಟ್ಟಿಗೆಯ ಮೇಲೆ ಮಾಡಿದ ನಕ್ಷೆಯ ಕೆಲಸಗಳು, ರತ್ನ ಗಂಬಳಿಗಳು ಕಟ್ಟಿಗೆಯ ಮೇಲೆ ಹಸ್ತಿದಂತವನ್ನು ಕೂಡ್ರಿಸಿ ಮಾಡಿದ ಚಿತ್ರ ವಿಚಿತ್ರ

ಾದ ಸುಳುವಿನ ಕೆಲಸಗಳು ಇವುಗಳಿಗಾಗಿ, ಕಚ್ಚೆದ ರಾವ
ಇವರಿಗೆ ಮತ್ತು ಮುಂಬಯಿಯ ತ್ರೀಭುವನದಾಸರಿಗೆ ಬೆಳ್ಳಿ
ಯ ಪದಾರ್ಥಗಳಿಗಾಗಿ, ಸುರತದ ಮಿ. ಗಂಗಾರಾಮ ಕಲ್ಯಾಣ
ಕಂದ ಇವರಿಗೆ ಕಿನಕಾಫಿನ ಮತ್ತು ರೇಶ್ಮಿಯ ಬಟ್ಟೆಗಳಿಗಾ
ಗಿ, ಸಿಕಂದರಾಬಾದಿನ ಮಿ. ಅಲಾ ದೀನದಯಾಳ ಇವರಿಗೆ
ಕಸ್ತ ಕೌಶಲ್ಯದಿಂದ ಕೊರೆದ ಚಿತ್ರಗಳಿಗಾಗಿ, ರಾಜಾ ರವಿ
ವರ್ಮ ಇವರಿಗೆ ಆಯಿಲ್ ಪೈಂಟಿಂಗಿನ ಚಿತ್ರಗಳಿಗಾಗಿ, ಮೆ
ಸರ್ಸ ಪ್ರಾಣ ಜೀವನದಾಸ ಲಲುಭಾಯಿ ಮತ್ತು ಹರಕಿ
ವನದಾಸ ಕಂಪನಿ ಇವರಿಗೆ ಹಿಂದುಸ್ಥಾನದೊಳಗಿನ ಅಕ್ಕ
ಸಾಲೆಯುರಿಂದ ಮಾಡಲ್ಪಟ್ಟ ತರ ತರದ ಬಡವೆಗಳಿಗಾಗಿ, ಮಿ.
ತಕುಭಾಯಿ ಮಥುರಾದಾಸ ಇವರಿಗೆ ಕಟ್ಟಿಗೆಯಲ್ಲಿ ಕೆತ್ತಿದ
ಚಿತ್ರದ ಕೆಲಸಗಳಿಗಾಗಿ, ಮಿ. ದಾವೋದರ ರತನಸೀ ಇವರಿ
ಗೆ ತಿನ್ನುವ ಪದಾರ್ಥಗಳಿಗಾಗಿ ಅನಾಮುಗಳು ದೊರೆದವು.

ಈ ಸಂಗತಿಯು ಸಮಾಧಾನಕರವಾದದ್ದೆಂದು ಹೇಳಲಿ
ಕ್ಕೆ ಅಡ್ಡಿ ಇಲ್ಲ.

ಪೋಸ್ಟ ಟಿಕೀಟುಗಳ ಮೇಲೆ ಬರೆಯುವ ಅಥವಾ
ಮುದ್ರೆ ಒತ್ತುವ ಸಂಬಂಧವಾಗಿ ಸರಕಾರದವರು ಕೆಳಗಿನ ನಿ
ಯಮಗಳನ್ನು ಮಾಡಿದ್ದಾರೆ. ಅವು ಮುಂದಿನ ನವೆಂಬರ
ನೇ ತಾರೀಖಿನಿಂದ ಜಾರಿಯಲ್ಲಿ ಬರುವವು. ಆ ನಿಯಮಗ
ಳು ಯಾವವೆಂದರೆ:—

(೧) ಟಿಕೀಟುಗಳು ಪೋಸ್ಟ ಟಿಕೀಟುಗಳೇ ಇರಲಿಕ್ಕೆ
ಬೇಕು. (೨) ಅವು ವರವಂಥವು, ಕಲೆಬಿದ್ದಂಥವು, ಅಥ
ವಾ ಜೋಡಿಸಿದಂಥವು ಇರಬಾರದು. (೩) ಸರಕಾರದವರ
ಮುದ್ರೆಯ ಹೊರತು ಅವುಗಳ ಮೇಲೆ, ಕೈಬರಹದ ಅಥ
ವಾ ಮುದ್ರಿಸಿದ ಯಾವ ಅಕ್ಷರಗಳಾದರೂ ಇರಬಾರದು.

(೪) ಆವು ಅರ್ಧ ಆಣೆಯು ಮತ್ತು ಬೇರೆ ಕಿಮ್ಮತಿನ ಲಖೋಟಿಗಳಿಂದ ಅಥವಾ ಕಾರ್ಡುಗಳಿಂದ ಕೊಯಿದು ತೆಗೆದಂಥವುಗಳಾಗಿರಬಾರದು. (೫) ಟಿಕೀಟುಳ್ಳ ಲಖೋಟಿಯು ಕಾಗದವನ್ನು ವರ್ತಮಾನ ಪತ್ರವನ್ನಾಗಲಿ ಬೇರೆ ಕಾಗದವನ್ನಾಗಲಿ ಸುರಳಿ ಸುತ್ತಿ ಅದರ ಮೇಲೆ ಹಚ್ಚಲಿಕ್ಕೆ ಉಪಯೋಗಿಸಬಾರದು, ಅಥವಾ ಆ ಲಖೋಟಿಯು ಪೂರ್ಣವಾಗಲಿ ಅರ್ಧವಾಗಲಿ ಹರಿಯಲ್ಪಟ್ಟದ್ದು ಇರಬಾರದು.

ಹಾಗೆ ಅಫ ಕಾಮನ್ಸ್ ಸಭೆಯವರು ಹೋದ ವರ್ಷ ಸಿವ್ಹಿಲ್ ಸರ್ವೀಸ ಪರೀಕ್ಷೆಯನ್ನು ಹಿಂದುಸ್ಥಾನದಲ್ಲಿಯೂ ಇಂಗ್ಲಂಡದಲ್ಲಿಯೂ ಒಮ್ಮೆಲೆ ತೆಗೆದುಕೊಳ್ಳುವ ನಿಯಮವನ್ನು ಮಾಡಿದರು. ಅದನ್ನು ಜಾರಿಯಲ್ಲಿ ತರುವದಕ್ಕಾಗಿ ಇಪ್ಪತ್ತು ದಿವಸಗಳ ವರೆಗೆ ವಿಚಾರ ನಡೆದಿತ್ತು. ಈ ನಿಯಮವನ್ನು ಅಮಲಿನಲ್ಲಿ ತರುವದಕ್ಕೆ ಅಪರಿಹಾರ್ಯವಾದ ಎಪ್ಪತ್ತೇ ತೊಂದರೆಗಳುಂಟೆಂಬ ಕಾರಣದಿಂದ ಹಿಂದುಸ್ಥಾನ ಸರಕಾರದವರು ಈ ದೇಶದ ಜನರು ಈಗಿನ ಕೆಲಸಗಳಲ್ಲಿ ತೋರಿಸುವ ದಕ್ಷತೆ, ಪ್ರಾಮಾಣಿಕತನಗಳನ್ನು ನೋಡಿ, ಅವರಿಗೆ ಕಲೆಕ್ಟರ, ಜಜ್ಜ ಮುಂತಾದ ದೊಡ್ಡ ದೊಡ್ಡ ಪದ್ವೀಧರ ಕೆಲಸಗಳನ್ನು ಕೊಡತಕ್ಕದ್ದೆಂದು ನಿರ್ಣಯಿಸಿದರು. ಇದರಿಂದ ಸಿವ್ಹಿಲ್ ಸರ್ವೀಸ ಪರೀಕ್ಷೆಯನ್ನು ಕೊಡದೆ ತಮ್ಮ ಮೇಲಾದ ಅನುಭವ, ಪ್ರಾಮಾಣಿಕತನ, ಕಾರ್ಯಾಸಕ್ತಿ ಮುಂತಾದ ಗುಣಗಳನ್ನು ತೋರಿಸಿ, ದೊಡ್ಡ ದೊಡ್ಡ ಕೆಲಸಗಳನ್ನು ಪಡೆಯಲಿಕ್ಕೆ ಈ ದೇಶದ ಜನರಿಗೆ ಅನುಕೂಲವಾಗಿರುವದು. ಇನ್ನು ಮುಂದೆ ಸ್ಟ್ಯಾಟುಟರಿ ಸಿವ್ಹಿಲಿಯನ್ನರ ನೇಮಣೂಕುಗಳು ಮಾತ್ರ ಆಗಲಿಕ್ಕಿಲ್ಲ.

ಮೂದಿನ ಅಗಷ್ಟದ ಸಂಚಿಕೆಯಲ್ಲಿ ನಮ್ಮ ಸನ್ಮಾನ್ಯರಾದ ಚಿಕ್ಕವರ್ತಿನಿಯವರ ಮೊಮ್ಮಕ್ಕಳ ಲಗ್ನದ ಸಂಗತಿಯನ್ನು ತಿಳಿಸಿದ್ದೆವು. ಪ್ರಿನ್ಸ ಆಫ್ ವೆಲ್ಸರ ಸೊಸೆಯರೂ ಪ್ರಿನ್ಸ ಜಾರ್ಜ ಆಫ್ ಯಾರ್ಕರ ಹೆಂಡಂದಿರೂ ಆದ ಪ್ರಿನ್ಸೆಸ್ ಮೆ ಇವರು ಜೂನ್ ೦೩ನೇ ತಾರೀಖಿನ (ಶನಿವಾರ) ದಿವಸ ಗಂಡು ಮಗುವನ್ನು ಹೆತ್ತರೆಂತಲೂ ತಾಯಿ ಮಕ್ಕಳು ಸುಖದಿಂದಿರುವರೆಂತಲೂ ತಿಳುಹಲಿಕ್ಕೆ ನಮಗೆ ಬಹಳ ಸಂತೋಷವಾಗುತ್ತದೆ. ಈ ಮಗುವಿನ ನಾಮಕರಣದ ಸಮಾರಂಭವು ವ್ಹೈಟಲಾಜವೆಂಬ ಅರಮನೆಯಲ್ಲಿ ವಿಕ್ಟೋರಿಯಾ ಮಹಾರಾಣಿಯವರ ಸಮಕ್ಷ ಕ್ಯಾಂಟರಬರಿಯ ಆರ್ಚಬಿಷಪ್ಪರ ಕೈಯಿಂದ ಜುಲೈ ತಿಂಗಳ ೧೬ನೇ ತಾ॥ ನೆ ದಿವಸ ಜರಗಿಸಲ್ಪಟ್ಟಿತು. ಮಗುವಿನ ಹೆಸರು ಎಡ್ವರ್ಡ ಆಲ್ಬರ್ಟ ಕ್ರಿಶ್ಚಿಯನ್ ಜಾರ್ಜ ಆಂಡ್ರ್ಯು ಪ್ಯಾಟ್ರಿಕ್ ಡೆವಿಡ್ ಎಂದು ಇಟ್ಟಿರುತ್ತಾರೆ. ವಿಕ್ಟೋರಿಯಾ ಮಹಾರಾಣಿಯವರು ಬಹು ಭಾಗ್ಯವಂತಳಿಯಾಗಿರುತ್ತಾರೆ. ಸಂತತಿ ಸಂಪತ್ತಿಗಳ ಸೌಖ್ಯವು ಇವರಿಗಿದ್ದಷ್ಟು ಯಾರಿಗೂ ಇದ್ದಂತೆ ತೋರುವದಿಲ್ಲ. ಜಗನ್ನಿಯಂತನು ಇವರನ್ನು ಇದೇ ಮೇರೆಗೆ ಬಹು ಸೌಖ್ಯದಿಂದ ಕಾಪಾಡಲೆಂದು ಹರಿಸುತ್ತೇವೆ.

THE MORAL TRAINING OF CHILDREN.

ಮಕ್ಕಳ ನೀತಿ ಶಿಕ್ಷಣವು.

(೮೦ನೇ ಪುಟದಿಂದ ಮುಂದೆ ಸಾಗಿದ್ದು.)

೨. ಅನುಸರಿಸದಿದ್ದರೂ ನಡೆಯುವಂಥ ಅಪ್ಪಣೆಗಳನ್ನು ಎಂದೂ ಕೊಡಬಾರದು.

೩. ಅಪ್ಪಣೆಗಳನ್ನು ಸ್ಪಷ್ಟವಾಗಿ ತಿಳಿಯುವಂತೆ ಬಹ್ಮೃದು [illegible] ಸುಲಭದಿಂದ ಮಾಡಿಕೊಡಬಾರದು.

ಇನಾಮುಗಳೂ ಶಿಕ್ಷೆಗಳೂ.

ಕುಟುಂಬವು ಒಂದು ಸಣ್ಣ ರಾಜ್ಯವೇ ಇರುತ್ತದೆ. ಈ ರಾಜ್ಯವಲ್ಲಿ ತಂದೆಯು ಅರಸನಂತೆ ತಾಯಿಯು ಅರಸಿಯಂತೆ ಇರುತ್ತಾರೆ. ಅರಸರು ತಮ್ಮ ತಮ್ಮ ರಾಜ್ಯಗಳಲ್ಲಿ ಸುಜನರನ್ನು ಇನಾಮುಗಳಿಂದ ಪ್ರೋತ್ಸಾಹನೆಗೊಳಿಸುವಂತೆಯೂ ಅಪರಾಧಿಗಳನ್ನು ದಂಡಿಸುವಂತೆಯೂ ತಾಯಿ ತಂದೆಗಳು ತಮ್ಮ ರಾಜ್ಯವೆಂಬ ಕುಟುಂಬದೊಳಗಿನ ಬುದ್ಧಿವಂತ ಮಕ್ಕಳಿಗೆ ಇನಾಮುಗಳನ್ನು ಕೊಟ್ಟು, ತಿಳಿಗೇಡಿಗಳನ್ನು ತಿದ್ದಿ ಹಾದಿಗೆ ತಂದು, ಅವರಲ್ಲಿ ಉತ್ತಮೋತ್ತಮ ನಡೆನುಡಿಗಳೂ ನೀತಿಯೂ ನೆಲೆಗೊಳ್ಳುವಂತೆ ಮಾಡತಕ್ಕದ್ದು. ಅರಸು ತನ್ನ ಪ್ರಜೆಗಳನ್ನು ಅತಿಶಯ ಪ್ರೀತಿಸಿ ಅವರನ್ನು ಮನಬಂದಂತೆ ನಡೆಯ ಗೊಟ್ಟರೆ, ಅವನ ಪಾಲಿಗೆ ಮೂರ್ಖತನವು ಬರುವದು. ರಾಜ್ಯದಲ್ಲಿ ಹಂದು ಪಿತೂರುಗಳೂ ದ್ರೋಹಗಳೂ ನಡೆಯುವವು. ಪ್ರಜೆಗಳಿಗೆ ವಿಪತ್ತು ಸಂಭವಿಸುವದು. ಇದೇ ಮೇರೆಗೆ ತಾಯಿ ತಂದೆಗಳು ತಮ್ಮ ಮಕ್ಕಳ ಮೇಲಿನ ಪ್ರೀತಿಯಿಂದ ಅವರನ್ನು ಮನ ಬಂದಂತೆ ನಡೆಯಗೊಟ್ಟರೆ, ಮಕ್ಕಳಿಗೆ ನಷ್ಟವು, ಅವರಿಗೆ ದುಷ್ಕೀರ್ತಿಯು ಸಿದ್ಧವಾಗಿಬರುವವು. ಈ ಪ್ರಕಾರ ವರ್ತಿಸುವ ತಾಯಿ ತಂದೆಗಳು ಹಿತ ಶತ್ರುಗಳೆಂದು ಅನಿಸಿಕೊಳ್ಳುವರು. "ತಕ್ಕ ವೇಳೆಯಲ್ಲಿ ಚಿತ್ತವನ್ನು ಪಯೋಗಿಸದ ತಾಯಿತಂದೆಗಳು ಮಕ್ಕಳ ಹಿತಶತ್ರುಗಳೇ ಸರಿ" ಎಂದು ಒಬ್ಬ ವಿದ್ವಾಂಸನ ಅಭಿಪ್ರಾಯ ಉಂಟು. ಇಂಥ ತಾಯಿತಂದೆಗಳು ತಮ್ಮ ಮಕ್ಕಳನ್ನು ಯೋಗ್ಯ ಹೊತ್ತಿನಲ್ಲಿ ತಿದ್ದಿ ಪಡಿಸಿ ಸುಖಪಟ್ಟ ಶ್ರಮ ಪಡುವದಿಲ್ಲ. ಈ ಮೇರೆಗೆ ನಡಿಸಲ್ಪಟ್ಟ ಮಕ್ಕಳು ತಮ್ಮ ಮಡದಿಯರನ್ನು ಪ್ರೀತಿಸುವ

ಬಯಲು ಅವರಿಗೆ ಕೃತಘ್ನರಾಗಿಯೂ ದ್ವೇಷಿಗಳಾಗಿಯೂ ನಡೆಯುವವು. ಮಕ್ಕಳನ್ನು ತೀರ ಕ್ರೂರತನದಿಂದ ನಡಿಸುವದಾದರೂ ಸರಿಯಲ್ಲ. ಅವರೆ ನಮ್ಮ ಜನರಲ್ಲಿ ನಿಷ್ಠುರತೆಯು ಸುದ್ದಿಯೇ ಕಡಿಮೆ; ಅಚ್ಚದಿಂದಲೇ ಕೆಟ್ಟುಹೋದಂಥ ಹುಡುಗರ ಸಂಖ್ಯೆಯೇ ವಿಶೇಷವಾಗಿರುತ್ತದೆ. ಆದಕ್ಕರಿಂದ ಅವುಗಳನ್ನು ಕುರಿತು ಕೆಲವು ನಿಯಮಗಳನ್ನು ಇದರಲ್ಲಿ ವಿವರಿಸುತ್ತೇವೆ.

ಇನಾಮು ಶಿಕ್ಷೆಗಳನ್ನು ಅಪರೂಪವಾಗಿ ಕೊಡತಕ್ಕದ್ದು—ಮಕ್ಕಳನ್ನು ಹೆಜ್ಜೆ ಹೆಜ್ಜೆಗೆ ಹೊಗಳುವದು ಅಥವಾ ದೂಷಿಸುವದು ಸರಿಯಲ್ಲ. ಅಷ್ಟಿಷ್ಟಕ್ಕೆ ಮಡುಗನಿಗೆ ಭಲಾ, ಶಹಾಬಾಸು, ಎಂದು ನುಡಿಯುತ್ತ ಹೋದರೆ, ಈ ಮೆಚ್ಚಿಕೆಯ ಶಬ್ದಗಳ ಮಹತ್ವವು ಬೇಗನೆ ಕಡಿಮೆಯಾಗಿ ಅವುಗಳಿಂದಾಗತಕ್ಕಷ್ಟು ಕಾರ್ಯವಾಗುವದಿಲ್ಲ. ಆದಕ್ಕರಿಂದ ಅವುಗಳನ್ನು ಅವಶ್ಯ ಎಚ್ಚರಿಕೆಯಿಂದ ಸಮಯೋಚಿತವಾಗಿ ಉಪಯೋಗಿಸಬೇಕು. ಇದೇ ಮಾತು ಸಿಟ್ಟು ಮಾಡುವ ವಿಷಯದಲ್ಲಾದರೂ ಇರುತ್ತದೆ. ಮಕ್ಕಳು ಸಣ್ಣ ಸಣ್ಣ ತಪ್ಪುಗಳನ್ನು ಮಾಡಿದ ಸರ್ತಿಗೊಮ್ಮೆ ಬೈಯುತ್ತ ಹೋದರೆ ಅವರಿಗೆ ಬೈಸಿಕೊಳ್ಳುವ ಚಟವತ್ತಿ ಬರಬರುತ್ತ ಎಷ್ಟು ಬೈದರೂ ತಾಯಿ ತಂದೆಗಳ ಮಾತನ್ನು ಅವರು ಕೇಳುವದಿಲ್ಲ.

ಈ ಮೇರೆಗೆ ತಮ್ಮ ಹೊಗಳಿಕೆಯು ಅಥವಾ ದೂಷಣೆಯು ಸಮಲು ಮಕ್ಕಳ ಮೇಲೆ ನಡೆಯುವಂತೆ ಅವ ಕೂಡಲೆ, ತಿಳಿಗೇಡಿ ತಾಯಂದಿರು ಮಕ್ಕಳಿಗೆ ದುಡ್ಡು ಕಾಸು ಲಂಚ ಕೊಡುವ ಅಥವಾ ಅವರನ್ನು ಅಂಜಿಸುವ ಪ್ರಯತ್ನ ಮಾಡುತ್ತಾರೆ. ಬಮ್ಮೆ ದುಡ್ಡು ಕಾಸು ಕೊಟ್ಟು ಅವರನ್ನು ವಿ

ಧೀಯರನ್ನು ಮೂಡಿಕೊಂಡ ಕೂಡಲೆ, ಮತ್ತೊಮ್ಮೆ ಅವರು ದುಡ್ಡಿನ ಹೊರತು ಮಾತಾಡುವದಿಲ್ಲ. ಪೈ ಕೊಟ್ಟರೆ ನಿನ್ನ ಮಾತು ಕೇಳುತ್ತೇವೆ, ಇಲ್ಲದಿದ್ದರೆ ಇಲ್ಲ ಎಂದು ಸ್ಪಷ್ಟವಾಗಿ ಹೇಳುವರು. ಅಂಜಿಸುವದಾದರೂ ಇದೇ ಹಾಡು. ತಾಯಿಯು ತಾನು ಹೊಡಿಯುತ್ತೇನೆಂದು ಬೆದರಿಸಿದಂತೆಯೇ ಅವರನ್ನು ಶಿಕ್ಷಿಸದಿದ್ದರೆ ಅವರು ಮುಂದೆ ಹೆಣ್ಣು ಪಟಪೂರಿಗಳಾಗುವರು.

ಮಗಲೆಲ್ಲ ಮಕ್ಕಳ ತಪ್ಪನ್ನೇ ಮಡುಕಿ, ಅವರಿಗೆ ಸಿಟ್ಟು ಮಾಡುವದು ಸಪ ಬಳ್ಳೆಯದಲ್ಲ. ಶಿಕ್ಷೆಯ ಬರೇ ಭಯವನ್ನು ತೋರಿಸುವದಾದರೂ ಸರಿಯಲ್ಲ. ಚಿಕ್ಕ ಮಕ್ಕಳಿಗೆ ಹೇಳಿದ್ದನ್ನೇ ಹೇಳುವ ಪ್ರಸಂಗವು ಬಾರಿ ಬಾರಿಗೆ ಬರುತ್ತದೆ. ಆದರೆ ಅವರನ್ನು ಹೀಯಾಳಿಸಿ, ಛೀಹಾಕಿ, ಸಿಟ್ಟಿನಿಂದ ಅಪ್ಪಣೆಗಳನ್ನು ಕೊಡುವದಕ್ಕಿಂತ ಶಾಂತತೆಯಿಂದಲೂ, ಸಮಾಧಾನದಿಂದಲೂ ಪ್ರೀತಿಯಿಂದಲೂ ಅಪ್ಪಣೆಗಳನ್ನು ಕೊಡುವದು ಬಳ್ಳೀದು

ಶಿಕ್ಷೆ ಇನಾಮುಗಳನ್ನು ಪಕ್ಷಪಾತವಿಲ್ಲದೆ ಕೊಡತಕ್ಕದ್ದು—ಇನಾಮುಗಳೂ ಶಿಕ್ಷೆಗಳೂ ಮಕ್ಕಳ ನಡತೆಗೆ ಅನುಗುಣವಾಗಿರಬೇಕಲ್ಲದೆ ತಾಯಿತಂದೆಗಳ ಪ್ರೀತಿಗೆ ಅನುಗುಣವಾಗಿರಬಾರದು. ಇವುಗಳನ್ನು ಕೊಡುವ ಕಾಲಕ್ಕೆ ಪಕ್ಷಪಾತವು ಸ್ವಲ್ಪವಾದರೂ ಇರಕೂಡದು.

ಇನಾಮುಗಳು—ಒಬ್ಬ ಗ್ರಂಥಕರ್ತನು ಹೇಳುವದೇನೆಂದರೆ;—ಒಳ್ಳೆ ಕೆಲಸವನ್ನು ಮಾಡಿದ್ದಕ್ಕಾಗಿ ಮಕ್ಕಳಿಗೆ ಹಣದ ರೂಪದಿಂದ ಎಂದೂ ಇನಾಮು ಕೊಡಬಾರದು. ತಿನ್ನತಕ್ಕ ಪದಾರ್ಥಗಳನ್ನು ಕೊಡುವದಾದರೂ ತಕ್ಕದ್ದಲ್ಲ. ಇವುಗಳಿಂದ ಮಡುಗರು ಹೊಟ್ಟೆಬಾಕರಾಗುತ್ತಾರೆ.

ಸಣ್ಣ ಸಣ್ಣ ಮಕ್ಕಳಿಗೆ ಆಟದ ಪದಾರ್ಥಗಳು ಮೇಲಾದ ಇನಾಮುಗಳೆಂದೆನಿಸಿಕೊಳ್ಳುತ್ತವೆ. ಅವು ಜೇಗನೆ ಮುರಿಯುವಂಥವುಗಳಾಗಿರಬಾರದು. ಅವು ಮಕ್ಕಳ ವಿಚಾರ ಶಕ್ತಿಗೆ ಚಾಲನೆ ಕೊಡುವಂಥವುಗಳಾಗಿದ್ದರೆ ಮತ್ತಿಷ್ಟು ಬಳ್ಳೀದು. ಬೇರೆ ಬೇರೆ ಅಕೃತಿಯ ಕಟ್ಟಿಗೆಯ ತುಂಡುಗಳುಳ್ಳ ಪೆಟ್ಟಿಗೆಯನ್ನು ಈ ಕೆಲಸಕ್ಕೆ ಉಪಯೋಗಿಸುವದು ಲೇಸು. ಬೇರೆ ಬೇರೆ ಆಕಾರ ಬಣ್ಣಗಳುಳ್ಳ ಮಣಿಗಳನ್ನೂ ಸಿಂಪುಗಳನ್ನೂ, ಗೊಂಬೆಗಳನ್ನೂ ಹೆಣ್ಣು ಮಕ್ಕಳಿಗೆ ಕೊಡಬೇಕು.

ತುಸು ದೊಡ್ಡ ಮಡುಗರಿಗೆ ಗೋಲಾಂತರ ಗೋಬಾವ್ಯ ಕನ್ನಡಿಗಳು, ದುರ್ಬೀನುಗಳು, ಲೋಪಚುಂಬಕ, ರೂಲು, ಪೆನ್ಸಿಲು, ಮಸಿಯ ದೌತಿ, ಬಣ್ಣದ ಪೆಟ್ಟಿಗೆ ಮುಂತಾದವುಗಳನ್ನು ಕೊಡಬೇಕು. ಓದಬಲ್ಲ ಮಡುಗರಿಗೆ ಮನೋವರವಾದ ಕಥೆಗಳೂ ಚಿತ್ರಗಳೂ ಇರುವಂಥ ಪುಸ್ತಕಗಳನ್ನು ಕೊಡತಕ್ಕದ್ದು.

ಬಳ್ಳೆ ಕೆಲಸಗಳನ್ನು ಮಾಡಿದ್ದಕ್ಕಾಗಿ ಅವರನ್ನು ಕಾಶುಕಸಂಗ್ರಹಾಲಯಗಳಿಗೆ ತಮ್ಮ ಸಂಗಡ ಕರಕೊಂಡು ಹೋಗುವದೂ, ಚಿತ್ರ ವಿಚಿತ್ರವಾದ ಆಟಿಗಳನ್ನು ತೋರಿಸುವದೂ, ಗೆಳೆಯರನ್ನು ಕರಿಸಿಕೊಂಡು ಕೆಲವು ದಿವಸ ಅವರ ಜೊತೆಯಲ್ಲಿರಲಿಕ್ಕೆ ಅಪ್ಪಣೆ ಕೊಡುವದೂ, ತಮ್ಮ ಗೆಳೆಯರನ್ನೊಡಗೊಂಡು ನೆರೆ ಊರುಗಳಿಗೆ ಹೋಗಿ ಬರಲಿಕ್ಕೆ ಹೇಳುವದೂ ಮುಂತಾದವುಗಳು ಬಳ್ಳೆ ಕೆಲಸಗಳಿಗಾಗಿ ಕೊಡತಕ್ಕ ಇನಾಮಿನ ಬಗೆಗಳಾಗಿವೆ. ಆದರೆ ಮಕ್ಕಳು ಜನರ ಸ್ತೋತ್ರಕ್ಕೆ ಮೆಚ್ಚಿ, ಅಪಮಾನಿಂದೆಗೆ ಹೆದರಿ, ಬಳ್ಳೆ ಕೆಲಸ ಮಾಡುವದು ಸರಿಯಲ್ಲೆಂಬದನ್ನು ತಾಯಿ ತಂದೆಗಳು ಮರೆಯಲಾಗದು.

ಸ್ತೋತ್ರ ನಿಂದೆಗಳ ಮಂಬಲವಿಲ್ಲದೆ ಬಳ್ಳಿ ಕೆಲಸ ಮಾಡುವ ಸುಬುದ್ಧಿಯನ್ನು ಮಕ್ಕಳಲ್ಲಿ ನೆಲೆಗೊಳಿಸುವದು ತಮ್ಮ ಕರ್ತವ್ಯಗಳಲ್ಲಿ ಹೆಚ್ಚಿನ ಕರ್ತವ್ಯವಾಗಿರುತ್ತದೆಂಬುದನ್ನು ತಾಯಿತಂದೆಗಳು ಯಾವಾಗಲೂ ಲಕ್ಷದಲ್ಲಿಡಬೇಕು. ಪೆಜ್ಜಿ ಹೆಜ್ಜೆಗೆ ಸ್ತೋತ್ರ ಮಾಡುವದು ಇಲ್ಲವೆ ದೂಷಿಸುವದು ಸರಿಯಲ್ಲ. ಸಮಯೋಚಿತವಾಗಿ ಬಳ್ಳಿ ನಡತೆಯನ್ನು ಕೊಂಡಾಡಲಿಕ್ಕೆ ಬಾಧಕವಿಲ್ಲ. ಚಿಕ್ಕಮಕ್ಕಳನ್ನು ಪ್ರೀತಿಯಿಂದ ಮುದ್ದಾಡಿದರೆ ಸಾಕು. ಅವರು ಹೆಚ್ಚಿನ ಇನಾಮು ಬಯಸುವದಿಲ್ಲ.

ಶಿಕ್ಷೆಯ ಸಂಬಂಧವಾದ ನಿಯಮಗಳು ಯಾವವೆಂದರೆ:—

ಶಿಕ್ಷೆಯು ತಪ್ಪದೆ ಆಗುವದೆಂಬ ನಂಬಿಗೆಯನ್ನು ಮಕ್ಕಳಲ್ಲಿ ಹುಟ್ಟಿಸಿದರೆ ಅದರಿಂದ ಬಹು ಪ್ರಯೋಜನವಾಗುವದು. ಒಂದಾನೊಂದು ಕಾಲದಲ್ಲಿ ಆಸ್ಟ್ರಿಯದ ಮತ್ತು ಇಂಗ್ಲಂಡದ ಸೇನೆಗಳು ಒಟ್ಟಾಗಿ ಫ್ರಾನ್ಸಿನ ಕೂಡ ಕಾದುತ್ತಿದ್ದವು. ಆಸ್ಟ್ರಿಯದ ಸೇನಾನಾಯಕನು ಪ್ರಿನ್ಸನಯೂಜೀನ ಎಂಬವನಿದ್ದನು. ಇಂಗ್ಲಂಡದ ಸೇನಾನಾಯಕನು ಮೋರ್ಲಬರೋದ ಡ್ಯೂಕನಿದ್ದನು. ಆಸ್ಟ್ರಿಯದ ಒಬ್ಬ ಸೈನಿಕನ ಮೇಲೆ ಕಳವಿನ ಆರೋಪ ಬರಲು, ಅವನ ವಿಷಯವಾಗಿ ಅರಸುಮಗನ ಕಡೆಗೆ ವಿಚಾರ ನಡೆದು ತಪ್ಪು ಸಾಬೀತು ಆದದ್ದರಿಂದ ಯುಜೀನನು ಅವನಿಗೆ ಮರಣದ ಶಿಕ್ಷೆಯನ್ನು ವಿಧಿಸಿದನು. ಆದರೆ ಆ ಸಿಪಾಯಿಯು ಗಟ್ಟಿಗನೂ ಚತುರನೂ ಇದ್ದದ್ದರಿಂದ ಈಸಿಕರವಟ್ಟು ಇಂಗ್ಲಂಡದ ಡ್ಯೂಕನು ಆ ಅರಸುಮಗನಿಗೆ "ಬಡೆಯರೇ ನೀವು ಈ ಸಣ್ಣ ತಪ್ಪಿಗಾಗಿ ಮರಣದ ಶಿಕ್ಷೆ ಕೊಟ್ಟದ್ದು ಸರಿಯಲ್ಲ. ಇದೊಂದು ಸಾರೆ ಇವನ ಅಪರಾಧವನ್ನು ಕ್ಷಮಿಸಬೇಕು" ಎಂದು ಬೇಡಿಕೊಂಡನು. ಅದಕ್ಕೆ ಅರಸು

ಮಗನು "ಇಂಥ ಅಪರಾಧಿಗಳಿಗೆ ನಾನೆಂದೂ ಅನುಗ್ರಹ ತೋರಿಸಲಾರೆನು" ಎಂದು ಉತ್ತರ ಕೊಟ್ಟನು. ಪ್ಯೂಕನು "ದೊರೆಗಳೇ ಈ ಮೇರೆಗೆ ಸಣ್ಣ ಸಣ್ಣ ತಪ್ಪುಗಳನ್ನು ಮಾಡಿದವರನ್ನೆಲ್ಲ ನೀವು ತಲೆ ಹೊಡಿಸುತ್ತ ಹೋದರೆ, ತುಸು ದಿವಸಗಳಲ್ಲಿಯೇ ತಮ್ಮ ಅರ್ಧಕ್ಕಿಂತ ಹೆಚ್ಚು ಸೇನೆಯು ನಷ್ಟವಾಗುವದು. ಈ ತರದ ಎಷ್ಟೋ ಅಪರಾಧಿಗಳನ್ನು ನಾನು ಕ್ಷಮಿಸಿದ್ದೀನೆ" ಎಂದು ಹೇಳಿದನು. ಇದನ್ನು ಕೇಳಿ ಅರಸು ಮಗನು "ನೀವು ಬಹು ಜನ ತಪ್ಪುಗಾರರನ್ನು ಕ್ಷಮಿಸುತ್ತಿರುವದರಿಂದಲೇ ನಿಮ್ಮ ದಂಡಿನಲ್ಲಿ ಅಪರಾಧಿಗಳ ಸಂಖ್ಯೆಯು ಹೆಚ್ಚುತ್ತ ನಡೆದದೆ. ನಾನು ತಪ್ಪುಗಾರರನ್ನು ಎಂದೂ ಕ್ಷಮಿಸುವದಿಲ್ಲ. ಆದದ್ದರಿಂದ ನಾನು ಅಪರಾಧಿಗಳಿಗೆ ಶಿಕ್ಷೆ ಕೊಡುವ ಪ್ರಸಂಗವು ಆಪ್ಪಿತಪ್ಪಿ ಬರುತ್ತದೆ" ಎಂದು ಹೇಳಿದನು.

SELCETIONS FROM THE KARNATIK GAZETTEER.

ಕನ್ನಡ ಗೆಜೆಟಿಯರಿನಿಂದ ಆಯತರಣಿಗಳು.

(೬ನೇ ಪುಟದಿಂದ ಸಾಗಿದ್ದು)

ಬ್ಯಾಹಟ್ಟಿ—ಇದು ಮುಬ್ಬಳ್ಳಿಯ ಈಶಾನ್ಯಕ್ಕೆ ೪ ಮೈಲಿನ ಮೇಲೆ ಅದೆ. ರಾಮಲಿಂಗನ ಗುಡಿಯಲ್ಲಿ ಬಂದು ಶಿಲಾಲಿಪಿಯುಂಟು. ಅದಲ್ಲದೆ ಲಿಂಗವಂತರ ಎರಡು ಮಠಗಳಲ್ಲಿ ಬಂದೊಂದು, ಶಿಲಾಲಿಪಿ ಉಂಟು. ಇವುಗಳ ಹೊರತು ಈ ಊರ ವರ ಬಳಿಯಲ್ಲಿ ಎರಡು ತಾಮ್ರ ಪಟಗಳಿವೆ. ಇವೆಲ್ಲ ೧೨ನೇ ೧೩ನೇ ಶತಕಗಳಲ್ಲಿ ಅವಂಥವು.

ಶಬ್ಬಿ—ಮುಬ್ಬಳ್ಳಿಯ ದಕ್ಷಿಣಕ್ಕೆ ೪ ಮೈಲಿನ ಮೇಲಿದೆ. ಇವರ ಬುನಾದಿಯ ಪೆಸರು ಶೋಭನಪುರವೆಂದು ಹೇಳುತ್ತಾರೆ. ಕೋಟೆಯೊಳಗೂ ಕಾಳಿಕಾದೇವಿಯ ಗುಡಿಯಲ್ಲಿಯೂ ಬೇರೆ ಕಡೆಯಲ್ಲಿಯೂ ಶಿಲಾಲಿಪಿಗಳಿವೆ.

ಉಣಕಲ್ಲು—ಮಬ್ಬಳ್ಳಿಯ ಉತ್ತರಕ್ಕೆ ೩ ಮೈಲಿನ ಮೇಲಿದೆ. ಮೂರು ಹಳೆ ಗುಡಿಗಳೂ ಮೂರು ಲಿಪಿಗಳೂ ಇರುತ್ತವೆ. ಊರ ಹೊರಗೆ ಜರ್ಮನ್ ಮಿಶನರಿಗಳ ಬಂಗಲೆಯುಂಟು. ಈಪಳ್ಳಿಯ ಬಳಿಯಲ್ಲಿ ದೊಡ್ಡದೊಂದು ಕೆರೆ ಕಟ್ಟಿ ಹುಬ್ಬಳ್ಳಿಗೆ ನೀರು ತಂದಿದ್ದಾರೆ.

ಕುಸುಗಲ್ಲು—ಮಬ್ಬಳ್ಳಿಯ ಈಶಾನ್ಯಕ್ಕೆ ೬ ಮೈಲಿನ ಮೇಲಿದೆ. ಈ ಊರಿಗೆ ಭದ್ರವಾಗಿಯೂ ಸುಂದರವಾಗಿಯೂ ಕಟ್ಟಿದೊಂದು ಕೋಟೆಯುಂಟು. ಅದನ್ನು ಟೀಪೂನ ಸರದಾರನೊಬ್ಬನು ಕಟ್ಟಿದನೆಂದು ಹೇಳುತ್ತಾರೆ. ಕೋಟೆಯು ಸುತ್ತಳತೆ ಸುಮಾರು ಒಂದೂವರೆ ಮೈಲು ಇರುತ್ತದೆ. ಈ ಕೋಟೆಯ ಒಂದು ಭಾಗದಲ್ಲಿ ಸರಕಾರೀ ಬಂಗಲೆಯುಂಟು; ಉಳಿದ ಕಡೆಯಲ್ಲಿ ಕೋಟೆಯು ಹಾಳಾಗಿದೆ.

ನವಲಗುಂದ ತಾಲೂಕು.

ಕ್ಷೇತ್ರ—ಇದು ಧಾರವಾಡ ಜಿಲ್ಲೆಯ ಉತ್ತರದಲ್ಲಿ ಬೆಳಗಾವೀ ಜಿಲ್ಲೆಯ ದಕ್ಷಿಣಕ್ಕೆ ಇರುತ್ತದೆ. ಸರಕಾರೀ ಪಳ್ಳಿಗಳು ೯೦, ದುವಸಾಲೀ ಪಳ್ಳಿಗಳು ೩; ಕ್ಷೇತ್ರ ೫೬೦ ಮೈಲು, ಜನಸಂಖ್ಯೆ ೪೭೪೩೭, ಭೂಮಿಯ ಕಂದಾಯ ೩೪೯,೦೪,೦೦೦ ರೂಪಾಯಿ.

ಸ್ವರೂಪ, ಭೂಮಿ—ಬಂದೇ ಸಪನಾದ ಕರಿ ಭೂಮಿಯೇ ಎಲ್ಲ ಕಡೆಯಲ್ಲಿ ಇರುತ್ತದೆ. ಗುಡ್ಡಗಳು ಬಹುತರ ಇಲ್ಲ. ಜಾಲೀ ಮರವೇ ಮರ, ಪಳ್ಳಿಗಳು ದೊಡ್ಡವೂ ದೂರ ದೂರವಾಗಿಯೂ ಇರುತ್ತವೆ.

ಹವೆ. ಮಳೆ, ನೀರು—ಕೆಂಪು ಭೂಮಿಗಿಂತ ಕರೆ ನೆಲವು ಬೇಸಿಗೆಯಲ್ಲಿ ಹೆಚ್ಚು ಕಾಯುತ್ತದೆ, ಚಳಿಗಾಲದಲ್ಲಿ ಹೆಚ್ಚು ತಂಪಾಗುತ್ತದೆ. ಮಳೆ ನೇಮವ್ವಲ್ಲ, ನವಲಗುಂದದಲ್ಲಿ ೫ ರಿಂದ ೮೦ ಇಂಚಿನವರೆಗೆ, ಸರಾಸರೀ ಮಾನದಿಂದ

೬೦ ಇಂಚು ಬೀಳುತ್ತದೆ. ಬೆಣ್ಣೀಪಳ್ಳವು ಈ ತಾಲೂಕಿನ ನೊಳಗಿಂದ ಹರಿಯುತ್ತದೆ; ಇದರ ನೀರು ಸೌಳು. ಕೆಲವು ಮಳ್ಳಿಗಳಿಗೆ ಕೆರೆಗಳೂ ಕೆಲವುಗಳಿಗೆ ಬಾವಿಗಳೂ ಉಂಟು. ಆದರೆ ಬೇಸಿಗೆಯಲ್ಲಿ ನೀರಿನ ಕೊರತೆಯಾಗುತ್ತದೆ.

ದೊಡ್ಡ ಊರುಗಳು.

ನವಲಗುಂದ—ಧಾರವಾಡದ ಪೂರ್ವಕ್ಕೆ ೨೫ ಮೈಲಿನ ಮೇಲೆ ಇರುತ್ತದೆ. ಇದರಲ್ಲಿ ತಾಲೂಕ ಕಚೇರಿ, ಪೊಲೀಸ ಕಚೇರಿ, ಟಪಾಲ ಕಚೇರಿ, ಆಸ್ಪತ್ರಿ, ಮ್ಯುನಿಸಿಪಾಲಿಟಿ, ೫ ಶಾಲೆಗಳು ಇರುತ್ತವೆ. ಮಂಗಳವಾರ ಸಂತೆಯಾಗುತ್ತದೆ. ಅದರಲ್ಲಿ ದನಗಳ ವ್ಯಾಪಾರ ಬಹಳ ಆಗುತ್ತದೆ. ಇಲ್ಲಿ ಮೇಲಾದ ಜನುಖಾನೆಗಳು ಹುಟ್ಟುತ್ತವೆ. ಹಾಳು ಕೋಟೆಯೊಂದುಂಟು. ಈ ಊರಿಗೆ ಬಂದು ದೊಡ್ಡ ಕೆರೆಯೂ ಬಂದು ೨೧ ನೀರಿನ ಬಾವಿಯೂ, ೪೧ ಸೌಳು ನೀರಿನ ಬಾವಿಗಳೂ ಉಂಟು. ಆದರೂ ನವಲಗುಂದಕ್ಕೆ ನೀರಿನ ಬರವು ಆಗಾಗ್ಗೆ ಬರುತ್ತದೆ.

ಈ ಊರಲ್ಲಿ ಪುರಾತನ ಕಾಲದ ಗುಡಿಗಳೂ ಲಿಪಿಗಳೂ ಏನೂ ಇಲ್ಲ. ಆದದ್ದರಿಂದ ಇದು ಅರ್ವಾಚೀನ ಕಾಲದ ಗ್ರಾಮವೆಂದು ತೋರುತ್ತದೆ. ಆದರೂ ಸನ್ ೧೪೫೪ರಲ್ಲಿ ಬಾಮನೀ ೨ನೇ ಅಲ್ಲಾವುದ್ದೀನನ ಆಳಿಕೆಯಲ್ಲಿ ಅವನ ಸರದಾರನಾದ ಜಲಾಲ ಖಾನನ ವಶದಲ್ಲಿ ನವಲಗುಂದವಿತ್ತೆಂದು ಇತಿಹಾಸದಿಂದ ತಿಳಿಯುತ್ತದೆ. ಮುಂದಿನ ಬಾದಶಹನಾದ ಹುಮಾಯೂನನಿಗೂ ಜಲಾಲ ಖಾನನ ಮಗನಾದ ಸಿಕಂದರನಿಗೂ ನವಲಗುಂದದ ಬಳಿಯಲ್ಲಿ ಯುದ್ಧವಾಗಿ ಸಿಕಂದರನು ಮಡಿದನು. ಸವಣೂರಿನ ನಬಾಬನನ್ನು ಔರಂಗಜೇಬನು ನೇಮಿಸಿದಾಗ ನವಲಗುಂದದ (ಈಗಿನ

ಸಿರಸಂಗಿಯು) ದೇಸಾಯಿಯು ಆ ನಬಾಬನ ಹಸ್ತಕನಾಗಿ ದ್ದನು. ಹೈದರಲ್ಲಿಯು ಕೃಷ್ಣೆಯ ದಕ್ಷಿಣದ ಸೀಮೆಯನ್ನು ಆಕ್ರಮಿಸಿದಾಗ ಈ ದೇಸಾಯಿಯು ಅವನಿಗೆ ಕಪ್ಪ ಕೊಡುತ್ತಿದ್ದನು. ಸನ್ ೧೮೦೩ರಲ್ಲಿ ನವಲಗುಂದದ ಸೀಮೆಯು ಇಂಗ್ಲಿಷರ ವಶಕ್ಕೆ ಬಂದ ಬಳಿಕ ಜನರಲ್ ಮುನ್ರೋನು ರಾಮರಾಯನೆಂಬ ಸರದಾರನನ್ನು ನವಲಗುಂದವನ್ನು ತಕ್ಕೊಳ್ಳಲಿಕ್ಕೆ ಕಳಿಸಿದನು. ಆಗ ಬಾಪೂ ಗೋಖಲೆ ನವಲಗುಂದದಲ್ಲಿದ್ದನು. ಅವನಿಗೂ ರಾಮರಾಯನಿಗೂ ಯುದ್ಧವಾಗಿ ರಾಮರಾಯನು ಬಹು ಕೌರ್ಯದಿಂದ ನವಲಗುಂದವನ್ನು ತಕ್ಕೊಂಡನು.

ನರಗುಂದ—ನವಲಗುಂದದ ಉತ್ತರಕ್ಕೆ ೧೬ ಮೈಲಿನ ಮೇಲಿನೆ. ಈ ಊರು ಸುಮಾರು ೪೦೦ ಫೂಟು ಎತ್ತರವಾದದ್ದೊಂದು ಗುಡ್ಡದ ಬುಡದಲ್ಲಿ ಇರುತ್ತದೆ. ಇಲ್ಲಿ ಮಹಾಲಕಚೇರಿ, ಟಪಾಲ ಕಚೇರಿ, ಮ್ಯುನಿಸಿಪಾಲಿಟಿ ಉಂಟು. ಇದು ಪಡಮೂಲಿಯ ಪೇಟೆ; ವ್ಯಾಪಾರವು ಬಳಿತಾಗಿ ನಡೆಯುತ್ತದೆ. ಈ ಊರಿಗೆ ೩ ಕೆರೆಗಳುಂಟು. ಆದರೂ ನೀರಿನ ದುರ್ಭಿಕ್ಷವು ಆಗಾಗ್ಗೆ ಬರುತ್ತದೆ. ನರಗುಂದದ ಕೋಟೆಯು ತಕ್ಕಮಟ್ಟಿಗೆ ಹೆಸರಾದದ್ದು. ಇದು ಮೇಲೆ ಹೇಳಿದ ಗುಡ್ಡದ ಮೇಲೆ ೩೮೪ ಎಕರಿನ ಕ್ಷೇತ್ರವನ್ನಳ್ಳಿದ್ದಿರುತ್ತದೆ. ಇದು ಪೂರ್ವದಲ್ಲಿ ಗೆಲ್ಲಲಿಕ್ಕೆ ಅಸಾಧ್ಯವಾದದ್ದೆಂದು ಎಣಿಸಲ್ಪಡುತ್ತಿತ್ತು. ಪೇಟೆಯಲ್ಲಿ ಶಂಕರಲಿಂಗ, ಮಹಾಬಳೇಶ್ವರ, ಸೋಮತ ವನುಮಂತ ಎಂಬ ಗುಡಿಗಳೂ, ಕೋಟೆಯಲ್ಲಿ ವೆಂಕಟರಮಣನ ಗುಡಿಯೂ ಉಂಟು. ವೆಂಕಟರಮಣನ ಗುಡಿಯನ್ನು ಇಲ್ಲಿಯ ಮೊದಲನೇ ಸಂಸ್ಥಾನಿಕನಾದ ರಾಮರಾವನೆಂಬವನು ಸನ್ ೧೭೮೦ರಲ್ಲಿ ಕಟ್ಟಿಸಿದನು, ಈ ಗುಡಿಗೆ ಬಂದು ಲಕ್ಷ ರೂಪಾಯಿ ವೆಚ್ಚಾಗಿತೆಂದು ಹೇಳುತ್ತಾರೆ

ತ್ತಾರೆ. ದೇವರಿಗೆ ೨೦೧೦ ರೂಪಾಯಿಯ ಭೂಮಿಯು ೧೩೦೦ ರೂಪಾಯಿಯ ವರ್ಷಾಶನವೂ ಇರುತ್ತವೆ. ಸ್ವ ೧೪೫೯ನೇ ವರ್ಷದ ಬಂಡಾಯದ ಕಡೆಯಲ್ಲಿ ಸರಕಾರೀ ದಂಡಿನವರು ವೆಂಕಟರಮಣನ ಮೂರ್ತಿಯನ್ನು ಬಡಿದು ಗುಡಿಯನ್ನು ಕೆಡಿಸಿದ್ದರು. ಆದರೆ ಈಚೆಯಲ್ಲಿ ರಾಮದು ರ್ಗದ ಸಂಸ್ಥಾನಿಕನು ಗುಡಿಯನ್ನು ದುರಸ್ತು ಮಾಡಿ ಮೂರ್ತಿಯನ್ನು ಸ್ಥಾಪಿಸಿ, ಭಕ್ತಿಯಿಂದ ನಡಕೊಳ್ಳುತ್ತಿದ್ದದರಿಂದ ಸರಕಾರದವರೂ ಗುಡಿಯನ್ನು ಆದಕ್ಕೆ ನಡಿಯುತ್ತಿದ್ದ ಇನಾಮು ಸಹಿತವಾಗಿ ಅವನ ವಶಕ್ಕೆ ಕೊಟ್ಟರು. ನವರಾತ್ರಿಯ ಉತ್ಸವದಲ್ಲಿ ಸುಮಾರು ೧೦೦೦೦ ಜಾತ್ರೆ ಕೂಡುತ್ತದೆ. ಅದರಲ್ಲಿ ಸುಮಾರು ೫೦,೦೦೦ ರೂಪಾಯಿಯ ವ್ಯಾಪಾರವಾಗುತ್ತದೆ. ಈ ಊರಲ್ಲಿ ೪ ಸರಕಾರೀ ಶಾಲೆಗಳಿವೆ.

ನರಗುಂದವ ಕೋಟೆಯನ್ನು ಸನ್ ೧೬೫೫ರಲ್ಲಿ ಶಿವಾಜಿಯು ಕಟ್ಟಿಸಿದನೆಂದು ಹೇಳುತ್ತಾರೆ. ಸ್ವ ೧೭೮೫ರಲ್ಲಿ ಟೀಪೂನು ನರಗುಂದವನ್ನು ತಕ್ಕೊಂಡನು; ಆದರೆ ಮುಂದೆ ಎರಡು ವರ್ಷಕ್ಕೆ ಅವ ಬಪ್ಪಂದದಲ್ಲಿ ಅದನ್ನು ಪೇಶವನಿಗೆ ಕೊಟ್ಟನು. ಪೇಶವನ ರಾಜ್ಯವನ್ನು ಇಂಗ್ಲಿಷ ಸರಕಾರದವರು ತಕ್ಕೊಂಡ ಬಳಿಕ ಅವರು ನರಗುಂದವ ಸಂಸ್ಥಾನವನ್ನು ಅದರ ಮೊದಲಿನ ಒಡೆಯನಾದ ದಾದಾಜಿರಾಯನಿಗೆ ಕೊಟ್ಟರು. ಸ್ವ ೧೮೫೬ ರಲ್ಲಿ ಈ ಸಂಸ್ಥಾನದ ಒಡೆಯನಾದ ಭಾಸ್ಕರರಾವ ಬಾಬಾಸಾಹೇಬನಿಗೆ ಸರಕಾರದವರು ಪತ್ತಪುತ್ರನನ್ನು ತಕ್ಕೊಳ್ಳಲಿಕ್ಕೆ ಅಪ್ಪಣೆ ಕೊಡದಿದ್ದಕಾರಣ ಅವನು ಬಂಡಾಯ ಮಾಡಿದನು. ಆರಂಭಕ್ಕೆ ಸರಕಾರದವರು ಕೋಟೆಯ ಮೇಲಿನ ತೋಪುಗಳನ್ನೂ ಮದ್ದುಗುಂಡನ್ನೂ ಧಾರವಾಡಕ್ಕೆ ಕಳಿಸೆಂದು ಭಾಸ್ಕರರಾಯನಿಗೆ

ಅಪ್ಪಣೆಯೇ ಮಾಡಿದರು. ಆ ಪ್ರಕಾರ ಅವನು ಕೆಲವು ತೋಪ್ಪುಗಳನ್ನೂ ಮದ್ದು ಗುಂಡನ್ನೂ ಧಾರವಾಡಕ್ಕೆ ಕಳಿಸಿದ ಬಳಿಕ, ಮುಂಡರಗಿಯ ಭೀಮರಾಯನು ಬಂಡಾಯ ಮಾಡಿದ ಸುದ್ದೀ ಕೇಳಿ, ಉಳಿದ ತೋಪ್ಪುಗಳನ್ನು ಕೋಟೆಯ ಮೇಲೆ ಸಜ್ಜ ಮಾಡಿ ನಿಲ್ಲಿಸಿ ಭಾಸ್ಕರರಾಯನು ಬಂಡಾಯ ಹೂಡಿದನು. ಅಷ್ಟರೊಳಗೆ ಪೋಲಿಟಿಕಲ್ ಏಜಂಟನಾದ ಮ್ಯಾನ್ಸನ್ ಸಾಹೇಬನು ಭಾಸ್ಕರರಾಯನಿಗೆ ಬರೆದದ್ದೊಂದು ಪತ್ರದಿಂದ ಭಾಸ್ಕರರಾಯನು ಸಿಟ್ಟಾಗಿ, ಕೆಲವು ದಂಡು ತಕ್ಕೊಂಡು ಸಾಹೇಬನು ಆಗ ಇದ್ದ ಸೋರೀಬಾನವೆಂಬ ಗ್ರಾಮಕ್ಕೆ ಹೋಗಿ, ಅದನ್ನು ಸುತ್ತುಗಟ್ಟಿ, ಮ್ಯಾನ್ಸನ್ನನ ಕುತ್ತಿಗೇ ಕೊಯಿದು, ಅವನ ರುಂಡವನ್ನು ನರಗುಂದದ ಅಗಸೇ ಬಾಗಿಲಿಗೆ ಬಯ್ದು ಕಟ್ಟಿದನು. ಆದ್ದರಿಂದ ಸರ ಜಾರ್ಜ ಮಾಲಕಮ್ ಸಾಹೇಬನು ದಂಡು ತಕ್ಕೊಂಡು ನರಗುಂದಕ್ಕೆ ಹೋಗಿ, ಎರಡು ದಿವಸದೊಳಗೇ ಕೋಟೆಯನ್ನು ತಕ್ಕೊಂಡನು. ಆದರೆ ಭಾಸ್ಕರರಾಯನು ಓಡಿ ಹೋದನು. ಬೆಳಗಾವಿಯ ಪೋಲೀಸ ಸುಪರಿಂಟೆಂಡೆಂಟನಾದ ಸೂಟರ ಸಾಹೇಬನು ಸ್ವಲ್ಪ ದಿವಸದೊಳಗೆ ಭಾಸ್ಕರರಾಯನನ್ನು ತೊರಗಲ್ಲಿನ ಬಳಿಯಲ್ಲಿ ಹಿಡಿದನು; ಆಗ ಅವನ ಸಂಗಡ ಬೇರೆ ಆರು ಜನರಿದ್ದರು. ಭಾಸ್ಕರರಾಯನನ್ನು ಬೆಳಗಾವಿಗೆ ತಂದು ಜೂನ ೧೮ನೇ ತಾರೀಖಿನಲ್ಲಿ ಗಲ್ಲಿಗೇರಿಸಿದರು, ೧೮೫೮. ಆದ್ದರಿಂದ ನರಗುಂದದ ಸಂಸ್ಥಾನವು ಸರಕಾರಕ್ಕೆ ಬೇರಿತು. ಕೋಟೆಯನ್ನು ಸರಕಾರದವರು ಹಾಳು ಮಾಡಿ, ಒಳಗಿನ ಮಂಟಪಗಳನ್ನು ಒಡಿಸಿ ಹಾಕಿಬಿಟ್ಟರು.

METHODS OF TEACHING.

ಕಲಿಸುವ ಪದ್ಧತಿಗಳು

ನಿ ಬಂ ಧ.

(೧೬೬ನೆಯ ಪುಟದಿಂದ ಮುಂದೆ ಸಾಗಿದ್ದು)

(೧) ಮನುಷ್ಯನ ಗುಣಗಳನ್ನೆಲ್ಲ ಸಂಪೂರ್ಣಸ್ಥಿತಿಗೆ ತರುವಂಥ ಯಾವತ್ತೂ ಬುದ್ಧಿ ಸಾಮರ್ಥ್ಯಗಳ ವೃದ್ಧಿಯೇ ವಿದ್ಯೆಯೆಂದು ಹೇಳಬಹುದು. ವಿದ್ಯೆ, ಶಿಕ್ಷಣ ಇವೆರಡೂ ಶಬ್ದಗಳ ಅರ್ಥ ಒಂದೇ ಎಂದು ತಿಳುಕೊಳ್ಳುವದು ತಪ್ಪು. ಹೀಗೆ ತಿಳುಕೊಳ್ಳುವದರಿಂದ ಅನೇಕ ತಪ್ಪುಗಳು ಆಗುವದು ಸಹಜ. ಶಿಕ್ಷಣ ಇಲ್ಲದೆ ಯಾವ ವಿದ್ಯೆಯೂ ಬರದು. ಕಾನೆ ಶಿಕ್ಷಣದಿಂದ ಕೊಂಚ ವಿದ್ಯೆಯು ಬರಬಹುದು. ಬಹಳ ಬಲ್ಲವನೇ ವಿದ್ವಾಂಸನೆಂದು ಹೇಳ ಕೂಡದು; ಆದರೆ ಬಹಳ ಕೆಲಸಮಾಡುವವನೇ ವಿದ್ವಾಂಸನೆಂದು ಹೇಳುತ್ತಾರೆ.

(೨) ಯಾವತ್ತು ಪ್ರಾಣಿಗಳಲ್ಲಿ ವಿದ್ಯೆ ಕಲಿಯಲಿಕ್ಕೆ ತಕ್ಕ ಪ್ರಾಣಿಯಂದರೆ ಮನುಷ್ಯನೇ. ಇತರ ಪ್ರಾಣಿಗಳಿಗೆ ಪೋಷಣೆ ರಕ್ಷಣೆಗಳಿಂದಲೇ ಯೋಗ್ಯಸ್ಥಿತಿಯು ಬಂದು, ಅವು ಸ್ವಾಭಾವಿಕವಾಗಿ ಮಾಡುವಂಥ ಕಾರ್ಯಗಳನ್ನು ನೆರವೇರಿಸುತ್ತವೆ. ಇವುಗಳಲ್ಲಿ ಕಾಲಾಂತರದಿಂದ ಸಹ ಬಂದು ರವಷ್ಟಾದರೂ ಸುಧಾರಣೆಯಾಗದೆ ಇವು ಇದ್ದ ಹಾಗೇ ಇರುತ್ತವೆ. ಆದರೆ ಮನುಷ್ಯನು ದಿನದಿನಕ್ಕೆ ಹೆಚ್ಚಿ ಚ್ಚಾಗಿ ಸುಧಾರಿಸುತ್ತ ನಡೆದಿದ್ದಾನೆ. ಪ್ರತಿ ಬಂದು ಜನಾಂಗದವರು ತಮ್ಮ ಪೂರ್ವಜರ ಅನುಭವದಿಂದ ತಮಗೆ ದೊರೆತ ಜ್ಞಾನವನ್ನು ಹೆಚ್ಚಿಸಿ ಅದನ್ನು ತಮ್ಮ ಪಶ್ಚಾತ್ ಮಟ್ಟುವವರ ಪಾಲಿಗೆ ಇಡುತ್ತಾರೆ. ಈ ಮೇರೆಗೆ ವಿದ್ಯೆಯು ಮನುಷ್ಯಜಾತಿಯ ಅಭಿವೃದ್ಧಿಗೆ ಬಹು ಅನುಕೂಲವಾಗುತ್ತದೆ. ಮತ್ತು ಇದು ವರೆಗೆ ಮನುಷ್ಯನಲ್ಲಿ ಆದ ಸುಧಾರಣೆಯನ್ನು ನೋಡಲಾಗಿ ಮುಂದೆ ಎಷ್ಟು ಹೆಚ್ಚು ಸುಧಾರಣೆಯಾದೀತೆಂಬುದನ್ನು ಹೇಳುವದು ಶಕ್ಯವಿಲ್ಲ.

(೩) ಶಿಕ್ಷಣೆಯಿಂದ ಮನುಷ್ಯನಲ್ಲಿ ಇರುವ ಮಾನಸಿಕ, ಶಾರೀರಿಕ, ಅಲಂಕಾರಿಕ, ನೈತಿಕ ಎಂಬ ವಿಧವಿಧದ ಬುದ್ಧಿ ಸಾಮರ್ಥ್ಯಗಳು ಸಶಾಸ್ತ್ರೀಯವಾಗಿ ಬೆಳೆಯುತ್ತವೆ. ಆದರಿಂದ ಶಿಕ್ಷಣೆಯಲ್ಲಿ ಮಾನಸಿಕ, ಶಾರೀರಿಕ, ಅಲಂಕಾರಿಕ, ನೈತಿಕ ಎಂಬ ನಾಲ್ಕು ವಿಭಾಗಗಳನ್ನು ಮಾಡಬಹುದು. ಜ್ಞಾನವನ್ನು ಸಂಪಾದಿಸುವದಕ್ಕೂ ಬೆಳಿಸುವದಕ್ಕೂ ಅವಶ್ಯಕವಾದ ಮನಸಿನ ಶಕ್ತಿಯನ್ನು ಹೆಚ್ಚಿಸುವದೇ ಮಾನಸಿಕ ವಿದ್ಯೆಯು. ಇದರಲ್ಲಿ ತಿಳುವಳಿಕೆಯಿಂದ ಬಾಹ್ಯ ಪದಾರ್ಥಗಳ ಜ್ಞಾನ ಉಂಟಾಗುತ್ತದೆ; ಸ್ಮರಣ ಶಕ್ತಿಯಿಂದ ನಾವು ಸಂಪಾದಿಸಿದಂಥ ಜ್ಞಾನವನ್ನು ಉತ್ತರ ಸಂತತಿಗಳ ಉಪಯೋಗಕ್ಕಾಗಿ ಸಂಗ್ರಹಿಸಲಿಕ್ಕೆ ಸಮರ್ಥರಾಗುತ್ತೇವೆ; ಕಲ್ಪನೆಯಿಂದ ತರತರದ ಉಲ್ಲಾಸದ ವಿಚಾರಗಳು ಪುಟ್ಟುತ್ತವೆ; ವಿಚಾರಣೆಯಿಂದ ನಾವು ಬೇರೆ ಬೇರೆ ವಿಚಾರಗಳನ್ನು ಒಟ್ಟುಗೂಡಿಸಿ, ಯಾವದಾದರೊಂದು ಮಾತು ಸತ್ಯವೋ ಮಿಥ್ಯವೋ ಎಂದು ಹೇಳಬಹುದು. ಜ್ಞಾನೇಂದ್ರಿಯದ ಮತ್ತು ಜ್ಞಾನತಂತುಗಳ ಪೂರ್ಣ ಅಭಿವೃದ್ಧಿಯು ಶಾರೀರಿಕ ಶಿಕ್ಷಣವನ್ನೇ ಅವಲಂಬಿಸಿರುತ್ತದೆ. ಶಾರೀರಿಕ ಶಿಕ್ಷಣವು ವಸ್ತುತಃ ಅತ್ಯಂತ ಮಹತ್ವದ್ದಿರುತ್ತದೆ. ಈ ಶಿಕ್ಷಣೆಯಿಂದ ಶರೀರಕ್ಕೆ ಸೌಖ್ಯ ಉಂಟಾಗುವದರಿಂದಲೂ, ಶರೀರವು ಚಪಲತೆಯನ್ನು ಹೊಂದಿ ಮನಸ್ಸಿಗೆ ವಿಧೇಯವಾಗುವದರಿಂದಲೂ, ಈ ತರದ ಶಿಕ್ಷಣೆಗೆ ಹೆಚ್ಚು ಲಕ್ಷ ಕೊಡುವದು ಶ್ರೇಷ್ಠ. ಈ ಶಿಕ್ಷಣೆಯಿಂದ ಮನುಷ್ಯನಿಗೆ ಆರೋಗ್ಯವೂ, ಶಕ್ತಿಯೂ, ಕಾಂತಿಯೂ ಉಂಟಾಗುತ್ತವೆ. ಮತ್ತು ಇದಕ್ಕೂ ಹೆಚ್ಚಿನ ಸಂಗತಿ ಏನಂದರೆ, ಮನಸ್ಸು ಬಹುತರವಾಗಿ ದೇವಸ್ಥಿತಿಗೆ ಅನುಸರಿಸಿ ಇರುವದು. ಆದದರಿಂದ ನಾವು ಮನಸ್ಸನ್ನು ಪೂರ್ಣವಾಗಿ ಸ್ವಸ್ಥವಿಟ್ಟು ಅದರ ದಿವ್ಯ ಶಕ್ತಿಗಳ ಉಪಯೋಗವನ್ನು ಚನ್ನಾಗಿ ಮಾಡಿಕೊಳ್ಳ

ಬೇಕಾದರೆ ನಿಯಮಿತವಾದ ಸಾಧಕದ ಅಭ್ಯಾಸದಿಂದ ಶರೀರವನ್ನು ಸಪ ಆರೋಗ್ಯದ ಸ್ಥಿತಿಯಲ್ಲಿ ಇಟ್ಟುಕೊಳ್ಳಲಿಕ್ಕೇ ಬೇಕು. ಗಂಡಾಂತರ ನಿವಾರಣಕ್ಕೆ ಶಾರೀರಿಕ ಶಿಕ್ಷಣವು ಬಂದು ಸಾಧನವಾಗಿರುತ್ತದೆ. ಹ್ಯಾಗಂದರೆ—ಅಕಸ್ಮಾತ್ತಾಗಿ ಯಾರಾದರು ಮೈಮೇಲೆ ಬಂದರೆ ಕಸುವ್ಳುಳ್ಳ ಮನುಷ್ಯನು ಬಮ್ಮೆಲೆ ನೆಲಕ್ಕೆ ಬೀಳಬಿ ಧೈರ್ಯದಿಂದ ಅವರ ಕೂಡ ಗುದ್ದಾಡಲಿಕ್ಕೆ ಪತ್ತುವನು; ತನ್ನ ಕೈ ಸಾಧಿಸದಿದ್ದರೆ ಓಡಿ ಹೋಗಿ ತನ್ನ ಜೀವ ಉಳಿಸಿಕೊಳ್ಳುವನು. ಅಲಂಕಾರಿಕ ಶಿಕ್ಷಣೆಯಿಂದ ಸೃಷ್ಟಿ ಸೌಂದರ್ಯಗಳನ್ನೂ ಗ್ರಂಥ ಕಲಾ ಕೌಶಲ್ಯಗಳಲ್ಲಿರುವ ಸ್ವಾರಸ್ಯವನ್ನೂ ತಿಳುಕೊಂಡು, ಸಂತೋಷ ಪಡುವದಕ್ಕೆ ಮನಸ್ಸು ಸಿದ್ಧವಾಗುತ್ತದೆ. ಆದದರಿಂದ ಈ ಶಿಕ್ಷಣೆಯನ್ನು ಪಡೆದವರು ಸುಂದರವಾದ ಚಿತ್ರಗಳಲ್ಲಿಯೂ ಸುರಸ ಭಾಷೆಗಳಲ್ಲಿಯೂ ಇಂಪಾದ ಗಾನಗಳಲ್ಲಿಯೂ ಇರುವ ಸ್ವಾರಸ್ಯವನ್ನು ತಿಳುಕೊಂಡು ಸಂತೋಷ ಭರಿತರಾಗುತ್ತಾರೆ. ಮನುಷ್ಯನ ಬುದ್ಧಿ ಸಾಮರ್ಥ್ಯಗಳಲ್ಲಿ ಜ್ಞಾನ, ಕರ್ತೃತ್ವ, ತಿಳುವಳಿಕೆ ಎಂಬ ಮೂರು ವಿಭಾಗಗಳನ್ನು ಮಾಡಬಹುದು. ಈ ಮೂರು ವಿಭಾಗಗಳಿಗೆ ಸತ್ಯ, ಒಳ್ಳೇತನ, ಸೌಂದರ್ಯ ಎಂಬ ಮೂರು ತರದ ಕಲ್ಪನೆಗಳು ಹೊಂದಿರುವವು. ಸತ್ಯಕ್ಕೆ ತರ್ಕಶಾಸ್ತ್ರವು, ಒಳ್ಳೇತನಕ್ಕೆ ಧರ್ಮಶಾಸ್ತ್ರವು ಹ್ಯಾಗೆ ಸಂಬಂಧಿಸಿರುವವೋ ಹಾಗೆಯೇ ಸೌಂದರ್ಯಕ್ಕೆ ಅಲಂಕಾರ ಶಾಸ್ತ್ರವು ಸಂಬಂಧಿಸಿರುವದು. ಅಲಂಕಾರಿಕ ಶಿಕ್ಷಣೆಯಿಂದ ಮನೆಮಾರುಗಳನ್ನು ಚನ್ನಾಗಿ ಕಟ್ಟಿಕೊಳ್ಳುವದಕ್ಕೂ ಒಪ್ಪವಂತೆ ಉಡಿಗೆ ತೊಡಿಗೆಗಳನ್ನು ಧರಿಸಿಕೊಳ್ಳುವದಕ್ಕೂ ನಮ್ಮಲ್ಲಿರುವ ಯಾವತ್ತು ಸಾಮಾನುಗಳನ್ನು ಕ್ರಮಗೊಳಿಸುವದಕ್ಕೂ ಅನುಕೂಲವಾದ ಬುದ್ಧಿ ಸಾಮರ್ಥ್ಯವುಂಟಾಗುತ್ತದೆ. ಈ ಶಿಕ್ಷಣೆಯಿಂದ ಯಾ

ಮಾನವರೊಂದು ಪ್ರಾಣಿಯು ಇಲ್ಲವೆ ವಸ್ತುವಿನ ಸಮಗಟ್ಟನ್ನು ತಿಳುಕೊಳ್ಳುವದಕ್ಕೆ ನಾವು ಸಮರ್ಥರಾಗುತ್ತೇವೆ. ಮತ್ತು ಇದರಿಂದ ಮನಸ್ಸಿನೊಳಗಿನ ಸಂಶಯವು ದೂರಾಗಿ ನಿಷ್ಕರ್ಷೆಯನ್ನು ಸ್ವೀಕರಿಸುವದಕ್ಕೆ ನಮಗೆ ಅಭ್ಯಾಸ ಬೇಳುವದು. ಅಲಂಕಾರಿಕ ಶಿಕ್ಷಣೆಯು ಇತರ ಶಿಕ್ಷಣೆಗಳಷ್ಟು ಉಪಯೋಗವುಳ್ಳದ್ದಿರದಿದ್ದರೂ ಮನಸಿಗೆ ವಿಮಲತರ ಸಂತೋಷವನ್ನು ಉಂಟು ಮಾಡಿ ನಮ್ಮ ಸಂಸಾರದ ಭಾರವನ್ನು ಪಗುರ ಮಾಡುವದಲ್ಲದೆ ಸ್ವರ್ಗಸುಖದ ಮಾದರಿಯನ್ನು ಸಹ ನಮಗೆ ಈ ಲೋಕದಲ್ಲಿಯೇ ತೋರಿಸುತ್ತದೆ. ನೀತಿ ಶಿಕ್ಷಣೆಯಿಂದ ನಮ್ಮ ದಯೆಯು ಬೆಳ್ಚುತ್ತದೆ; ಮನಸು ವಿಸ್ತೃತವಾಗುತ್ತದೆ. ಅಯುಷ್ಯಕ್ರಮವನ್ನು ನಿಯಮಿಸುವಂಥ ನಾನಾತರದ ಕ್ರಮಗಳು ಈ ಶಿಕ್ಷಣೆಯಲ್ಲಿ ಸಂಕಲಿತವಾಗಿರುವವು. ಈ ಶಿಕ್ಷಣೆಯಲ್ಲಿ ಧಾರ್ಮಿಕ ಶಿಕ್ಷಣೆಯು ಸಹ ಶೇರಿರುವದು. ನೀತಿ ಶಿಕ್ಷಣ ಇರದಿದ್ದರೆ ಮನುಷ್ಯನಿಗೂ ಪಶುವಿಗೂ ಏನೂ ಭೇದ ಉಳಿಯುತ್ತಿದ್ದಿಲ್ಲ. ಈ ಶಿಕ್ಷಣೆಯಿಂದ ಮನುಷ್ಯನು ದೇವರಿಗೂ ತನಗೂ ತನ್ನ ನೆರೆಯವರಿಗೂ ಮಾಡತಕ್ಕ ಕರ್ತವ್ಯಗಳನ್ನು ಕಲಿತುಕೊಳ್ಳುತ್ತಾನೆ. ನೀತಿ ಶಿಕ್ಷಣೆಯಲ್ಲಿ ಮುಖ್ಯವಾಗಿ ಬೋಧನೆಗಿಂತ ಕೃತಿಯೇ ಲೇಸು ಎಂದು ಹೇಳಬಹುದು. ತಾಯಿತಂದೆಗಳೂ ಗುರುಗಳೂ ಮಡುಗರಿಗೆ ನೀತಿ ವಿಷಯಗಳನ್ನು ಕುರಿತು ಉಪದೇಶ ಮಾಡುವದಕ್ಕೆ ಮೊದಲು ತಾವೇ ನೀತಿಮಾರ್ಗದಿಂದ ನಡೆಯುತ್ತಿರಬೇಕು. ಇಲ್ಲದಿದ್ದರೆ ಅವರ ಬೋಧನೆಯು ವ್ಯರ್ಥವಾಗುವದು. ಮತ್ತು ಅವರು ತಮ್ಮ ಮಕ್ಕಳು ಕೆಟ್ಟ ಮಡುಗರ ಜೊತೆಯೊಳಗೆ ಶೇರದಂತೆ ಎಚ್ಚರಗೊಂಡು ಅವರನ್ನು ಬಳ್ಳೀ ಜೊತೆಗಾರರ ಸಹವಾಸದಲ್ಲಿ

ೀರಿಸಲಿಕ್ಕೆ ಯಾವಾಗಲೂ ಎತ್ತುಗಡೆ ಮಾಡುತ್ತಿರ ಬೇಕು. ಯಾಕಂದರೆ ಮಡುಗರು ತಮ್ಮ ಗುರುಗಳ ಶಿಕ್ಷಣಯಿಂದ ನೀತಿಮಾರ್ಗವನ್ನು ಹಿಡಿಯುವದಕ್ಕಿಂತ ನೆರೆಯವರ ಸಹವಾಸದಿಂದಲೇ ಆ ಹಾದಿಗೆ ಬರ್ತುವದು ಹೆಚ್ಚು ವಾಡಿಕೆಯಾಗಿದೆ. ಯುರೋಪವ ಎಷ್ಟೋ ದೇಶಗಳಲ್ಲಿ ಧಾರ್ಮಿಕ ಶಿಕ್ಷಣೆಯನ್ನು ಗುಡಿ ಮಠಗಳಲ್ಲಿ ಕೊಡುವದಲ್ಲದೆ ಲೌಕಿಕೋಪಯೋಗದ ಶಾಲೆಗಳಲ್ಲಿ ಸಹ ಕೊಡುತ್ತಾರೆ. ಈ ದೇಶದ ಶಾಲೆಗಳೊಳಗಿನ ವಿದ್ಯಾರ್ಥಿಗಳು ಜೇರೆ ಜೇರೆ ಪಂಥದವರಾಗಿರುವದರಿಂದ ಇಂಥ ಉಪದೇಶವನ್ನು ಮಾಡುವದಕ್ಕೆ ಅತಿ ಪ್ರಯಾಸವಾಗುವದು. ಕೆಲವು ಕಾಲದ ಹಿಂದೆ ಸರಕಾರದವರು ಹಿಂದುಸ್ಥಾನದೊಳಗಿನ ಯಾವತ್ತು ಜಾತಿಯ ಮಡುಗರಿಗೆ ನೀತಿ ಉಪದೇಶವನ್ನು ಕಲಿಸಲಿಕ್ಕೆ ಉಪಯೋಗ ಬೇಳುವಂಥ ಬಂದು ಪುಸ್ತಕವನ್ನು ಬರೆಯಿಸಬೇಕೆಂದು ಆಲೋಚನೆ ಮಾಡಿದ್ದರು ಆದರೆ ಅದು ಇನ್ನೂವರೆಗೆ ಬೈಲಿಗೆ ಬಂದಂತೆ ತೋರುವದಿಲ್ಲ.

CORRESPONDENCE.

ಪತ್ರವ್ಯವಹಾರ.

ರಾವಸಾಹೇಬ ಎಡಿಟರ ಕನ್ನಡ ಶಾಲಾ ಪತ್ರಕ ಇವರ ಸನ್ನಿಧಿಗೆ:—

ವಿ. ವಿ. ಕೆಳಗೆ ಬರೆದ ನಾಲ್ಕು ಪಂಕ್ತಿಗಳನ್ನು ತಮ್ಮ ಕರಕಂಜದಿಂದ ಉದ್ಭವಿಸುವ ಸುಂದರ ಶಾಲಾ ಪತ್ರಕದಲ್ಲಿ ಪ್ರಕಟಿಸುವಿರೆಂದು ಆಶಿಸುತ್ತೇನೆ.

ಕಂದ ॥ ಅಗಿಯಹುಣಿವಿಹೋವ, ಮಿಗೆಮೂರುದಿವಸಕ್ಕೆ ।
ಮೃಗಧರನ ಕೂಡೆ ಮೃಗವಿರಲು ಮಳೆಗಾಲ ।
ಜಗದಣಿಯಲಕ್ಕು ಸರ್ವಜ್ಞ. ॥ ೧ ॥

ಈ ಕವಿತೆಯು ಕನ್ನಡ ಕವಿತೆಯ ೬ನೇ ಪುಸ್ತಕದೊಳಗಿನ ೭ನೇ ಪಾತದಲ್ಲಿ ಉಂಟು.

ಇದರ ಭಾವಾರ್ಥವೇನೆಂದರೆ:—ಅರಿಯು ಹುಣ್ಣಿಮೆಯಾದ ನಂತರ ೩ ದಿವಸಗಳ ಮೇಲೆ ನಿತ್ಯ ನಕ್ಷತ್ರವು ಮೃಗವಿದ್ದರೆ, ಮಳೆಗಾಲವು ಅತಿಶಯವಾಗುವದು.

ಇನ್ನು, ವೈಶಾಖ ಪೌರ್ಣಿಮೆಯ ದಿವಸ ನಿತ್ಯ ನಕ್ಷತ್ರವು ವಿಶಾಖಾ ಅಥವಾ ಅದರ ಹಿಂದಿನ ಮುಂದಿನ ಒಂದೆರಡು ನಕ್ಷತ್ರಗಳೊಳಗೆ ಯಾವದೊಂದು ನಕ್ಷತ್ರವು ಇರುವದು ಶಾಸ್ತ್ರಸಿದ್ಧವಾದದ್ದು. ಮುಂದೆ ೩ ದಿವಸದ ನಂತರ ಧನಿಷ್ಠಾ ಅಥವಾ ಅದಕ್ಕೆ ನಿಕಟವಾಗಿರುವ ಯಾವದೊಂದು ನಕ್ಷತ್ರವು ಇರಲಿಕ್ಕೇ ಬೇಕು. ಅಂದಮೇಲೆ ೧೦—೧೩ ನಕ್ಷತ್ರಗಳ ಅಂತರದ ಮೇಲಿರುವ ಮೃಗ ನಕ್ಷತ್ರವು ಆ ದಿವಸ ಬರಲಾರದು. ಈ ಅಪೂರ್ವ ಯೋಗವು ಹ್ಯಾಗೆ ಸಂಭವಿಸೀತೆಂಬ ವಿಷಯವಾಗಿಯೂ, ಶಾಲೆಯಲ್ಲಿ ಈ ಕವಿತೆಯನ್ನು ಕಲಿಸಹತ್ತಿ ೧೫ ವರ್ಷಗಳಾಗಿ ಹೋದರೂ, ಇದರ ಬಗ್ಗೆ ಲಕ್ಷ್ಯ ಕೊಡದಿರುವದರಿಂದಲೂ, ಸರ್ವಜ್ಞ ಕವಿಯ ಉಕ್ತಿಯು ದೋಷಾಪೇಕ್ಷವೆಂದು ತಿಳುಕೊಳ್ಳಲಿಕ್ಕೆ ಅವಕಾಶವಿಲ್ಲದ್ದರಿಂದಲೂ ನನ್ನ ಜಿಜ್ಞಾಸೆಯು ಪ್ರಬಲವಾಯಿತು.

ವೈಶಾಖ ಶುದ್ಧ ೩ ದಿವಸ ಮೃಗ ನಕ್ಷತ್ರವು ಬರುತ್ತದೆಂದು ಗ್ರಹಿಸಿದರೆ ಈ ಯೋಗವು ಎಷ್ಟು ವರ್ಷಗಳ ಅವಧಿಯಲ್ಲಿ ಸಂಭವಿಸುವದೆಂಬ ಬಗ್ಗೆ ಜ್ಯೋತಿಷ್ಯ ಶಾಸ್ತ್ರದ ಆಧಾರದಿಂದ ಯಾವ ಸಿದ್ಧಾಂತವು ಸ್ಥಾಪಿತವಾಗುವದು? ಎಂಬ ಬಗ್ಗೆ ಸಂಶಯ ತಟ್ಟಿತು.

ಈ ಸಂಶಯವನ್ನು ಯಾರಾದರೂ ನನ್ನ ಬೇಕ ಬಾಂಧವರು ಪರಿಹರಿಸಿದರೆ ಅವರ ಉಪಕಾರವನ್ನು ಸ್ಮರಿಸುವೆನು. ಇಂತಿ ವಿಜ್ಞಾಪನೆ.

ಶಾ. ಕಲ್ಲೋಳಿ ತಾ॥ ಚಿ. ತಾ॥ ೧೦-೬-೧೪.

ವಿದ್ಯಾಬಾಬಾಜಿ ಕುಲಕರ್ಣಿ
ಕಲ್ಲೋಳಿ.

ಶಾಲಾಪತ್ರಿಕೆ.

ಪದ್ಯಂ.

ಪ್ರಿಯವಿದ್ಯಾಗುರುವರ್ಯರುನ್ನತಿಕೆಯಂ ಸಚ್ಛಿಕ್ಷಣೋತ್ಕರ್ಷಮುಂ ।
ಜಯಸುತ್ತಂ ಪ್ರತಿಮಾಸದಾದಿಗೊಲವಿಂದೀಪತ್ರಮಂ ಮುದ್ರಿಸಿ ॥
ನಯದಿಂದಿತ್ತಪೆವೋದುವರ್ಗಸುಗುಣಂ ತೋರಲ್ಕೆ ಕೈಕೊಂಬುದೈ ।
ಪಯಿಯಿಂದೋಷವತಿದ್ದವೇಳ್ವುದುಬುಧರ್ ಜ್ಞಾನಾಭಿವೃದ್ಧಿಪ್ರಿಯರ್॥೧॥

ಪುಸ್ತಕ ೨೯.] ಸಪ್ಟಂಬರು ೧೮೬೯ ಳ. [ಸಂಚಿಕೆ ೯

EDUCATIONAL INTELLIGENCE AND USEFUL NOTES.

ವಿದ್ಯಾ ಸುಧಾರಣಾ ಸಂಬಂಧದ ವೃತ್ತಾಂತಗಳು.

ಡಾಕ್ಟರ ಭಾಂಡಾರಕರವರು ಸೂಚಿಸಿದ ಎರಡನೇ ವಿಷಯವೇನಂದರೆ,—"ವಿದ್ಯಾರ್ಜನವು ಕೇವಲ ಹೊಟ್ಟೆ ಹೊರೆ ಕೊಳ್ಳುವದಕ್ಕಲ್ಲ, ಅದರಿಂದ ಬುದ್ಧಿಪ್ರಾಗಲ್ಭ್ಯ, ಧನ ಪಾಂಡಿತ್ಯ, ಸದಾಚರಣ, ಸತ್ಯನಿಷ್ಠೆ, ದೇಶಪ್ರೀತಿ, ಲೋಕಸೇವೆ ಮುಂತಾದ ಪರಿಣಾಮಗಳಾಗಲಿಕ್ಕೆ ಬೇಕು; ಅದರೆ ಅವು ಈಗ ಅಪರೂಪವಾಗಿ ಕಂಡುಬರುತ್ತವೆ." ಈ ಮಾತಿಗೆ ನಾವು ಪೂರ್ಣವಾಗಿ ಒಪ್ಪಿಕೊಳ್ಳದಿದ್ದರೂ ಬಹುತಾಂಶದಿಂದ ಒಪ್ಪಿಕೊಳ್ಳುತ್ತೇವೆ. ಅಪೇಕ್ಷಿಸಿದ ಫಲಗಳು ದೊರೆಯದಿರಲಿಕ್ಕೆ ಸದ್ಯಕ್ಕೆ ನಡೆಯುವ "ಪರೀಕ್ಷಾ ಪದ್ಧತಿಯೂ" "ಅಭ್ಯಾಸ ಕ್ರಮವೂ" ಕಾರಣವಾಗಿವೆಂದು ಹೇಳಲಿಕ್ಕೆ ಅಡ್ಡಿ ಇಲ್ಲ. ವಿದ್ಯಾರ್ಥಿಗಳು ಏನೇ ವರ್ಷಕ್ಕೆ ಕಾಲೇಜ ಹೋಗ ಹತ್ತಿದಂದಿನಿಂದ ಕಡೆತನಕ ವರ್ಷತ್ತಿನ ಕುದುರೆ ಯಂತೆ ಪರೀಕ್ಷೆಗಳೆಂಬ ಪಂಥದ ಓಟಕ್ಕಾಗಿ ಬಂದೇ ಸವನ

* ಪುಟ ೧೦೧ ನೋಡು.

ಮುಂದಕ್ಕೆ ಸಾಗಬೇಕಾಗುತ್ತದೆ. ಇದರ ಹೊರತು ಕ್ರಮವಿ
ಷ ವಿಷಯಗಳಲ್ಲಿ ಕೆಲವು ವಿದ್ಯಾರ್ಥಿಗಳಿಗೆ ಸೇರುವಂಥವು
ಕೆಲವು ಸೇರದಂಥವು ಇದ್ದಾಗ್ಯೂ ಅವರು ಹಾಗೂ ಹೀಗೂ
ಅವೆಲ್ಲವುಗಳನ್ನು ಕಲಿತು ಮೇಲಿನ ವರ್ಗಕ್ಕೆ ಹೋಗ
ಬೇಕಾಗುತ್ತದೆ.

ಪರೀಕ್ಷಾಪದ್ಧತಿಯು.

ಪ್ರತಿಯೊಂದು ವಿಷಯದಲ್ಲಿ ವಿದ್ಯಾರ್ಥಿಗೆ ಎಷ್ಟೆಷ್ಟು ಗು
ಣಗಳು ದೊರೆದವು ಎಂಬುದನ್ನು ನೋಡಿ, ಒಟ್ಟು ನೂರಕ್ಕೆ
ಷಷ್ಟಿ ಗುಣಗಳನ್ನುದೊರಿಕಿಸಿದ ವಿದ್ಯಾರ್ಥಿಗಳ ಮಾನದಿಂದ
ಮಾಸ್ತರನ ಯೋಗ್ಯತೆಯನ್ನು ಕಟ್ಟುವರು. ಈ ತರದ
ಪರೀಕ್ಷಾ ಪದ್ಧತಿಯಿಂದ ಶಾಲೆಯ ಸಾಮಾನ್ಯ ವ್ಯವಸ್ಥೆ,
ಅದರಿಂದ ವಿದ್ಯಾರ್ಥಿಗಳ ಬುದ್ಧಿ, ನಡೆನುಡಿಗಳ ಮೇಲೆ
ಆಗುವ ಪರಿಣಾಮ, ಶಿಕ್ಷಣ ಪದ್ಧತಿ, ಶಾಲೆಯ ಸಂಬಂಧ
ದಿಂದ ಮಾಸ್ತರನು ತೆಗೆದುಕೊಳ್ಳತಕ್ಕ ಶ್ರಮ ಇವು ತಿಳಿಯು
ವದಿಲ್ಲ. ಒಂದೆರಡು ವಿಷಯಗಳಲ್ಲಿ ಉತ್ತಮಶ್ರೀತಿಯಿಂದ
ಪಾಸಾದ ವಿದ್ಯಾರ್ಥಿಯು ಬಂದು ಮೇಳೆ ಉಳಿದ ವಿಷಯಗ
ಳಲ್ಲಿ ನಾಪಾಸಾದರೆ ಆ ಮಾಸ್ತರನಿಗೆ ಕೊರತೆ ಬರುವದು.
ಆವುದರಿಂದ ಮಾಸ್ತರ ಜನರು ಪ್ರತಿಯೊಂದು ವಿಷಯದಲ್ಲಿ
ವಿದ್ಯಾರ್ಥಿಗಳು ೨ ಗುಣಗಳನ್ನು ಪಡೆದರೆ ತಮ್ಮ ಕೆಲಸವಾ
ಯಿತೆಂದು ಎಣಿಸಿ, ಅಷ್ಟೇಸಾಮರ್ಥ್ಯವನ್ನು ವಿದ್ಯಾರ್ಥಿಗ
ಳಲ್ಲಿ ಹುಟ್ಟಿಸಲಿಕ್ಕೆ ಪ್ರಯತ್ನ ಮಾಡುವರಲ್ಲದೆ, ವಿದ್ಯಾರ್ಥಿ
ಗಳ ಸ್ವಾಭಾವಿಕ ಚುರುಕುತನಕ್ಕೆ ಉತ್ತೇಜನ ಕೊಡುವ
ಪ್ರಯತ್ನ ಮಾಡುವದಿಲ್ಲ. ಇದರಿಂದ ವಿದ್ಯಾರ್ಥಿಗಳ ಬುದ್ಧಿ
ಗೆ ಸಾಮಾನ್ಯ ಸಂಸ್ಕಾರವಾಗುವದಿಷ್ಟೇ ಹೊರತು ವಿಶೇಷ
ಸಂಸ್ಕಾರವಾಗುವದಿಲ್ಲ. ವಿದ್ಯಾರ್ಥಿಗಳಾದರೂ ಯಾವದೊಂ

ು ವಿಷಯದಲ್ಲಿ ಪ್ರಾವೀಣ್ಯವನ್ನು ಪಡೆಯಲಿಕ್ಕೆ ಬಯಸುವ
ಿಲ್ಲ. ೧೦೦ಕ್ಕೆ ೩೨ ರಂತೆ ಗುಣಗಳನ್ನು ಪಡೆದರೆ ಸಾಕೆಂದು
ಗ್ರಹಿಸಿ, ಅಷ್ಟಕ್ಕಷ್ಟೇ ಪ್ರತಿಯೊಂದು ವಿಷಯದಲ್ಲಿ ತಮ್ಮ
ಭ್ಯಾಸ ಕ್ರಮವನ್ನು ಇಡುವದಕ್ಕೆ ಹವಣಿಸುವರು. ಇದ
ಂದ ಅವರು ಯಾವದೊಂದು ವಿಷಯದಲ್ಲಿಯಾದರೂ ಪ್ರಾ
ವೀಣ್ಯವನ್ನು ಪಡೆಯಲಾರರೆಂಬ ಮಾತು ಸಹಜವಾದದ್ದು.
ಭ್ಯಾಸ ಕ್ರಮದ ನಾಲ್ಕೈದು ಮುಖ್ಯ ವಿಷಯಗಳೊಳಗಿನ
ಕನಿಷ್ಠಪಕ್ಷಕ್ಕೆ ಮೂರು ವಿಷಯಗಳಲ್ಲಿ ಪಾಸಾದರೆ ಮಾತ್ರ
ಿೀಲಿನ ವರ್ಗಕ್ಕೆ ಹಾಕಬೇಕೆಂಬ ನಿಯಮವಿರುತ್ತದೆ. ಈ
ಿಯಮವಾದರೂ ಪೂರ್ಣವಾಗಿ ನಿರ್ದೋಷವಾದದ್ದೆಂದು ಅ
ಿಸಿಕೊಳ್ಳುವದಿಲ್ಲ. ಯಾಕೆಂದರೆ ವಿದ್ಯಾರ್ಥಿಗಳು ಸಾಮ್ಯ
ಸ್ಮಿ ತನುಗೆ ಚನ್ನಾಗಿ ಬರುತ್ತಿರುವ ವಿಷಯಗಳಲ್ಲಿಯೇ
ಾಪಾಸಾಗುವ ಸಂಭವ ಉಂಟು. ಇಂಥ ಹುಡುಗರನ್ನು
ರೀಕ್ಷೆಯ ಪರಿಣಾಮದ ಮೇಲಿಂದ ಮೇಲಿನ ವರ್ಗಕ್ಕೆ
ಾಕದಿದ್ದರೆ, ಅವರ ಉಲ್ಲಾಸವು ಕುಗ್ಗುವದು, ತಿರು
ಬುದು ವರ್ಷ ಕಲಿತದ್ದೇ ಕಲಿಯಬೇಕಾಯಿತೆಂದೆಣಿಸಿ,
ವರು ಲಕ್ಷಪೂರ್ವಕವಾಗಿ ಅಭ್ಯಾಸ ಮಾಡುವದಿಲ್ಲ. ಹೀ
ಾಗಿ ಅವರ ಎಳೆ ಪ್ರಾಯದ ಒಂದು ವರ್ಷವು ನಿರುತ್ಸಾಹ
ಂದ ಕಳೆದು ಹೋಗುವದು. ಈ ಕಾಲಾವಧಿಯಲ್ಲಿ ಅವ
ಿಗೆ ತಕ್ಕಷ್ಟು ಪ್ರಯೋಜನವಾಗಲಾರದು. ಆದದ್ದರಿಂದ
ೀವಲ ಪರೀಕ್ಷೆಯ ಪರಿಣಾಮದ ಮೇಲಿಂದಲೇ ಮೇಲಿನ
ರ್ಗಕ್ಕೆ ಹಾಕುವದಕ್ಕಿಂತ ಇಂಥ ಪ್ರಸಂಗಗಳಲ್ಲಿ ಮಾಸ್ತ
ಿನ ಸಿಫಾರಸನ್ನು ತೆಗೆದುಕೊಳ್ಳುವದು ಯುಕ್ತವು. ಈ
ಿಲಸುವಲ್ಲಿ ವಿದ್ಯಾರ್ಥಿಯ ಅಭ್ಯಾಸ, ಚುರುಕುತನ, ನೀತಿಯ
ಡವಳಿ, ಬುದ್ಧಿ, ಕಾಲೆಯ ತಿದ್ದುವಿಕೆ ಇವುಗಳನ್ನು

ಕುರಿತು ಸಹ ವಿಚಾರ ಮಾಡತಕ್ಕದ್ದು. ಹೀಗಾದ ಪಕ್ಷಕ್ಕೆ ವಿದ್ಯಾರ್ಥಿಗಳು ನೀತಿಯಿಂದ ನಡೆಯಲಿಕ್ಕೂ ಸತ್ಯವನ್ನು ಹಿಂಬಾಲಿಸಲಿಕ್ಕೂ ತಾವೇ ಮುಂದಾಗುವರು.

ಇಂಗ್ಲಂಡದಲ್ಲಿ ಇನಸ್ಪೆಕ್ಟರರು ಇಲ್ಲಿಯಂತೆ ಇಡಿ ಶಾಲೆಯ ಪರೀಕ್ಷೆಯನ್ನು ಮೊದಲಿನಿಂದ ಕಡೆತನಕ ಎಲ್ಲ ವಿಷಯಗಳಲ್ಲಿ ತಾವೇ ತೆಗೆದುಕೊಳ್ಳುವದಿಲ್ಲ. ಮಾಸ್ತರರಿಗೆ ತಿಳಿಸಿದೇ ಮೇಲಿಂದ ಮೇಲೆ ಶಾಲೆಗೆ ಹೋಗಿ, ಅಲ್ಲಿಯ ವ್ಯವಸ್ಥೆ ಹ್ಯಾಗಿದೆ? ಅಭ್ಯಾಸ ಹ್ಯಾಗೆ ನಡೆದದೆ? ಕೆಳಗಿನ ವರ್ಗಗಳಿಗೆ ಬಡವೆ ಪಾಠಗಳನ್ನು ಆದಷ್ಟು ಹೆಚ್ಚು ಹೇಳುವರೋ ಇಲ್ಲವೋ? ಎಂಬ ಸಂಗತಿಗಳನ್ನು ನೋಡುವರು. ಶಿಕ್ಷಕ ಜನರು ಕಲಿಸುವ ಪಾಠಗಳ ಟಿಪ್ಪಣಿಗಳನ್ನೂ ವಿದ್ಯಾರ್ಥಿಗಳಿಂದ ಬರೆಸಿವ ಟಿಪ್ಪಣಿಗಳನ್ನೂ ಪರೀಕ್ಷಿಸುವರು. ಮಾಸ್ತರನು ಕಲಿಸುತ್ತಿರುವಾಗ ವರ್ಗದಲ್ಲಿ ತುಸು ಹೊತ್ತು ಕೂತು, ಮಾಸ್ತರನ ಪೂರ್ವಸಿದ್ಧತೆ, ವಿದ್ಯಾರ್ಥಿಗಳಿಗೆ ವಿಷಯಜ್ಞಾನ ಮಾಡಿ ಕೊಡುವ ಅವನ ಚಾತುರ್ಯ ಮುಂತಾದವುಗಳನ್ನು ನೋಡುವರು.

ಪರೀಕ್ಷೆಯ ಉದ್ದೇಶಗಳು ಮುಖ್ಯವಾಗಿ ಎರಡು ಇರುವವು:—(೧) ಮಾಸ್ತರನ ಕೆಲಸವನ್ನು ಪರೀಕ್ಷಿಸುವದು. (೨) ವಿದ್ಯಾರ್ಥಿಗಳು ಮೇಲಿನ ವರ್ಗಗಳಿಗೆ ತಕ್ಕವರಾಗಿರುವರೋ ಇಲ್ಲವೋ ಎಂಬುದನ್ನು ನೋಡಿ, ಅವರನ್ನು ಮೇಲಿನ ವರ್ಗಗಳಿಗೆ ಸೇರಿಸುವದು. ಮೊದಲನೇ ಉದ್ದೇಶವು ಶಾಲೆಯ ತಪಾಸಣೆಯಿಂದಲೂ ತಿಳಿಸದೇ ಹೋಗಿ ಶಾಲೆಗಳನ್ನು ನೋಡುವವರಿಂದಲೂ ಪೂರ್ಣವಾಗಿ ಸಫಲವಾಗುವದು. ಎರಡನೇ ಉದ್ದೇಶವು ಅವಸರದ ಪರೀಕ್ಷೆಯಿಂದ ಕಡೆಗಾಣುವದಕ್ಕಿಂತ ಇತಿ ವರ್ಷದವರೆಗೆ ಕಲಿಸಿವ ಮಾಸ್ತರನಿಂದ

ರಿಚ್ಚು ಬಳ್ಳೆ ರೀತಿಯಿಂದ ಕಡೆಗಾಣುವದೆಂದು ಹೇಳಲಿಕ್ಕೆ ನಿನು ಸಂದೇಹವಿಲ್ಲ. ಆದ್ದರಿಂದ ವಿದ್ಯಾರ್ಥಿಯು ವರ್ಷದ ಅ ಭ್ಯಾಸ, ಹಾಜರಿ, ನಡತೆ ಮುಂತಾದವುಗಳನ್ನು ನೋಡಿ ಸೀಲಿನ ವರ್ಗಕ್ಕೆ ಹಾಕುವ ಅಧಿಕಾರವನ್ನು ಮಾಸ್ತರನಿಗೆ ಕೊಡಲಿಕ್ಕೆ ಏನೂ ಅಡ್ಡಿ ತೋರುವದಿಲ್ಲ. ನಾಪಾಸಾದ ವಿ ದ್ಯಾರ್ಥಿಗಳನ್ನು ನಾಪಾಸಾದ ವಿಷಯಗಳ ಪೂರ್ತಿ ಅದೇ ವರ್ಗದಲ್ಲಿಟ್ಟು ಉಳಿದ ವಿಷಯಗಳನ್ನು ಹಚ್ಚಿನ ವರ್ಗದ ಕೂಡ ಕಲಿಸುವಂತೆ ಮಾಡುವದು ಸಯುಕ್ತಿಕವಾಗಿ ನಮ ಗೆ ತೋರುತ್ತದೆ.

ಈಗಿನ ಪರೀಕ್ಷೆಗಳಿಂದ ವಿದ್ಯಾರ್ಥಿಯು ನೇಮಕವಾದ ಪ್ರ ತಿಯೊಂದು ವಿಷಯದಲ್ಲಿ ತಕ್ಕಷ್ಟು ಗುಣಗಳನ್ನು ಪಡೆಯು ವನೋ ಇಲ್ಲವೋ ಎಂಬುದನ್ನು ನೋಡುವದಿಷ್ಟೇ ಇರುವ ದರಿಂದ, ವಿದ್ಯಾರ್ಥಿಗಳೂ ಮಾಸ್ತರಜನರೂ ವಿಷಯ ಜ್ಞಾನದ ಕಡೆಗೆ ದುರ್ಲಕ್ಷ ಮಾಡಿ ಕೆ ಗುಣಗಳನ್ನು ಪಡೆದರೆ ಸಾ ಕೆಂದು ಗ್ರಹಿಸುವರು. ಇದರಿಂದ ಪ್ರತಿಯೊಂದು ವಿಷಯದ ಸಂಬಂಧವಾಗಿ ಸರಕಾರದವರು ನೇಮಕಮಾಡಿದ ಕ್ರಮಿಕ ಪುಸ್ತಕಗಳನ್ನು ಸಾಧ್ಯಂತವಾಗಿ ಕಲಿಸದೆ, ಅಷ್ಟಕಷ್ಟೇ ಕಲಿಸಿ, ಆ ಪುಸ್ತಕಗಳ ಆಧಾರದಿಂದ ಬರೆದಂಥ ಖಾಸಗೀ ಸೋಟಿ ಪುಸ್ತಕಗಳ ಶಬ್ದಾರ್ಥ ಭಾವಾರ್ಥ ಪುಸ್ತಕಗಳ ಸಹಾಯದಿಂದ ಮಾಸ್ತರ ಜನರು ತಮ್ಮ ವಿದ್ಯಾರ್ಜನವನ್ನು ಸಾಗಿ ಸುವರು. ಇದರಿಂದ ಅಯೋಗ್ಯ ಪುಸ್ತಕಗಳಿಗೆ ಉತ್ತೇಜನ ವೂ ದೊರೆಯುವದು. ಇವುಗಳಿಂದ ಪ್ರಶ್ನೆಕ್ಕೆ ಉತ್ತರ ಕೊಡಲಿ ಕ್ಕೆ ಮಾತ್ರ ಅನುವಾಗುವದೇ ಹೊರತು ವಿಷಯಜ್ಞಾನವು ಲೇಶವಾದರೂ ಆಗುವದಿಲ್ಲ. ವಿದ್ಯಾರ್ಥಿಗಳು ತಾವು ಮಾಡ

ತಕ್ಕಂಥ ಕೆಲಸವನ್ನು ಮಾಡದೆ, ಸ್ಮರಣಶಕ್ತಿಯನ್ನು ಅವ
ಲಂಬಿಸುವ ಹಾನಿಕರವಾದ ಪದ್ಧತಿಗೆ ಆಶ್ರಯ ಕೊಡುತ್ತಾರ
ಇಷ್ಟೇ ಅಲ್ಲ, ವಿಚಾರದಿಂದ ಯಾವದಾದರೊಂದು ಸಂಗತಿ
ಯನ್ನು ಪೂರ್ಣವಾಗಿ ತಿಳುಕೊಳ್ಳುವ ಗೌರವದ ಪದ್ಧತಿಗ
ಎರವಾಗುತ್ತಾರೆ.

ಅಭ್ಯಾಸಕ್ರಮ.

ಸವ್ಯದ ಕ್ರಮಿಕ ವಿಷಯಗಳಲ್ಲಿಯಾದರೂ ತಕ್ಕ ಪರಿವರ್ತ
ನು ಆಗುವದು ನಮಗೆ ಸಯುಕ್ತಿಕ ಕಾಣಿಸುತ್ತದೆ. ಇಯು
ತ್ತಿಗೆ ನೇಮಿಸಿದ ವಿಷಯಗಳನ್ನೆಲ್ಲ ಕಲಿಯಬೇಕೆಂಬ ಕಟ್ಟ
ಳೆ ಇರುವದರಿಂದ ಯಾವದೊಂದು ವಿಷಯವು ವಿದ್ಯಾರ್ಥಿಗ
ಬೇಸರ ಹುಟ್ಟಿಸುವಂಥಾವಿದ್ದರೂ ಅವನು ಜೀವ ಅಟ್ಟಿಸಿ
ಕೊಂಡು ಅವನ್ನು ಕಲಿಯಬೇಕಾಗುತ್ತದೆ. ಇದರಿಂದ ಆ
ವಿಷಯಜ್ಞಾನವು ಚನ್ನಾಗಿ ಆಗುವದಿಲ್ಲಿಷ್ಟೇ ಅಲ್ಲ ಆ ವಿದ್ಯಾ
ರ್ಥಿಗೆ ತನ್ನ ಪ್ರೀತಿಯ ವಿಷಯಗಳನ್ನು ಕಲಿಯಲಿಕ್ಕೆ ತ
ಕ್ಕಷ್ಟು ವೇಳೆಯಾದರೂ ದೊರೆಯುವದಿಲ್ಲ, ಹೀಗಾಗಿ ಯಾ
ವ ವಿಷಯದಲ್ಲಿಯಾದರೂ ಅವನು ಪ್ರಾವೀಣ್ಯವನ್ನು ಪಡ
ಯುವದಿಲ್ಲ. ಆದದ್ದರಿಂದ ಪರೀಕ್ಷೆಯ ವಿಷಯಗಳಲ್ಲಿ ಆವ
ಶ್ಯಕ ವಿಷಯಗಳೂ, ಐಚ್ಛಿಕ ವಿಷಯಗಳೂ ಎಂಬ ಎರ
ಡು ಭಾಗಗಳನ್ನು ಮಾಡತಕ್ಕದ್ದು. ವಿದ್ಯಾರ್ಥಿಗಳು ಆವಶ್ಯ
ಕ ವಿಷಯಗಳನ್ನೆಲ್ಲ ಕಲಿಯುವದಲ್ಲದೆ ಐಚ್ಛಿಕ ವಿಷಯಗಳ
ಲ್ಲಿ ತಮಗೆ ಇಷ್ಟವಾದ ವಿಷಯಗಳನ್ನು ಆರಿಸಿಕೊಂಡು ಅ
ಭ್ಯಾಸ ಮಾಡಲಿಕ್ಕೆ ಅನುಕೂಲವಿರಬೇಕು. ಇದರಿಂದ ವಿ
ದ್ಯಾರ್ಥಿಗಳಿಗೆ ಸಹಜವಾಗಿಯೇ ವಿಷಯಜ್ಞಾನವು ಚನ್ನಾಗಿ
ಆಗುವದು.

ಲೇಖನ. ವಾಚನ. ಗಣಿತ, ಆರೋಗ್ಯಶಾಸ್ತ್ರ ಈ ನಾ

ಲ್ಲನ್ನೂ ಅವಶ್ಯಕ ವಿಷಯಗಳನ್ನೆನ್ನು ಮಾಡಬಹುದು. ವ್ಯಾಕರಣ, ಇತಿಹಾಸ, ಭೂಗೋಲ, ಹೆಚ್ಚಿನಗಣಿತ (ಅಂದರೆ ಅಪೂರ್ಣಾಂಕ, ಬೀಜಗಣಿತ, ಸಿದ್ಧಾಂತ), ಕೃಷಿಕರ್ಮ, ರಸಾಯನಶಾಸ್ತ್ರ, ಚಿತ್ರಕಲೆ, ಶಾರೀರಿಕಶಿಕ್ಷಣ (ಅಂದರೆ ಬಡಿಗೆ ಕವಾಯ್ತುಗಳು) ಇವುಗಳನ್ನು ಐಚ್ಛಿಕ ವಿಷಯಗಳಾಗಿ ಮಾಡಬಹುದು. ಈ ತರದ ವ್ಯವಸ್ಥೆಯು ಬಿ. ಎ. ಎಮ್. ಎ. ಪರೀಕ್ಷೆಗಳ ಪೂರ್ತಿ ಇರುತ್ತದೆ. ಆದರೆ ಈ ವಿದ್ಯಾರ್ಥಿಗಳಿಗೆ ಐಚ್ಛಿಕ ವಿಷಯಗಳ ವ್ಯಾಸಂಗ ಮಾಡಲಿಕ್ಕೆ ತಕ್ಕಷ್ಟು ಕಾಲವಾತ್ರ ದೊರೆಯುವದಿಲ್ಲ, ಆದದ್ದರಿಂದ ಇಂಥ ವ್ಯವಸ್ಥೆಯು ಕನಿಷ್ಠ ಪ್ರತಿಯು ಶಿಕ್ಷಣದಿಂದ ಮೇಲ್ತರದ ಶಿಕ್ಷಣದ ವರೆಗೆ ಇದ್ದರೆ ಎಲ್ಲ ವಿದ್ಯಾರ್ಥಿಗಳಿಗೂ ಐಚ್ಛಿಕ ವಿಷಯಗಳಲ್ಲಿ ತಮಗೆ ಬೇಕಾದ ವಿಷಯಗಳನ್ನು ಆರಿಸಿಕೊಂಡು ಅಭ್ಯಾಸಮಾಡಲಿಕ್ಕೆ ತಕ್ಕಷ್ಟು ಕಾಲದೊರೆದು, ಅವರು ಸಹಜವಾಗಿಯೇ ಆ ವಿಷಯಗಳಲ್ಲಿ ಪ್ರವೀಣರಾಗುವರು.

ಮೇಲೆ ಸೂಚಿಸಿದ ತಿದ್ದುಪಾಟುಗಳನ್ನು ಮಾಡಿ, ಕಾಲಾ ತಪಾಸಣೆಯನ್ನು ಮೇಲಿಂದಮೇಲೆ ಮಾಡುತ್ತ, ಕಾಲೆಯ ವ್ಯವಸ್ಥೆ, ವಿದ್ಯಾರ್ಥಿಗಳ ನಡೆನುಡಿ, ಮಾಸ್ತರರು ಕಲಿಸುವ ಪದ್ಧತಿ ಇವುಗಳಿಗೆ ವಿಶೇಷ ಲಕ್ಷವನ್ನು ಪೊರೈಸುತ್ತಾ, ಮಾಸ್ತರ ಜನರಿಗೆ ಸರಿಯಾದ ತಲಬು ಇನಾಮುಗಳನ್ನು ಕೊಡುತ್ತಾ ಪ್ರಾಥಮಿಕ ಶಿಕ್ಷಣವನ್ನು ನಾಗಿಸಿದರೆ, ಡಾಕ್ಟರ ಭಾಂಡಾರಕರವರು ಸೂಚಿಸಿದ ಮೇರೆಗೆ ಸುಧಾರಣೆಯಾಗಲಿಕ್ಕೆ ಏನೂ ಬಾಧೆ ತೋರುವದಿಲ್ಲ.

THE MORAL TRAINING OF CHILDREN.

ಮಕ್ಕಳ ನೀತಿ ಶಿಕ್ಷಣವು.

(೧೯೦ನೇ ಪುಟದಿಂದ ಮುಂದೆ ಸಾಗಿದ್ದು.)

ಬುದು ವೇಳೆ ಮಕ್ಕಳು ತಮ್ಮ ತಪ್ಪಿಗೆ ಶಿಕ್ಷೆಯಾಗಲಿಕ್ಕಿಲ್ಲವೆಂದು ಎಣಿಸಹತ್ತಿದರೆ ಅವರು ಹೆಚ್ಚು ಹೆಚ್ಚು ಅಪರಾಧ ಮಾಡಲಿಕ್ಕೆ ಯತ್ನಿಸುವರು. ಆದದ್ದರಿಂದ ತಪ್ಪು ಮಾಡಿದ ಕೂಡಲೆ, ಅವರಿಗೆ ಯೋಗ್ಯವಾದ ಶಿಕ್ಷೆಯನ್ನು ಕೊಡಬೇಕಲ್ಲದೆ ಇದ್ದೊಂದು ಸಾರೆ ಕ್ಷಮಿಸುವಾ, ಮತ್ತೊಮ್ಮೆ ತಪ್ಪು ಮಾಡಿದರೆ ಶಿಕ್ಷಿಸಲಿಕ್ಕೆ ಬಂದೀತೆಂದು ಗ್ರಹಿಸಿ ಅವರನ್ನು ಬಂಡಿಸದೆ ಬಿಡುವದು ಸರಿಯಲ್ಲ.

೨. ಹಗುರಾದ ಶಿಕ್ಷೆಯಿಂದ ಕೆಲಸವಾಗುವಂತಿದ್ದರೆ, ಉಗ್ರ ಶಿಕ್ಷೆಯನ್ನು ಕೊಡಬಾರದು. ಬರೆ ಕಣ್ಣಿಂಜಿಕೆಯಿಂದಾಗುವ ಕೆಲಸಕ್ಕೆ ಬಾಯಿ ಮಾಡಬಾರದು. ಬರೆ ನಾಲ್ಕು ಬಳ್ಳೆ ಮಾತುಗಳಿಂದಾಗುವ ಕೆಲಸಕ್ಕೆ ಕಟ್ಟಿ ಮಾತುಗಳನ್ನಾಡುವ ಅವಶ್ಯವಿಲ್ಲ. ಬಾಯಿ ಮಾತಿಗೆ ಮಕ್ಕಳು ಬಳಗಾಗುವವಿಲ್ಲೆಂದು ಮನಗಂಡ ಮೇಲೆ ಹೆಚ್ಚಿನ ಶಿಕ್ಷೆಗಳನ್ನು ಕೊಡುವದು ಸರಿಯಲ್ಲ. ಈ ಉಪಾಯಗಳಿಂದ ಮಕ್ಕಳು ಎಣಿಕೆಗೆ ಬರದಿದ್ದರೆ ಮಾತ್ರ ಉಗ್ರಶಿಕ್ಷೆಗಳನ್ನು ಕೊಡತಕ್ಕದ್ದು. ಮಕ್ಕಳ ಕೂಡ ಮಾತಾಡುವದನ್ನು ಕಟ್ಟಿ ಮಾಡುವದು, ಅವರನ್ನು ಆಟಿ ನೋಟುಗಳಿಗೆ ಕರಕೊಂಡು ಹೋಗದಿರುವದು, ಇನಾಮುಗಳನ್ನು ಕೊಡದಿರುವದು, ಇವೇ ಮೊದಲಾದ ಕೆಲವು ಹಗುರು ಶಿಕ್ಷೆಯ ಪ್ರಕಾರಗಳುಂಟು.

೩. ಶಿಕ್ಷೆಯು ಅಪರಾಧಕ್ಕೆ ಸರಿಯಾಗಿರತಕ್ಕದ್ದು. ಹುಡುಗನು ಚಂಡಿನಿಂದ ತನ್ನ ಅಣ್ಣ ತಮ್ಮಂದಿರನ್ನು ಅಥವಾ ಅಕ್ಕ

ತಂಗಿಯರನ್ನೂ ಹೊಡೆದರೆ, ಆ ಚಂಡನ್ನು ಕಸುಕೊಳ್ಳಬೇಕು. ಆಟದ ಬಡವೆಯನ್ನು ಅಜಾಗ್ರತೆಯಿಂದ ಕಳಕೊಂಡರೆ, ಅವನಿಗೆ ಮತ್ತೊಂದನ್ನು ಕೊಡಬಾರದು. ಅವನು ತನ್ನ ತಂಗಿಯ ಚಿತ್ರದ ಪುಸ್ತಕವನ್ನು ಹರಿದರೆ, ಅವನ ಪುಸ್ತಕವನ್ನು ಅವಳಿಗೆ ಕೊಡಿಸಬೇಕು. ಅವರು ಬುಬ್ಬರ ಕೂಡ ಬುಬ್ಬರು ಜಗಳಾಡಿದರೆ ಅವರನ್ನು ಅಗಲಿಸಿ ಬಿಡಬೇಕು.

೬. ಸುಳ್ಳು ಹೇಳಿಕೆಗಳನ್ನು ಮಕ್ಕಳಿಗೆ ಎಂದೂ ತೋರಿಸಬಾರದು. ಸುಳ್ಳು ಹೇಳುವದು ಎಲ್ಲರಿಗೂ ಸಾಧಾರಣವಾಗಿದೆ. ಇದಕ್ಕೆ ತಿಳಿಗೇಡಿ ತಾಯಿ ತಂದೆಗಳೇ ಕಾರಣವು.

ಮಕ್ಕಳು ತಪ್ಪಿಗೆ ಯೋಗ್ಯವಲ್ಲದಂಥ ಯಾವದೊಂದು ಪದಾರ್ಥವನ್ನು ಬೇಡಿದರೆ, ತಾಯಿ ತಂದೆಗಳು 'ಅದು ಕರಿಯುತ್ತದೆ' ಎಂದು ಹೇಳಿ ಅವನನ್ನು ಹೆದರಿಸುವರು. ಈ ಸುಳ್ಳು ಸುಳ್ಳಾದದ್ದೆಂದು ಮಕ್ಕಳು ಅನುಭವದಿಂದ ಸುಲಭವಾಗಿ ತಿಳುಕೊಳ್ಳುವರು. ಮುಂದೆ, ತಾಯಿ ತಂದೆಗಳು ದಿಟವಾದ ಸಂಗತಿಗಳನ್ನು ಹೇಳಿದರೂ ಅವರು ಅವನ್ನು ನಂಬುವದಿಲ್ಲವೇನೋ ಅಲ್ಲ ಅವರೂ ಸುಳ್ಳಾಡಬಹುದು. ಮಕ್ಕಳಿಗೆ ಕತ್ತಲೆಯ ಅಂಜಿಕೆಯನ್ನು ತೋರಿಸಬಾರದು. ಕತ್ತಲೆ ಬಿದ್ದ ಸ್ಥಳಗಳಲ್ಲಿ ಅವರು ಇರುವಾಗ, ಅವರೊಂದಿಗೆ ಉಲ್ಲಾಸವಿರಲೂ ಪ್ರೀತಿಯಿಂದಲೂ ವರ್ತಿಸುತ್ತಿರಬೇಕು ಎಷ್ಟೋ ತಿಳಿಗೇಡಿ ತಾಯಿಗಳು ಮಕ್ಕಳನ್ನು ಶಿಕ್ಷಿಸುವದಕ್ಕಾಗಿ ಕತ್ತಲಕೋಣೆಯಲ್ಲಿ ಅವರನ್ನು ನುಗಿಸಿ ಬಾಗಿಲು ಹಾಕುವರು. ಇದರಿಂದ ಮಕ್ಕಳು ಕತ್ತಲಕೋಣೆಯಲ್ಲಿ ಅಂಜುವದೂ ಸರಿಯೇ, ರಾತ್ರಿಯಲ್ಲಿ ನಡು ಅಂಜುವದು. ಕೈಯಲ್ಲಿ ದೀವಿಗೆಯನ್ನು ತೆಗೆದುಕೊಳ್ಳದೆ ಜನ್ಮದಲ್ಲಿ ಬಿಟ್ಟ ಕೋಣೆಯಲ್ಲಿ ಹೋಗುವದಿಲ್ಲ. ಈ ವಿಷಯ

ವಾಗಿ ಚೆನ್ನಾಗಿ ತಿದ್ದಲ್ಪಟ್ಟ ಮಕ್ಕಳು ಪಗಲು ಉಲ್ಲಾಸದಿಂ ದ ಅತ್ತಿತ್ತ ತಿರುಗಾಡುವಂತೆ ರಾತ್ರಿಯಲ್ಲಿಯೂ ನಿರ್ಭಯದಿಂದ ಬೇಕಾದ ಸ್ಥಳಕ್ಕೆ ಹೋಗುವರು.

ಮಕ್ಕಳಿಗೆ 'ಬಾವಾ ಮೈದೀತು' 'ದೆವ್ವು ಹಿಡುಕೊಳ್ಳುವದು' ಮುಂತಾದ ಸುಳ್ಳು ಹೆದರಿಕೆಯ ಮಾತುಗಳನ್ನಾಡಿ ಅವರನ್ನು ಅಂಜಿಸುವರು. ಇದರಿಂದ ಮುಂದೆ ಅವರಿಗೆ ಬಹಳ ಕೇಡುಂಟಾಗುವದು. ನಮ್ಮಲ್ಲಿಯ ಬಹು ಜನರು ದೆವ್ವು ಅಂದ ಕೂಡಲೇ ಹೆದರಿಕೊಳ್ಳುವರು. ಬಂದು ಮೇಳೆ ದೆವ್ವು ಎಂಬ ನುಡಿಯು ಭ್ರಾಂತಿ ಮೂಲಕವಾದದ್ದೆಂಬ ಸಂಗತಿಯು ಅವರಿಗೆ ಮನವರಿಕೆಯಾಗಿದ್ದರೂ, ಅವರು ಭಯಪಡುವರು. ಇದರ ಕಾರಣವೇನೆಂದರೆ:—ಅವರು ಚಿಕ್ಕವರಿರುವಾಗ ತಾಯಿ ತಂದೆಗಳು ಮೇಲಿಂದ ಮೇಲೆ, ದೆವ್ವು ಬಂತು, ಅದು ಕೋಣೆಯಲ್ಲಿ ಕೂತಿದೆ, ಈಗ ಹೊರಗೆ ಬರುವದು, ನಿನ್ನನ್ನು ಹಿಡುಕೊಂಡು ಹೋಗುವದು ಎಂದು ಹೇಳಿದ ಬೆದರಿಕೆಯ ನುಡಿಗಳು ಅವರ ಮನಸ್ಸಿನಲ್ಲಿ ಮನೆಮಾಡಿಕೊಂಡು ಕೂತಿರುತ್ತವೆ. ಅವರು ದೊಡ್ಡವರಾದ ಮೇಲೆ ಸಹ ಚಿಕ್ಕಂದಿನಲ್ಲಿ ಅವರ ಹೃದಯದಲ್ಲಿ ಬೇರೂರಿದ ದೆವ್ವಿನ ಸಂಬಂಧದ ಭಯವನ್ನು ಕಿತ್ತುಹಾಕುವದು ಅವರಿಂದ ಆಗುವದಿಲ್ಲ. ತಾಯಿ ತಂದೆಗಳು ಮಕ್ಕಳ ಕಿರಿ ಕಿರಿಯನ್ನು ತಪ್ಪಿಸಿಕೊಳ್ಳುವದಕ್ಕಾಗಿ ಈ ತರದ ಭಯಗಳನ್ನು ತೋರಿಸುವದು ಎಷ್ಟು ಮಾತ್ರವೂ ಸರಿಯಲ್ಲ. ಅವರಿಗೆ ಒಳ್ಳೇ ಮಾತುಗಳಿಂದ ತಿಳಿಸಿ ಹೇಳಿದರೆ ಅವರು ಸುಮ್ಮನಾಗಿ ತಮ್ಮ ಹಟವನ್ನು ಬಿಟ್ಟು ತಾಯಿ ತಂದೆಗಳು ಹೇಳಿದಂತೆ ಕೇಳುವರು.

ಆಳುಗಳು ಹುಡುಗರನ್ನು ಆಡಿಸುವಾಗ ಈ ಪ್ರಕಾರದ

ಸುಳ್ಳು ಮಾತುಗಳನ್ನು ಹೇಳಿ ಮಕ್ಕಳನ್ನು ಹೆದರಿಸುವರು ಇತ್ತ ತಾಯಿ ತಂದೆಗಳು ಲಕ್ಷ್ಯಗೊಟ್ಟು ಇಂಥ ಅಳು ಮಕ್ಕಳಿಗೆ ಬಳಿತಾಗಿ ಬೋಧಿಸಬೇಕು. ಈ ಹಾಳು ಹೆದರಿಕೆಗಳಿಂದ ಪ್ರಯೋಜನವಾಗುವದಕ್ಕೆ ಬದಲಾಗಿ ಕೆಲ ಹುಡುಗರಿಗೆ ಮುಟ್ಟು ಹಿಂಡಿದಷ್ಟೂ ಕೆಲವರು ಸತ್ತಷ್ಟೂ ಗೊತ್ತುಂಟು. ಪ್ರಾಣಘಾತದ ಸುದ್ದಿಗಳು ನಿಜವಿದ್ದಾಗ್ಯೂ ಮಕ್ಕಳಮುಂದೆ ಆಡಬಾರದು.

ಕನಸುಗಳು ಮಿದುಳಿನ ವಿಕಾರವಾಗಿರುತ್ತವೆ. ಅವುಗಳಿಂದ ಅಜೀರ್ಣಾಂಶದ ವಿಕಾರವು ಸೂಚಿಸಲ್ಪಡುತ್ತದೆ. ಅವುಗಳಿಗೆ ಜನರು ಸ್ವತಃ ಎಳ್ಳಷ್ಟಾದರೂ ಲಕ್ಷ ಕೊಡಬಾರದಿಷ್ಟೇ ಅಲ್ಲ, ಅವುಗಳ ನಿಜವಾದ ಸ್ವರೂಪವನ್ನು ಮಕ್ಕಳಿಗೂ ತಿಳಿಸಿ ಹೇಳಬೇಕು. ಹಲ್ಲಿಯು ನುಡಿಯೂ ಗೂಬೆಯು ಕೂಗೂ ಕಾಗೆಯ ಶಕುನವೂ ಅಪ್ರಿಯ ದರ್ಶನವೂ ಮುಂತಾದ ಸಂಗತಿಗಳಲ್ಲಿ ಎಷ್ಟು ಮಾತ್ರವು ತಥ್ಯಾಂಶವಿಲ್ಲ. ಮಕ್ಕಳಲ್ಲಿ ಮೂಢ ಶ್ರದ್ಧೆ ಹುಟ್ಟದಂತೆ ಎಚ್ಚರ ಪಡಬೇಕು. ಅವರಿಂದ ಅವರು ಮುಂದೆ ಸುಖದಿಂದ ಬಾಳುವರು.

೫. ಮಕ್ಕಳು ಕೈತಪ್ಪಿ ತಪ್ಪು ಮಾಡಿದರೆ, ಅವರನ್ನು ಶಿಕ್ಷಿಸಬಾರದು. ಹುಡುಗನು ಕೋಣೆಯಲ್ಲಿ ಆಡುತ್ತಿರುವಾಗ ಅವನ ಅಂಗಿಯ ಪದರು ಯಾತಕ್ಕಾದರೂ ಸಿಕ್ಕು, ಅದು ಹರಿದರೆ, ತಾಯಿಯು ಅಂಗಿ ಹರಿದದ್ದಕ್ಕೆ ಸಿಟ್ಟಾಗಿ ಆ ಒಡನೆ ಹುಡುಗನನ್ನು ಶಿಕ್ಷಿಸುವಳು. ಬಂದು ವೇಳೆ ಅವನು ಬೇಕಂತ ಆ ಅಂಗಿಯನ್ನು ಹೊಳೆಗೆ ಸಿಗಿಸಿ ಜಗ್ಗಿಯಾಡಿ ಹರಿಸಿದ್ದರೆ ಅವನು ಶಿಕ್ಷೆಗೆ ಪಾತ್ರನು. ಆದರೆ ಅಕಸ್ಮಿತವಾಗಿ ಹಂಬಲಿಸಿದಂಥ ಕೃತ್ಯಕ್ಕಾಗಿ ಅವನನ್ನು ಶಿಕ್ಷಿಸುವದು ಸರಿ

METHODS OF TEACHING.

ಕಲಿಸುವ ಪದ್ಧತಿಗಳು

ನಿ ಬ ಂ ಧ .

(೧೯೦೨ನೆಯ ಪುಟದಿಂದ ಮುಂದೆ ಸಾಗಿದ್ದು)

(೭) ಎಲ್ಲ ಸುಧಾರಿಸಿದ ಜನಾಂಗದವರು ಕೀಳಜಾತೀ ಜನ ಸಮುದಾಯಕ್ಕೆ ಶಿಕ್ಷಣವನ್ನೂ ಕೊಡುವದಕ್ಕಾಗಿ ತಮ್ಮ ಆದಾಯದೊಳಗಿಂದ ಬಹಳ ಹಣವನ್ನು ವೆಚ್ಚ ಮಾಡುತ್ತಾರೆ. ಅವರು ಈ ತಮ್ಮ ಕರ್ತವ್ಯವನ್ನು ಮಾಡುವದರಿಂದ ದೇಶದಲ್ಲಿ ಶಾಂತತೆಯೂ ಭದ್ರತೆಯೂ ಉಂಟಾಗುತ್ತದೆ. ಪ್ರಜಾ ಶಿಕ್ಷಣವನ್ನು ಕುರಿತು ಒಬ್ಬ ದೊಡ್ಡ ಲೇಖಕನು ಬೇಳುವದೇನೆಂದರೆ— "ನಮ್ಮನ್ನೂ ನಮ್ಮ ಆಸ್ತಿಯನ್ನೂ ಗಂಡಾಂತರದಿಂದ ಕಾಪಾಡುವದು ಸರಕಾರದವರ ಕರ್ತವ್ಯವಾಗಿದೆ. ಸಾಧಾರಣ ಜನರ ತಿಳಿಗೇಡಿತನವೇ ನಮಗೂ ನಮ್ಮ ಆಸ್ತಿಗೂ ಉಂಟಾಗುವ ಗಂಡಾಂತರದ ಮುಖ್ಯ ಕಾರಣವು. ಅದನರಿಂದ ಸಾಧಾರಣ ಜನರು ಅಜ್ಞಾನದಲ್ಲಿ ಇರದಂತೆ ಎಚ್ಚರಗೊಳ್ಳುವದು ಸರಕಾರದವರ ಕರ್ತವ್ಯವಾಗಿದೆ." ಸುಧಾರಿಸಿದ ದೇಶದ ಪಳ್ಳಿಗಳೊಳಗೆ ಸಹ ಶಾಲೆಗಳಿರುವವು. ಈ ಶಾಲೆಗಳಲ್ಲಿ ಓದೋಣ, ಬರಿಯೋಣ, ಗಣಿತ, ವ್ಯಾಕರಣ, ಭೂಗೋಲ ಮುಂತಾದ ವಿಷಯಗಳನ್ನು ಕಲಿಸುತ್ತಾರೆ. ಎಷ್ಟೋ ಶಾಲೆಗಳು ಪ್ರಾಥಮಿಕ ಶಿಕ್ಷಣದ ಶಾಲೆಗಳಿದ್ದಾಗ್ಯೂ ಅವುಗಳಲ್ಲಿ ಬೇರೆ ವಿಷಯಗಳನ್ನು ಸಹ ಕಲಿಸುತ್ತಾರೆ. ಜರ್ಮನಿ, ಫ್ರಾನ್ಸ್‌ದೇಶಗಳಲ್ಲಿ ಮುಖ್ಯವಾಗಿ ಸರಕಾರದವರು ಪ್ರಾಥಮಿಕ ಶಿಕ್ಷಣವನ್ನು ಉಚಿತವಾಗಿ ಕೊಡಬೇಕೆಂದೂ, ತಾಯಿ ತಂದೆಗಳು ತಮ್ಮ ಮಕ್ಕಳನ್ನು ಶಾಲೆಗೆ ಕಳಿಸಬೇಕೆಂದೂ, ಕಳಿಸದಿದ್ದರೆ ಅವರಿಗೆ ದಂಡನೆ ವಿಧಿಸಬೇಕೆಂದೂ ನಿಯಮವನ್ನು ಮಾಡಿದ್ದಾರೆ.

ಮೇಲ್ತರದ ಶಾಲೆಗಳೆಂದರೆ ಹೈಸ್ಕೂಲ ಕಾಲೆಜಗಳು. ಅವುಗಳಲ್ಲಿ ಪ್ರಾಚೀನ ಅರ್ವಾಚೀನ ಭಾಷೆ, ಗಣಿತ, ಶಾಸ್ತ್ರ, ಇತಿಹಾಸ ಮುಂತಾದವುಗಳನ್ನು ಕಲಿಸುತ್ತಾರೆ. ಈ ಶಾಲೆಗಳಲ್ಲಿ ಯುನಿವ್ಹರ್ಸಿಟಿ ಪರಿಕ್ಷೆಗೆ ಹೋಗುವದಕ್ಕೂ ವ್ಯಾಪಾರ ಮಾಡುವದಕ್ಕೂ ಕುಶಲರಾಗುವಂತೆ ವಿದ್ಯಾರ್ಥಿಗಳಿಗೆ ಶಿಕ್ಷೆ ಣವನ್ನು ಕೊಡುತ್ತಾರೆ. ಇತ್ತೀಚ್ಚೆ ಜನರು ಸ್ತ್ರೀಶಿಕ್ಷಣೆಯ ಕಡೆಗೆ ಬಹಳ ಲಕ್ಷ ಕೊಡಹತ್ತಿದ್ದಾರೆ. ಸುಧಾರಣೆಯಾಗದಂಥ ದೇಶಗಳಲ್ಲೆಲ್ಲ ಹೆಂಗಸರು ಮನೆಯಲ್ಲಿ ತೊತ್ತುಗಳಂತೆ ಇರುವರು; ಆದರೆ ಯಾವ ಯಾವ ದೇಶಗಳಲ್ಲಿ ವಿದ್ಯೆಯ ಪ್ರಚಾರವಾಗಿರುವದೋ ಆಯಾ ದೇಶದೊಳಗಿನ ವಿವೇಕವುಳ್ಳ ಹೆಂಗಸರು ತಮ್ಮ ತಮ್ಮ ಗಂಡನ ಸುಖ ದುಃಖಗಳಲ್ಲಿಯೂ ದೈವುಳ್ಳತನ ಬಡತನಗಳಲ್ಲಿಯೂ ಪಾಲುಗಾರರಾತಿಯರಾಗಿರುವರು. ವಿವೇಕವಿಲ್ಲದ ಹೆಂಡತಿಯು ವಿವೇಕದ ಗಂಡಸಿಗೆ ತಕ್ಕ ಪಾಲುಗಾರತಿಯಲ್ಲ; ಮತ್ತು ಅವಳು ಅಜ್ಞಾನಿಯಾಗಿದ್ದರೆ ತನ್ನ ಮಕ್ಕಳಿಗೆ ಯೋಗ್ಯ ಶಿಕ್ಷಣೆಯನ್ನು ಕೊಡಲಾರಳು. ಹಿಂದುಸ್ಥಾನದಲ್ಲಿ ಸಹ ಇತ್ತೀಚ್ಚೆ ಸ್ತ್ರೀ ಶಿಕ್ಷಣೆಯ ಬೆಳವಣಿಗೆಯು ಬಹಳೇ ಆಗಿರುತ್ತದೆ. ಪುರ್ಕರ ಆಳಿಕೆಯಿಂದುಂಟಾದ ಕೆಟ್ಟ ಪರಿಣಾಮುಗಳಿಂದಲೇ ಈ ದೇಶದಲ್ಲಿ ಸ್ತ್ರೀ ಶಿಕ್ಷಣೆಯು ಅಭಿವೃದ್ಧಿಯು ಇನ್ನೂವರೆಗೆ ಎಷ್ಟು ಆಗಬೇಕೋ ಅಷ್ಟು ಆಗಿಲ್ಲ.

(೫) ವಿದ್ಯಾರ್ಥಿಗಳ ಬುದ್ಧಿಸಾಮರ್ಥ್ಯಗಳನ್ನು ಪೂರ್ಣ ಸ್ಥಿತಿಗೆ ತರುವದಕ್ಕೆ ಅಧ್ಯಾಪಕನಲ್ಲಿ ಬಹು ಘನವಾದ ಯೋಗ್ಯತೆಗಳಿರಬೇಕು. ಅವನು ಕೈಕೊಂಡಂಥ ಶಿಕ್ಷಣೆಯನ್ನು ಕೊಡುವದಕ್ಕೆ ಮುಂಚಿತವಾಗಿಯೇ ತನ್ನ ವಿದ್ಯಾರ್ಥಿಗಳ ಸ್ವಭಾವಗಳನ್ನು ಅರಿತುಕೊಳ್ಳುವದು ಅವಶ್ಯವಾದದ್ದು. ಯಾಕಂದರೆ ಅವರ ಸ್ವಭಾವಗಳನ್ನು ತಿಳಿದ ಮಟ್ಟಿಗೆ

ಮಾತ್ರ ಅಧ್ಯಾಪಕನು ಶಿಕ್ಷಣೆಯನ್ನೂ ಕೂಡಬಹುದು. ಒಬ್ಬ ದೊಡ್ಡ ಲೇಖಕನು ಹೇಳುವದೇನೆಂದರೆ—"ಉತ್ತಮ ಶಿಕ್ಷಕನು ವಿದ್ಯಾರ್ಥಿಗಳ ಸ್ವಭಾವಗಳನ್ನು ಚನ್ನಾಗಿ ತಿಳುಕೊಂಡು, ಅವುಗಳಿಗನುಸಾರವಾಗಿ ಅವರಿಗೆ ಶಿಕ್ಷಣೆಯನ್ನು ಕೊಟ್ಟು ತನ್ನ ಮನಸ್ಸಿಗೆ ಇಳಿಯುವಂತೆ ಅವರನ್ನು ಸುಧಾರಿಸುವನು. ಆದರೆ ಅವನು ವಿದ್ಯಾರ್ಥಿಗಳ ಸ್ವಭಾವಗಳನ್ನು ತಿಳುಕೊಳ್ಳದೆ ಅವುಗಳ ವಿರುದ್ಧವಾಗಿ ಶಿಕ್ಷಣೆಯನ್ನು ಕೊಟ್ಟರೆ ಅವನು ಕಲಿಸಿದ್ದೆಲ್ಲ ನೀರೊಳಗೆ ಹೋಮ ಮಾಡಿದ ಹಾಗೆ ಆಗುವದು. ಮನುಷ್ಯನ ಜೀವ ಶರೀರಗಳು ನಿಕಟವಾಗಿ ಹೊಂದಿಕೊಂಡಿರುತ್ತವೆಂಬದನ್ನು ಅವನು ಬಲ್ಲನು. ಆದರೆ ಜೀವ ಆತ್ಮವು ಆಜನ್ಮ ಯಾವಾಗಲೂ ಬಂದೇ ಇದ್ದರೂ ಅದು ಶರೀರವನ್ನೇ ಅವಲಂಬಿಸಿರುವದು. ಆದದರಿಂದ ಜೀವಾತ್ಮವು ಚಿಕ್ಕಂದಿನಲ್ಲಿ ದುರ್ಬಲವಾಗಿಯೂ ಪ್ರಾಯದಲ್ಲಿ ಬಲವುಳ್ಳದ್ದಾಗಿಯೂ ಮುಪ್ಪಿನಲ್ಲಿ ಕ್ಷೀಣವಾಗಿಯೂ ಇರುವದು. ಈ ಮೇರೆಗೆ ಶರೀರವು ಮನಸಿನ ಶಕ್ತಿಗಳನ್ನೆಲ್ಲ ಮಟ್ಟು ಪಡಿಸುತ್ತದೆ. ಶಿಕ್ಷಕನು ತನ್ನ ವಿದ್ಯಾರ್ಥಿಗಳ ಬುದ್ಧಿ ಸಾಮರ್ಥ್ಯಗಳನ್ನು ಬೆಳಿಸಲಿಕ್ಕೆ ಕೈಕೊಂಡಂಥ ವಿಷಯಗಳಲ್ಲಿ ಮೇಲಾದವನಾಗಿರಬೇಕು. ಭಾಷಾ ವಿಷಯಗಳನ್ನು ಕಲಿಸುವಂಥ ಗುರುವಿಗೆ ಬರಿಯ ಓದ ಬರಹ ಕಲಿಸಲಿಕ್ಕೆ ಬಂದರೆ ಸಾಲದು, ತನ್ನ ವಿದ್ಯಾರ್ಥಿಗಳಿಗೆ ಗಡಬಡು ಪಾತಗಳಲ್ಲಿ ಬರುವಂಥ ಸಂಶಯವನ್ನು ನಿವಾರಣ ಮಾಡುವಷ್ಟು ಸಂಪೂರ್ಣ ಜ್ಞಾನವು ಅವನಲ್ಲಿ ಇರತಕ್ಕದ್ದು, ಆದರೆ ಬಹುತರವಾಗಿ ಒಬ್ಬೊಬ್ಬನು ಒಂದೊಂದೇ ವಿಷಯದಲ್ಲಿ ಮಾತ್ರ ನಿಪುಣನಾಗಿರುವದರಿಂದ ಎಷ್ಟೋ ವಿದ್ಯಾಲಯಗಳಲ್ಲಿ ಬೇರೆ ಬೇರೆ ವಿಷಯಗಳನ್ನು ಕಲಿಸುವದಕ್ಕಾಗಿ ಬೇರೆ ಬೇರೆ ಗುರುಗಳಿರು

ತ್ತಾರೆ. ಶಿಕ್ಷಕನು ತನ್ನ ವಿದ್ಯಾರ್ಥಿಗಳ ಮೂನ್ಯತೆಯನ್ನೂ ಮೆಚ್ಚಿಕೆಯನ್ನೂ ಪಡಕೊಳ್ಳುವದು ಬಹು ಹೆಚ್ಚಿನ ಮಾತು ಶಿಕ್ಷಕನ ಮೇಲೆ ವಿದ್ಯಾರ್ಥಿಗಳ ಶ್ರದ್ಧೆಯು ಇರಬೇಕಷ್ಟೇ ಅಲ್ಲ; ತಮಗೆ ಅವನಿಗಿಂತ ಚೆನ್ನಾಗಿ ಕಲಿಸುವವರು ಮತ್ತಾರೂ ಇಲ್ಲೆಂದು ಅವರು ತಿಳುಕೊಳ್ಳಬೇಕು. ಶಿಕ್ಷಕನು ಕಲಿಸುವಂಥ ಪಾಠಗಳ ಕಡೆಗೆ ವಿದ್ಯಾರ್ಥಿಗಳು ಲಕ್ಷ್ಯಕೊಡುವದೂ ಸಹೋದ್ಯೋಗ ಮಾಡುವದೂ ಕೇವಲ ಅವನ ಗುಣಗಳನ್ನೇ ಹೊಂದಿರುತ್ತವೆ. ಈ ಗುಣಗಳು ಅವನಲ್ಲಿ ಇರದಿದ್ದರೆ ಅವನು ಕಲಿಸಿದ್ದೆಲ್ಲ ನಿಷ್ಫಲವಾಗುವದು, ಯುರೋಪಖಂಡದ ಎಷ್ಟೋ ದೇಶಗಳಲ್ಲಿ ಸರಕಾರದವರು ಕಲಿಸುವ ಉದ್ಯೋಗವನ್ನು ಅಂಗೀಕರಿಸುವಂಥ ತರುಣ ಜನರನ್ನು ಶಿಕ್ಷಣಪದ್ಧತಿ ಕಲಿಸುವಂಥ ಟ್ರೇನಿಂಗ ಕಾಲೇಜಕ್ಕೆ ಕಳಿಸಿ, ಅವರು ಪರೀಕ್ಷೆಯಲ್ಲಿ ತೇರ್ಗಡೆಯನ್ನು ಹೊಂದಿದ ತರುವಾಯ ಯೋಗ್ಯತಾ ಪತ್ರಗಳನ್ನು ಕೊಟ್ಟು ಅವರನ್ನು ಅಧ್ಯಾಪಕರ ಕೆಲಸಗಳಮೇಲೆ ನೇಮಿಸುತ್ತಾರೆ. ಸರಕಾರದ ಕಟ್ಟಳೆಗಳಿಗೆ ವಿರುದ್ಧವಾಗಿ ಯೋಗ್ಯತಾ ಪತ್ರಗಳನ್ನು ಪಡೆಯುವಂಥ ವೈದ್ಯರು ಔಷಧಗಳನ್ನು ಕೊಡವತ್ತಿದರೆ ಹ್ಯಾಗೆ ಶಿಕ್ಷೆಗೆ ಪಾತ್ರರಾಗುತ್ತಾರೋ ಹಾಗೆಯೇ ಯೋಗ್ಯತಾಪತ್ರಗಳಿಲ್ಲದವರು ಶಾಲಾಗುರುಗಳ ಕೆಲಸವನ್ನು ಕೈಕೊಂಡರೆ ದಂಡನೆಗೆ ಬಳಗಾಗುವರು.

(೬) ವಿದ್ಯೆ ಕಲಿಸುವವನಿಂದ ಸಂಪೂರ್ಣ ಫಲವನ್ನು ಪಡೆಯಬೇಕಾದರೆ ವಿದ್ಯಾರ್ಥಿಗಳಲ್ಲಿ ಸಹ ಒಳ್ಳೇ ಗುಣಗಳಿರುವದು ಅವಶ್ಯಕವಾದದ್ದು. ಈ ಗುಣಗಳಲ್ಲಿ ಮೊದಲನೇದು ಆಜ್ಞಾಧಾರಕತ್ವವು, ವಿದ್ಯಾರ್ಥಿಗಳು ತಮ್ಮ ಬುದ್ಧಿ ಸಾಮರ್ಥ್ಯಗಳು ಎಷ್ಟು ಅಲ್ಪ, ತಾವು ಇನ್ನೂ ಎಷ್ಟರವರೆಗೆ ಸಂಪಾದಿಸಬೇಕಾದ ವಿದ್ಯೆಯು ಎಷ್ಟು ಕೊಂಚ ಎಂಬದನ್ನು ತಿಳುಕೊಂಡು,

ತಮ್ಮ ಗುರಿಯಿನ ಕೂಡ ವಿನಯ ಪೂರ್ವಕವಾಗಿ ವಿಧೇಯ
ತ್ವದಿಂದ ನಡೆಯುತ್ತಿರಬೇಕು; ಶಿಕ್ಷಣದಿಂದ ಅಮೂಲ್ಯ
ಲಾಭವಿದೆ ಎಂದು ತಿಳಿಯಬೇಕು. ಯಾಕಂದರೆ ಶಿಕ್ಷಣವು
ತಮ್ಮನ್ನು ಪಶುಗಳಿಗೆ ಸಮಾನವಾದ ನೀಚಸ್ಥಿತಿಯಿಂದ ಜ
ನ್ನೀಯಾವುಕನು ಸೃಷ್ಟಿಯಲ್ಲಿ ಮನುಷ್ಯನಿಗೆ ಹೊಟ್ಟಂಥ
ಉಚ್ಚಸ್ಥಿತಿಗೆ ತರುವದೆಂದು ಅವರಿಗೆ ಪೂರಾ ಗೊತ್ತಿರಬೇ
ಕು. ವಿದ್ಯಾರ್ಥಿಗಳು ತಮ್ಮ ಬುದ್ಧಿ, ಜ್ಞಾನಗಳನ್ನು ಹೆಚ್ಚಿ
ಸಿಕ್ಕೆ ಯಾವಾಗಲೂ ಆತುರವುಳ್ಳವರಾಗಿರಬೇಕು. ಮತ್ತು
ನ್ಯ ಕಲಿಸುವವನ ಶ್ರಮದ ಫಲವನ್ನು ಸಂಪಾದಿಸುವದಕ್ಕ
ವರಲ್ಲಿ ಹಣಿಕೆಯೂ ಮುಹತ್ವಾಂಕ್ಷೆಯೂ ಇದ್ದ ಹೊರ್ತು
ವರು ಯಾವ ಅಭ್ಯಾಸವನ್ನೂ ಮಾಡಲಾರರು. ಅವರು
ದಾವಾಗಲೂ ಆಸಕ್ತಿಯುಳ್ಳವರಾಗಿಯೂ ಉದ್ಯೋಗಿಗಳಾ
ಯೂ ಇರಬೇಕು.

(೩) ಶಿಕ್ಷಣದಿಂದ ಅಪರಿಮಿತ ಲಾಭಗಳುಂಟಾಗುವ
ವು. ಇದರಿಂದ ಬುದ್ಧಿಯು ಚೆಳೆದು ಮನಸ್ಸು ವಿಸ್ತಾರವಾಗು
ತ್ತದೆ. ಶಿಕ್ಷಣವನ್ನು ಚೆನ್ನಾಗಿ ಪಡೆದಂಥವನೇ ಬುದ್ಧಿಶಾ
ಲಿಮನುಷ್ಯನೆಂದು ಹೇಳಬಹುದು. ಅಂಥವನು ದೇವರಿಗೂ
ನೆಗೂ ತನ್ನ ದೇಶ ಬಾಂಧವರಿಗೂ ಮಾಡತಕ್ಕಂಥ ಕರ್ತ
ವ್ಯಗಳನ್ನು ಕಲಿತಿರುವದರಿಂದ ಅವನು ಆ ಕರ್ತವ್ಯಗಳ
ನ್ನು ಮಾಡದೆ ಬಿಟ್ಟರೆ ಬಹು ದೊಡ್ಡ ತಪ್ಪೆಂದು ತಿಳುಕೊ
ಳುತ್ತಾನೆ. ಅವನು ತನ್ನ ಸಮ್ಮಣಗಳನ್ನು ಹೆಚ್ಚಿಸುವ
ದರಿಂದ ತನಗೆ ಇಹವಲ್ಲಿಯೂ ಪರದಲ್ಲಿಯೂ ಫಲ ದೊರ
ಯುವದೆಂದು ತಿಳಿದು ಧರ್ಮ ಕೃತ್ಯಗಳನ್ನು ಮಾಡು
ವನು. ವಿದ್ಯೆಯಿಂದ ಮತ್ತೊಂದು ದೊಡ್ಡ ಲಾಭವೇನಂ
ದರೆ ಮನುಷ್ಯನು ಪ್ರತಿ ಜನ ಪ್ರಸಂಗವನ್ನು ಏನು ಮಾಡ

ಬೇಕೆಂಬುದನ್ನು ಬಮ್ಮೇಲೆ ತಿಳುಕೊಂಡು ಅದನ್ನು ಪಟ್ಟ
ನೇ ಮಾಡಿ ಬಿಡುವನು. ಕೆಲವು ಜನರು ತಮಗೆ ಯಾವ
ಕೆಲಸದಿಂದ ಹಿತವೃಂಟಿಂದು ತಿಳುಕೊಂಡಾಗ್ಯೂ ಅವರ
ಕೂಡಲೇ ಅದನ್ನು ಮಾಡುವದಿಲ್ಲ. ಇವರ ಮೇಲಿಂದ ಇ
ವರ ವಿದ್ಯಾದಲ್ಲಿ ನ್ಯೂನತೆಗಳುಂಟೆಂದು ಹೇಳಬಹುದು.
ಮನುಷ್ಯನಿಗೆ ಶಿಕ್ಷಣೆಯಿಂದ ಪೂರ್ವಕಾಲದ ಇತಿಹಾಸ
ನ್ನೂ ಮನುಷ್ಯ ಕೃತಿಗಳಿಂದುಂಟಾಗುವ ಪರಿಣಾಮಗ
ಳನ್ನೂ ತಿಳುಕೊಳ್ಳುವ ಜ್ಞಾನವಾಗುವದರಿಂದ ಅವನ
ಅನೇಕ ವಿಧವಾಗಿ ಜನಸಂಘಕ್ಕೆ ಉಪಯೋಗವುಳ್ಳವನಾ
ಗುತ್ತಾನೆ. ಅವನು ತನ್ನ ಬುದ್ಧಿಯ ಬಲದಿಂದಲೇ ಪುಸ್ತಕ
ಗಳನ್ನು ಬರೆದು ಜ್ಞಾನ ಭಾಂಡಾರವನ್ನು ಹೆಚ್ಚಿಸುತ್ತಾನೆ
ಶಾರೀರಿಕ ಅಭಿವೃದ್ಧಿಯಿಂದ ತನ್ನ ಜೀವಕ್ಕೆ ಸಮಾಧಾನ
ವೂ ಪರರಿಗೆ ಹಿತವೂ ಉಂಟಾಗುವವೆಂದು ಅವನು ತಿಳಿ
ಯುತ್ತಾನೆ. ಅಲಂಕಾರಿಕ ಶಿಕ್ಷಣೆಯಿಂದ ಅವನು ತನ್ನ
ಮನೆಯೊಳಗಿನ ಯಾವತ್ತು ಸಾಮಾನುಗಳನ್ನು ವರಿಸಿಯಾ
ಗಿಯೂ ಸೊಗಸಾಗಿಯೂ ಇಡುತ್ತಾನೆ. ಮತ್ತು ಜನರು
ಅವನ ಸದ್ಗುಣಗಳನ್ನು ಅನುಸರಿಸಲಿಕ್ಕೆ ಯತ್ನ ಮಾಡು
ತ್ತಾರೆ. ಶಿಕ್ಷಣೆಯಿಂದ ಮನುಷ್ಯನು ಪಂಚಭೂತಗಳನ್ನು
ಜಯಿಸಲಿಕ್ಕೆ ಸಮರ್ಥನಾಗುತ್ತಾನೆ. ಅವನು ಹಾಳುಬಿದ್ದ
ಭೂಮಿಗಳನ್ನು ಚನ್ನಾಗಿ ಸಾಗ ಮಾಡಿಸುತ್ತಾನೆ. ಇದರಿಂ
ದ ಭೂಮಿಯು ವಿಪುಲವಾಗಿ ಬೆಳೆದು ಆ ನಾಡೆಲ್ಲ ಹಚ್ಚಗೆ
ಕಾಣಹತ್ತುವದು. ಅವನು ಗಾಳಿಯ ವಿರುದ್ಧವಾಗಿ ಹಡಗ
ಗಳನ್ನು ನಡಿಸುತ್ತಾನೆ; ತನ್ನ ಮನೆಯಲ್ಲಿ ಉಗೆ ದೀಪವ
ನ್ನು ಹಚ್ಚುತ್ತಾನೆ. ದೂರ ದೂರದ ದೇಶಗಳಿಂದ ಅಮೌಲಿ
ಕವಾದ ಸಾಮಾನುಗಳನ್ನು ತರಿಸುತ್ತಾನೆ; ತನ್ನ ದೇಶಕ್ಕೆ
ಸಂಪತ್ತೂ ಊರ್ಜಿತಸ್ಥಿತಿಯೂ ಉಂಟಾಗುವಂತೆ ಎತ್ತುಗ

ಡ ಮಾಡುತ್ತಾನೆ. ಈ ಮೇರೆಗೆ ವಿದ್ಯ ಕಲಿತವನು ಅನೇಕ ವಿಧದಿಂದ ಸುಖಬಡುತ್ತಾನೆ. ಇದಲ್ಲದೆ ಈ ಲೋಕದಲ್ಲಿ ತಾನು ಮಾಡುವಂಥ ಊಚ ನೀಚ ಕೃತಿಗಳಿಗೆ ಅನುಸಾರವಾಗಿ ಪರಲೋಕದಲ್ಲಿ ಸುಖ ದುಃಖಗಳಾಗುವವೆಂದೂ ಕಾಲ ಬವಗಿದಾಗ ತಾನು ಸಾಯಲಿಕ್ಕೆ ಸಿದ್ಧನಾಗಿರಬೇಕೆಂದೂ ಶಿಕ್ಷಣೆಯನ್ನು ಪಡೆದಂಥವನ ಮನಸ್ಸಿನಲ್ಲಿ ಯಾವಾಗಲೂ ಹೊಳೆಯುವದು.

SELCETIONS FROM THE KARNATIK GAZETTEER.

ಕನ್ನಡ ಗರೆಹುಟಿಯರದಿಂದ ಅವತರಣಿಗಳು.

(೧೪೬೬ನೇ ಪುಟದಿಂದ ಸಾಗಿದ್ದು)

ಅಣ್ಣಿಗೇರಿ—ನವಲಗುಂದದ ಆಗ್ನೇಯಕ್ಕೆ ೧೦ ಮೈಲಿನ ಮೇಲಿದೆ. ಇದು ದೊಡ್ಡ ಗ್ರಾಮವು. ಇಲ್ಲಿಯ ಅಮೃತೇಶ್ವರನೆಂಬ ದೇವಸ್ಥಾನವು ದೊಡ್ಡದೂ ಪ್ರಖ್ಯಾತಿಯುಳ್ಳದ್ದು ಆದೆ. ಅದಕ್ಕೆ ೭೬ ಕಂಬುಗಳಿವೆ. ಈ ಗುಡಿಯಲ್ಲಿ ೬ ಶಿಲಾಲಿಪಿಗಳಿವೆ. ಅವೆಲ್ಲ ೧೧೫೭ ರಿಂದಿತ್ತ ಬರಿದಂಥವು. ಇದರ ಹೊರತು ಈ ಊರಲ್ಲಿ ಬೇರೆ ೭ ಸಣ್ಣ ದೊಡ್ಡ ಗುಡಿಗಳಿವೆ. ಅವುಗಳಲ್ಲಿನ್ನೆಲ್ಲ ಲಿಪಿಗಳಿಯುತ್ತವೆ. ಅವೆಲ್ಲ ೧೧ನೇ ಶತಕದಿಂದಿತ್ತ ಹುಟ್ಟಿರುತ್ತವೆ. ಅಣ್ಣಿಗೇರಿಯು ಬಸವೇಶ್ವರನಿಂದ ಕೊಲ್ಲಿಸಲ್ಪಟ್ಟ ಬಿಜ್ಜಳ ರಾಜನ ರಾಜಧಾನಿಯು. ಇಂಗ್ಲಿಷ ಸರಕಾರದ ಅಮಲು ಆದಾಗ ಈ ಊರು ನಿಪ್ಪಾಣಿಕರನ ರಾಜ್ಯಕ್ಕೆ ಸೇರಿತ್ತು; ಅವನು ಸತ್ತ ಬಳಿಕ ಸನ ೧೮೩೯ ರಲ್ಲಿ ಖಾಲಸಾತಿಗೆ ಬಂತು. ಸನ ೧೮೭೬ನೇ ವರ್ಷ ಈ ಊರಲ್ಲಿ ೪೫೦ ಮನೆಗಳೂ ೧೪ ಅಂಗಡಿಗಳೂ ಮಾತ್ರ ಇದ್ದವು.

ಬೆಳವಟಿಗೆ—ನವಲಗುಂದದ ಈಶಾನ್ಯಕ್ಕೆ ಮೂರು ಮೈಲಿ ಮೇಲಿ ಇರುತ್ತದೆ. ರಾಮಲಿಂಗನ ದೇವಾಲಯವೆಂಬದೊಂ ು ಹಾಳು ಗುಡಿಯೂ ಕೆಲವು ಶಿಲಾಲಿಪಿಗಳೂ ಇರುತ್ತವೆ.

ಯಮನೂರು—ನವಲಗುಂದದ ನೈರುತ್ಯಕ್ಕೆ ೩ ಮೈಲಿ ಮೇಲಿದೆ. ಇಲ್ಲಿ ಪ್ರತಿ ವರ್ಷ ಫಾಲ್ಗುಣವದ್ಯ ಪಂಚಮಿ ುಂದ ೪ ದಿವಸ ಪೀರನ ದೊಡ್ಡ ಜಾತ್ರೆಯಾಗುತ್ತದೆ. ಈ ಾತ್ರೆಯಲ್ಲಿ ೫೦,೦೦೦ ದಿಂದ ೧,೦೦,೦೦೦ ದವರೆಗೆ ಜನ ೂಡಿ, ಸುಮಾರು ೬೫೦೦೦ ರೂಪಾಯಿಯ ನಾನಾಪ್ರಕಾ ವ ಸರಕುಗಳ ವ್ಯಾಪಾರವಾಗುತ್ತದೆ. ಕಾಳು, ಕಿರಾಣಿ, ಲಗಳು, ಮಿಠಾಯಿ, ಚಿತ್ರಗಳು, ಹೂ, ಕುರಿ, ಕೋಳಿ ುಂತಾದವುಗಳೇ ವ್ಯಾಪಾರದ ಸರಕುಗಳು. ಈ ಜಾತ್ರೆಗೆ ಳಗಾವಿ, ಧಾರವಾಡ, ಕಾನಡಾ, ವಿಜಾಪೂರ, ನಿಜಾಮನ ಜ್ಯ ಮುಂತಾದ ಕಡೆಯಿಂದ ಜನರು ಬರುತ್ತಾರೆ. ಹು ು ಹಚ್ಚಿಕೊಂಡ ಜನರು ಮುಖ್ಯವಾಗಿ ಯಮನೂರಿನ ೀರನಿಗೆ ಬೇಡಿಕೊಂಡು, ರೋಗವು ಹೋದ ಬಳಿಕ ಪೀರ ದರ್ಶನಕ್ಕೆ ಬಂದು, ಕುರಿ ಕೋಳಿಗಳನ್ನು ಕೊಟ್ಟು ಂದೂರಿಯ ಮಾಡಿಸುವರು.

ಈ ಪೀರನ ಕಥೆ ಹ್ಯಾಗಂದರೆ:—ವಿಜಾಪುರದ ಆದಿಲ್‌ಶಾ ಯು ಹಾಳಾದ ಸುಮಾರಿನಲ್ಲಿ (೧೬೯೦) ಖಾಜಾಬಂದ ನ ಾಮನೆಂಬ ವಲಿಯು ವಿಜಾಪುರದಲ್ಲಿ, ಕಹಾಮೀರಖಾ ಅಬ ುಲ್ ರಾಜಾಕಾದ್ರಿ ಎಂಬ ವಲಿಯು ಕಲಬುರ್ಗೆಯಲ್ಲಿ ಇರು ುದ್ದರು. ಮೀರಖಾ ಅಬದುಲ್ಲನು ಕೈಯೊಳಗೆ ಹಾವಿನ ಬಾ ಕೋಲು ತಕ್ಕೊಂಡು, ಚೇಳಿನ ಲಗಾಮು ಹಾಕಿದ ಹುಲಿ ುಮೇಲೆ ಕೂತುಕೊಂಡು ಸಂಚಾರ ಮಾಡುವನಂತೆ. ಆ ರಿಂದ ಅವನಿಗೆ "ರಾಜಬಾಗ ಸವಾರ" ನೆಂಬ ಹೆಸರು

ಬಂದಿತ್ತು. ಬಂದಾನೊಂದು ದಿವಸ ಈ ವಲಿಯು ತನ್ನ ಹುಲಿಯಮೇಲೆ ಕೂತುಕೊಂಡು ವಿಜಾಪುರದ ವಲಿಯ ಭೆಟ್ಟಿಗೆ ಹೊರಟನು. ಅವನು ವಿಜಾಪುರದ ಸಮೀಪಕ್ಕೆ ಬರಲಾಗಿ, ಖಾಜಾಬಂದ ನವಾಝುನ ಮೊಮ್ಮಗನಾವ ೩ ವರ್ಷದ ಮಡುಗನು, ಕಾದ್ರಿಯು ಮುಲಿಯ ಮೇಲೆ ಕೂತು ಕೊಂಡು ಬರುತ್ತಾನೆಂದರಿತು, ತಾನು ಬಂದು ಗೂಡಿನ ಮೇಲೆ ಏರಿ ಕೂತು, ಅದನ್ನು ನಡಿಸುತ್ತ ಕಾದ್ರಿಯು ಎದುರಿಗೆ ಹೋದನು. ಕಾದ್ರಿಯು ಆ ಮಡುಗನು ಗೊಂಡಿಯನ್ನು ನಡಿಸಿಕೊಂಡು ಬರುವವನ್ನು ನೋಡಿ ನಾಜಿ, ಮುಂದಕ್ಕೆ ಹೋಗದೆ, ಕುಲಬುರ್ಗಿಗೆ ಹಿಂದಿರುಗಿ ಹೋಗಿ, ದುಃಖದಿಂದ ಮರಣ ಹೊಂದಿದನು. ಖಾಝೂನವಾಝುನು, ಅಂದರೆ ವಿಜಾಪುರದ ವಲಿಯು ಈ ಸಂಗತಿಯನ್ನು ಅಂತರ್ಜ್ಞಾನದಿಂದ ಅರಿತು, ತನ್ನ ಮೊಮ್ಮಗನಿಗೆ ಶಾಪಕೊಟ್ಟು ಅವನನ್ನು ಭಸ್ಮ ಮಾಡಿದನು. ಮುಂದೆ ಆ ರಾಜಾಬಾಗ ಸವಾರನೆಂಬ ಕುಲಬುರ್ಗಿಯ ವಲಿಯ ದರ್ಗಾಗಳನ್ನು ಬಹಳ ಜನೆಯಲ್ಲಿ ಕಟ್ಟಿ ಜನರು ಅವನಿಗೆ ನಡಕೊಳ್ಳವತ್ತಿದರು. ಅದರಂತೆ ಸಾತಾರೆಯ ಜಿಲ್ಲೆಯಲ್ಲಿ ಕೋರೆಗಾವ ಎಂಬ ಗ್ರಾಮದ ಪಾಟೀಲನಾದ ಜಿತೋಜಿ ಎಂಬವನು ಆ ರಾಜಾಬಾಗ ಸವಾರನಿಗೆ ನಡಕೊಳ್ಳವತ್ತಿದನು. ಬಂದಾನೊಂದು ರಾತ್ರಿಯಲ್ಲಿ ಆ ವಲಿಯು ಜಿತೋಜಿಯ ಸ್ವಪ್ನದಲ್ಲಿ ಬಂದು ನಿನಗೆ ಏನು ಬೇಕೆಂದು ಕೇಳಲಾಗಿ, ನೀನೇ ನನ್ನ ಬಳಿಯಲ್ಲಿ ಇರೆಂದು ಬೇಡಿಕೊಂಡನು. ಅದಕ್ಕೆ ವಲಿಯು ನಿನ್ನ ತಲೆಗಿಂಬಿನ ಬಳಿಯಲ್ಲಿ ನನ್ನ ಕೈಯಂತೆ ಮಾಡಿಸಿದ ಪಂಜಾ ಇರುತ್ತದೆ; ಅದನ್ನು ತಕ್ಕೊಂಡು ಯವುನಾರಿಗೆ ಹೋಗಿ ಅಲ್ಲಿ ಅದರ ಪೂಜೆ ಮಾಜೆಂದು ಹೇಳಿದನು. ಆ ಪ್ರಕಾರ ಜಿತೋಜಿಯು ಎಚ್ಚತ್ತಬಳಿಕ ಅವನ ತಲೆಗಿಂಬಿನ ಬಳಿಯ

ಲ್ಲಿ ಎರಡು ಬೆತ್ತಗಳು ಸಹಿತ ಬೆಳ್ಳಿಯ ಹುಲಿಯ ಮೇಲೆ ಏ
ರಿದ್ದೊಂದು ಪಂಜಾವನ್ನು ಕಂಡನು. ಅವನು ಅವನ್ನು
ತಕ್ಕೊಂಡು ಯಮುನೂರಿಗೆ ಬಂದು ಪೂಜೆ ಮಾಡುತ್ತಿದ್ದ
ನು. ಮುಂದೆ ಅವನ ವಂಶದವನೊಬ್ಬನು ಸರ್ ೧೭೨೦ ರಲ್ಲಿ
ಮಣ್ಣಿನ ಗೋಡೆಗಳನ್ನು ಹಾಕಿಸಿ ಈಗಿನ ದರ್ಗಾವನ್ನು
ಕಟ್ಟಿಸಿದನು. ಆ ದರ್ಗಾದಲ್ಲಿ ಹಿತ್ತಾಳೆಯ ಎರಡು ಕುದು
ರೆಗಳ ಮೇಲೆ ಹೀಗೆ ಎರಡು ಪಂಜಾಗಳನ್ನು ಈಗ
ಪ್ರತಿಷ್ಠಿಸುತ್ತಾರೆ. ಚಿತ್ತೋಡಿಯ ವಂಶದವರೇ ಈ ಪಂಜಾ
ಗಳ ಪೂಜಾರಿಗಳಾಗಿದ್ದಾರೆ. ಅವರಿಗೆ ಜಾತ್ರೆಯಲ್ಲಿ ಸುಮಾ
ರು ೧೦೦೦ ರೂಪಾಯಿಯ ಪ್ರಾಪ್ತಿಯಾಗುತ್ತದೆ.

REVIEW.

ಹೊಸ ಪುಸ್ತಕಗಳ ಮೇಲೆ ಅಭಿಪ್ರಾಯಗಳು.

ಮೈಸೂರಿನಲ್ಲಿ ಹೊಸದಾಗಿ ಪ್ರಸಿದ್ಧವಾದ "ಪ್ರಾಣಿಶಾಸ್ತ್ರ"
ವೆಂಬ ಪುಸ್ತಕವು ಅದರ ಗ್ರಂಥಕರ್ತರಾದ ಪೂರ್ಣ ರಾಘ
ವೇಂದ್ರರಾವ, ಬಿ. ಎ. ಬಿ. ಎಲ್. ಇವರಿಂದ ನಮ್ಮ ಕಡೆ
ಗೆ ಬಂದಿರುತ್ತದೆ. ಅದನ್ನು ನಾವು ಆದರದಿಂದ ಸ್ವೀಕರಿಸು
ತ್ತೇವೆ. ಪುಸ್ತಕದ ಬಾಹ್ಯ ಸ್ವರೂಪವು ಚನ್ನಾಗಿದೆ. ಛಾ
ಪಿಸಿದ ಅಕ್ಷರಗಳಾದರೂ ತಕ್ಕಮಟ್ಟಿಗೆ ನೆಟ್ಟಗಿರುತ್ತವೆ. ಆ
ವೃದ್ಧಿಗಳು ವಿಶೇಷವಿದ್ದಂತೆ ತೋರುವದಿಲ್ಲ. ಚಿತ್ರಗಳು
ಮಾತ್ರ ಅಷ್ಟು ಸಮಾಧಾನಕರವಾಗಿಲ್ಲ. ಚಿತ್ರಗಳ ಸಂಖ್ಯೆ
ಯಾದರೂ ಕಡಿಮೆ ಇರುತ್ತದೆ. ಮುಂದಿನ ಆವೃತ್ತಿಯಲ್ಲಿ
ಗ್ರಂಥಕರ್ತರು ಚಿತ್ರಗಳನ್ನು ಕುರಿತು ವಿಶೇಷ ಲಕ್ಷ್ಯ ಕೊ
ಡುವರೆಂದು ಕೋರುತ್ತೇವೆ.

ಈ ಪುಸ್ತಕದಲ್ಲಿ ಪಶುಪಕ್ಷಿ ಮುಳಗಳ ಸಂಬಂಧದಿಂದ
ಬಹ್ವಂಶ ಪಾಠಗಳಿರುತ್ತವೆ. ಗ್ರಂಥರಚನೆಯು ತಕ್ಕಮ

ಟ್ಟಿಗೆ ಸಮಾಧಾನಕರವಾಗಿದೆ; ಆದರೆ ಭಾಷೆಯು ಈ ಭಾಗವವರಿಗೆ ಪೂರ್ಣವಾಗಿ ಸಮ್ಮತವಾದೀತೆಂದು ಹೇಳಲಾರೆವು. 'ಅಥವಾ' 'ಮತ್ತು' ಈ ಎರಡು ಶಬ್ದಗಳು ಹೇರಳವಾಗಿ ಉಪಯೋಗಿಸಲ್ಪಟ್ಟಿರುತ್ತವೆ. ವಿಧಿ ವಿಶೇಷಣ ಸಂಬಂಧದಿಂದ ವ್ಯಾಕರಣದ ನಿಯಮಗಳನ್ನು ಅನುಸರಿಸಿದಂತೆ ತೋರುವದಿಲ್ಲ. ಕೆಲವು ವಾಕ್ಯಗಳು ಕನ್ನಡ ಭಾಷಾ ರಚನೆಗೆ ಸರಿಯಾಗಿರುವದಿಲ್ಲ. ಅವು ಯಾವವೆಂದರೆ:—

೧ ಮರಿಯಿಂದ ಸಾಕಿದರೆ, ಸಾಕಿದವನಿಗೆ ವಿಶ್ವಾಸವನ್ನು ತೋರಿಸಬಲ್ಲದು.

೨ ಹಿಂದುಸ್ಥಾನದ ಎತ್ತಿಗೆ ಹಿರಳಿರುವದರಿಂದ ಇತರದೇಶಗಳ ಎತ್ತುಗಳಿಂದ ಅದನ್ನು ಕಂಡು ಹಿಡಿಯಬಹುದು.

೩ ದೊಡ್ಡವು ಚಿಕ್ಕವನ್ನು ತಿಂದು ಅವುಗಳ ಸಂಖ್ಯೆಯು ಹೆಚ್ಚುವದನ್ನು ಕಡಿಮೆ ಮಾಡುವದಕ್ಕೆ ಉಪಯೋಗಕರವಾಗಿವೆ. &c.

ಶಾಲೆಗೆ ಹೋಗುವ ಚಿಕ್ಕ ಬಾಲಕರಿಗೆ ಸುತ್ತಲಿರುವ ಸಂಗತಿಗಳ ವಿಷಯವಾಗಿ, ಮುಖ್ಯವಾಗಿ ಅವರು ನೋಡುವ ಪಶುಪಕ್ಷ್ಯಾದಿಗಳ ಪಾಠಗಳನ್ನು ಹೇಳುವದರಿಂದ, ಅವರಲ್ಲಿ ವಿದ್ಯಾಭಿರುಚಿಯು ಹುಟ್ಟುವದು. ಆದರೆ ಕನ್ನಡ ಶಾಲಾಧ್ಯಾಪಕರಿಗೆ ಈ ಪ್ರಕಾರದ ಪಾಠಗಳನ್ನು ಹೇಳುವದಕ್ಕೆ ಅನುಕೂಲವಾದಂಥ ಪುಸ್ತಕವಿದ್ದಿಲ್ಲ. ಆ ಕೊರತೆಯು ಈ ಪುಸ್ತಕವಿಂದ ಕೆಲವಂಶದಿಂದ ದೂರವಾಗುವದೆಂದು ನೋಡಿ ನಮಗೆ ಸಂತೋಷವಾಗುತ್ತದೆ. ಪುಸ್ತಕದ ಬೆಲೆಯನ್ನು ಹಾಕಿಲ್ಲ. ಗ್ರಂಥಕರ್ತರು ಗ್ರಾಮಕರ ಯೋಗ್ಯತೆಯನ್ನು ಅನುಲಕ್ಷಿಸಿ ಸ್ವಲ್ಪ ಕ್ರಯಕ್ಕೆ ಈ ಪುಸ್ತಕವು ಪಾಠಶಾಲೆಯವರಿಗೆ ಸಿಗುವಂತೆ ಮಾಡುವರೆಂದು ನಂಬುತ್ತೇವೆ.

ಲಾಯರ್ ಮುಖ್ಯೋಪಯೋಗವಿಲ್ಲದ ಶಿಷ್ಟ ಸಾಧಕ ನಿಷೇಧಾಗ, ಪೊಲೀಸನವರ ಖವಾತ್ ಎಂಬ ಎರಡು ಪುಸ್ತಕಗಳು ಮುದ್ರಿತವಾಗಿವೆ. ಕಾಗದ, ಮುದ್ರಣ ತೀರ ಸಾಮಾನ್ಯತರದವು ಇವೆ. ಮೊದಲನೇ ಪುಸ್ತಕದ ವಿಷಯವು ಮೂಸ್ತರ ಜನರಿಗೆ ಪ್ರಯೋಜನಕರವಾದದ್ದು. ಭಾಷೆಯು ವ್ಯಾಕರಣ ನಿಯಮಗಳಿಗನುಸರಿಸಿ ಇಲ್ಲದಿದ್ದರೂ ತಿಳಿಯುವಂತಿದೆ. ಕ್ರಯವು ಮೂರು ಆಣೆ ಇರುವದು. ವಿದ್ಯಾರ್ಥಿಗಳಿಗೆ ಕವಾಯಿತನ್ನು ಕಲಿಸಲಿಕ್ಕೆ ಇದರಿಂದ ತಕ್ಕಮಟ್ಟಿಗೆ ಸಹಾಯವಾಗುವದು.

"ಪೊಲೀಸನವರ ಖವಾತ್" ಈ ಪುಸ್ತಕವು ಪೋಲೀಸರಿಗೆ ಉಪಯುಕ್ತವಾದದ್ದಾಗಿ ತೋರುತ್ತದೆ. ಕ್ರಯ ೮ ಆಣೆ ಇರುತ್ತದೆ.

CORRESPONDENCE.

ಪತ್ರವ್ಯವಹಾರ.

ರಾವಸಾ॥ ಕನ್ನಡ ಶಾಲಾಪತ್ರಕರ್ತರ ಚರಣ ಸನ್ನಿಧಿಗೆ—

ಸಾ॥ ನಮಸ್ಕಾರ ವಿ॥ ಕೆಳಗೆ ಬರೆದ ಸಾಲುಗಳನ್ನು ತಮ್ಮ ಪತ್ರದಲ್ಲಿ ಮುದ್ರಿಸುವಿರೆಂದು ಆಶಿಸುತ್ತೇನೆ. ವಿಷ್ಣು ಬಾಬಾಜಿ ಕಲ್ಲೋಳಿ ಕುಲಕರ್ಣಿ ಇವರು ಇದೇತಿಂಗಳ ಶಾಲಾಪತ್ರಕದಲ್ಲಿ ಕನ್ನಡಕವಿತೆಯ ಎನೇ ಪುಸ್ತಕದೊಳಗಿನ ಕೆಳಗೆ ಬರೆದ ಪದ್ಯದ ವಿಷಯದಲ್ಲಿ ತಮಗೆ ಬಂದ ಸಂಶಯವನ್ನು ಬರೆದಿರುತ್ತಾರೆ. ಸದರಿ ಪದ್ಯದೊಳಗಿನ ಸಂಶಯನಿವೃತ್ತಿಯು ಹೆಬ್ಬಳ್ಳಿಯ ಪ್ರಸಿದ್ಧ ಜೋಯಿಸರ ಕಡೆಯಿಂದ ನಾನು ಕೇಳಿದ್ದು ಕೆಳಗೆ ಬರೆದಪ್ಪ॥

ಪದ್ಯ

ಆಗಿಯು ಹುಣಿವಿ ಹೋದ । ಮಿಗೆಮೂರು ದಿವಸಕ್ಕ ।

ಮೃಗಧರನ ಕೂಡೆ ಮೃಗಶಿರಲು ಮಳೆಗಾಲ । ಜಗದಣಿ
ಯಲಕ್ಕು ಸರ್ವಜ್ಞ ॥ ೧ ॥

ಈ ಪದ್ಯದೊಳಗಿನ ಮೃಗ ಇದರ ಅರ್ಥವು ಮೃಗನಕ್ಷತ್ರ ವಲ್ಲ. ಮೃಗ ಅಂದರೆ ಮಕರರಾಶಿಯು. ಇದು ಹತ್ತನೇ ರಾಶಿಯು; ಅಂದರೆ ತೃತೀಯೆ ದಿವಸ ೯ ರಾಶಿಗಳು ಸಂಪೂರ್ಣವಾಗಿ ಹತ್ತನೇ ರಾಶಿಯ ಆರಂಭವು ಸಂಭವಿಸುತ್ತದೆ.

ಇನ್ನು ಒಂದು ರಾಶಿಗೆ ೯ ಚರಣಗಳು ಆದರೆ ೯ ರಾಸಿಗಳಿಗೆ ೮೧ ಚರಣಗಳಾದವು. ೪ ಚರಣಗಳಂದರೆ ಒಂದು ನಕ್ಷತ್ರವು ಆದ್ದರಿಂದ

ಚ	ಚ	ನಕ್ಷತ್ರ	ನಕ್ಷತ್ರಗಳು
೪	೮೧	೧	೨೦¼

ಅವರೆ ೨೦ ನಕ್ಷತ್ರಗಳಾಗಿ ೨೧ನೇ ನಕ್ಷತ್ರದ ಆರಂಭವು ಅಂದರೆ ಪೂರ್ವಾಷಾಢಾ ನಕ್ಷತ್ರ ಸಂಪೂರ್ಣ ಅನುಭೋಗಿಸಿ ಉತ್ತರಾಷಾಢಾ ನಕ್ಷತ್ರದ ಆರಂಭವು. ಈ ನಕ್ಷತ್ರವು ವೈಶಾಖ ವ॥ ೩ ದಿವಸ ಬರಬಹುದು. ಹ್ಯಾಗಂದರೆ ವೈಶಾಖ ಶು॥ ೧೫ ದಿವಸ ವಿಶಾಖಾ ನಕ್ಷತ್ರವಾದರೆ ಮುಂದೆ ೩ನೇ ದಿವಸ ಮೂಲಾ ನಕ್ಷತ್ರ ಬರತಕ್ಕದ್ದು; ಆದರೆ ಸ್ವಲ್ಪ ಹೆಚ್ಚು ಕಡಿಮಿಯಾಗಿ ಉತ್ತರಾಷಾಢಾ ನಕ್ಷತ್ರ ಬರಬಹುದು. ಆದ್ದರಿಂದ ಮೃಗ ಇದರ ಅರ್ಥ ಮಕರ ರಾಶಿ ಅಂತ ಮಾಡತಕ್ಕದ್ದು ವಿಹಿತ ಕಾಣಿಸುತ್ತದೆ. ಇತಿ ವಿಜ್ಞಾಪನೆ ತಾ॥ ೩ ಅಗಸ್ಟ ಸನ ೧೯೨೪ ನೇ ಇಸ್ವಿ.

ಧೋಂಡೋ ಗಂಗಾಧರ ಲಿಮಯೆ,
ಶಾಲಾನುಪಾಸ್ತರ ಮಿಶ್ರಿಕೋಟಿ
ತಾ॥ ಕಲಘಟಗಿ ಜಿಲ್ಹಾ ಧಾರವಾಡ.

ಶಾಲಾಪತ್ರಕೆ.

ಪದ್ಯಂ.

ಪ್ರಿಯವಿದ್ಯಾಗುರುವರ್ಯರುನ್ನತಿಕೆಯಂ ಸಚ್ಛಿಕ್ಷಣೋತ್ಕರ್ಷಮಂ ।
ಜಯಸುತ್ತಂ ಪ್ರತಿವಾಸದಾದಿಗೊಲವಿಂದೀಪತ್ರಮಂ ಮುದ್ರಿಸಿ ॥
ನಯದಿಂದಿತ್ತಪೆವೋದುವರ್ಗೆಸುಗುಣಂ ತೋರಲ್ಕೆಕೈಕೊಂಬುದೈ ।
ದಯೆಯಿಂದೋಷವತಿದ್ದವೇಳ್ವುದುಬುಧರ್ಜ್ಞಾನಾಭಿವೃದ್ಧಿಪ್ರಿಯರ್॥೧॥

ಪುಸ್ತಕ ೩೯.] ನವಂಬರ ೧೯೯೪. [ಸಂಚಿಕೆ ೧೧.

ವಿದ್ಯಾಸುಧಾರಣಾ ಸಂಬಂಧದ ವೃತ್ತಾಂತಗಳು.

ಹಿಂದುಸ್ಥಾನ ಸರಕಾರದವರು ಕಳೆದ ಐದು ವರ್ಷಗಳ (ಅಂದರೆ ಸನ ೧೮೮೭।೮೮ ರಿಂದ ೧೮೯೨।೯೩ ರವರೆಗೆ) ವಿದ್ಯಾಖಾತೆಯು ಸಂಬಂಧವಾಗಿ ಬಂದು ವಿಸ್ತಾರವಾದ ರಿಪೋರ್ಟನ್ನು ಮೊನ್ನೆ ಮೊನ್ನೆ ಪ್ರಸಿದ್ಧಿಸಿರುತ್ತಾರೆ. ಆ ರಿಪೋರ್ಟಿನಿಂದ ತಿಳಿಯುವ ಮುಖ್ಯ ಮುಖ್ಯ ಸಂಗತಿಗಳು ಯಾವವಂದರೆ—

ಸನ ೧೮೮೭।೮೮ನೇ ವರ್ಷ ಹಿಂದುಸ್ಥಾನದಲ್ಲಿ ಪ್ರಾಥಮಿಕ ಮತ್ತು ಮೇಲ್ತರದ ಶಾಲೆಗಳ ಸಂಖ್ಯೆ ೧,೮೩,೦೦೦ ವಿದ್ಯಾರ್ಥಿಗಳ ಸಂಖ್ಯೆ ೩೫,೩೫,೩೦೦ ಇದ್ದವು. ೧೮೯೨-೯೩ ರ ಕೊನೆಗೆ ಶಾಲೆಗಳ ಸಂಖ್ಯೆ ೧,೪೧,೦೦೦, ವಿದ್ಯಾರ್ಥಿಗಳ ಸಂಖ್ಯೆ ೩೮,೫೬,೦೦೦ ಆದವು. ಹಿಂದು ವಿದ್ಯಾರ್ಥಿಗಳು ನೂರಕ್ಕೆ ೧೮ ರಂತೆ, ಮುಸಲ್ಮಾನ ವಿದ್ಯಾರ್ಥಿಗಳು ನೂರಕ್ಕೆ ೧೮ ರಂತೆ ಹೆಚ್ಚಾಗಿದ್ದಾರೆ. ವಿದ್ಯ ಕಲಿಯುವ ಹೆಣ್ಣು ಮಕ್ಕಳ ಸಂಖ್ಯೆಯು ನೂರಕ್ಕೆ ೨೦ ರಂತೆ ಹೆಚ್ಚಾಗಿದೆ. ಮ್ಯುನಿಸಿಪಾಲ ಮತ್ತು ಲೋಕಲ ಬೋರ್ಡ ಸಂಸ್ಥೆಗಳು ಶಿಕ್ಷಣದ ಕೆಲಸಕ್ಕೆ ಮೊದಲಿಗಿಂತ ಹೆಚ್ಚು ಹಣ ವೆಚ್ಚ ಮಾಡ

ಹತ್ತಿವೆ; ಅಂದರೆ ೧೪೪೭/೪೪ ರಲ್ಲಿ ೧೧೭ ಲಕ್ಷ ರೂಪಾಯಿಗಳನ್ನು ಅವು ಶಿಕ್ಷಣದ ಕೆಲಸಕ್ಕೆ ಖರ್ಚು ಮಾಡಿದವು. ಈಗ ಆ ರಕಮು ೧೪೦ ಲಕ್ಷ ರೂಪಾಯಿಗಳ ವರೆಗೆ ಎರಿರುತ್ತದೆ. ಫೀ ಉತ್ಪನ್ನವಾದರೂ ನೂರಕ್ಕೆ ೫೫ ರಂತೆ ಬೆಳೆದಿರುತ್ತದೆ. ಈ ಸಂಗತಿಗಳಿಂದ ಶಿಕ್ಷಣದ ಕೆಲಸವು ಭರದಿಂದ ಸಾಗಿದೆ ಎಂದು ಸ್ಪಷ್ಟವಾಗಿ ಕಾಣಿಸುವದು.

ನಮ್ಮ ಇಲಾಖೆಯ ಗವ್ಹರ್ನರರಾದ ನೇಕ ನಾಮದಾರ ಲಾರ್ಡ ಹ್ಯಾರಿಸ ದೊರೆಗಳು ಧಾರವಾಡಕ್ಕೆ ಹೋದ ತಿಂಗಳ ೧೫ ನೆಯ ತಾರೀಖಿನ ದಿವಸ ಬೆಳಗಿನ ೧೧ ಘಂಟೆಗೆ ಬಂದರು. ಧಾರವಾಡ ಮ್ಯುನಸೀಪಾಲಟಿಯವರು ಕೊಟ್ಟ ಮಾನ ಪತ್ರಕ್ಕೆ ಉತ್ತರವಾಗಿ ನಾಮದಾರರು ಹೇಳಿದ ಮಾತುಗಳಲ್ಲಿ ಕೆಲವು ಪ್ರಾಥಮಿಕಶಿಕ್ಷಣಕ್ಕೆ ಸಂಬಂಧಿಸಿದ್ದವು. ಅವು ಯಾವವೆಂದರೆ :—

ಪ್ರಾಥಮಿಕಶಿಕ್ಷಣವನ್ನು ಕೂಡಿವಷ್ಟು ಹಬ್ಬಿಸುವದೂ ಅದು ಅಲ್ಪವ್ಯಯದಿಂದ ಎಲ್ಲರಿಗೆ ಸಿಗುವಂತೆ ಮಾಡುವದೂ ಸರಕಾರದವರು ತಮ್ಮ ಕರ್ತವ್ಯವೆಂದು ಎಣಿಸುವರು; ಮತ್ತು ಅವಕ್ಕೆ ತಕ್ಕಂತೆ ವ್ಯವಸ್ಥೆಯನ್ನಾದರೂ ಮಾಡಪತ್ತಿರುವರು. ಇನ್ನು ಲಕ್ಷದಲ್ಲಿಡತಕ್ಕ ಮಾತೇನೆಂದರೆ, ಅಲ್ಪಖರ್ಚಿನಿಂದ ಅಥವಾ ಖರ್ಚಿಲ್ಲದೆ ಶಿಕ್ಷಣ ಕೊಡುವದೆಂದರೆ, ಕೆಲವರು ಬತ್ತಾಯದ ಶಿಕ್ಷಣವೆಂದು ತರ್ಕಿಸುವರು. ಆದರೆ ನಮ್ಮ ಅಭಿಪ್ರಾಯವು ಹಾಗಿಲ್ಲ. ಬತ್ತಾಯದ ಶಿಕ್ಷಣವನ್ನು ಕೊಡುವ ವ್ಯವಸ್ಥೆಯನ್ನು ಮಾಡುವದು ಸಣ್ಣ ಮಾತಲ್ಲ. ಈ ವ್ಯವಸ್ಥೆಯು ಸುಧಾರಿಸಿದಂಥಾ ಐಶ್ವರ್ಯವು ಹ್ಯಾಂಗಾ ಬಾಲೆಗೆ ಮಕ್ಕಳನ್ನು ಕಳಿಸದ ಜನರಿಗೆ ಶಿಕ್ಷೆಯನ್ನು ಕೊಟ್ಟರೆ ಆ ಮಾತು ಜನರಿಗೆ ಅಸಹ್ಯವಾಗದಂಥ ದೇಶಗ

ಳಲ್ಲಿ ಮಾತ್ರ ಸಂಭವನೀಯವಾಗಿರುತ್ತದೆ. ಅಂಥ ಸ್ಥಿತಿಯು ಇನ್ನು ಈ ದೇಶಕ್ಕೆ ಬಂದಿಲ್ಲ.

ಶಾರೀರ ಶಿಕ್ಷಣವು ಬಹು ಪ್ರಯೋಜನಕರವಾದದ್ದು. ನ ಮಗೆ ಸ್ವತಃ ಚಂಡಿನ ಆಟಗಳು ಸೇರುತ್ತವೆಂದು ಈ ಮಾತ ನ್ನು ನಾವು ಎತ್ತುತ್ತೇವೆಂಬಂತೆ ಇಲ್ಲ. ಈ ಶಿಕ್ಷಣವು ಇಬ್ಬ ಗೆಯಾಗಿ ಪ್ರಯೋಜನಕರವಾದದ್ದಿರುತ್ತದೆ. ಇದರಿಂದ ಪಾ ಸ್ಯಾಭ್ಯಾಸಕ್ಕೆ ಬಳ್ಳೀ ಸಹಾಯವಾಗುತ್ತದೆಂಬುದೊಂದು. ಮ ತ್ತು ಸಾಧಾರಣ ಕಲಿತ ವಿದ್ಯಾರ್ಥಿಗಳು ಕೆಲಸವಿಲ್ಲದ ಕಾರಣ ತಮಗೆ ತಿಳಿಯದ ರಾಜಕರಣಗಳಲ್ಲಿ ಕೈ ಹಾಕುತ್ತಾರೆ. ಇವರ ಬುದ್ಧಿಯು ತಕ್ಕಷ್ಟು ಪ್ರಬುದ್ಧವಾಗದೇ ಇರುವ ದರಿಂದ ಇವರಿಗೆ ಏನೂ ಪ್ರಯೋಜನವಾಗುವದಿಲ್ಲ. ಇಂಥ ವರಿಗೆ ಈ ಆಟ ನೋಟಗಳಿಂದ ತಕ್ಕ ಕೆಲಸ ಸಿಕ್ಕು ತಿಳಿ ಯದ ಕೆಲಸಗಳಲ್ಲಿ ಕೈ ಹಾಕಲಾರರೆಂಬದು ಎರಡನೇದು.

ಸ್ನಾನ ಮಾಡಲಿಕ್ಕೆ ಉತ್ತಮ ವೇಳೆ ಯಾವದು?—ಆ ರೋಗ್ಯ ರಕ್ಷಣದ ಸಂಬಂಧವಾಗಿ ಇರುವ ಹಲವು ವಾದ ಗ್ರಸ್ತ ಪ್ರಶ್ನಗಳಲ್ಲಿ "ಸ್ನಾನ ಮಾಡಲಿಕ್ಕೆ ಉತ್ತಮ ವೇಳೆ ಯಾವದು? ಎಂಬದೊಂದು ಇರುತ್ತದೆ. ಉಳಿದ ವಾದಗ್ರ ಸ್ತ ಪ್ರಶ್ನಗಳಂತೆಯೇ ಈ ಪ್ರಶ್ನದ ಸಂಬಂಧವಾಗಿಯೂ ಎಷ್ಟೋ ಡಾಕ್ತರರ ಅಭಿಪ್ರಾಯಗಳು ಭಿನ್ನ ಭಿನ್ನವಾಗಿರು ತ್ತವೆ; ಆದರೆ ಅವುಗಳನ್ನೆಲ್ಲ ಸರಿಯಾಗಿ ವಿಚಾರಿಸಿ ನೋಡಿ ದರೆ ಬಹುಮತವು ಇಬ್ಬಗೆಯಾಗಿ ತೋರುತ್ತದೆ. ಹಲವ ರು ರಾತ್ರಿ ಮಲಗುವದಕ್ಕಿಂತ ಮೊದಲು ಸ್ನಾನ ಮಾಡುವ ದು ಹಿತಕರವೆಂದು ಹೇಳುತ್ತಾರೆ. ಕೆಲವರು ಬೆಳಿಗ್ಗೆ ಹಾಸಿ ಕೆಯಿಂದ ಎದ್ದ ಕೂಡಲೇ ಸ್ನಾನ ಮಾಡುವದು ಹಿತಕರ

ಮಾದದ್ದೆಂದು ಪ್ರತಿಪಾದಿಸುತ್ತಾರೆ. ಬಿಸಿ ನೀರಿನಿಂದ ಸ್ನಾನ ಮಾಡುವದಿದ್ದರೆ, ರಾತ್ರಿ, ಮಲಗುವ ಪೂರ್ವದಲ್ಲಿ ಸ್ನಾನ ಮಾಡುವದು ಬಹಳ ಒಳ್ಳೇದು. ಸ್ನಾನ ಮಾಡಿದ ಕೂಡಲೆ ಬೆಚ್ಚಗಿನ ಹೊದ್ದಿಕೆಯನ್ನು ಹೊದ್ದುಕೊಂಡು ಸ್ವಸ್ಥವಾಗಿ ಮಲಗಿಕೊಂಡರೆ ದೇಹಕ್ಕೆ ಆರೋಗ್ಯವೂ ಸುಖವೂ ಉಂಟಾಗುವವು. ತಣ್ಣೀರಿನಿಂದಾಗಲಿ, ಉಗುರು ಬೆಚ್ಚಗಿನ ನೀರಿನಿಂದಾಗಲಿ ಸ್ನಾನ ಮಾಡುವದಿದ್ದರೆ ಬೆಳಿಗ್ಗೆ ಹಾಸಿಗೆಯಿಂದ ಎದ್ದ ಕೂಡಲೇ ಸ್ನಾನ ಮಾಡುವದು ಹಿತಕರವು. ಈ ಸ್ನಾನದಿಂದ ಶರೀರದ ಅಂತರ್ಭಾಹ್ಯ ವ್ಯವಹಾರಗಳಿಗೆ ಅತ್ಯಂತ ಉತ್ಸಾಹ ಉಂಟಾಗುವದು. ತಣ್ಣೀರಿನ ಸ್ನಾನವು ತಮಗೆ ತಡೆಯುವದೋ ಇಲ್ಲವೋ ಎಂಬದನ್ನು ನೋಡಲಿಕ್ಕೆ ಬಂದು ಉಪಾಯವಿರುತ್ತದೆ. ಅದೇನೆಂದರೆ—ಸ್ನಾನ ಮಾಡಿದ ಕೂಡಲೆ ಶರೀರದೊಳಗಿಂದ ಬೆಚ್ಚಗಿನ ಉಗೆಯು ಹೊರಡುವಂತೆ ತೋರಿದರೆ, ಅದರಿಂದ ತಮಗೆ ಹಿತವಾಗುವದೆಂದು ತಿಳುಕೊಳ್ಳಬೇಕು. ಈ ಉಷ್ಣೋದ್ರೇಕಕ್ಕೆ "ಪ್ರತಿಕ್ರಿಯಾ" ಎಂಬ ಹೆಸರು. ತಣ್ಣೀರು ಹತ್ತಿ ಶರೀರವು ಮೊದಲು ತಂಪಾಗಿ, ಬಳಿಕ ಪ್ರತಿಕ್ರಿಯೆಯು ಸಂಭವಿಸಿ, ಶಕೆಯು ಹೊರಬೀಳುವದು ಸುಚಿಹ್ನವೆಂದು ತಿಳುಕೊಳ್ಳಬೇಕು. ಬಂದು ವೇಳೆ ತಣ್ಣೀರಿನಿಂದ ಸ್ನಾನ ಮಾಡಿದ ಕೂಡಲೆ ಹೀಗೆ ಆಗದಿದ್ದರೆ, ಸ್ನಾನ ಮಾಡುವವರು ತಕ್ಕಷ್ಟಕ್ಕಿಂತ ಹೆಚ್ಚು ವೇಳೆ ತಣ್ಣೀರಿನಲ್ಲಿ ಕುಳಿತರೆಂದು ತಿಳುಕೊಳ್ಳಬೇಕು; ಮರು ದಿವಸ ಸ್ನಾನವನ್ನು ಬೇಗನೇ ತೀರಿಸಬೇಕು; ಅಂದರೂ ಬಿಸಿ ಬಿಸಿ ಉಗೆಯು ಶರೀರದಿಂದ ಹೊರಡದೆ ಚಳಿ ಚಳಿಯಾಗ ಪತ್ತಿದರೆ, ತಣ್ಣೀರಿನ ಸ್ನಾನವು ತಮಗೆ ತಡೆಯುವದಿಲ್ಲೆಂದು ತಿಳುಕೊಳ್ಳಬೇಕು.

ರೇಸಿಮೆಯು ಹುಳಗಳಿಂದಲೇ ಹುಟ್ಟುತ್ತದೆಂದು ಹೇಳುವಹಾಗಿಲ್ಲ. ಪಲವು ವನಸ್ಪತಿಗಳ ತಂತುಗಳಿಂದ ಸಹ ಅದು ಆಗುತ್ತದೆ. ಆದರೆ ಅದು ಹುಳಗಳಿಂದಾದ ರೇಸಿಮೆಯಷ್ಟು ಬೆಲೆಯುಳ್ಳದ್ದೂ ತಾಳಿಕೆಯುಳ್ಳದ್ದೂ ಇರುವದಿಲ್ಲ. ಉತ್ತಮ ಬಣ್ಣವ ರೇಸಿಮೆಯನ್ನು ಬಿದರಿನ ತಂತುಗಳಿಂದ ತೆಗೆಯುತ್ತಾರೆ. ಅಮೃಷ್ಣ ಪ್ರದೇಶಗಳೊಳಗಿನ ಜನರು ಬಿದರಿನಿಂದ ಹುಟ್ಟಿದ ರೇಸಿಮೆಯ ಬಟ್ಟೆಗಳನ್ನು ಧರಿಸುವರು. ಯಾಕಂದರೆ ಅವು ಹಗುರೂ ಛಿದ್ರವುಳ್ಳವೂ ಇರುತ್ತವೆ. ರೇಸಿಮೆಯಂಥ ಬಂಮು ತರದ ನಯವಾದ ಅರಳಿ ಇರುತ್ತದೆ. ಅದರಿಂದ ಜಿನುಗಾದ ತಂತುಗಳನ್ನು ತೆಗೆದು, ಅವುಗಳಿಂದ ರೇಸಿಮೆಯನ್ನು ಮಾಡುತ್ತಾರೆ. ಈ ರೇಸಿಮೆಯಲ್ಲಿ ಬೇರೆ ಬೇರೆ ಪ್ರಕಾರಗಳುಂಟು. ಈ ರೇಸಿಮೆಗೆ ವನಸ್ಪತಿಯ ರೇಸಿಮೆಯೆಂದೆನ್ನುತ್ತಾರೆ. ಇದರಿಂದ ಮಾಡಲ್ಪಟ್ಟ ವಸ್ತ್ರಗಳು ಮೂರಾಟಕ್ಕಾಗಿ ಬರುತ್ತವೆ.

ಕಾಜಿನಲ್ಲಿ ಛಿದ್ರಗಳುಂಟೋ? ನಾವು ವಾಡಿಕೆಯಾಗಿ ನೋಡುವಂಥ ಕಾಜಿನಲ್ಲಿ ಅಂದರೆ ಗ್ಲಾಸುಸೀಸೆಗಳ ಕಾಜಿನಲ್ಲಿ ಛಿದ್ರಗಳು ಇರುವದಿಲ್ಲ. ಅದರೊಳಗೆ ಗಾಳಿಯಾಗಲಿ ನೀರಾಗಲಿ ಸೇರುವ ಸಂಭವವಿರುವದಿಲ್ಲ. ಇಟಲಿಯೊಳಗಿನ ಕೋಮೋ ಎಂಬ ಸರೋವರದ ದಂಡಿಯಲ್ಲಿರುವ ಅಂಬಿಗರು ಅಲ್ಲಿಗೆ ಹೋಗುವ ಪ್ರವಾಸಿಗಳಿಗೆ ಬಂದು ಆಶ್ಚರ್ಯಕರವಾದ ಸಂಗತಿಯನ್ನು ತೋರಿಸುತ್ತಿರುತ್ತಾರೆ. ಅದು ಏನೆಂದರೆ :—ಬಂಮು ಬರಿದಾದ ಸೀಸೆಯನ್ನು ತೆಗೆದುಕೊಂಡು ಅದಕ್ಕೆ ಬಿಗಿಯಾದ ಬೂಚನ್ನು ಕೂಡ್ರಿಸಿ, ಸುತ್ತಲು ಅರಗು ಹಚ್ಚಿ ಬಳಗೆ ನೀರು ಸೇರದಂ

ತೆ ಮಾಡುತ್ತಾರೆ. ಬಳಿಕ ಆ ಸೀಸೆಯನ್ನು ೧೫೦ ಘೂಟು ನೀರಿನ ಕೆಳಗೆ ತುಸು ಹೊತ್ತು ಇಟ್ಟು, ಪುನಃ ಹೊರಗೆ ತೆಗೆಯುತ್ತಾರೆ. ಅಷ್ಟರಲ್ಲಿ ಸೀಸೆಯ ಬಾಯಿಗೆ ಹಾಕಿದ ಬೂಚಿಯ ಅರಗೂ ಇದ್ದಂತೆ ಇದ್ದು, ಒಳಗೆ ಬಂದು ಪಂಚ ಪಾತ್ರೆಯ ತುಂಬ ನೀರು ಸೇರಿರುತ್ತದೆ. ಇದರಿಂದ ನೋಡುವವರು ಕಾಜು ಛಿದ್ರವಾಯವಿದ್ದ ದ್ದರಿಂದ ಅವುಗಳೊಳಗಿಂದ ನೀರು ಸೀಸೆಯಲ್ಲಿ ಸೇರಿತೆಂದು ಸಹಜವಾಗಿಯೇ ಎಣಿಸುವರು. ಆದರೆ ವಾತಾವರಣದ ನಾಲ್ಕು ಮಡಿ ಭಾರವು ಆ ಸೀಸೆಯ ಮೇಲೆ ಬೀಳಲು, ಆ ಬೂಚಿಸೊಳಗಿನ ಮತ್ತು ಅರಗಿನೊಳಗಿನ ಛಿದ್ರಗಳು ನೀರು ಸೇರುವಷ್ಟು ಆಗಲಾಗಿ ಅವುಗಳೊಳಗಿಂದ ನೀರು ಒಳಗೆ ಹೋಯಿತೇ ಹೊರತು ಕಾಜು ಛಿದ್ರವಾಯವಾದದ್ದಲ್ಲ.

ಕಾಜು ಛಿದ್ರಯುಕ್ತವಾದದ್ದಲ್ಲೆಂಬದನ್ನು ಸಿದ್ಧ ಮಾಡುವುದು ಕಠಿಣವಲ್ಲ. ಬಂದು ಸೀಸೆಯ ಬಾಯಿಯನ್ನು ತಕ್ಕಷ್ಟು ಕಾಸಿ ಅದರ ಬಾಯಿಯನ್ನು ಗಾಳಿ ಹೋಗದಂತೆ ಬಂದು ಮಾಡಿ, ಅದನ್ನು ನೀರೊಳಗೆ ಬೇಕಾದಷ್ಟು ಮುಳುಗಿಸಿ ಎವರೂ ಬಂದು ಹನಿ ನೀರು ಸಹ ಒಳಗೆ ಸೇರುವದಿಲ್ಲೆಂದು ನಿರ್ಣಯಕ್ಕೆ ಬರುವದು. ನೀರು ತುಂಬಿದ ಸೀಸೆಯು ಹೊರಮುಗ್ಗಲು ಬೆವ್ವಾಪ್ಪಿ ನೀರಿನ ಕಣಗಳು ಕಾಣಿಸುತ್ತವೆ. ಇವಾದರೂ ಸೀಸೆಯೊಳಗಿಂದ ಹೊರ ಬಂದ ನೀರಿನ ಕಣಗಳಲ್ಲ. ಆದರೆ ಇಬ್ಬನಿಯು ಯಾವ ಕಾರಣದಿಂದ ಹುಟ್ಟುತ್ತದೆಯೋ ಅದೇ ಕಾರಣದಿಂದ ಹವೆಯೊಳಗಿನ ಬಾಷ್ಪಕ್ಕೂ ಸೀಸೆಯೊಳಗಿನ ನೀರಿನ ಚಳಿಗೂ ಸಂಯೋಗವಾಗಲು, ಆ ಬಾಷ್ಪವು ಘನರೂಪ ಧರಿಸಿ ನೀರಿನ ಕಣಗಳ ರೂಪದಿಂದ ಕಾಣಿಸುವದು.

ಇತ್ತೀಚ್ಗಲಾಗಿ ಪಾರೀಸದ ಒಬ್ಬ ಕಲ್ಪಕನು ಛಿದ್ರವು ಯುವಾದ ಕಾಜನ್ನು ಮಾಡಿರುತ್ತಾನೆಂದು ತಿಳಿಯುತ್ತದೆ. ಇಂಥ ಕಾಜಿನ ಹಾಳಿಗಳನ್ನು ಖಿಡಿಕೆಗಳಿಗೆ ಹಚ್ಚಿದರೆ ಗಾಳಿ ಯಾಡಲಿಕ್ಕೂ ಪ್ರಕಾಶಕ್ಕೂ ಅನುಕೂಲವಾಗಿ ಜನರ ಸುಖ ಸೋಯಿಗಳೂ ಬೆಳೆಯುವವೆಂದು ತೋರುತ್ತದೆ.

ಅತಿಶಯ ತೀಕ್ಷ್ಣದೃಷ್ಟಿಯ ಜನರು—ಶರೀರದ ಸು ಸ್ಥಿತಿಯಲ್ಲಿ ಕೆಲವು ಇಂದ್ರಿಯಗಳನ್ನು ಕೆಲಸಕ್ಕೆ ಹಚ್ಚಿದಂ. ತೆ ಬಲ ಪಡುತ್ತವೆಂದು ನಮಗೆ ಸ್ಪಷ್ಟವಾಗಿ ತೋರುವದ ನೇತ್ರೇಂದ್ರಿಯವಾದರೂ ಈ ನಿಯಮಕ್ಕೆ ಅಪವಾದವಲ್ಲ. ಇದೇ ಕಾರಣದಿಂದ ಸೂರ್ಯನ ಪ್ರಕಾಶದೊಳಗೆ ಬೈಲು ಪ್ರದೇಶದಲ್ಲಿ ಅದನ್ನು ಹೆಚ್ಚು ಹೆಚ್ಚು ಉಪಯೋಗಿಸಿದಂತೆ ಅದು ಹೆಚ್ಚು ಹೆಚ್ಚು ತೀಕ್ಷ್ಣವಾಗುತ್ತ ಹೋಗುತ್ತದೆ. ಮಾಡಿಕೆಯಾಗಿ ಕಾಡು ಜನರ ಕಣ್ಣುಗಳು ಬಹಳ ತೀಕ್ಷ್ಣ ವಿರುತ್ತವೆ. ಇದರ ಕಾರಣವೇನೆಂದರೆ—ಅವರು ಯಾವಾಗ ಲೂ ಬೇಟೆಯಾಡಬೇಕಾಗುತ್ತದೆ. ಬೇಟೆಗಾರರಿಗೆ ಕಣ್ಣಿನ ಉಪಯೋಗವೇ ಹೆಚ್ಚಿರುತ್ತದೆ. ಸೊಲೋಮನ್ ನಡುಗಡ್ಡೆ ಯೊಳಗಿನ ಜನರ ದೃಷ್ಟಿಯು ಬಹಳ ಚುರುಕುಳ್ಳದ್ದು. ಅ ವರಿಗೆ ಬಹು ದೂರದ ಹಡಗಗಳೂ ಪತ್ತೆಮೂರಿಗಳೂ ಬೇ ಗ ಕಾಣಿಸುವವು. ಭೂಮಿಯಿಂದ ೬೦—೭೦ ಫೂಟು ಎತ್ತರ ವಾದ ಗಿಡದ ದಟ್ಟಾದ ಎಲೆಗಳ ನಡುವೆ ಅಡಿಗಿ ಕೂತಂಥ ಕಪ್ಪಿಗಳನ್ನು ಅವರು ತಪ್ಪದೆ ಗೊತ್ತು ಹಚ್ಚಿ, ಗುರಿ ಇಟ್ಟು ಬಾಣದಿಂದ ಎಸೆದು ಕೆಳಗೆ ಕೆಡಹುತ್ತಾರೆ. ದನ ಕಾಯುವ ತರವುತ್ತು ಅಂಬಿಗರ ದೃಷ್ಟಿಯು ಬಹಳ ತೀಕ್ಷ್ಣವಿರುತ್ತದೆ. ಎಸ್ಕಿಮೋ ಜಾತಿಯ ಕಾಡು ಮನುಷ್ಯನು ಶುಭ್ರವಾದ ಬ ಯಲ್ಲಿ ಸಂಚರಿಸುವಂಥ ಬಿಳಿ ನರಿಯನ್ನು ಬೇಕಾದಷ್ಟು

ದೂರಿಂದ ಗೊತ್ತು ಹಚ್ಚುತ್ತಾನೆ. ಅರಬಸ್ಥಾನದ ಉಸುಬಿನ ಅರಣ್ಯದಲ್ಲಿ ವಾಸಿಸುವ ಅರಬನು ಅನ್ಯರಿಗೆ ಕಾಣಿಸದಂಥ ಸೂಕ್ಷ್ಮವಾದ ಪದಾರ್ಥಗಳನ್ನು ಉಸುಬಿನಲ್ಲಿ ದೂರಿಂದಲೇ ಕಂಡು ಹಿಡಿಯುತ್ತಾನೆ. ದೂರ ಅಂದರೆ ಹತ್ತಿಪ್ಪತ್ತು ಫೂಟು ಅಲ್ಲ; ಆದರೆ ಬಂದರಿಂದ ಹತ್ತು ಮೈಲುಗಳವರೆಗೆ ಎಂದು ತಿಳುಕೊಳ್ಳ ತಕ್ಕದ್ದು!! ಸುಧಾರಿಸಿದ ಜನರಲ್ಲಿ ನಾರ್ವೇಜಿಯನ್ನ ಜನರ ದೃಷ್ಟಿಯು ಬಹಳ ತೀಕ್ಷ್ಣವಾದದ್ದು. ಇತ್ತೀಚ್ಚಲಾಗಿ ತಿದ್ದು ಪಾಟಾದ ಜನರ ದೃಷ್ಟಿಯು ಮಂದವಾಗುತ್ತ ನಡದದೆ. ಬೆಳಕಿಲ್ಲದ ಕೋಣೆಗಳೂ ಅಂಥ ಕೋಣೆಗಳಲ್ಲಿ ಚಿಕ್ಕ ವಯಸ್ಸಿನೊಳಗೆ ಮಾಡಬೇಕಾದ ಸಣ್ಣಕ್ಷರದ ಪುಸ್ತಕಗಳ ವಾಚನವೂ ದೃಷ್ಟಿ ಮಾಂದ್ಯಕ್ಕೆ ಬಲವಾದ ಕಾರಣಗಳಾಗಿವೆ.

THE MORAL TRAINING OF CHILDREN.

ಮಕ್ಕಳ ನೀತಿ ಶಿಕ್ಷಣವು.

(ಎಂಟನೇ ಪುಟದಿಂದ ಮುಂದೆ ಸಾಗಿದ್ದು.)

ಸತ್ಯವಂಶಿಕೆ.

ಸುಳ್ಳು ಹೇಳುವ ದುರ್ಗುಣವು ಮಕ್ಕಳಿಗೆ ಬಹು ಬೇಗನೇ ಹತ್ತುವದು. ಇದರಷ್ಟು ಬೇಗನೇ ಹತ್ತುವ ದುರ್ಗುಣವು ಮತ್ತೊಂದಿಲ್ಲ. ಎರಡನೆಯವರಿಗೆ ಕೇಡು ಆಪತ್ತು ಸಂಪ್ಟವು ಆಗದಿದ್ದರೆ ತೀರಿತು, ಸುಳ್ಳಾಡಿದರೆ ಏನೂ ದೋಷವಿಲ್ಲೆಂದು ಜನರು ತಿಳಿಯುವರು. ಇದು ಎಷ್ಟು ಮಾತ್ರವೂ ಸರಿಯಲ್ಲ. ಪರಿಣಾಮದಿಂದ ಸುಳ್ಳು ಮಾತಿನ ಗ್ರಾಹ್ಯಾಗ್ರಾಹ್ಯತೆಯನ್ನು ನಿರ್ಣೈಸಲಾಗದು. ವಂಚಿಸುವ ಬುದ್ಧಿಯಿಂದ ನುಡಿದದ್ದೆಲ್ಲ ಸುಳ್ಳು. ಅದು ಸರ್ವಥಾ ತ್ಯಾಜ್ಯವು.

ನಮ್ಮ ಪೂರ್ವಜರು ಸತ್ಯವಂತಿಕೆಯ ಬಗ್ಗೆ ಹೆಸರಾಗಿದ್ದಾರೆ. ಶಿಬಿ, ಶ್ರೀಯಾಳ ಎಂಬ ಅರಸರು ವಚನವನ್ನು ಕಾಯುವದಕ್ಕಾಗಿ ತಮ್ಮ ಶರೀರವನ್ನೂ ಮಗನನ್ನೂ ಕೊಟ್ಟದ್ದು ಪ್ರಸಿದ್ಧ ಉಂಟು. ಅದೇಮೇರೆಗೆ ಹರಿಶ್ಚಂದ್ರನೆಂಬ ಅರಸು ಕನಸಿನಲ್ಲಿ ಕೊಟ್ಟ ಭಾಷೆಗಾಗಿ ವಿಶ್ವಾಮಿತ್ರನಿಗೆ ರಾಜ್ಯವನ್ನು ಕೊಟ್ಟದ್ದಲ್ಲದೆ ಹೊಲಿಯನಿಗೆ ಆಳಾಗಿ ತನ್ನ ವಚನವನ್ನು ಕಾಪಾಡಿಕೊಂಡನು. ಈ ಪುರಾಣದ ಕಥೆಗಳು ಹಾಗಿರಲಿ. ಗ್ರೀಕ ಜನರು ಹಿಂದುಸ್ಥಾನಕ್ಕೆ ಅದೇ ಮೊದಲು ಬಂದಾಗ್ಗೆ ನಮ್ಮ ಪೂರ್ವಜರಲ್ಲಿ ಕಂಡು ಬಂದ ಪವಿತನವನ್ನು ಕುರಿತು ಅವರನ್ನು ಬಹಳವಾಗಿ ಹೊಗಳಿದ್ದಾರೆ. ನಮ್ಮಲ್ಲಿದ್ದ ಈ ಸದ್ಗುಣವು ಕ್ರಮೇಣ ಕಡಿಮೆಯಾಗುತ್ತ ಬಂದಿದೆ. ಮನುಷ್ಯನು ತನಗಿಂತ ಬಲಾಢ್ಯನ ಕೈಯಲ್ಲಿ ಸಿಕ್ಕಾಗ್ಗೆ ಅವನಿಂದುಂಟಾಗುವ ತೊಂದರೆಗಳನ್ನು ಬಗೆ ಬಗೆಯ ತಂತ್ರಗಳಿಂದ ತಪ್ಪಿಸಿಕೊಳ್ಳುವದಕ್ಕೆ ಸಹಜವಾಗಿಯೇ ಪ್ರಯತ್ನಿಸುವನು. "ಬಲವಂತನೇ ಬಾಧ್ಯಸ್ಥನು" ಎಂಬ ತತ್ವದ ಸಾಮ್ರಾಜ್ಯವೇ ಠಕ್ಕು ತನಕ್ಕೆ ಮೂಲಾಧಾರವಾಗಿರುತ್ತದೆ. ಸತ್ಯವಂತಿಕೆ ಎಂಬ ಈ ಮೇಲಾದ ಸದ್ಗುಣವನ್ನು ಪಡೆಯಲಿಕ್ಕೆ ಎಲ್ಲರೂ ಎತ್ನಿಸತಕ್ಕದ್ದು. ಪಾರ್ಸಿಸ್ಥಾನದ ಪ್ರಖ್ಯಾತ ಅರಸನಾದ ಸೈರಸನಿಗೆ ಬಂದು ಪ್ರಸಂಗದಲ್ಲಿ "ನೀವು ಮೊದಲು ಏನು ಕಲಿತುಕೊಂಡಿರಿ" ಎಂದು ಕೇಳಲು, ಅವನು "ನಾನು ಸತ್ಯವಾತಾಡಲಿಕ್ಕೆ ಕಲಿತೆನು" ಎಂದು ಉತ್ತರಕೊಟ್ಟನು.

ಈ ಗೌರವದ ಉತ್ತರವನ್ನು ಎಲ್ಲ ತಾಯಿತಂದೆಗಳು ಲಕ್ಷ್ಯದಲ್ಲಿಟ್ಟು ತಮ್ಮ ಮಕ್ಕಳಿಗೆ ಚಿಕ್ಕಂದಿನಲ್ಲಿಯೇ ಸತ್ಯವಾತಾಡಲಿಕ್ಕೆ ಕಲಿಸಬೇಕು. ಇದರಿಂದ ಅವರಿಗೂ ಮಕ್ಕ

ಳಿಗೂ ಬಹಳ ಹಿತವಾಗುವದು. ಮಕ್ಕಳಲ್ಲಿ ಸತ್ಯಾಂತಿಕ ಎಂಬ ಗುಣವು ಸೇರಬೇಕಾದರೆ, ತಾಯಿತಂದೆಗಳು ಕೆಳಗೆ ಬರೆದ ನಿಯಮಗಳನ್ನು ಅನುಲಕ್ಷಿಸಿ ವರ್ತಿಸತಕ್ಕದ್ದು.

೧. ತಾಯಿತಂದೆಗಳು ಸ್ವತಃ ಸತ್ಯ ಮಾತಾಡಿ ಮಕ್ಕಳಿಗೆ ಅದೇಪ್ರಕಾರ ಮಾತಾಡಲಿಕ್ಕೆ ಪಚ್ಚಬೇಕು. ಎಷ್ಟೋ ತಾಯಿತಂದೆಗಳು ಮಕ್ಕಳಿಗೆ ಸತ್ಯಕ್ಕೆ ಬದಲಾಗಿ ಸುಳ್ಳಾಡಲಿಕ್ಕೆ ಕಲಿಸುತ್ತಾರೆ. ಈ ನಡತೆಯು ಬಹಳ ಕೆಟ್ಟದ್ದು. ತಾಯಿಯು ಪೇಟೆಗೆ ಹೋಗತಕ್ಕದ್ದಿದ್ದರೆ, ಮಗನಿಗೆ ನೀರು ತರುವದಕ್ಕೆ ಬಾವಿಗೆ ಹೋಗುತ್ತೇನೆಂದು ಹೇಳಿ ಹೋಗುವಳು. ಈ ನುಡಿಯು ಸುಳ್ಳಾದದ್ದೆಂದು ಆ ಹುಡುಗನು ಸುಲಭವಾಗಿ ತಿಳುಕೊಂಡು, ಆಕೆಗೆ "ನೀನು ಬಾವಿಗೆ ಹೋಗುವದಿಲ್ಲ" ಎಂದು ನುಡಿದರೆ, ಆ ತಿಳಿಗೇಡಿಯಾದ ತಾಯಿಯು, ತನ್ನ ಈ ನಡತೆಯಿಂದ ಮಗನಿಗೆ ಮುಂದೆ ಕೇಡಾಗುವದೆಂಬದನ್ನು ಎಷ್ಟು ಮಾತ್ರವೂ ಲಕ್ಷಕ್ಕೆ ತಾರದೆ, ನೆರೆಹೊರೆಯ ಹೆಂಗಸರ ಮುಂದೆ "ನನ್ನ ಮಗನು ಎಷ್ಟು ಜಾಣನಿದ್ದಾನೆ ನೋಡಿರಿ, ನನ್ನ ಮೋಸವನ್ನು ಅಗಲೇ ಕಂಡು ಹಿಡಿಯುತ್ತಾನೆ" ಎಂದು ಅಕ್ಕರತೆಯಿಂದ ಹೇಳುವಳು.

ಒಂದುಸಾರೆ ಒಬ್ಬ ಚಿಕ್ಕ ಹುಡುಗನ ಹಲ್ಲನ್ನು ಕೀಳತಕ್ಕದ್ದಿತ್ತು. ಆಗ ಆ ಹುಡುಗನು ಅಂಜಿ ಬಾಯಿತೆರೆಯಲಿಲ್ಲ. ತಾಯಿಯು ಮಗನಿಗೆ "ತಮ್ಮಾ, ವೈದ್ಯರು ನಿನಗೆ ಏನೂ ಮಾಡುವದಿಲ್ಲ. ಬಾಯಿ ತೆರೆದು ಅವರಿಗೆ ಹಲ್ಲು ತೋರಿಸು, ಅಂಜ ಬೇಡ. ನಾನು ನಿನ್ನ ಬಳಿಯಲ್ಲಿಯೇ ಇರುತ್ತೇನೆ" ಎಂದು ಹೇಳಿದಳು. ಹುಡುಗನು ತಾಯಿಯ ಮಾತನ್ನು ನಂಬಿ, ಬಾಯಿ ತೆರೆದನು. ಕೂಡಲೆ ವೈದ್ಯನು ಅವನ ಹಲ್ಲನ್ನು ಕಿತ್ತು ಬಿಟ್ಟನು.

ಮೋಸದಿಂದ, ಬಯಸಿದ ಫಲವು ಬಹ್ಮೆ ಮಾತ್ರ ಕೈ
ಹತ್ತುವದು. ಎರಡನೇ ಸಾರೆ ಮೊಸವು ಹೊರ ಬಿದ್ದು ಅಪ
ಪ್ತಿಸಿದ ಫಲವು ದೊರಕುವದಿಲ್ಲ. ಮಕ್ಕಳನ್ನು ವಂಚಿಸಹತ್ತಿ
ದರೆ ತಾಯಿತಂದೆಗಳ ಬಗ್ಗೆ ಅವರ ಮನಸಿನಲ್ಲಿ ಎಷ್ಟು
ಮಾತ್ರವೂ ಆದರ ಉಳಿಯಲಾರದು. ತಾಯಿತಂದೆಗಳ
ಬಂದು ಮೇಳೆ ಸತ್ಯ ನುಡಿದಾಗ್ಯೂ ಅದನ್ನು ನಂಬುವದಿ
ಇಷ್ಟೇ ಅಲ್ಲ; ಆದರೆ ತಾಯಿತಂದೆಗಳು ಹಾಕಿ ಕೊಟ್ಟ
ಕಿತ್ತೆಯನ್ನೇ ತೀಡುವರು.

ಪಿಶಾಚಿಗಳ ಭಯವನ್ನು ಮಕ್ಕಳಿಗೆ ತೋರಿಸಬಾರದೆ
ದು ಹಿಂದೆ ಹೇಳಿದ್ದೇವೆ. ಇದರಿಂದ ಮಕ್ಕಳು ಸುಳ್ಳಾ
ಹತ್ತುವದಲ್ಲದೆ, ಅವರಲ್ಲಿ ಪಿಶಾಚಿಗಳ ಸಂಬಂಧದ ಸುಳ್ಳು
ಪರಿಕೆಯು ನೆಲೆಗೊಳ್ಳುವದು.

ತಾಯಿತಂದೆಗಳು ಅವಿಚಾರದಿಂದ ಮಕ್ಕಳಿಗೆ ದೊಡ್ಡ
ದೊಡ್ಡ ಇನಾಮುಗಳನ್ನು ಕೊಡುತ್ತೇವೆಂದು ಹೇಳುವದು
ಸುಳ್ಳು ಸುಳ್ಳೇ ಅವರನ್ನು ಅಂಜಿಸುವದೂ ಸರಿಯಲ್ಲ. ಒ
ಮ್ಮೊಮ್ಮೆ ಸಿಟ್ಟಿನ ಭರದಲ್ಲಿ ಬಾಯಿಗೆ ಬಂದದ್ದೂ ಬಾ
ದ್ದೂ ಆಡಿಬಿಡುತ್ತಾರೆ. ಮುಂದೆ ತಾವು ಆಡಿದ ಮೇರೆ
ಮಾಡಲಿಕ್ಕೆ ಆಗದ್ದನ್ನು ನೋಡಿ ಉಪಾಯವಿಲ್ಲದೆ ಕೊಟ್ಟ
ವಚನವನ್ನು ಮುರಿದು ಬಿಡುತ್ತಾರೆ. ಹುಡುಗರು ತಮಗ
ಯೋಗ್ಯವಲ್ಲದಂಥ ಪ್ರಶ್ನೆಗಳನ್ನು ಮಾಡಿದರೆ, ಅವರಿ
" ನೀವು ದೊಡ್ಡವರಾದ ಮೇಲೆ ಈ ಸಂಗತಿಗಳು ನಿಮಗ
ತಿಳಿಯುವವು " ಎಂದು ಹೇಳತಕ್ಕದ್ದು. ಮಕ್ಕಳನ್ನು
ಆಡಿಸುವ ಸೇವಕಜನರು ಬಹ್ಮೊಮ್ಮೆ ಮಕ್ಕಳಿಗೆ ಸುಳ್ಳಾಡ
ಕಲಿಸುತ್ತಾರೆ. ಬಂದು ಸಾರೆ ಒಬ್ಬ ಚಿಕ್ಕ ಹುಡುಗನು
ಮೇಜಿನ ಮೇಲಿನ ಬಂದು ಕಾಜಿನ ಪಾತ್ರೆಯನ್ನು ಕೆಳಗ
ಕೆಡವಿ ಬಡೆದನು. ಆಗ್ಗೆ ಸೇವಕನು " ಅದನ್ನು ಬೆಕ್ಕು

ಒಡೆಯಿತು ಎಂದು ತಾಯಿಗೆ ತಿಳಿಸು " ಎಂದು ಹೇಳಿದನು. ಅದಕ್ಕೆ ಆ ಸುರಿಕ್ಷೆಗೆ ಬಳಗಾದ ಮಗನು " ಇಲ್ಲ ನಾನು ಏಂ ದೂ ಸುಳ್ಳು ಹೇಳಲಾರೆನು " ಎಂದು ಉತ್ತರ ಕೊಟ್ಟನು.

೨. ಹುಡುಗರಲ್ಲಿ ಸುಳ್ಳಾಡಿ ಪೂರಾಗುವ ಬುದ್ಧಿಯು ಹುಟ್ಟುವಂತೆ ಮಾಡಬಾರದು—ಹುಡುಗರು ತಪ್ಪು ಮಾಡಿದಾ ಗ್ಲೂ, ನೀವು ಇಂಥ ತಪ್ಪನ್ನು ಮಾಡಿದಿರೋ ಎಂದು ಗದ್ದ ರಿಸಿ ಕೇಳಿದರೆ, ಅವರು ಅಂಜಿಕೊಂಡು ಸುಳ್ಳಾಡುವರು. ಇಂಥ ಪ್ರಸಂಗಗಳಲ್ಲಿ ಅವರನ್ನು ಪ್ರತ್ಯಕ್ಷವಾಗಿ ವಿಚಾರಿಸದಿ ರುವದೇ ಉತ್ತಮ. ಬಂದು ವೇಳೆ ನೀವು ಇಂಥ ತಪ್ಪನ್ನು ಮಾಡಿದಿರೋ ಎಂದು ಸಿಟ್ಟಿನಿಂದ ಅವರನ್ನೇ ಕೇಳಿದರೆ, ಪ್ರಾಕ್ಕ ಹುಡುಗರು ಶಿಕ್ಷೆಯ ಭಯದಿಂದ ಸಹಜವಾಗಿಯೇ ಸುಳ್ಳಾಡುವರು. ಇದು ಹ್ಯಾಗಾಯಿತು ಹೇಳಿರಿ, ಮುಂತಾದ ಪ್ರಶ್ನೆಗಳನ್ನು ಪುನಃ ಪುನಃ ಕೇಳಿ, ತಪ್ಪನ್ನು ಮುಚ್ಚಿ ಕೊ ಳ್ಳುವದಕ್ಕಾಗಿ ಕೈಗಂಟು ಹಾಕಿ ಇಲ್ಲದ್ದೊಂದು ಹೇಳುವ ದಕ್ಕೆ ಅವರನ್ನು ಹಚ್ಚಬಾರದು. ಆ ತಪ್ಪಿನ ಸಂಬಂಧವಾಗಿ ಅವರನ್ನು ಕೇಳದೆ ಹೊರಗಿನಿಂದ ಹೊರಗೇ ತಮ್ಮ ಮನ ಸಿನ ಖಾತ್ರಿ ಮಾಡಿಕೊಳ್ಳತಕ್ಕದ್ದು. ಬಂದುವೇಳೆ ಅವರನ್ನೇ ಕೇಳಬೇಕಾಗಿದ್ದರೆ, ಬಹು ಶಾಂತತೆಯಿಂದಲೂ ಪ್ರೀತಿಯ ಮಾತುಗಳಿಂದಲೂ ವಿಚಾರಿಸಿ, ಅವರು ಸತ್ಯವನ್ನೇ ಹೇಳು ವಂತೆ ಅವರಿಗೆ ಉತ್ತೇಜನ ಕೊಡಬೇಕು.

ಅಮೇರಿಕಾ ಖಂಡದಲ್ಲಿ ಸತ್ಯವಂತಿಕೆಯ ಬಗ್ಗೆ ಹೆಸರು ಪಡೆದಂಥ ಜಾರ್ಜ ವಾಶಿಂಗ್ಟನ್ನನ ಉದಾಪರಣೆಯನ್ನೂ ನಮ್ಮ ದೇಶದಲ್ಲಿ ಸತ್ಯತನದ ಬಗ್ಗೆ ಕೀರ್ತಿ ಹೊಂದಿದಂಥ ಪರಿಕ್ಷಿತ್ತರಾಯನ ಉದಾಹರಣೆಯನ್ನೂ ಮಕ್ಕಳಿಗೆ ಹೇಳ ತಕ್ಕದ್ದು.

ಮಕ್ಕಳು ಏನಾದರೂ ಬಡೆದರೆ ಇಲ್ಲವ ತಪ್ಪು ಮಾಡಿದರ, ಅವರು ಕೂಡಲೇ ತಾಯಿಯ ಬಳಿಗೆ ಹೋಗಿ, ಮಾಡಿದ ತಪ್ಪನ್ನು ಅವಳಿಗೆ ಹೇಳುವಂತೆ ಮಾಡತಕ್ಕದ್ದು. ಆದಕ್ಕೆ ತಾಯಿಯು " ನೀನು ಸತ್ಯ ಮಾತಾಡಿದ್ದನ್ನು ಕೇಳಿ ನನಗೆ ಬಹಳ ಸಂತೋಷವಾಯಿತು; ಆದ ಕೇಡನ್ನು ನೋಡಿ, ದುಃಖವಾಯಿ ತು ಸರಿ; ಆದರೆ ನೀನು ನನ್ನನ್ನು ವಂಚಿಸುವ ಪ್ರಯತ್ನ ಮಾಡಿದ್ದಿ ನನಗೆ ಹೇಳ ಕೂಡದಷ್ಟು ದುಃಖವಾ ಗುತ್ತಿತ್ತು " ಎಂದು ಹೇಳಬೇಕು. ಬಂದು ಬೇಳೆ ಆ ಅಪ ರಾಧದಲ್ಲಿ ಹುಡುಗನ ಅಜಾಗ್ರತೆಯು ಕಂಡು ಬಂದರೆ ಅವ ನಿಗೆ ಸಿಟ್ಟು ಮಾಡತಕ್ಕದ್ದು.

SELECTIONS FROM THE KARNATIK GAZETTEER.

ಕನ್ನಡ ಗರೆಟಿಯರದಿಂದ ಅವತರಣಿಗಳು

(ಲಂಡನ್ನೇ ಪುಟದಿಂದ ಸಾಗಿದ್ದು)

ರೋಣ ತಾಲೂಕು.

ಈ ತಾಲೂಕು ಜಿಲ್ಲೆಯ ಈಶಾನ್ಯ ಮೂಲೆಯಲ್ಲಿ ಬಾ ದಾಮಿ ತಾಲೂಕಿನ ದಕ್ಷಿಣಕ್ಕೆ ಇರುತ್ತದೆ. ಸರಕಾರೀ ಹಳ್ಳಿ ಗಳು ೭೦, ದುಮಾಲೀ ಗ್ರಾಮಗಳು ೪ ಇರುತ್ತವೆ. ಕ್ಷೇತ್ರ ೩೭೦ ಚಚೌ ಕು ಮೈಲು, ಜನಸಂಖ್ಯೆ ೬೦೭೦೪, ಭೂಮಿ ಯ ಕಂದಾಯ ೧,೪೫,೯೭೪ ರೂಪಾಯಿ.

ಎಲ್ಲ ಕಡೆಯಲ್ಲಿ ಬಹು ಬೆಲೆಯುಳ್ಳ ಸಮನೆಲದ ಕರೀ ಭೂಮಿಯೇ ಹಬ್ಬಿರುವದು. ಒಕ್ಕಲತನವು ಸರಸಾಗಿ ಸಾ ಗುತ್ತದೆ. ಒಕ್ಕಲಿಗರು ದೈವುಳ್ಳವರು, ಹಳ್ಳಿಗಳು ದೂರ ದೂರ, ದೊಡ್ಡವು. ಊರೊಳಗೆ ಸಹ ಮರಗಳಿಲ್ಲ. ಪೂರ್ವ

ಉತ್ತರ ಭಾಗಗಳಲ್ಲಿ ಆಪರೂಪವಾಗಿ ಕೆಂಪು ಭೂಮಿಯು ನ್ನು ಕಾಣಬಹುದು.

ಹವೆ, ಮಳೆ, ನೀರು—ಮಳೆಗಾಲ ಆರೋಗ್ಯದ್ದು; ಚಳಿ ಗಾಲದಲ್ಲಿ ಜ್ವರೋಪದ್ರವ ಸ್ವಲ್ಪ ಆಗುತ್ತದೆ. ಮಳೆ ಅನಿ ಯಮಿತ; ರೋಣದಲ್ಲಿ ೭ ರಿಂದ ೩೭ ಇಂಚಿನವರಿಗೆ, ಸರಾ ಸರೀ ೨೩ ಇಂಚು ಮಳೆ ಬೀಳುವದು. ಮಾಯಮ್ಮ ಮೇರೆ ಯಲ್ಲಿ ಮಲಾಪಹಾರಿಯೂ ಬೆಣ್ಣೀಹಳ್ಳವೂ ಹರಿಯುತ್ತವೆ. ಕೆಲವುಗ್ರಾಮಗಳಿಗೆ ಕೆರೆಗಳೂ ಕೆಲವುಗಳಿಗೆ ಬಾವಿಗಳೂ ಇರುತ್ತವೆ. ನೀರಿನ ಕೊರತೆಯುಂಟು.

ದೊಡ್ಡ ಊರುಗಳು.

ರೋಣ—ಇದು ಧಾರವಾಡದ ಈಶಾನ್ಯಕ್ಕೆ ೪೫ ಮೈಲಿನ ಮೇಲೆ ಅದೆ. ಜನ ಸಂಖ್ಯೆ ೪೯೦೯. ಇದು ತಾಲೂಕಿನ ಮುಖ್ಯ ಗ್ರಾಮವು; ತಾಲೂಕಿನಲ್ಲಿ ಇರತಕ್ಕ ಕಛೇರಿಗ ಳೆಲ್ಲ ಇರುತ್ತವೆ. ರೋಣ ತಾಲೂಕಿನಷ್ಟು ಉತ್ಪನ್ನವು ದಕ್ಷಿಣ ಮಹಾರಾಷ್ಟ್ರದಲ್ಲಿ ಯಾವ ತಾಲೂಕಿಗೂ ಇಲ್ಲ ರೋಣದಲ್ಲಿ ೭ ಕರೇಕಲ್ಲಿನ ಗುಡಿಗಳಿವೆ. ಬಂದರಲ್ಲಿ ಸನ್ ೧೧೮೦ ನೇ ವರ್ಷದ ಲಿಪಿಯುಂಟು.

ಅಬ್ಬಿಗೇರಿ—ರೋಣದಿಂದ ೭ ಮೈಲಿನ ಮೇಲೆ ದಕ್ಷಿ ಣಕ್ಕೆ ದೊಡ್ಡ ಹಳ್ಳಿ ಇರುತ್ತದೆ. ಈಶ್ವರ, ಜೋತಿಲಿಂಗ ಎಂಬೆರಡು ಕರೇಕಲ್ಲಿನ ದೇವಸ್ಥಾನಗಳುಂಟು. ಅವುಗಳಲ್ಲಿ ಬಂದು ಶಿಲಾಲಿಪಿಯದೆ.

ನರೇಗಲ್ಲು—ರೋಣದ ಆಗ್ನೇಯಕ್ಕೆ ೧೦ ಮೈಲಿನ ಮೇಲೆ ಅದೆ. ಇದು ಬುನಾದಿಯಿಂದ ಹೆಸರಾದ ಗ್ರಾಮವು. ಬಂದು ಸಾಳು ಕೋಟೆಯುಂಟು. ಸೋಮವಾರ ಸಂತೆಯಾ ಗುತ್ತದೆ. ಇಲ್ಲಿ ೪ ಬುನಾದಿಯ ಗುಡಿಗಳುಂಟು. ಅವುಗ

ಳಲ್ಲಿ ಸೋಮೇಶ್ವರನ ಗುಡಿಯು ಭವ್ಯವಾದದ್ದೂ ಚೆಲುವಾದದ್ದೂ ಇರುತ್ತದೆ. ಇದಕ್ಕೆ ಎರಡು ಸಭಾಮಂಟಪಗಳೂ ಮೂರು ದಿಕ್ಕುಗಳಲ್ಲಿ ಮೂರು ಗರ್ಭಾಗಾರಗಳೂ ಇರುತ್ತವೆ. ಈ ಯಾವತ್ತು ಗುಡಿಗಳಲ್ಲಿ ಕೂಡಿ ಬಂಬತ್ತು ಶಿಲಾಲಿಪಿಗಳಿರುತ್ತವೆ. ಅವುಗಳಲ್ಲಿ ಎಲ್ಲಕ್ಕೂ ಹಳೇದು ೯೫೦ರಲ್ಲಿ ಬರೆದದ್ದಿರುತ್ತದೆ.

ಸವದಿ—ರೋಣದ ಆಗ್ನೇಯಕ್ಕೆ ೫ ಮೈಲಿನ ಮೇಲಿದೆ. ಬ್ರಹ್ಮದೇವ, ನಾರಾಯಣ ಎಂಬ ಬುನಾದಿಯ ಗುಡಿಗಳಲ್ಲಿ ಬಂದೊಂದು ಲಿಪಿಯುಂಟು. ಬ್ರಹ್ಮದೇವನ ಗುಡಿಯು ನೋಡತಕ್ಕಂಥಾದಿದೆ.

ಸೂಡಿ—ರೋಣದ ಈಶಾನ್ಯಕ್ಕೆ ೯ ಮೈಲಿನ ಮೇಲಿದೆ. ಇಲ್ಲಿ ನೂಲಿನ ವ್ಯಾಪಾರವು ನಡೆಯುತ್ತದೆ. ಹಳೇದೊಂದು ಕೋಟೆಯೂ ಮೂರು ಗುಡಿಗಳೂ ೪ ಲಿಪಿಗಳೂ ಇರುತ್ತವೆ. ಲಿಪಿಗಳೆಲ್ಲ ೧೦ನೇ ಶತಕದ ಈಚೆಯಲ್ಲಿ ಆದಂಥವು.

ಯಾವಗಲ್ಲು—ರೋಣದ ಪಶ್ಚಿಮಕ್ಕೆ ೧೫ ಮೈಲಿನ ಮೇಲಿದೆ. ಇದು ಸನ್ ೧೮೬೦ರ ವರೆಗೆ ಮಹಾಲಿನ ಮುಖ್ಯ ಗ್ರಾಮವಿತ್ತು.

ಗದಗ ತಾಲೂಕು.

ಕ್ಷೇತ್ರ—ಈ ತಾಲೂಕು ಜಿಲ್ಲೆಯ ಪೂರ್ವ ಭಾಗದಲ್ಲಿ ರೋಣ ತಾಲೂಕಿನ ದಕ್ಷಿಣಕ್ಕಿರುತ್ತದೆ. ಸರಕಾರೀ ಹಳ್ಳಿಗಳು ೧೧೪, ದುಮ್ಮಾಲೀ ೧೪. ಕ್ಷೇತ್ರ ೬೯೯ ಚ. ಮೈಲು; ಜನಸಂಖ್ಯೆ ೧೧೦೩೩೩; ಭೂಮಿಯ ಕಂದಾಯ ೬೫೬೦೦ ರೂಪಾಯಿ.

ಸ್ವರೂಪ—ಗುಡ್ಡಗಾಡು ಭೂಮಿ, ಅಲ್ಲಲ್ಲಿಗೆ ಅಡವಿಯುಂಟು. ಉತ್ತರದಲ್ಲಿ ಅಲ್ಪಸ್ವಲ್ಪ ಸಮನೆಲ ಉಂಟು.

ನೈರುತ್ಯದಲ್ಲಿ ಕಪೋತಗುಡ್ಡವು ೩೫ ಮೈಲಿನ ವರೆಗೆ ಹಬ್ಬಿರುತ್ತದೆ; ಪಶ್ಚಿಮದಲ್ಲಿಯೂ ಗುಡ್ಡಗಳಿವೆ. ದಕ್ಷಿಣದಲ್ಲಿ ಹಳ್ಳಿಗಳು ದಟ್ಟವಾಗಿರುವವು; ಜನರು ಬಡವರು.

ಹವೆ, ಮಳೆ, ನೀರು—ಮುಂಡರಿಗಿಯ ಮಹಾಲಿನ ಹವೆಯು ಜ್ವರಕಾರಕ, ಉಳಿದದ್ದೆಲ್ಲ ಮಧ್ಯಮ ಆರೋಗ್ಯಪ್ರವಾಗಿದ್ದು. ಗದಗಿನಲ್ಲಿ ಮಳೆ ೧೧ರಿಂದ ೩೯ ಇಂಚಿನವರೆಗೆ, ಸರಾಸರಿ ೨೫ ಇಂಚು ಬೀಳುವದು. ಈ ತಾಲೂಕಿನ ಮೇರೆಯಲ್ಲಿ ತುಂಗಭದ್ರೆಯೂ ಅದಕ್ಕೆ ಕೂಡುವ ಹಿರೇ ಹಳ್ಳವೂ ಮುಖ್ಯ ಜಲಾಶಯಗಳು. ಬೇರೆ ಕಡೆಯಲ್ಲಿ ಕೆರೆಗಳೂ ಭಾವಿಗಳೂ ಉಂಟು; ಆದರೆ ಅವು ಬೇಸಿಗೆಯಲ್ಲಿ ಬತ್ತುತ್ತವೆ.

ದೊಡ್ಡ ಊರುಗಳು.

ಗದಗು—ಇದರ ಬಳಿಯಲ್ಲಿ ಬೆಟಿಗೇರಿ ಎಂಬ ಹಳ್ಳಿ ಇರುವ ಕಾರಣ ವಾಡಿಕೆಯಾಗಿ ಇದಕ್ಕೆ ಗದಗು ಬೆಟಿಗೇರಿ ಎಂದೆನ್ನುವರು. ಜನ ಸಂಖ್ಯೆ ೧೩೦೦೦. ಗದಗು, ತಾಲೂಕಿನ ಮುಖ್ಯ ಗ್ರಾಮವು. ಇಲ್ಲಿ ಅರಳೆಯ ವ್ಯಾಪಾರವು ಬಹಳ ನಡೆಯುತ್ತದೆ. ಇಲ್ಲಿಯ ಜನ ಸಂಖ್ಯೆಯು ಸನ್ ೧೮೭೨ ರಲ್ಲಿ ೧೯೦೩೫ ಇತ್ತು. ಮುಂದೆ ಬಂದ ಬರದಿಂದ ವಸ್ತಿಯು ಕಡಿಮೆಯಾಯಿತು. ಗದಗಿನ ಪೇಟೆಯಲ್ಲಿ ವರ್ಷಕ್ಕೆ ೫ ಲಕ್ಷಕ್ಕಿಂತ ಹೆಚ್ಚು ರೂಪಾಯಿಯ ಅರಳೆಯ ವ್ಯಾಪಾರವಾಗುತ್ತದೆ. ಇಲ್ಲಿ ಅರಳೇ ಬತ್ತಿ ಗಂಟು ಕಟ್ಟುವ ಯಂತ್ರಗಳು ಎರಡು, ಪತ್ತಿಯನ್ನು ಅರಿಯುವ ಯಂತ್ರ ಒಂದು ಉಂಟು. ಗದಗಿನ ಶೀರೆಗಳು ಬಹಳ ಪ್ರಸಿದ್ಧ; ಚನಿವಾರ ಸಂತೆಯ ದಿವಸ ವಸ್ತ್ರ, ಅಕ್ಕಿ, ಮುಂತಾದವುಗಳ ವ್ಯಾಪಾರವು ಬಹಳವಾಗುತ್ತದೆ.

ಗದಗಿನಲ್ಲಿ ವಾಣಿಜ್ಯೋದ್ಯಾರ ಕಚೇರಿ, ಮುನಸೀಫಕೋರ್ಟು, ಟಪಾಲು, ತಂತೀ ಟಪಾಲುಗಳ ಆಫೀಸುಗಳು,

ಗ್ರಾಖಾನೆ, ಮ್ಯುನಿಸಿಪಾಲಿಟಿ, ಇಂಗ್ಲಿಷ ಶಾಲೆ, ೪ ಕನ್ನಡ ಶಾಲೆಗಳು ಇರುತ್ತವೆ. ಊರ ಹೊರಗೆ ಹಾಳು ಕೋಟೆಯೊಂದುಂಟು. ಇದು ಧಾರವಾಡದ ಕೋಟೆಗಿಂತ ಸಣ್ಣದು, ಆದರಷ್ಟು ಭದ್ರವಾದದ್ದಲ್ಲ.

ಗದಗಿನಲ್ಲಿ ತ್ರಿಕೂಟೇಶ್ವರ, ಸರಸ್ವತಿ, ನಾರಾಯಣ, ಸೋಮೇಶ್ವರ, ರಾಮೇಶ್ವರ ಎಂಬ ಮುಖ್ಯ ಪ್ರಾಚೀನ ದೇವಾಲಯಗಳಿರುತ್ತವೆ. ತ್ರಿಕೂಟೇಶ್ವರನ ಗುಡಿ, ಸರಸ್ವತಿಯ ಗುಡಿ ಇವೆರಡೂ ಬಂದಕ್ಕೊಂದು ಅತಿ ನಿಕಟವಾಗಿ ಕಟ್ಟಲ್ಪಟ್ಟವೆ. ತ್ರಿಕೂಟೇಶ್ವರನ ಗುಡಿ ದೊಡ್ಡದು, ಸರಸ್ವತಿಯ ಗುಡಿ ಸಣ್ಣದು; ಆದರೆ ಸರಸ್ವತಿಯ ಗುಡಿಯಷ್ಟು ಸುಂದರವಾದ ಗುಡಿಯನ್ನು ಈ ಸೀಮೆಯಲ್ಲಿ ಕಾಣುವದು ಅಪರೂಪ. ಅದರ ಕಂಬಗಳ ಮೇಲೆಯೂ ಗೋಡೆಗಳ ಮೇಲೆಯೂ ಬಹುಸೂಕ್ಷ್ಮ ರೇಖೆಗಳುಳ್ಳಂಥ ಮನೋಹರ ಚಿತ್ರಗಳನ್ನು ಕೊರಿದಿದ್ದಾರೆ. ಎರಡು ಕಂಬಗಳ ಮೇಲಿನ ಚಿತ್ರಗಳು ಎಲ್ಲಕ್ಕೂ ಶ್ರೇಷ್ಠವಿರುತ್ತವೆ. ಕರೆ ಶಿಲೆಯಿಂದ ಮಾಡಿದ ಸರಸ್ವತಿಯ ಮೂರ್ತಿಯು ಮನುಷ್ಯಾಕೃತಿಯಷ್ಟೇ ದೊಡ್ಡದಾಗಿ ಪದ್ಮಾಸನದಿಂದ ಕೂತಿರುತ್ತದೆ. ಅದರ ಕೊರಳಲ್ಲಿಯೂ ಕೈಗಳಲ್ಲಿಯೂ ಕೊರಿದು ಮಾಡಿದ ಆಲಂಕಾರಗಳು ಅಪ್ರತಿಮ ಶೋಭೆಯುಳ್ಳವುಗಳಿರುತ್ತವೆ. ಇಷ್ಟು ಸುಂದರವಾದ ಮೂರ್ತಿಯನ್ನು ಕಾಣುವದು ಅಪರೂಪವು.

ತ್ರಿಕೂಟೇಶ್ವರನ ಗುಡಿಯು ದೊಡ್ಡದಿರುತ್ತದೆ. ಅದಕ್ಕೂ ಬಂದಕ್ಕೊಂದು ಜೋಡಿಸಿದಂಥ ಸಭಾಮಂಟಪಗಳು ಎರಡುಂಟು. ಅವುಗಳ ಮೂರು ದಿಕ್ಕುಗಳಲ್ಲಿ ಮೂರು ಗರ್ಭಾಗಾರಗಳಿರುತ್ತವೆ. ಪಶ್ಚಿಮದ ಗರ್ಭಾಗಾರದಲ್ಲಿ ಬಂಡೆ ಪಾಳುಂಬಿಯಲ್ಲಿ ಮೂರು ಲಿಂಗಗಳನ್ನು ಸ್ಥಾಪಿಸಿದಾರೆ.

ಅದರಿಂದ ಈ ಗುಡಿಗೆ ತ್ರಿಕೂಟೇಶ್ವರವೆಂಬ ಹೆಸರು ಬಂದಿದೆ. ಉತ್ತರದ ಗರ್ಭಾಗಾರದಲ್ಲಿಯೂ ಬಂದು ಲಿಂಗವಿರುತ್ತದೆ; ಆದರೆ ಪೂರ್ವದ ಗರ್ಭಾಗಾರದಲ್ಲಿ ಬಂದು ಸಿಂಹಾಸನ ಮಾತ್ರವಿರುತ್ತದೆ, ಮೂರ್ತಿ ಇಲ್ಲ. ಈ ಗುಡಿಯು ಬಳಪೆಯಲ್ಲಿ ಸಾಧಾ ಇರುತ್ತದೆ; ಹೊರಮೈಯಲ್ಲಿ ಮಾತ್ರ ಹಲಕೆಲವು ಅಲಂಕಾರಗಳುಂಟು. ಸಭಾಮಂಟಪದ ದಕ್ಷಿಣದ್ವಾರವು ಸೊಬಗಿನ ಗೊಂಬೆಗಳಿಂದ ಅಲಂಕರಿಸಲ್ಪಟ್ಟಿದೆ. ಸೋಮೇಶ್ವರನ ಗುಡಿಯು ಹೊರಮೈಯಲ್ಲಿ ಅಲಂಕಾರಗಳೂ ಚಿತ್ರಗಳೂ ಬಹಳ ಉಂಟು. ಇದರ ಬಾಗಿಲು ನೋಡತಕ್ಕಂಥಾದ್ದಿರುತ್ತದೆ. ಸೋಮೇಶ್ವರನ ದಕ್ಷಿಣಕ್ಕೆ ರಾಮೇಶ್ವರನ ಗುಡಿಯುಂಟು. ಇದರ ಸುತ್ತುಮುತ್ತು ದಟ್ಟಿಗಿ ಮನೆಗಳನ್ನು ಕಟ್ಟಿದ್ದರಿಂದ ಗುಡಿಯು ಬಹುತರ ಕಾಣಿಸುವದಿಲ್ಲ. ವೀರನಾರಾಯಣನ ಗುಡಿಯು ಮೂರ್ಕೆಟನಲ್ಲಿ ಇರುತ್ತದೆ. ಅದರ ಮಹಾದ್ವಾರದ ಮೇಲಿನ ಗೋಪ್ಪರವು ಸುಮಾರು ೧೦೦ ಫೂಟು ಎತ್ತರವಾಗಿರುವದು. ಈ ಗುಡಿಯಲ್ಲಿ ವರ್ಣಿಸತಕ್ಕಂಥ ಸೌಂದರ್ಯವೇನೂ ಇಲ್ಲ. ಇದು ಮೇಲೆ ಹೇಳಿದ ಗುಡಿಗಳಿಗಿಂತ ಅರ್ವಾಚೀನ ಕಾಲದ್ದು, ಅಂದರೆ ಸುಮಾರು ೧೩ನೇ ಅಥವಾ ೧೪ನೇ ಶತಕದಲ್ಲಿ ಆದದ್ದು.

ಬೆಟಗೇರಿಯಲ್ಲಿ ಹದಿನೈದು ವೀರಗಲ್ಲುಗಳು ಬಂದೇ ಕಡೆಯಲ್ಲಿ ಗುಂಪುಗಿ ನಿಲ್ಲಿಸಲ್ಪಟ್ಟಿವೆ. ಇವುಗಳ ಸುತ್ತುಮುತ್ತು ಗೋಡೆಯುಂಟು. ಎಲ್ಲಕ್ಕೂ ಎತ್ತರವಾದದ್ದು ೧೩ ಫೂಟು ಇರುತ್ತದೆ. ಈ ಶಿಲೆಗಳ ತೋರಿಕೆಯು ಮೋರೆಯಲ್ಲಿ ಮೂರು ವಿಭಾಗಗಳನ್ನು ಅಂದರೆ ಅಂತಸ್ತುಗಳನ್ನು ಕಟಿಯು ಮಾಡಿದ್ದಾರೆ. ಎಲ್ಲಕ್ಕೂ ಕೆಳಗಿನ ಅಂತಸ್ತಿನಲ್ಲಿ ವೀರನು ಮಡಿದ ರಣಭೂಮಿಯ ಚಿತ್ರವನ್ನು ಕೊರೆದಿದ್ದಾರೆ. ಇದೇ

ಅಂತಸ್ತಿನಲ್ಲಿ ಕೆಲವು ಶಿಲೆಗಳ ಮೇಲೆ ನೇಗಲು ಇಲ್ಲವೇ ಗಾಣದ ಬರೆಳು ಇರುತ್ತದೆ. ಎರಡನೇ ಅಂತಸ್ತಿನಲ್ಲಿ ಸತ್ತ ವೀರನನ್ನು ರೆಕ್ಕೆಗಳುಳ್ಳ ದೇವದೂತರು ಆಕಾಶಕ್ಕೆ ಒಯ್ಯುವ ಹಾಗೆ ತೋರಿಸಿದ್ದಾರೆ. ಮೂರನೇ ಅಂದರೆ ಎಲ್ಲಕ್ಕೂ ಮೇಲಿನ ಅಂತಸ್ತಿನಲ್ಲಿ ಸತ್ತ ವೀರನನ್ನು ಸಿಂಹಾಸನದ ಮೇಲೆ ಕೂಡಿಸಿದ್ದಾರೆ. ಈ ಶಿಲೆಗಳ ಮೇಲೆ ಹಳಗನ್ನಡ ಲಿಪಿಗಳಾದರೂ ಇರುತ್ತವೆ. ಅಗಸ್ತೇ ಬಾಗಲಿನ ಎದುರಿಗೆ ಇರುವದಿನ್ನೊಂದು ವೀರಗಲ್ಲಿನ ಮೇಲೆ ವಿಸ್ತಾರವಾದ ಲಿಪಿಯುಂಟು.

CORRESPONDENCE.

ಪತ್ರವ್ಯವಹಾರ.

ರಾವಸಾಹೇಬ ಕನ್ನಡ ಖಾಲಾ ಪತ್ರಕದ ಎಡಿಟರ ಧಾರವಾಡ ಇವರ ಸನ್ನಿಧಿಗೆ—

ವಿನಂತಿ ವಿಜ್ಞಾಪನೆಗಳು ಕೆಳಗೆ ಬರೆದ ನಾಲ್ಕು ಪಂಕ್ತಿಗಳನ್ನು ತಮ್ಮ ಸುಂದರವಾದ ಇದೇ ತಿಂಗಳ ಪತ್ರಕದಲ್ಲಿ ಮುದ್ರಿಸುವಿರೆಂದು ತುಂಬಾ ನಂಬಿಕೊಂಡಿದ್ದೇನೆ.

ಸ್ವಾಮಿ, ಕಲ್ಲೋಳಿ ಖಾಲಾ ಮಾಸ್ತರರಾದ ವಿಷ್ಣು ಬಾಬಾಜಿ ಇವರು ಕೊಟ್ಟ ಸರ್ವಜ್ಞ ಪದದ ಅರ್ಥವನ್ನು ಮಿಶ್ರೀಕೋಟಿಯ ಮಾಸ್ತರ ರಾ॥ ರಾ॥ ಧೊಂಡೋ ಗಂಗಾಧರ ಲಿಮಯೆ ಇವರು ಸಪ್ಟಂಬರ ತಿಂಗಳ ಪತ್ರಿಕೆಯ ಕಡೇ ಪುಟದಲ್ಲಿ ಕೊಟ್ಟಿರುತ್ತಾರೆ; ಆದರೆ ಆ ಸರ್ವಜ್ಞ ಪದದ ಅರ್ಥದಲ್ಲಿ ಮೈಗ ಈ ಶಬ್ದದ ಅರ್ಥವು ಮುಕರ ರಾಸಿಯೆಂದು ನೂಡಿ ವೈಶಾಖ ವ॥ ೩ ದಿವಸ ನಿತ್ಯನಕ್ಷತ್ರವು ಉತ್ತರಾಷಾಢಾ ಇರಬಹುದೆಂಬ ಬಗ್ಗೆ ಸಿದ್ಧವಾಡಿ ತೋರಿಸಿದ್ದಾರೆ. ಮೈಗ ಇದರ ಅರ್ಥವು ಮುಕರ ರಾಸಿಯು ಎಂಬುದಕ್ಕೆ

ಆಧಾರವೇನೂ ಕೊಟ್ಟಿಲ್ಲ. ಮತ್ತು ನಿತ್ಯ ನಕ್ಷತ್ರದ ಉಪಯೋಗವನ್ನು ಕವಿಯು ಮಾಡಿಲ್ಲ. ಆದ್ದರಿಂದ ಆ ಸರ್ವಜ್ಞನ ಅರ್ಥವನ್ನು ನನಗೆ ತಿಳಿದಷ್ಟು ಕೆಳಗೆ ಬರದಿದ್ದೇನೆ. ತಮಗೆ ಸರಿ ಬಂದರೆ ಮುದ್ರಿಸಬೇಕು.

ಅಗಿಯು ಹುಣ್ಣಿವೆ ಯಂದರೆ ವೈಶಾಖ ಪೂರ್ಣಿಮಾ ಪೂರ್ಣಿಮೆ ಯೆಂದರೆ ಚಂದ್ರನು ಪೂರ್ಣ ಕಲೆಗಳುಳ್ಳವನು ಆಗುವ ದಿವಸವು. ಪ್ರತಿ ತಿಂಗಳ ಶು॥ ೨ ದಿವಸ ಚಂದ್ರ ದರ್ಶನವಾಗುತ್ತದೆ; ಮುಂದೆ ಕ್ರಮ ಕ್ರಮವಾಗಿ ವೃದ್ಧಿ ಹೊಂದುತ್ತ ಪೂರ್ಣಿಮೆಗೆ ಪೂರ್ಣ ಕಲೆಗಳುಳ್ಳವನಾಗುವನು. ಕಡೆಗೆ ಅಮಾವಾಸ್ಯೆಗೆ ಕಲಾ ಹೀನನಾಗಿ ಕಾಣದಹಾಗಾಗುತ್ತಾನೆ. ಅಂದರೆ ಒಂದು ತಿಂಗಳ ಶು॥ ೨ ದಿವಸ ಕಾಣಿಸಿಕೊಂಡು ಮುಂದೆ ವೃದ್ಧಿ ಹೊಂದುತ್ತ ನಡೆದ ಚಂದ್ರನು ಆ ತಿಂಗಳ ಕಡೇ ದಿವಸ ಅಂದರೆ ಅಮಾವಾಸ್ಯೆಯ ದಿವಸ ಕಲಾಹೀನನಾಗುತ್ತಾನೆ. ಇದೇ ಕಾರಣದಿಂದ ಅವನಿಗೆ ತಿಂಗಳನೆಂದು ಹೆಸರು ಬಂದದೆ. ಮತ್ತು "ಮಿಗೆ" ಈ ಶಬ್ದವು ಮುಂದೆ ಇರುವದರಿಂದ ವಿಶೇಷವಾಗಿ, ಅಥವಾ ಮಿಗಾರಿ ಎಂದು ಅರ್ಥವಾಗುತ್ತದೆ. ಆದ್ದರಿಂದ ವೈಶಾಖ ಪೂರ್ಣಿಮಾ ಹೋಗಿ ಮೂರು ದಿವಸಕ್ಕೆ ಅಂದರೆ ವೈಶಾಖ ಪೂರ್ಣಿಮೆಗೆ ಕಾರಣನಾದ ವೈಶಾಖದ ಚಂದ್ರನು ಹೋಗಿ ಮುಂದೆ ಮೂರು ದಿವಸಕ್ಕೆ ಅಂತ ಅರ್ಥ ಮಾಡಬೇಕು. ಅಂದರೆ ಅದರ ಅರ್ಥವು ಜೇಷ್ಠ ಶು॥ ೫ ದಿವಸ ಎಂದು ಆಗುವದು. ಮುಂದೆ "ಮೃಗಧರನ ಕೂಡೆ ಮೃಗವಿರಲು" ಎಂಬ ಪದವದೆ. ಮೃಗಧರ ಈ ಶಬ್ದವು ಚಂದ್ರ ಸೂರ್ಯರಿಬ್ಬರಿಗೂ ಅರ್ಥ ಕೊಡುತ್ತದೆ. ಇಲ್ಲಿ ಸೂರ್ಯನೆಂದು ಅರ್ಥ ಮಾಡತಕ್ಕದ್ದು ಯಾಕಂದರೆ ಸೂರ್ಯನು ಸಿಂಹ ರಾಸಿಗೆ

ಅಧಿಪತಿ ಇರುತ್ತಾನೆ. ಸಿಂಹವು ಮೃಗವಿರುವದು ಪ್ರಸಿದ್ಧವು. ಆದ್ದರಿಂದ ಸಿಂಹ ರಾಸಿಯನ್ನು ಧರಿಸಿದವನು ಸೂರ್ಯನು, ಅಂದ ಬಳಿಕ ಇಡೀ ಅರ್ಥವು:—

ವೈಶಾಖ ಮಾಸವು ಹೋದ ಮೂರು ದಿವಸಕ್ಕೆ ಅಂದರೆ ಜೇಷ್ಠ ಶು॥ ೩ ದಿವಸ ಸೂರ್ಯನ ಕೂಡ ಮೃಗಶಿರಾ ಮಹಾ ನಕ್ಷತ್ರವು ಇದ್ದರೆ ಮಳೆಯು ಸಮೃದ್ಧಿಯಾಗುವದು; ಮತ್ತು ಆ ದಿವಸ ಚಂದ್ರನ ಕೂಡಾದರೂ ನಿತ್ಯ ನಕ್ಷತ್ರವು ಬಹುಶಃ ಮೃಗಶಿರವು ಇದ್ದೇ ಇರುತ್ತದೆ. ಹೀಗೆ ಎರಡೂ ಮಾತಿಗೂ ಕೂಡುವ ಕಾರಣ ಈ ಪ್ರಕಾರ ಅರ್ಥ ಮಾಡುವದು ವಿಹಿತ ಕಾಣುತ್ತದೆ.

ಮಳೆಯ ಸಲುವಾಗಿ ಸರ್ವಜ್ಞ ಕವಿಯು ಅನೇಕ ಶ್ಲೋಕಗಳನ್ನು ಮಾಡಿದ್ದಾನೆ. ಅವುಗಳಲ್ಲೆಲ್ಲ ಮಹಾ ನಕ್ಷತ್ರದ ಉಪಯೋಗವನ್ನು ಮಾಡಿದ್ದಾನೆ. ನಿತ್ಯ ನಕ್ಷತ್ರದ ವಿಚಾರ ಮಾಡಿಲ್ಲ. ಅಂಥ ಒಂದು ಶ್ಲೋಕವನ್ನು ಕೆಳಗೆ ಕೊಟ್ಟಿರುತ್ತೇನೆ. ಸೂಜ್ಞರು ದಯಮಾಡಿ ಅದರ ಅರ್ಥವನ್ನು ಕೊಡಬೇಕು.

ಮೃಗಶಿರಾದಿಯ ಮೂರು ಭಗಣದಲಿ ರವಿಯಿರಲು।
ಮಘಾ ಋಕ್ಷವನು ಶಶಿತೊಲಗೆ ಮಳೆಗಾಲ।
ಜಗದಣಿಯುಲಕ್ಕು ಸರ್ವಜ್ಞ ॥ ೧ ॥

ಧೊರೆಗಳೇ ಪತ್ರವಿಸ್ತಾರಕ್ಕೆ ಕ್ಷಮಿಸಿ ಇವನ್ನು ಅವಶ್ಯ ಮುದ್ರಿಸಬೇಕೆಂದು ಬೇಡಿಕೊಳ್ಳುತ್ತೇನೆ. ಇತಿ ವಿನಂತಿ.

ಮು. ಚಡಚಣ ತಾ. ಇಂಡಿ,) ಯಡಪ್ಪಾ ತಂದಿ ಗುರಬಸಪ್ಪಾ
ತಾ॥ ೧೬-೯-೨೪.) ಸರ್ವಜ್ಞಾಭಿಮಾನಿ.

DHARWAR TRAINING COLLEGE CERTIFICATE EXAMINATION—1894

ಕಾಲೇಜಿನ ಸರ್ಟಿಫಿಕೇಟ ಪರೀಕ್ಷೆಯ ಪ್ರಶ್ನೆಗಳು.

೧ನೇ ವರ್ಷದ ವರ್ಗ.

ಶಿಕ್ಷಣಶಾಸ್ತ್ರ.

(ಬಲಕ್ಕೆ ಬರೆದ ಅಂಕಿಗಳು ಪ್ರಶ್ನೆಗಳ ಪೂರ್ಣ ಗುಣಗಳು.)

೧. ತಿದ್ದುವಿಕೆಯಂದರೇನು? ಇದನ್ನು ಕಾಯ್ದುಕೊಳ್ಳ ೧೦
ಬೇಕಾದರೆ ಮಾಸ್ತರನಲ್ಲಿರತಕ್ಕ ಗುಣಗಳು ಯಾವವು?

೨. ವಿದ್ಯಾರ್ಥಿಗಳ ಒಲವುಗಳೆಷ್ಟು? ಹೌದೆನಿಸಿಕೊಳ್ಳು ೧೦
ನ ಇಚ್ಛೆ ಹೆಚ್ಚಳದ ಅಪೇಕ್ಷೆ ಇವುಗಳಲ್ಲಿ ಹೆಚ್ಚು ಕಡಿಮೆ
ಏನು? ಇವನ್ನು ಬಲಪಡಿಸಲೋಸುಗ ಕೈಕೊಳ್ಳುವ ಉಪಾ
ಯಗಳು ಯಾವವು?

೩. ಶಿಕ್ಷೆಯ ಉದ್ದೇಶಗಳು ಯಾವವು? ಆ ಉದ್ದೇಶಗ ೧೦
ಳು ಸಫಲವಾಗಬೇಕಾದರೆ ಶಿಕ್ಷೆಯಲ್ಲಿ ಯಾವ ಗುಣಗಳಿರ
ತಕ್ಕದ್ದು? ಶಿಕ್ಷೆಯನ್ನು ಕೊಡುವ ಪ್ರಸಂಗಗಳು ಅಗಾಗ್ಗೆ
ಬರುವ ಸಾಲಿಯ ವಿಷಯವಾಗಿ ನಿನ್ನ ಅಭಿಪ್ರಾಯವನ್ನು
ಕಾರಣ ಸಹಿತವಾಗಿ ಬರೆಯಿರಿ.

೪. ಕಲಿಸುವ ಪದ್ಧತಿಗಳು ಎಷ್ಟು ಪ್ರಕಾರದವು? ಯಾ ೧೦
ವದು ಮೇಲಾದದ್ದು? ಯಾಕೆ?

೫. ಪ್ರಶ್ನೆಗಳು ಎಷ್ಟು ಪ್ರಕಾರದವು? ಯಾವವು? ಕಲಿ ೧೦
ಸುವ ಪ್ರಶ್ನೆಗಳು ಹ್ಯಾಗಿರಬೇಕು ಉದಾಹರಣ ಸಹಿತವಾಗಿ
ಬರೆಯಿರಿ.

೬. ಲೇಖನದ ಉದ್ದೇಶವೇನು? ವಿದ್ಯಾರ್ಥಿಗಳ ಅಕ್ಷರ ೧೦
ನೆಟ್ಟಗಾಗಬೇಕಾದರೆ ಉಪಾಯಗಳು ಯಾವವು?

೭. ಅರಿಥ್‌ಮೇಟಿಕಾನ್ ಎಂಬ ಗುಂಡಿನ ಚೌಕಟ್ಟಿನ ೧೦
ಉಪಯೋಗವೇನು? ಯಾವಾಗ ಇದರ ಉಪಯೋಗವನ್ನು
ಬಿಟ್ಟುಬಿಡಬಹುದು?

೪. ನಿಯಮಿತತನ ಸಮಯ ನಿಷ್ಟೆತೆಗಳಲ್ಲಿ ಯಾವದು ಹೆಚ್ಚು ಅವಶ್ಯವಾದ್ದು ? ಯಾಕೆ ಅದನ್ನು ಹ್ಯಾಗೆ ಹುಟ್ಟಿಸಬಹುದು. ೧೮

೯. ವೇಳಾಸತ್ರಕದ ಅವಶ್ಯತೆಯನ್ನೂ ರಚಿಸುವದರಲ್ಲಿ ಅನುಸರಿಸತಕ್ಕ ನಿಯಮಗಳನ್ನೂ ಬರೆಯಿರಿ. ೧೦

೧೦. ವಿದ್ಯಾರ್ಥಿಗಳನ್ನು ಸಾಲೆಯಲ್ಲಿ ತಕ್ಕೊಳ್ಳುವದು ತೆಗೆಯುವದು, ಶಿಕ್ಷಕ ಜನರು ನೂಡಬಹುದಾದ ಹೋರೆಗಳು, ಇವುಗಳನ್ನು ಕುರಿತು ಕೋಡಿನಲ್ಲಿ ವಿಧಿಸಿದ ನಿಯಮುಗಳನ್ನು ಬರೆಯಿರಿ. ೧೦

ಎನೇ ವರ್ಷದ ವರ್ಗ.

ಶಿಕ್ಷಣ ಶಾಸ್ತ್ರ.

(ಬಲಕ್ಕೆ ಬರೆವ ಅಂಕಿಗಳು ಪ್ರಶ್ನೆಗಳ ಪೂರ್ಣ ಗುಣಗಳು.)

೧. ಸ್ಥಿರತ್ವದ ಅವಶ್ಯಕತೆಯನ್ನು ಸಿದ್ಧ ಮಾಡಿ ಅದಕ್ಕೆ ಅನುಕೂಲಿಸುವ ಎನೇ ನಿಯಮುವನ್ನು ಹೇಳಿ ಸ್ಪಷ್ಟೀಕರಿಸು. ೪

೨. " ಸಾಲೆಯು ಶಿಕ್ಷಕನ ಪ್ರತಿಬಿಂಬವಾಗಿರುತ್ತದೆ " ಎಂಬ ಮಾತು ಸಟಿಯೋ ದಿಟವೋ ? ನಿಮ್ಮ ಅಭಿಪ್ರಾಯವನ್ನು ಕಾರಣ ಸಹಿತವಾಗಿ ಬರೆಯಿರಿ. ೧೦

೩. ಸಾಲೆಯಲ್ಲಿ ತೀರ ಸಣ್ಣ ಹುಡುಗರಿಂದಲೂ ಸಾಧಾರಣ ದೊಡ್ಡ ಹುಡುಗರಿಂದಲೂ ತಪ್ಪಾಗುವದು. ಇವರನ್ನು ಹಾದಿಗೆ ತರಲಿಕ್ಕೆ ಉಪಾಯಗಳು ಯಾವವು ? ೧೦

೪. " ಕಲಿಸುವದಕ್ಕಿಂತ ಕಲಿಯಲಿಕ್ಕೆ ಹಚ್ಚುವದು ಮಾಸ್ತರನ ಕೆಲಸವು " ಈ ಅಭಿಪ್ರಾಯವನ್ನು ಸಿದ್ಧ ಮಾಡಿರಿ. ೧೦

೫. ಕಲಿಸೋಣವೆಂದರೇನು ? ಬುದ್ಧಿ ಸಾಮರ್ಥ್ಯಗಳನ್ನು ಯಾವ ಕ್ರಮದಿಂದ ಬೆಳಿಸುವಿರಿ. ೧೦

೬. ವರ್ಗ ನಡಿಸುವದನ್ನು ಕುರಿತು ಸೂಚನೆಗಳನ್ನು ಬರಿದು ಕರೆ ಹಲಿಗೆಯ ಉಪಯೋಗವನ್ನು ಕುರಿತು ನಿಯಮುಗಳನ್ನು ಬರೆಯಿರಿ. ೧೦

೫. ಹೀರೆಮುಣ್ಣಿಯ ಪದ್ಧತಿಯ ಗುಣ ದೋಷಗಳನ್ನು ೧೦
ವಿವರಿಸಿರಿ, ಸದ್ಯಕ್ಕೆ ನಡೆಯುವ ಪದ್ಧತಿಯು ಯಾವ ಪ್ರ
ಕಾರದ್ದು ಹೇಳಿರಿ.

೬. ಒಡವೇ ಪಾತಗಳನ್ನು ಯಾಕೆ ಕಲಿಸಬೇಕು? ಇವು ೧೦
ಗಳನ್ನು ಕಲಿಸುವ ತಕ್ಕ ರೀತಿ ಯಾವದು? ಸೌಜನ್ಯ ಸ
ಮಯ ನಿಷ್ಠತೆಗಳು ಮನಸಿನಲ್ಲಿ ನಡುವಂತೆ ಯಾವ ಪಾತಗ
ಳನ್ನು ಕಲಿಸುವಿರಿ.

೯. ಕವಿತೆಗಳನ್ನು ಪಾಠ ಮಾಡಿಸುವದಕ್ಕಿಂತ ಮುಂಚೆ ೧೦
ಏನು ಮಾಡತಕ್ಕದ್ದು? ಕೆಳಗಿನ ಕವಿತೆಯನ್ನು ಕಲಿಸುವ
ಟಿಪ್ಪಣಿಗಳನ್ನು ಬರೆಯಿರಿ.

ಹಸಿವು ಹಿಂಗಿತು ತಾಯೆ ನಿನ್ನಯ।
ಮುಸುಡ ನೋಡುತ ಕಾಯ ಕರಣದ।
ವಿಸರನತಿಸಂತುಷ್ಟವಡೆದಿದೆ ಸುಧೆಯನುಂಡಂತೆ॥

೧೦. ಕೆಳಗಿನ ಸಂಗತಿಗಳ ಆಧಾರದಿಂದ ನಿಮ್ಮ ಸಾಲಿ ೧೦
ರನೂಹಾ ಪತ್ರಿಕೆಯನ್ನು ಬರೆಯಿರಿ.

(ಅ) ೧೫೦ ಹುಡುಗರು ತಿಂಗಳ ಅಖೇರ ಶಿಲಕು
ಳಿಕ ಬಂದವರು ಪಾಸಿ ಬಿಟ್ಟು ಹೋದವರು.

(ಆ) ಫೀ ದರ–ಬಿನ್ನ ೧ ಇಯತ್ತ್ರೆ ೮೧; ಪನ್ಸೆ ಳಿನೇ
೮೨, ರನೇ ಳಿನೇ ೮೪, ಹೋದ ತಿಂಗಳ ಫೀ
ಶಿಲಕು ಪೂಳೀರಟ.

(ಇ) ಪಗಾರ ಮುಟ್ಟಿದ ತಾ॥ ೧೫ ರಿಪೇರಿ ಹಣಾ
೧೫ ರೂ. ಸೈಕಿ ಖರ್ಚು ನಡಿದ ತಿಂಗಳಲ್ಲಿ ೯೭ಳಿಕ.

ಶಾಲಾಪತ್ರಿಕೆ

ಪದ್ಯಂ.

ಪ್ರಿಯವಿದ್ಯಾಗುರುವರ್ಯರುನ್ನತಿಕೆಯಂ ಸಚ್ಛಿಕ್ಷಣೋತ್ಕರ್ಷಮುಂ ।
ಚಯಸುತ್ತಂ ಪ್ರತಿಮಾಸದಾದಿಗೊಲವಿಂದೀಪತ್ರಮಂ ಮುದ್ರಿಸಿ ॥
ನಯದಿಂದಿತ್ತಪೆವೋದುವರ್ಗೆಸಗುಣಂ ತೋರಲ್ಕೆಕೈಕೊಂಬುದೈ ।
ದಯೆಯಿಂದೋಷವತಿದ್ದವೇಳ್ವುದುಬುಧರ್ಜ್ಞಾನಾಭಿವೃದ್ಧಿಪ್ರಿಯರ್॥೧॥

ಪುಸ್ತಕ ೩೯.] ದಶಂಬರ ೧೮೯೯. [ಸಂಚಿಕೆ ೧೦.

EDUCATIONAL INTELLIGENCE AND USEFUL NOTES.

ವಿದ್ಯಾಸುಧಾರಣಾ ಸಂಬಂಧದ ವೃತ್ತಾಂತಗಳು.

ನಾವುದಾರ ಗವ್ಹರನರ ಸಾಹೇಬರವರು ಧಾರವಾಡದ ಮಾ
ನವಪತ್ರಕ್ಕೆ ಉತ್ತರ ಕೊಡುವಾಗ, ದೊಡ್ಡ ದೊಡ್ಡ ಸಾಲೆ
ಗಳಿಗೆ ಸಂಬಂಧಿಸಿ ಮಾಡಿರುವ ಭೋಜನವಸತಿಗೃಹಗಳ
ಪ್ರಯೋಜನವನ್ನು ಸರಸಾಗಿ ತಿಳಿಸಿದರು. ಈ ಗೃಹಗ
ಳಿಂದ ವಿದ್ಯಾರ್ಥಿಗಳ ಖಡೆ ನುಡಿಗಳನ್ನು ತಿದ್ದಲಿಕ್ಕೆ ಶಿಕ್ಷ
ಕರಿಗೆ ಹೆಚ್ಚು ಅನುಕೂಲವಾಗುವದಲ್ಲದೆ ಬೇರೆ ಬೇರೆ ಸ್ವ
ಭಾವದ ಮಂಡುಗರು ಒತ್ತಟ್ಟಿಗಿರುವದರಿಂದ ಅಹಮೇಕತ್ವ
ವು ನಷ್ಟವಾಗುತ್ತದೆ. ವಿದ್ಯಾರ್ಥಿಗಳಲ್ಲಿ ಸ್ವಾವಲಂಬನವು
ಬೆಳೆದು ಪರೋಪಕಾರ ಬುದ್ಧಿಯು ಪ್ರಬಲವಾಗುತ್ತದೆ.
ಸ್ವಾರ್ಥತ್ಯಾಗ ಆತ್ಮಸಂಯಮನಗಳಿಂದ ಆಗುವ ಅನಿರ್ವಾ
ಚ್ಯವಾದ ಉಲ್ಲಾಸದ ಬೆಲೆಯು ಅವರಿಗೆ ತಿಳಿಯುತ್ತದೆ. ಈ
ಮೇರೆಗೆ ಭೋಜನವಸತಿಗೃಹಗಳಿಂದಾಗುವ ಪ್ರಯೋ
ಜನಗಳನ್ನು ಇಂಗ್ಲಂಡದ ಜನರು ಬಹು ದಿವಸದಿಂದ ಮಾ

ಡಿಕೊಳ್ಳುತ್ತಾರೆ. ಇಂಥ ವ್ಯವಸ್ಥೆಗಳನ್ನು ಆದಷ್ಟು ಮಟ್ಟಿಗೆ ನಾವು ಆದರ ಪೂರ್ವಕವಾಗಿ ಬೆಳಸುವೆವೆಂದು ನಾನು ದಾರರವರು ತಿಳಿಸಿದರು.

ಹಿಂದುಸ್ಥಾನದ ವಿದ್ಯಾಭಿವೃದ್ಧಿಯನ್ನು ಕುರಿತು ಮೊನ್ನೆ ಮೊನ್ನೆ ಪ್ರಸಿದ್ಧವಾದ ಪಂಚಮ ವಾರ್ಷಿಕ ರಿಪೋರ್ಟನಲ್ಲಿ ಡಾಕ್ಟರ ನ್ಯಾಷ್ ಇವರು ಈ ಗೃಹಗಳ ಸಂಬಂಧದಿಂದ ಬರೆಯುವದೇನಂದರೆ :—

ಸರಕಾರೀ ಶಾಲೆಗಳಿಗೆ ಭೋಜನವಸತಿಗೃಹಗಳನ್ನು ಜೋಡಿಸುವದು ಅತಿ ಮಹತ್ವದ ಸಂಗತಿಯಾಗಿರುತ್ತದೆ. ಹಣವ ಅನನುಕೂಲತೆಯಿಂದ ಈ ಗೃಹಗಳ ಪ್ರಸಾರವು ಆಗತಕ್ಕಷ್ಟು ಆಗಿಲ್ಲ. ಮುಂಬೈ ಇಲಾಖೆಯ ಹಾಯಸ್ಕೂಲುಗಳಲ್ಲಿಯೂ ಮದ್ರಾಸ ಇಲಾಖೆಯಲ್ಲಿಯ ಏತದ್ದೇಶಿಯ ಶಾಲೆಗಳಲ್ಲಿಯೂ ಭೋಜನವಸತಿಗೃಹಗಳಿಲ್ಲ. ಆದರೆ ಬಂಗಾಲ ಇಲಾಖೆಯಲ್ಲಿಯ ಎಲ್ಲ ಕಾಲೇಜಗಳಲ್ಲಿಯೂ ಜಿಲ್ಲೆಯ ಶಾಲೆಗಳಲ್ಲಿಯೂ ಭೋಜನ ವಸತಿ ಗೃಹಗಳು ಸ್ಥಾಪಿಸಲ್ಪಟ್ಟಿವೆ; ಮತ್ತು ವಾಯವ್ಯ ಪ್ರಾಂತದಲ್ಲಿ ಎಲ್ಲ ಜಿಲ್ಲೆಯ ಸ್ಥಳದಲ್ಲಿರುವ ಶಾಲೆಗಳಲ್ಲಿಯೂ ಭೋಜನವಸತಿ ಗೃಹಗಳುಂಟು. ಅವುಗಳಲ್ಲಿ ೧೦೦ ಕ್ಕೆ ೧೨ ರಂತೆ ವಿದ್ಯಾರ್ಥಿಗಳು ವಾಸ ಮಾಡುತ್ತಿದ್ದು ಅಲ್ಲಿಯ ವ್ಯವಸ್ಥೆಯು ಬಹು ಚನ್ನಾಗಿರುತ್ತದೆ. ಪಂಜಾಬದಲ್ಲಿಯಂತೂ ಪ್ರತಿ ಬಂದು ೨ನೇ ತರಗತಿಯ ಶಾಲೆಗಳಿಗೆ ಸಹ ಭೋಜನವಸತಿ ಗೃಹಗಳು ಇರಲಿಕ್ಕೇ ಬೇಕೆಂದು ನಿರ್ಬಂಧವೇ ಇರುತ್ತದೆ. ಈ ಪ್ರಕಾರ ಶಾಲಾಸುಧಾರಣೆಯಲ್ಲಿ ವಾಯವ್ಯ ಪ್ರಾಂತವು ಮೇಲಿರುವದು. ಬಂಗಾಲ ಮತ್ತು ಪಂಜಾಬ ಇಲಾಖೆಗಳು ಆದರ ತರುವಾಯ ಬರುತ್ತವೆ; ಆದರೆ ಮುಂಬೈ ಮದ್ರಾಸ ಇಲಾಖೆಗಳು ಈ ಸಂಗತಿಯಲ್ಲಿ ತೀರ ಹಿಂದಿರುತ್ತವೆ.

ನಮ್ಮ ಭಾಗದ ಮಾಜಿ ಎಜ್ಯುಕೇಶನಲ್ ಇನಸ್ಪೇಕ್ಟರ ರಾವ ಬಹಾದ್ದೂರ ಸೀತಾರಾಮು ವಿಶ್ವನಾಥ ಪಟವರ್ಧನ ಇವರನ್ನು ವರಾಡ ಪ್ರಾಂತದ ಡಾಯರೇಕ್ಟರ ಜಾಗಾಕ್ಕೆ ನೇಮಿಸಿದ ಸಂಗತಿಯನ್ನು ಈ ಪೂರ್ವದಲ್ಲಿ ತಿಳಿಸಿದ್ದೇವೆ ಷ್ಟೇ. ಸಪ್ಟಂಬರ ತಿಂಗಳ ೭ಳನೇ ತಾರೀಖಿನಿಂದ ಅವರಿಗೆ ಅಲ್ಲಿ ಕಾಹೀಮು ಆಯಿತೆಂತಲೂ ನಮ್ಮ ಭಾಗದ ಈಗಿನ ಇನಸ್ಪೇಕ್ಟರರಾದ ರಾವ ಬಹಾದ್ದೂರ ಬಳವಂತ ರಾವು ಚಂದ್ರ ಸಹಸ್ರಬುದ್ಧೆ ಇವರಿಗೆ ಇಲ್ಲಿ ಕಾಹೀಮು ಆಯಿತೆಂತಲೂ ತಿಳಿಸಲಿಕ್ಕೆ ನಾವು ಸಂತೋಷ ಪಡುತ್ತೇವೆ.

ಮೈಸೂರಿನಲ್ಲಿ 'ನಿಖಿಲ ರೋಗ ಹಾರಿ ಧರ್ಮಾರ್ಥ ಕರ್ನಾಟಕ ವೈದ್ಯಶಾಲೆ' ಎಂಬದೊಂದು ಔಷಧಾಲಯವು ಕೆಲವು ದಿವಸದಿಂದ ಸ್ಥಾಪನವಾಗಿದ್ದು ಅಲ್ಲಿ ಬರತಕ್ಕ ಎಲ್ಲ ತರದ ರೋಗಿಗಳಿಗೆ ಧರ್ಮಾರ್ಥವಾಗಿ ಔಷಧವು ದೊರಿಯುತ್ತದೆ. ಈ ಔಷಧಾಲಯದಲ್ಲಿ ಪ್ರತಿ ದಿವಸ ೧೫೦—೧೭೫ ರವರೆಗೆ ರೋಗಿಗಳು ಬರುತ್ತಿದ್ದು ಕೆಲಸವು ಚನ್ನಾಗಿ ನಡೆದದೆಂದು ಈ ವೈದ್ಯಶಾಲೆಯ ವ್ಯವಸ್ಥಾಪಕರು ತಿಳಿಸುತ್ತಾರೆ.

ಈ ತಿಂಗಳಲ್ಲಿ ಮೂರು ಜನರ ಮರಣದ ವಾರ್ತೆಯನ್ನು ತಿಳಿಸುವ ಪ್ರಸಂಗ ಬಂದದ್ದಕ್ಕಾಗಿ ನಾವು ಬಹಳ ವಿಷಾದ ಪಡುತ್ತೇವೆ. ದೇವರು ಅವರಿಗೆ ಉತ್ತಮ ಗತಿಯನ್ನೀಯಲೆಂದು ಪ್ರಾರ್ಥಿಸಿ ಮರಣದ ವೃತ್ತವನ್ನು ಇದರಡಿ ಕೊಡುತ್ತೇವೆ:—

(೧) ಸಿಂಧಪ್ರಾಂತದ ಎಜ್ಯುಕೇಶನಲ್ ಇನಸ್ಪೆಕ್ಟರರಾದ ಎಚ್. ಪಿ. ಜೇಕಬ ಸಾಹೇಬರು ತಾ॥ ೧೧ನೇ ಅಕ್ಟೋಬರ

ದಿವಸ ಕರಾಚಿಯಲ್ಲಿ ಹೃದಯರೋಗದಿಂದ ಕಾಲಾಧೀನರಾದರು. ಇವರು ೧೯೬೬ ರಲ್ಲಿ ಶಾಲಾ ಖಾತೆಯಲ್ಲಿ ಶೇರಿ ಸಾಯುವ ತನಕ ಏಕ ನಿಷ್ಠೆಯಿಂದ ತಮ್ಮ ಕೆಲಸವನ್ನು ಸಾಗಿಸಿದರು. ಶಾಲಾ ಖಾತೆಯು ಬೇರೆ ಬೇರೆ ಪ್ರಕಾರದನಿಯು ಮಗಳನ್ನೂ ಶಾಲೆಯಲ್ಲಿ ಉತ್ತಮ ಪ್ರಕಾರದ ವ್ಯವಸ್ಥೆಯನ್ನು ಕಾಯುವಂಥ, ಹಿಂದುಸ್ಥಾನ ಸರಕಾರಕ್ಕೆ ಮಾನ್ಯವಾವಂಥ, ಮೇಲಾದ 'ಪ್ರಿಫೆಕ್ಟ' ಪದ್ಧತಿಯನ್ನೂ ಇವರೇ ಉಪಕ್ರಮಿಸಿದರು. ಇವರು ತಮ್ಮ ಕೆಲಸವನ್ನು ಒಹಳ ಮನಸ್ಸುಗೊಟ್ಟು ಮಾಡುತ್ತಿದ್ದರು. ಸಿಂಧ ಪ್ರಾಂತವು ವಿದ್ಯಾಪ್ರಸಾರದ ಸಂಬಂಧದಿಂದ ಬಹಳ ಹಿಂದಿತ್ತು. ಆ ಭಾಗಕ್ಕೆ ಇವರ ನೇಮಣೂಕವಾದಂದಿನಿಂದ ಹಗಲಿರುಳೆನ್ನದೆ ಅಶ್ರಾಂತ ಶ್ರಮಬಟ್ಟು ಆ ಭಾಗವನ್ನು ಇವರು ತಕ್ಕಮಟ್ಟಿಗೆ ಊರ್ಜಿತ ಸ್ಥಿತಿಗೆ ತಂದರು. ಈ ಉಪಕಾರವನ್ನು ಕೆಲಮಟ್ಟಿಗಾದರೂ ತೀರಿಸುವ ಉದ್ದೇಶದಿಂದ ಆ ಪ್ರಾಂತದ ಜನರು ಸಭೆಗೂಡಿ ಬಂದು ಸ್ಮಾರಕವನ್ನು ಮಾಡುವ ಆಲೋಚನೆಯನ್ನು ನಡಿಸಿರುತ್ತಾರೆ.

(೨) ಮುಂಬೈ ಹಾಯಕೋರ್ಟಿನ ಪ್ರಸಿದ್ಧ ವಕೀಲರಾದ ಮಹಾದೇವ ಚಿಮಣಾಜಿ ಆಪಟೆ ಇವರು ಆಕ್ಟೋಬರ ತಿಂಗಳ ೧೦ನೇ ತಾರೀಖಿನ ದಿವಸ ವಿಷಮ ಜ್ವರದಿಂದ ಮುಂಬೈಯಲ್ಲಿ ಸ್ವರ್ಗಸ್ಥರಾದರು. ನಮ್ಮ ಜನರು ಇಂಗ್ಲೀಷಜನರಷ್ಟು ಜಾಣರೂ ದಕ್ಷರೂ ಬುದ್ಧಿವಂತರೂ ಆಗಲಾರರೆಂದು ಕೆಲವರ ಅಭಿಪ್ರಾಯವುಂಟು. ಈ ಅಭಿಪ್ರಾಯವನ್ನು ಸುಳ್ಳು ಪಡಿಸುವಂಥ ಜನರಲ್ಲಿ ಮಹಾದೇವ ಚಿಮಣಾಜಿ ಆಪಟೆ ಇವರು ಒಬ್ಬರಾಗಿದ್ದರು. ಮುಂಬೈ ಹಾಯಕೋರ್ಟಿನ ಹಲವು ಚೀಫ ಜಸ್ಟೀಸರು ಇವರ ಕೆಲಸಕ್ಕೆ ಮೆಚ್ಚಿ

ಇವರು ಮೇಲಾದ ಯುರೋಪಿಯನ್ನ ಬಾರಿಷ್ಟರರ ಜೋಡಿಯುವೆರಿರುತ್ತಾರೆಂದು ಆಗಾಗ್ಗೆ ಹೇಳುವರು. ಇವರು ಪ್ರಾರಂಭವಲ್ಲಿ ಬಡ ಸ್ಥಿತಿಯಲ್ಲಿದ್ದು ತಮ್ಮ ಸ್ವಂತ ಬುದ್ಧಿ ಕೌಶಲ್ಯದಿಂದ ಇಷ್ಟು ಉತ್ತಮ ಸ್ಥಿತಿಗೆ ಬಂದಿದ್ದರು. ಇವರು ಸ್ವಧರ್ಮಾಭಿಮಾನಿಗಳೂ ಸ್ವದೇಶಾಭಿಮಾನಿಗಳೂ ಇದ್ದು ಸಂಸ್ಕೃತಕ್ಕೆ ಬಹಳ ಆಶ್ರಯ ಕೊಟ್ಟಿದ್ದರು. ಇವರು ಸಂಸ್ಕೃತ ಗ್ರಂಥಗಳ ಪುನರುಜ್ಜೀವನಕ್ಕಾಗಿ ತಮ್ಮ ಪವರಿನಿಂದ ೧॥ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ ಪುಣೆಯಲ್ಲಿ ಆನಂದಾಶ್ರಮವೆಂಬಪೊಂದು ಸಂಸ್ಥೆಯನ್ನು ಸ್ಥಾಪಿಸಿದವರು. ಈ ಪ್ರಕಾರದ ಸತ್ಕಾರ್ಯಕ್ಕಾಗಿ ಹಣ ವ್ಯಯ ಮಾಡುವವರು ವಿರಳ. ಮರಣ ಕಾಲಕ್ಕೆ ಇವರ ವಯಸ್ಸು ೪೯ ವರ್ಷ ಮಾತ್ರವಿತ್ತು.

(೩) ರಶಿಯದ ಝಾರರಾದ ತಿನೇ ಆಲೇಕ್ಸಾಂಡರ್ ಇವರು ತಾ॥ ೧೯ನೇ ನವೆಂಬರ ದಿವಸ ಸ್ವರ್ಗಸ್ಥರಾದರು. ಇವರು ಶಾಂತರೂ ಗಂಭೀರರೂ ಇದ್ದು ತಮ್ಮ ವಿಸ್ತಾರವಾದ ರಾಜ್ಯವನ್ನು ಬಹು ಎಚ್ಚರದಿಂದ ಆಳಿದರು. ಇವರು ಶಾಂತಿ ಪ್ರೀಯರಾದ್ದರಿಂದ ಇವರ ೧೧ ವರ್ಷದ ಆಳಿಕೆಯಲ್ಲಿ ಬಂದಾದರೂ ಯುದ್ಧವಾಗಲಿಲ್ಲ. ಇವರು ಯುರೋಪದಲ್ಲಿಯೂ ಏಸಿಯದಲ್ಲಿಯೂ ಬಹು ಬಲಾಢ್ಯವಾದ ರಾಜ್ಯವನ್ನು ಆಳುತ್ತಿದ್ದದರಿಂದ ಜರ್ಮನಿಯವರೂ ಫ್ರಾನ್ಸದವರೂ ಇವರ ಸ್ನೇಹದ ಬಗ್ಗೆ ಬಹು ಪ್ರಯಾಸ ಪಡುತ್ತಿದ್ದರು. ಕಡೆಗೆ ಫ್ರಾನ್ಸದವರು ತಮ್ಮ ಕೈಯನ್ನು ಸ್ವಲ್ಪ ಮುಂದಕ್ಕೆ ಚಾಚಿದರು. ಫ್ರಾನ್ಸವೂ ರಶಿಯವೂ ಕೂಡಿದರೆ ಯುರೋಪದಲ್ಲಿಯ ಜರ್ಮನಿ, ಆಸ್ಟ್ರಿಯಾ, ಮತ್ತು ಇತಾಲಿ ಈ ಮೂರು

ರಾಜ್ಯಗಳು ಕೂಡಿ ಅವುಗಳೆದುರಿಗೆ ನಿಲ್ಲಲಾರವೆಂದು ಬಬ್ಬ ಇಂಗ್ಲಿಷ ಪತ್ರಕಾರನು ತಿಳಿಸುತ್ತಾನೆ.

ಝಾರರ ಶವವನ್ನು ೧೫ ತಾರೀಖಿಗೆ ಸೆಂಟ ಪಿಟರ್ಸ ಬರ್ಗದಲ್ಲಿ ಹುಗಿದರು. ಮರಣ ಕಾಲಕ್ಕೆ ಇವರ ವಯಸ್ಸು ೬೯ ವರ್ಷದ್ದಿತ್ತು. ಇವರ ತರುವಾಯ ಇವರ ಮಗನಾದ ಎನೇ ನಿಕೋಲಸನು ಪಟ್ಟಕ್ಕೆ ಬಂದು ತನ್ನ ಹೆಸರಿನ ಜಾಹೀರನಾಮೆಯನ್ನು ಪ್ರಗಟಿಸಿ, ತಾನೂ ತನ್ನ ತಂದೆಯಂತೆ ಶಾಂತತ್ವದಿಂದ ರಾಜ್ಯವಾಳುವನೆಂದು ತಿಳಿಸಿದ್ದಾನೆ.

ರಶಿಯದವರು ಹಿಂದುಸ್ಥಾನದ ಮೇಲೆ ದಾಳೀ ಮಾಡುವರೆಂಬ ಭಯವು ಬಹು ದಿವಸದಿಂದಿದೆ; ಮತ್ತು ಇಂಥ ಪ್ರಸಂಗವು ಅಲೆಕ್ಸಾಂಡರನ ಕಾಲದಲ್ಲಿ ಎರಡು ಸಾರೆ ಬಂದಾಗ್ಯೂ ಇಂಥಾದ್ದೇನೂ ಆಗಲಿಲ್ಲ. ಇವರು ಹಿಂದುಸ್ಥಾನದ ಮೇಲೆ ದಾಳಿ ಮಾಡುವ ಆಲೋಚನೆಯನ್ನು ನಡಿಸಿದ್ದರೆ ಮೊದಲಿಗೇ ಬಡ ಸ್ಥಿತಿಯಲ್ಲಿದ್ದ ನಮ್ಮ ಹಿಂದುಸ್ಥಾನದ ಗತಿಯು ಏನಾಗುತ್ತಿತ್ತೋ ದೇವರೇ ಬಲ್ಲ. ಆದರೆ ಝಾರರು ಅಂಥ ಪ್ರಸಂಗ ತಾರದ್ದರಿಂದ ನಮ್ಮ ಜನರು ಕೆಲಮಟ್ಟಿಗೆ ಅವರ ಉಪಕಾರ ನೆನಿಸಬೇಕಾಗಿದೆ.

ಪಾಲಾಗೃಹವನ್ನೂ, ಅದರ ಸುತ್ತು ಮುತ್ತಲಿನ ಸ್ಥಲವನ್ನೂ ಬಳ್ಳೀ ವ್ಯವಸ್ಥೆಯಿಂದ ಸ್ವಚ್ಛವಾಗಿ ಇಡುವದರ ಬಗ್ಗೆ ಮುಖ್ಯ ಶಿಕ್ಷಕನು ಜಬಾಬದಾರನಿರುತ್ತಾನೆಂದು ಶಿಕ್ಷಕರ ಕಾಯದೆಯ ೧೯ನೇ ಭಾಗದ ೪೯ನೇ ಕಲಮಿನಲ್ಲಿ ವಿಧಿಸಿರುತ್ತದೆ. ಈ ಕೆಲಸವನ್ನು ಪೂರ್ಣವಾಗಿ ಕೊನೆಗಾಣಿಸಬೇಕಾದರೆ ಯಾವ ಯಾವ ಮಾತುಗಳಿಗೆ ಲಕ್ಷ ಕೊಡಬೇಕೆಂಬದನ್ನು ಕುರಿತು ಮಧ್ಯ ಭಾಗದ ಎಜ್ಯುಕೇಶನಲ್ ಇನಸ್ಪೇಕ್ಟರರಾದ ಮೆ. ಟಿ. ಬಿ. ಕರ್ಕಹ್ಯಾಮ್ ಧೊರೆಗಳು ಕೆಲವು ಸೂಚ

ನೆಗಳನ್ನು ಮಾಡಿದ್ದಾರೆ. ಅವು ಗೌರವವುಳ್ಳವುಗಳಾಗಿರು ವದರಿಂದ ಅವುಗಳನ್ನು ಕೆಳಗೆ ಕೊಡುತ್ತೇವೆ. ಮಾಸ್ತರ ಜನರು ಅವುಗಳನ್ನು ಲಕ್ಷ್ಯ ಪೂರ್ವಕವಾಗಿ ಓದಿಕೊಂಡು ಅನುಕೂಲತೆಯ ಮೇರೆಗೆ ಅವುಗಳ ಉಪಯೋಗವನ್ನು ಮಾಡಿಕೊಳ್ಳತಕ್ಕದ್ದು. ಆ ಸೂಚನೆಗಳು ಯಾವವೆಂದರೆ:—

(೫) ಬೆಳಕಿನ ಬಗ್ಗೆ.

(೧) ಇಡೀ ಶಾಲಾಗೃಹದಲ್ಲಿ ಇಲ್ಲವೆ ವರ್ಗಗಳು ಕೂಡುವ ಕೋಣೆಗಳಲ್ಲಿ ತಕ್ಕಷ್ಟು ಬೆಳಕು ದೊರೆಯುವಂತೆ ಮಾಡುವ ಕೆಲಸವು ಮುಖ್ಯವಾಗ (ಕ) ಬೆಳಕು ಬರುವದಕ್ಕೆ ಮಾಡಿದ ಹಂಚಿಕೆಯನ್ನೂ (ಖ) ಬಂದ ಬೆಳಕಿನಿಂದ ಮಾಡಿಕೊಂಡ ಪ್ರಯೋಜನವನ್ನೂ ಅಲಂಬಿಸಿರುವದು.

(೨) ಬೇಕಾವಷ್ಟೇ ಬೆಳಕು ದೊರಕಿಸುವ ಹಂಚಿಕೆಯನ್ನು ಕುರಿತು ವಿಚಾರಿಸಲಾಗಿ ತಿಳಿಯುವ ನಿಯಮವೇನಂದರೆ:—ಯಾವ ಕೋಣೆಗೆ ಬೆಳಕನ್ನು ಪೂರೈಸಬೇಕಾಗಿರುವದೋ ಆ ಕೋಣೆಯ ನೆಲದ ಕ್ಷೇತ್ರದ ೫ ರಲ್ಲಿ ೧ ಪಾಲು ಬೆಳಕು ಬರುವ ದ್ವಾರಗಳ ಅಂದರೆ ಕಿಟಿಕೆಗಳ ಕ್ಷೇತ್ರವಿರಲಿಕ್ಕೆ ಬೇಕು. ಒಂದು ಕೋಣೆಯು ೨೦ ಫೂಟು ಉದ್ದ, ೨೦ ಫೂಟು ಅಗಲವಿದ್ದರೆ ಬೆಳಕು ಬರುವ ಮಾರ್ಗಗಳ ಕ್ಷೇತ್ರವು ಕನಿಷ್ಠ ಪಕ್ಷಕ್ಕೆ ೮೦ ಫೂಟು ಇರಲಿಕ್ಕೆಬೇಕು. ಪ್ರತಿ ಒಬ್ಬ ವಿದ್ಯಾರ್ಥಿಗೆ ಕಿಮಾನ್ ಪಕ್ಷ ೨೦೦ ಚೌರಸ ಇಂಚು ಬೆಳಕು ಬೀಳುವಂತೆ ಮಾಡುವರೆ ಅನುಕೂಲವಿರಲಿಕ್ಕೆಬೇಕು; ಅವರೆ ಈ ಮಾತು ಶಾಲೆಯ ಸ್ಥಳ, ದಿಕ್ಕು ಮುಂತಾವ ಬಲವು ಸಂಗತಿಗಳನ್ನು ಅವಲಂಬಿಸಿರುತ್ತದೆ.

(೩) ಬೆಳಕಿನ ಉಪಯೋಗವನ್ನು ಕುರಿತು ಲಕ್ಷದಲ್ಲಿತತಕ್ಕ ಸಂಗತಿಯು ಯಾವದೆಂದರೆ, ಕಣ್ಣಿಗೆ ಆಯಾಸವಾ

ಗುವಂಥ ಇಲ್ಲವೆ ತೊಂದರೆಯಾಗುವಂಥ ಬೆಳಕನ್ನು ಸರ್ವ
ಥಾ ವರ್ಜ್ಯ ಮಾಡಬೇಕು. ತಕ್ಕಷ್ಟಕ್ಕಿಂತ ಹೆಚ್ಚು ಬ
ಇಲ್ಲವೆ ಕಡಿಮೆ ಬೆಳಕು ಇದ್ದರೆ ಕಣ್ಣಿಗೆ ತ್ರಾಸವಾಗು
ತ್ತದೆ. ಕಡಿಮೆ ಬೆಳಕಿನಲ್ಲಿ ಕೆಲಸ ಮಾಡುವದರಿಂದಲೂ
ತಕ್ಕಷ್ಟಕ್ಕಿಂತ ಹೆಚ್ಚು ಬೆಳಕಿನಲ್ಲಿ ಕೆಲಸ ಮಾಡುವದರಿಂ
ದಲೂ ಸರಿಯಾಗಿ ಅಪಾಯವಾಗುತ್ತದೆ. ಬಹುಶಃ ವರ್ಗ
ದೊಳಗಿನ ಪ್ರತಿಯೊಬ್ಬ ಹುಡುಗನ ಕೆಲಸವು ಬೆಳಕಿನಲ್ಲಿ
ಸುಗುವಂತೆ ಹುಡುಗರನ್ನು ಕೂಡ್ರಿಸಬೇಕು; ಮತ್ತು ಆ
ಬೆಳಕು ಹುಡುಗರ ಎಡಗಡೆಯಿಂದಲೂ ಅದಷ್ಟು ಎತ್ತರದಿಂ
ದಲೂ ಬರುವಂತೆ ಕೈಲಾದ ಮಟ್ಟಿಗೆ ವ್ಯವಸ್ಥೆ ಮಾಡಬೇಕು.
ಎಡಗಡೆಯಿಂದ ಬೆಳಕು ಬರದಂತಿದ್ದರೆ ಬಲಗಡೆಯಿಂದ ಬ
ರುವಂತೆ ಮಾಡುವದೇ ಉತ್ತಮ. ಹಿಂದಿನಿಂದ ಬರುವ ಬೆಳ
ಕು ಕಾಡು, ಯಾಕಂದರೆ ಇಂಥ ಬೆಳಕಿನಲ್ಲಿ ಕೆಲಸ ಮಾಡ
ಹತ್ತಿದರೆ ಮೈಕತ್ತಲು ಬೀಳುತ್ತದೆ. ಎದುರಿನಿಂದ ಬರು
ವಂಥ ಮತ್ತು ಹುಡುಗರ ಮೋರೆಯ ಮೇಲೆ ಬೀಳುವಂಥ
ಬೆಳಕು ಎಲ್ಲಕ್ಕೂ ಹೆಚ್ಚು ಅಪಾಯವೆನ್ನುಂಟು ಮಾಡುವ
ದು. ಅವರಿಂದ ಈ ಪ್ರಕಾರ ಆಗದಂತೆ ಮಾಸ್ತರನು ಯಾ
ವಾಗಲೂ ವ್ಯವಸ್ಥೆಯನ್ನು ಇಡತಕ್ಕದ್ದು. ಬರೆಯುವದ
ಕ್ಕಾಗಿ ಮೇಜುಗಳನ್ನು ಉಪಯೋಗ ಮಾಡುವಂಥ ಚಾಲ
ಗಳಲ್ಲಿ ಕಿಟಿಕಿಯ ಕೆಳಭಾಗವು ಮೇಜಿಗಿಂತ ಎತ್ತರವಾಗಿರ
ತಕ್ಕದ್ದು; ಯಾಕಂದರೆ ಕೆಳಗಿನಿಂದ ಬರುವ ಬೆಳಕಿನಿಂದ
ಕಣ್ಣಿಗೆ ತ್ರಾಸವೂ ಉಲ್ಲಾಸಭಂಗವೂ ಆಗುತ್ತವೆ. ಸೂ
ರ್ಯನ ಕಿರಣಗಳು ಪ್ರತ್ಯಕ್ಷವಾಗಿ ಮೈಮೇಲೆ ಬೀಳುವಂ
ತಿದ್ದರೆ ಆ ಕಿರಣಗಳ ನಿವಾರಣಕ್ಕಾಗಿ ಕಿಟಿಕಿಗಳಿಗೆ ಪಡಕು
ಗಳಿರಬೇಕು. ಈ ಪ್ರಸಕ್ತಿಯಲ್ಲಿ ಮೇಳತಕ್ಕ ಇನ್ನೊಂದು

ಮೊತ್ತು ಯಾವದೆಂದರೆ—ರಾತ್ರಿ ಅಭ್ಯಾಸ ನಡೆಯುವಂಥ ಶಾಲೆಗಳಲ್ಲಿ ಹಚ್ಚುವ ದೀಪಗಳು ಯಾವಾಗಲೂ ನಿಚ್ಚಳವಾಗಿ ಉರಿಯಲಿಕ್ಕೆ ಬೇಕು; ಪ್ರತಿಫ್ಲಿಣಿಕ್ಕೆ ಹೊಕ್ಕು ಕಡಿಮೆಯಾಗುತ್ತಿರಬಾರದು. ಬರೇಸುಣ್ಣ ಹಚ್ಚಿದಂಥ ಗೋಡೆಗಳಿಗಿಂತ ಬಣ್ಣ ಕೊಟ್ಟಂಥ ಗೋಡೆಗಳು ಚೆಲೋವು ಯಾಕಂದರೆ ಸುಣ್ಣದ ಗೋಡೆಗಳಿಂದ ಪ್ರಕಾಶವು ಪ್ರಖರವಾಗಿ ಕಣ್ಣಿಗೆ ವಿಶೇಷ ತೊಂದರೆಯುಂಟಾಗುವ ಸಂಭವವುಂಟು. ಹಳದೀಬಣ್ಣ, ಇದ್ದಲಿಯ ಪುಡಿ ಕೂಡಿಸಿದ ಸುಣ್ಣ, ಇವುಗಳಿಂದ ಗೋಡೆಗಳನ್ನು ಸಾರಿಸಿದರೆ ಕಣ್ಣಿಗೆ ಹಿತವಾಗುವ ದಲ್ಲದೆ ಪ್ರಕಾಶವ ಪ್ರಸರಣಕ್ಕೆ ಹೆಚ್ಚು ಸಹಾಯವಾಗುತ್ತದೆ.

SELECTIONS FROM THE KARNATIK GAZETTEER.

ಕನ್ನಡ ಗರೆಹುಟಿಯರದಿಂದ ಅವತರಣಿಗಳು.

(೨೫೯ನೇ ಪುಟದಿಂದ ಸಾಗಿದ್ದು)

ಗದಗಿನ ಮೊಮುಲೆದಾರ ಈಚೇರಿಯಲ್ಲಿ ಕೆಲವು ತಾಮ್ರ ಪತ್ರ ಶಾಸನಗಳಿರುತ್ತವೆ. ಮೊದಲು ಹೇಳಿದ ಗುಡಿಗಳಲ್ಲಿಯೂ ಬೇರೆ ಗುಡಿಗಳಲ್ಲಿಯೂ ಕೂಡಿ ೭೦ ಹಳೆಗನ್ನಡ ಶಿಲಾಲಿಪಿಗಳಿರುತ್ತವೆ. ಇವೆಲ್ಲ ಕ್ರಿಸ್ತ ಶಕದ ೧೦ನೇ ಶತಕದ ಈಚೆಯಲ್ಲಿ ಅವಂಥವು. ಇವುಗಳಲ್ಲಿ ಕೆಲವು ಚಾಲುಕ್ಯರ ಕಾಲದವು, ಕೆಲವು ಕಲಚುರೀ ಬಿಜ್ಜಳನ ಮಕ್ಕಳ ಕಾಲದವೂ, ಕೆಲವು ದೇವಗಿರಿಯ ಯಾದವರ ಕಾಲದವು, ಕೆಲವು ದ್ವಾರಸಮುದ್ರದ ಬಲ್ಲಾಳರ ಕಾಲದವು, ಕೆಲವು ವಿಜಯನಗರದವರ ಕಾಲದವು ಇರುತ್ತವೆ. ಇದ್ದರಿಂದ ಗದಗು ೧೦ನೇ ಶತಕದ ಈಚೆಯಲ್ಲಿ ಈ ರಾಜ ವಂಶಗಳಿಗೆ ಅಂತರ್ಗತನಾಗಿತ್ತೆಂದು ತಿಳಿಯುತ್ತದೆ. ಗದಗಿಗೆ ಪೂರ್ವದಲ್ಲಿ ೨೬ ಕಿ

ಪುರ, ಇಲ್ಲವೆ ಕೃತಕಪುರವೆಂದು ಹೆಸರಿತ್ತು. ಇದರ ಅರ್ವಾಚೀನ ಕಾಲದ ಇತಿಹಾಸವು ಧಾರವಾಡದಂತೆಯೇ ಇರುತ್ತದೆ.

ಡಂಬಳ.—ಗದಗಿನ ಆಗ್ನೇಯಕ್ಕೆ ೧೩ ಮೈಲಿನ ಮೇಲೆ ಅದೆ. ಈ ಊರು ಸರ ೧೪೦೦ ರ ಪೂರ್ವದಲ್ಲಿ ತಾಲೂಕಿನ ಮುಖ್ಯಗ್ರಾಮವಿತ್ತು. ೧೦ನೇ ಶತಕದಲ್ಲಿ ಈ ಊರಿಗೆ ಧರ್ಮಪುರ ಅಥವಾ ಧರ್ಮವೊಳಲೆಂಬ ಹೆಸರಿತ್ತು. ಇಲ್ಲಿ ದೊಡ್ಡಬಸಪ್ಪ, ಕಾಲ್ವೇಶ್ವರ, ಸೋಮೇಶ್ವರ, ಎಂಬ ಪುರಾತನ ಗುಡಿಗಳುಂಟು. ದೊಡ್ಡಬಸಪ್ಪನ ಗುಡಿಯು ವಿಸ್ತಾರವಾಗಿಯೂ ಬಹು ಮನೋಹರವಾಗಿಯೂ ಕಟ್ಟಿದ್ದುಂಟು; ಅವರೆ ಈಗ ಬಹಳವಾಗಿ ಹಾಳಾಗಿದೆ. ಅದರಂತೆ ಬೇರೆ ಗುಡಿಗಳಾದರೂ ಹಾಳಾಗಿವೆ. ಊರ ಹೊರಗೆ ಹೆಸರಾದ ತೋಟದ ಸ್ವಾಮಿಯ ದೊಡ್ಡ ಮಠವಿರುತ್ತದೆ. ಈ ಮಠಕ್ಕೆ ಲಿಂಗವಂತರು ಬಹಳ ನಡಕೊಳ್ಳುತ್ತಾರೆ. ಈ ಮಠಕ್ಕೂ, ಅದಕ್ಕೆ ಅಂಕಿತವಾಗಿ ಸುತ್ತಲಿನ ಹಳ್ಳಿಗಳಲ್ಲಿ ಇರುವ ಸಣ್ಣ ಮಠಗಳಿಗೂ ಇನಾಮು ಭೂಮಿಗಳು ನಡಿಯುತ್ತವೆ. ಡಂಬಳದ ಪಶ್ಚಿಮಕ್ಕೆ ಹಾಳಾದದ್ದೊಂದು ಕೋಟೆಯುಂಟು. ಅದರೊಳಗೊಂದು ಜೈನರ ಗುಡಿಯೂ ಸುತ್ತಮುತ್ತ ಕಂದಕವೂ ಉಂಟು. ಊರ ಹೊರಗೆ ಹಲಕೆಲವು ತೋಟಗಳಿರುತ್ತವೆ. ಡಂಬಳದಲ್ಲಿ ೫ ಲಿಪಿಗಳಿವೆ. ಅವೆಲ್ಲ ೧೦ನೇ ಶತಕದ ಈಚೆಯಲ್ಲಿ ಅದಂಥವು. ಇಲ್ಲಿಯ ದೇಸಾಯಿಯು ಬಹುಕಾಲದಿಂದ ಹೆಸರಾದವನು. ಅವನ ಬಳಿಯಲ್ಲಿ ೯ ತಾಮ್ರ ಪಟಗಳಿವೆ. ಅವು ವಿಜಯನಗರದ ೨ನೇ ಹರಿಹರರಾಯನ (೧೩೭೯—೧೪೦೧) ಕಾಲದವು. ಈ ತಾಮ್ರ ಪಟಗಳಲ್ಲಿ ಪರಿವರರಾಯನು, ಈಕೆ ೧೩೧೦ ನೇ

ವರ್ಷದಲ್ಲಿ ಹಸ್ತಿನಾವತಿಯ ರಾಜ್ಯಕ್ಕೆ ಸೇರಿದ ಗದಗ ಪ್ರಾಂತದ ೬೬ ಗ್ರಾಮಗಳಲ್ಲಿ ೫ ಸಮಭಾಗಗಳನ್ನು ಮಾಡಿ, ಒಂದು ತಾನು ಇಟ್ಟುಕೊಂಡು, ಎರಡನೇದನ್ನು ಗದಗಿನ ವೀರನಾರಾಯಣನಿಗೂ ತ್ರಿಕೂಟೇಶ್ವರನಿಗೂ, ಮೂರನೇದನ್ನು ಜೇರೆ ದೇವಸ್ಥಾನಗಳಿಗೂ ಬ್ರಾಹ್ಮಣರಿಗೂ ಕೊಟ್ಟನೆಂದು ಬರೆದದೆ. ಧೊಂಡಜೀವಾಫನು ಡಂಬಳದ ಕೋಟೆಯನ್ನು ಆಕ್ರಮಿಸಿದ್ದನು. ಇದರ ಹೊರತು ಇಂಗ್ಲಿಷ ಸರಕಾರದ ಅಮಲಿನ ಆರಂಭದಲ್ಲಿ ಕೆಲವು ಯುದ್ಧಗಳು ಈ ಕೋಟೆಯಲ್ಲಿ ಆದವು.

ಲಕ್ಕುಂಡಿ.—ಗದಗಿನ ಆಗ್ನೇಯಕ್ಕೆ ೩ ಮೈಲಿನ ಮೇಲೆ ಅದೆ. ಇದು ಪುರಾತನ ಕಾಲದಿಂದ ಹೆಸರಾದದ್ದಿರುತ್ತದೆ. ಇಲ್ಲಿ ೫೦ ದೇವಾಲಯಗಳೂ, ೫೫ ಶಿಲಾಲಿಪಿಗಳೂ ಇರುತ್ತವೆ. ಕೆಲವು ದೊಡ್ಡ ಗುಡಿಗಳಲ್ಲಿಯ ಕೆತ್ತಿಕೆಯ ಕೆಲಸವು ಬಹು ಮನೋಹರವಾವದ್ದಿರುತ್ತದೆ. ಚಂದ್ರಮೌಳೇಶ್ವರನ ಗುಡಿಯಲ್ಲಿ ೩ ಲಿಪಿಗಳಿರುತ್ತವೆ. ಕಾಶೀವಿಶ್ವೇಶ್ವರನ ಗುಡಿಯು ಎಲ್ಲಕ್ಕೂ ದೊಡ್ಡದೂ ಸುಂದರವಾದವೂ ಇರುತ್ತದೆ. ಇದರಲ್ಲಿ ಎರಡು ಗುಡಿಗಳು ಪೂರ್ವ ಪಶ್ಚಿಮ ಎದುರುಬದುರಾಗಿ ಇರುತ್ತವೆ. ಈ ಎರಡು ಗುಡಿಗಳ ಬಾಗಿಲುಗಳ ಸುತ್ತುಮುತ್ತಲೂ ಕಂಬಗಳ ಮೇಲೆಯೂ ಅತಿ ಮನೋಹರವಾದ ದೇವಾದಿಗಳ ಚಿತ್ರಗಳನ್ನೂ ಬಳ್ಳಿ ಹೂವುಗಳನ್ನೂ ನುಣುಪಾದ ಕಲ್ಲಿನೊಳಗೆ ಕೊರಿದಿದ್ದಾರೆ. ಈ ಗುಡಿಯಲ್ಲಿ ಸಮಾಧಿ ಕಲ್ಲು ಎಂಬ ಹೆಸರಿನ ಕಲ್ಲಿನ ಮೇಲೆ ಸ್ವ ೧೦೯೪ನೇ ವರ್ಷ ಬರಿದದ್ದೊಂದು ಲಿಪಿಯುಂಟು. ಇವರಂತೆ ಕುಂಬಾರ ಗಿರೀಶ್ವರ, ಲಕ್ಷ್ಮೀ ನಾರಾಯಣ, ಮಾಣಿಕೇಶ್ವರ, ನಗರದೇವ, ನನ್ನೇಶ್ವರ, ನೀಲಕಂಠೇಶ್ವರ,

ಸೋಮೇಶ್ವರ, ವಿರೂಪಾಕ್ಷ, ವಿಶ್ವನಾಥ ಮುಂತಾದ ಗುಡಿಗಳೂ ಎರಡು ಬಸ್ತಿಗಳೂ ನೋಡತಕ್ಕಂಥವಿರುತ್ತವೆ. ಬಹುತರ ಈ ಯಾವತ್ತು ಗುಡಿಗಳಲ್ಲಿ ಶಿಲಾಲಿಪಿಗಳಿವೆ. ಎಲ್ಲಕ್ಕೂ ಮಳೆಯ ಲಿಪಿಯು ಸರ್ವಾತ್ಮನೇ ವರ್ಷಾದ್ಧಿರುತ್ತದೆ. ಆದರೆ ಕೆಲವು ಲಿಪಿಗಳನ್ನು ಇನ್ನೂ ಯಾರೂ ಓದಿಲ್ಲ. ಲಕ್ಕುಂಡಿಯಲ್ಲಿ ಗುಡಿಗಳಂತೆ ಹಲವು ದೊಡ್ಡ ದೊಡ್ಡ ಹೊಕ್ಕು ತುಂಬುವ ಬಾವಿಗಳಿರುತ್ತವೆ. ಅವುಗಲ್ಲಿ ಛಜೇರ ಬಾವಿ, ಕನ್ನೇರ ಬಾವಿ, ಮುಸುಕಿನ ಬಾವಿ, ಪ್ರಸಿದ್ಧ; ಮುಸುಕಿನ ಬಾವಿಯು ನೋಡತಕ್ಕಂಥಾದ್ಧಿರುತ್ತದೆ. ಊರ ಹೊರಗೆ ದಾಳು ಕೊಟ್ಟಿ ಎಂದು ಇರುತ್ತದೆ. ಅದರೊಳಗೂ ಹೊರಗೂ ಶಿಲಾಲಿಪಿಗಳಿವೆ.

ನರಸಾಪುರ.—ಗದಗಿನ ಈಶಾನ್ಯಕ್ಕೆ ಎರಡು ಮೈಲಿನ ಮೇಲೆ ಅದೆ. ಈ ಹಳ್ಳಿಯು ಗದಗಿನ ತ್ರಿಕೂಟೇಶ್ವರ, ವೀರನಾರಾಯಣ ಈ ಎರಡೂ ದೇವಸ್ಥಾನಗಳಿಗೆ ಕೂಡಿ ಆನಾಮು ನಡೆಯುತ್ತದೆ. ಈ ಹಳ್ಳಿಯಲ್ಲಿಯೂ ಬಂದು ಬುನಾದಿಯ ಗುಡಿಯುಂಟು. ಅದರಲ್ಲಿ ಸರ್ ೧೧೩೩ರಲ್ಲಿ ಬರಿದ ಲಿಪಿ ಇರುತ್ತದೆ. ಈ ಗುಡಿಯಲ್ಲಿ ಪುರಾತನದ ಭಾರತ ರಾಮಾಯಣಗಳ ಕಥೆಗಳಿಗೆ ಸಂಬಂಧಿಸಿದಂಥ ಬಹು ಮನೋಹರವಾದ ಚಿತ್ರಗಳಿವೆ.

ಮುಳಗುಂದ.—ಗದಗಿನ ವಾಯವ್ಯಕ್ಕೆ ೧೦ ಮೈಲಿನ ಮೇಲಿದೆ. ಸರ್ ೧೪೪೪ರಲ್ಲಿ ತಾಸಗಾವಿಯ ಸಂಸ್ಥಾನವು ಬಾಲಸಾತಿಗೆ ಬಂದಾಗ ಈ ಊರು ಧಾರವಾಡ ಜಿಲ್ಲೆಗೆ ಸೇರಿತು. ಇಲ್ಲಿ ಬುನಾದಿಯ ೫ ಗುಡಿಗಳೂ, ೪ ಬಸ್ತಿಗಳೂ ಇರುತ್ತವೆ. ಈ ದೇವಸ್ಥಾನಗಳಲ್ಲಿಯೂ ಬೇರೆ ಕಡೆಯಲ್ಲಿಯೂ ಕೂಡಿ ೧೬ ಶಿಲಾಲಿಪಿಗಳಿರುತ್ತವೆ. ಅವುಗಳಲ್ಲಿ

ಎಲ್ಲಕ್ಕೂ ಹಳೇದು ಸರ್ಕಂನೇ ವರ್ಷದ್ದಿರುತ್ತದೆ. ಊರ ಪೂರ್ವಕ್ಕೆ ಬಂದು ಸಣ್ಣ ಗುಡ್ಡದ ಮೇಲೆ ಬಂದು ಗುಡಿಯುಂಟು. ಆ ದೇವರ ಜಾತ್ರೆಯು ಕಾರ್ತಿಕ ಮಾಸದಲ್ಲಿ ಆಗುತ್ತದೆ.

ನಾಗಮಂಗಲ.—ಗದಗಿನ ಆಗ್ನೇಯಕ್ಕೆ ೫ ಮೈಲಿನ ಮೇಲಿದೆ. ಇಲ್ಲಿ ದ್ವಾರಸಮುದ್ರ ಬಲ್ಲಾಳರೂ ದೇವಗಿರಿಯ ಯಾದವರೂ ಬರಿಸಿದ ೪ ಲಿಪಿಗಳಿವೆ. ಅವೆಲ್ಲ ೧೩ನೇ ಶತಕದಲ್ಲಿ ಆದಂಥವು.

ಕುರ್ತಕೋಟಿ.—ಗದಗಿನ ನೈರುತ್ಯಕ್ಕೆ ೮ ಮೈಲಿನ ಮೇಲಿದೆ. ಇಲ್ಲಿ ೪ ಜುನಾದಿಯ ಗುಡಿಗಳೂ, ೫ ಲಿಪಿಗಳೂ ಇರುತ್ತವೆ. ಇವೆಲ್ಲ ೧೦ನೇ ಶತಕದ ಈಚೆಯವು.

ಹೊಂಬಳ.—ಗದಗಿನ ವಾಯವ್ಯಕ್ಕೆ ೩ ಮೈಲಿನ ಮೇಲಿದೆ. ಈಶ್ವರನ ಗುಡಿಯಲ್ಲಿಯೂ ಭೋಗೇಶ್ವರ ಲಿಂಗನ ಗುಡಿಯ ಹತ್ತರವೂ ಬಂಜೊಂದು ಲಿಪಿಗಳಿರುತ್ತವೆ.

ಹೊಸೂರು.—ಗದಗಿನ ಆಗ್ನೇಯಕ್ಕೆ ೧೦ ಮೈಲಿನ ಮೇಲಿದೆ. ಬಲ್ಲಾಳೇಶ್ವರನ ಗುಡಿಯ ಗೋಡೆಗೆ ಬಣ್ಣ ಕೊಟ್ಟಿದ್ದಾರೆ. ಜೀರೆ ಮೂರು ಹಾಳುಗುಡಿಗಳಿವೆ. ಯಾದವ ವ ಬಲ್ಲಾಳ ನಾರಾಯಣನೆಂಬವನು ಸರ್ಕಂ೧೨೦೦ರಲ್ಲಿ ಬರಿಸಿದೊಂದು ಲಿಪಿಯುಂಟು.

ಬಳಗಾನೂರು—ಗದಗಿನ ಉತ್ತರಕ್ಕೆ ೧೪ ಮೈಲಿನಮೇಲೆ ದೊಡ್ಡವಳ್ಳಿ, ಜನಸಂಖ್ಯೆ ೧೩೩೪ ವೀರಭದ್ರನ ಗುಡಿಯಲ್ಲಿ ವೀರಬಲ್ಲಾಳ ರಾಜನ ಆಳಿಕೆಯಲ್ಲಿ ಬರಿಸಿದೊಂದು ಲಿಪಿಯುಂಟು.

ಹಮ್ಮಿಗಿ—ಪಿರಟ್ಟಿಯು ಬಳಿಯಲ್ಲಿ. ಶಿರಟ್ಟಿಯು ಸೀಸೆಯಿದು ಇಲ್ಲಿ ಇರುತ್ತಿದ್ದನು. ಅವನು ಸರ್ಕಂ೧೩೫೦ರಲ್ಲಿ

ಬಂಡಾಯದಲ್ಲಿ ಸೇರಿದ್ದರಿಂದ ಅವನ ಸಂಸ್ಥಾನವು ಸರಕಾರ
ಕ್ಕೆ ಸೇರಿತು.

ಕೊರಲಹಳ್ಳಿ—ಮುಂಡರಗಿಯ ದಕ್ಷಿಣಕ್ಕೆ ೬ ಮೈಲಿನ ಮೇಲೆ, ತುಂಗಭದ್ರೆಯ ಎಡದಂಡೆಯಲ್ಲಿ ದೊಡ್ಡ ಹಳ್ಳಿಯು ಈ ಗ್ರಾಮದ ಬಳಿಯಲ್ಲಿ ತುಂಗಭದ್ರೆಯು ನೀರು ಏರಿಸುವದ ಕ್ಕಾಗಿ ಬಹು ಭವ್ಯವಾದದ್ದೊಂದು ಕಲ್ಲಿನ ಮೊಡ್ಡು ವಿಜಯ ನಗರದ ಅರಸರು ಹಾಕಿದ್ದಿರುತ್ತದೆ. ಇದು ಈಗ ಬಿಡಿದಿ ರುತ್ತದೆ.

ಮುಂಡರಗಿ—ಗದಗಿನ ಆಗ್ನೇಯಕ್ಕೆ ೨೪ ಮೈಲಿನ ಮೇಲೆ, ಜನಸಂಖ್ಯೆ ೪೪೨೬ ಊರ ಬಳಿಯಲ್ಲಿ ಸಣ್ಣದೊಂ ದು ಗುಡ್ಡದ ಮೇಲೆ ಹಾಳು ಕೋಟೆಯುಂಟು. ಇದು ನಿಜಾ ಮನ ಸರಹದ್ದಿನ ಸಮೀಪಕ್ಕಿರುವ ಕಾರಣ ಅಲ್ಲಿ ವ್ಯಾಪಾರ ವು ಬಿಳಿತಾಗಿ ನಡಿಯುತ್ತದೆ. ಪೇಟೆಯು ತಕ್ಕಮಟ್ಟಿಗೆ ದೊಡ್ಡದಿದೆ. ಮೆಣಸಿನಕಾಯಿ, ಬೆಲ್ಲ, ಹುಣಚೀ ಹಣ್ಣು, ಅರಿಸಿಣ ಮುಂತಾದ ಸರಕುಗಳ ವ್ಯಾಪಾರವಾಗುತ್ತದೆ. ಈ ಊರೂ ಕೆಲವು ಹಳ್ಳಿಗಳೂ ಭೀಮರಾವ ಮುಂಡರಗಿ ಎಂ ಬವನಿಗೆ ಜಹಾಗೀರಾಗಿ ನಡಿಯುತ್ತಿದ್ದವು. ಭೀಮರಾಯನು ಸ ೧೮೫೭ ರಲ್ಲಿ ಬಂಡಾಯ ಮಾಡಿ ಕೊಪ್ಪಳದ ಕೋಟೆ ಯಲ್ಲಿ ಯುದ್ಧಕ್ಕೆ ನಿಂತು ಮಡಿದವದ್ದರಿಂದ ಸರಕಾರದವರು ಅವನ ಜಹಾಗೀರು ಕಸಕೊಂಡರು. ಈಗ ಮುಂಡರಗಿಯು ಮಹಾಲಿನ ಮುಖ್ಯ ಗ್ರಾಮವಾಗಿದೆ.

ಹಾನಗಲ್ಲು ತಾಲೂಕು.

ಈ ತಾಲೂಕು ಜಿಲ್ಲೆಯ ನೈರುತ್ಯ ಮೂಲೆಯಲ್ಲಿ ಬಂ ಕಾಪೂರ ತಾಲೂಕಿನ ದಕ್ಷಿಣಕ್ಕೆ ಇರುತ್ತದೆ. ಇದರಲ್ಲಿ ಸರ ಕಾರೀ ಹಳ್ಳಿಗಳು ೧೩೫, ಮುಮಾಲೀ ೩೬ ಹಳ್ಳಿಗಳು

ಇರುತ್ತವೆ. ಕ್ಷೇತ್ರಫಲ ೦೯೪ ಚಚೌ ಕ ಮೈಲು; ಜನ ಸಂಖ್ಯೆ ೬೫೭೪; ಭೂಮಿಯ ಕಂದಾಯ ೧೪೪೪೯೦ ರೂಪಾಯಿ.

ಸ್ವರೂಪ — ಪಶ್ಚಿಮ ದಕ್ಷಿಣಗಳಲ್ಲಿ ಅಡವಿಗಳುಂಟು. ಪೂರ್ವ ಭಾಗವು ಬೈಲು ಪ್ರದೇಶವು. ಭೂಮಿ ತಗ್ಗು, ಮಿಟ್ಟೆ. ಹಳ್ಳಿಗಳು ದೂರ ದೂರ. ಪೂರ್ವ ಭಾಗ ಎರೆ; ಪಶ್ಚಿಮ ದಕ್ಷಿಣಗಳಲ್ಲಿ ಕೆಂಪು; ಉತ್ತರದಲ್ಲಿ ಮಿಶ್ರ. ೬೦ ವರ್ಷದ ಹಿಂದೆ ಕಾನಡಾಗಿಂದ ಆನೆಗಳು ಇಲ್ಲಿಯ ಅಡವಿಗೆ ಬರುತ್ತಿದ್ದವು.

ಹವೆ, ಮಳೆ, ನೀರು.—ಭೂಮಿಯಲ್ಲಿ ಕೆರೆಗಳ ನೀರು ಬಹಳ ಹರಿಯುವ ಕಾರಣ ಚಳಿಗಾಲದಲ್ಲಿ ಜ್ವರೋಪದ್ರವ ವಾಗುತ್ತದೆ. ಮಳೆ ೭೦ ರಿಂದ ೫೪ ಇಂಚಿನವರೆಗೆ, ಸರಾಸರಿ ೩೫ ಇಂಚು. ಅಗ್ನೇಯದಲ್ಲಿ ವರದಾನದಿಯೂ, ಈಶಾನ್ಯದಲ್ಲಿ ಧರ್ಮಾನದಿಯೂ ಅಲ್ಲದೆ, ಬೇರೆ ಕೆಲವು ಹಳ್ಳಗಳುಂಟು. ಬೇರೆ ಕೆಲವು ಕೆರೆಗಳೂ ಅವುಗಳಿಂದ ತೆಗೆದ ಕಾಲುವೆಗಳೂ ಇರುವಕಾರಣ ನೀರಿನ ತಾಪತ್ರಯವು ಬಹು ತರ ಆಗುವದಿಲ್ಲ.

ದೊಡ್ಡ ಊರುಗಳು.

ಹಾನಗಲ್ಲು.—ಇದು ಧಾರವಾಡದ ದಕ್ಷಿಣಕ್ಕೆ ೩೦ ಮೈಲಿನ ಮೇಲಿದೆ. ಜನ ಸಂಖ್ಯೆ ೫೨೦೦. ಇಲ್ಲಿ ತಾಲೂಕ ಕಚೇರಿ, ಪೋಷ್ಟ ಆಫೀಸು, ಮ್ಯುನಿಸಿಪಾಲಿಟಿ, ಸರಕಾರೀ ಶಾಲೆಗಳು ಇರುತ್ತವೆ. ಊರ ಹೊರಗೆ ಹಾಳುಕೋಟೆಯು ಸುಮಾರು ೧೯೦೦ ಫೂಟು ಸುತ್ತಳತೆಯುಳ್ಳದ್ದಾಗಿ ಮಣ್ಣಿನಿಂದ ಕಟ್ಟಿದ್ದಿರುತ್ತದೆ. ಊರಿನ ಸುತ್ತುಮುತ್ತು ವಿಸ್ತಾರವಾದ ಕೋಟೆ ಇದ್ದದ್ದರ ಕುರುಹುಗಳು ಕಾಣುತ್ತವೆ. ಹಾನಗಲ್ಲಿನಲ್ಲಿ ೧೫ ಸಣ್ಣ ಗುಡಿಗಳಿರುತ್ತವೆ. ಅವುಗಳಲ್ಲಿ

ತಾರಕೇಶ್ವರನ ಗುಡಿಯು ಶ್ರೇಷ್ಠ. ಇದು ಊರ ಹೊರಗೆ ಪೂರ್ವಕ್ಕೆ ಇರುತ್ತದೆ. ಇದರ ಸಭಾಮಂಟಪವು ೬೦ ಫೂಟು ಉದ್ದ, ೪೦ ಫೂಟು ಅಗಲ ಇರುತ್ತದೆ. ಗರ್ಭಾಗಾರದ ಮುಂದೆ ಬಹು ಚಂದವಾಗಿ ಕೊರಿದಂಥ ಕಮಲವು ತೂಗ ಬಿಟ್ಟ ಹಾಗೆ ಕಾಣಿಸುತ್ತದೆ. ಅದು ಸುಮಾರು ೩೦ ಫೂಟಿನ ವ್ಯಾಸವುಳ್ಳ ಅಷ್ಟಕೋನಾಕೃತಿಯಾದ ಒಂದು ಶಿಲೆಯಲ್ಲಿ ಕೊರೆದು ೪ ಚಿತ್ರ ವಿಚಿತ್ರವಾಗಿ ಕೊರಿದಂಥ ಕಂಬಗಳ ಆಧಾರದಿಂದ ನಿಲ್ಲಿಸಲ್ಪಟ್ಟಿರುತ್ತದೆ. ಅದೇ ಕೋಣೆಯಲ್ಲಿ ಅಷ್ಟದಿಕ್ಪಾಲಕರ ಮೂರ್ತಿಗಳು ಬಹು ಸುಂದರವಾಗಿ ಕೊರಿಯಲ್ಪಟ್ಟವೆ. ಗುಡಿಯೊಳಗೆ ಎಲ್ಲಕಡೆಯಲ್ಲಿಯೂ ನಾನಾ ಪ್ರಕಾರದ ಪೌರಾಣಿಕ ಚಿತ್ರಗಳನ್ನು ಕೊರೆದಿದ್ದಾರೆ. ಗುಡಿಯ ಹೊರಗೆ ಮೂರು ವೀರಗಲ್ಲುಗಳು ಗೋಡೆಗೆ ಆನಿಸಿ ಇಡಲ್ಪಟ್ಟಿರುತ್ತವೆ. ಹನುಮಂತನ ಗುಡಿಯು ಹತ್ತಿರ ಬೇರೊಂದು ಸಣ್ಣ ಗುಡಿಯಲ್ಲಿ ನಾಗಜಾತಿಯ ಮನುಷ್ಯರ ಆಕೃತಿಗಳನ್ನು ಕೊರೆದಿದ್ದಾರೆ. ಬಲೇಶ್ವರನ ಗುಡಿಯು ಊರಿಂದ ಸ್ವಲ್ಪ ದೂರ ಇರುತ್ತದೆ.

ಹಾನಗಲ್ಲಿನಲ್ಲಿ ಒಟ್ಟಿಗೆ ೧೧ ಶಿಲಾಲಿಪಿಗಳಿರುತ್ತವೆ. ಅವುಗಳಲ್ಲಿ ೪ ಲಿಪಿಗಳ ಮಿತಿಗಳು ತಿಳಿದವೆ. ಅವೆಲ್ಲ ಕ್ರಿ. ಶ. ದ ೧೦ನೇ ಶತಕದ ಈಚೆಯಲ್ಲಿ ಹುಟ್ಟಿರುತ್ತವೆ. ಈ ೧೧ ಲಿಪಿಗಳಲ್ಲಿ ಕೆಲವು ವೀರಗಲ್ಲುಗಳ ಮೇಲೆ ಇರುತ್ತವೆ.

THE MORAL TRAINING OF CHILDREN.

ಮಕ್ಕಳ ನೀತಿ ಶಿಕ್ಷಣವು.

(ಎರೀನೇ ಪುಟದಿಂದ ಮುಂದೆ ಸಾಗಿದ್ದು.)

೩. ಕೈಲಾದ ಮಟ್ಟಿಗೆ ಮಕ್ಕಳನ್ನು ನಂಬತಕ್ಕದ್ದು. ಅವರು ನಿಮ್ಮನ್ನು ಮೊದಲು ನಂಬಿಸವಿದ್ದರೆ, ಅವರ ನಂ

ತನ್ನು ನಂಬಲಿಕ್ಕೆ ಸಂಶಯ ಪಡಬಾರದು. ಆವರ ವಿಷಯದಲ್ಲಿ ನೀವು ಸಂಶಯ ಪಡಿಹತ್ತಿದರೆ ಅವರು ಹೆಚ್ಚು ಹೆಚ್ಚು ನಿಮಗೆ ಮೋಸ ಮಾಡಲಿಕ್ಕೆ ಹವಣಿಸುವರು. ಬಂದು ವೇಳೆ ಸಂಶಯಕ್ಕೆ ಕಾರಣವಿದ್ದರೆ ಅವರ ಮೇಲೆ ತಕ್ಷಣ ದಲ್ಲಿಯೇ ಸುಳ್ಳಾಡಿವ ದೋಷವನ್ನು ಹೊರಿಸ ಬಾರದು. ಮೊದಲು ಆದರ ವಿಷಯವಾಗಿ ಚನ್ನಾಗಿ ವಿಚಾರ ಮಾಡಿ ಅವರು ದೋಷಿಗಳೆಂದು ಕಂಡು ಬಂದರೆ ಮಾತ್ರ ಅವರ ಮೇಲೆ ಅಪರಾಧ ಹೊರಿಸಬೇಕು.

೪. ಎಲ್ಲ ಬಗೆಯ ವಂಚನೆಗಳಿಂದ ದೂರವಿರುವದಕ್ಕೆ ಮಕ್ಕಳನ್ನು ಎಚ್ಚರ ಪಡಿಸತಕ್ಕದ್ದು. ಸುಳ್ಳು, ಶಬ್ದಗಳಲ್ಲಿಯೇ ಮಾತ್ರವಲ್ಲ ಕೃತಿಗಳಲ್ಲಿಯೂ ಇರುತ್ತದೆ. ಮೈವಾಚ್ಚನ್ನದಿಂದಲೂ ಮಕ್ಕಳಿಗೆ ಅಪಾಯವಾಗುತ್ತದೆ; ಆದದ್ದರಿಂದ ಜಾಣರಾದ ತಾಯಂದಿರು ಅವನ್ನು ಮಕ್ಕಳಿಗೆ ತಕ್ಕಷ್ಟಕ್ಕಿಂತ ಹೆಚ್ಚು ಎಂದೂ ಕೊಡುವದಿಲ್ಲ. ಬಂದು ದಿವಸ ಊಟಕ್ಕೆ ಬಡಿಸುವಾಗ ಮಗನು ಬಂದು ದೊಡ್ಡ ಹೋಳಿಗೆಯನ್ನು ಮುರಿದು ಎಲಿಯ ಮೇಲಿಟ್ಟು ಮುಕ್ಕಾಲು ಪಾಲು ಹೋಳಿಗೆಯನ್ನು ಎಲಿಯ ಬುಡದಲ್ಲಿ ಮುಚ್ಚಿಟ್ಟನು. ಈ ಕೃತಿಯು ಅಸತ್ಯಸಂತಿಕೆಯ ಬಂದು ಮಾದರಿಯಾಗಿರುತ್ತದೆ.

ವ್ಯರ್ಥಿಗಳಾದ ಶಬ್ದಗಳನ್ನು ಉಪಯೋಗಿಸುವದು ಸಹ ಅಸತ್ಯಸಂತಿಕೆಯ ಬಂದು ಬಗೆ ಇರುತ್ತದೆ. ವಂಚಿಸುವ ಉದ್ದೇಶವಿಂದ ಎರವಲರ್ಥವ ಶಬ್ದಗಳನ್ನು ಉಪಯೋಗಿಸುವರು. ಇವರು ಸಹ ಸುಳ್ಳಾಡಿವ ದೋಷಕ್ಕೆ ಪಾತ್ರರೇ. ಮುಖಸ್ತುತಿಗೆ ಮರುಳಾಗುವವರು ಮೂರ್ಖರೂ ಮುಖಸ್ತುತಿಯನ್ನು ಮಾಡುವವರು ವಂಚಕರೂ ಎಂದು ಎಣಿಸಲ್ಪಡುತ್ತಾರೆ. ಅರಿಸ್ಟೈಡೀಜನೆಂಬ ಬಬ್ಬ ಗ್ರೀಸ ದೇಶದ ನಿವಾ

ಸಿಯು ಸತ್ಯವಂತಿಕೆಯ ಬಗ್ಗೆ ಬಹಳ ಹೆಸರಾಗಿದ್ದನು. ಅವನು ವಿನೋದವಲ್ಲಿ ಸಹ ಸುಳ್ಳಾಡುತ್ತಿದ್ದಿಲ್ಲ. ಮಕ್ಕಳು ಆಟವಲ್ಲಿಯೂ ಸುಳ್ಳಾಡಬಾರದು.

೫. ಮಕ್ಕಳು ಸತ್ಯವನ್ನೇ ಉಸುರುವಂತೆ ಅವರಿಗೆ ಉತ್ತೇಜನ ಕೊಡತಕ್ಕದ್ದು. ಸತ್ಯ ಮಾತಾಡುವದೂ, ತಮ್ಮ ಅಪರಾಧಗಳನ್ನು ನವ ಹೇಳದೆ, ಅನ್ಯರ ಮೇಲೆ ಹಾಕದೆ, ಅವರೊಳಗಿನ ಭಾಗವನ್ನು ಮಾಜಿಡದೆ ಸ್ಪಷ್ಟವಾಗಿ ಒಪ್ಪಿಕೊಳ್ಳುವದೂ ಘನವಾದ ಕೃತ್ಯಗಳೆಂದು ಮಕ್ಕಳು ತಿಳುಕೊಳ್ಳುವಂತೆ ಮಾಡತಕ್ಕದ್ದು. ಯಾವದಾದರೊಂದು ಸಂಗತಿಯನ್ನು ಹೇಳುವಾಗ್ಗೆ ಅದು ಇದ್ದಕ್ಕಿದ್ದ ಹಾಗಯೇ ಹೇಳುವಂತೆ ಮಾಡತಕ್ಕದ್ದು, ಅದಕ್ಕೆ ಉಪ್ಪು ಕಾರ ಹಚ್ಚಿ ಹೇಳುವದೂ, ಅವರಲ್ಲಿ ತುಸು ಬಿಟ್ಟು ಹೇಳುವದೂ ಸರಿ ಅಲ್ಲೆಂದು ಅವರಿಗೆ ತಿಳಿಸಿ ಕೊಡಬೇಕು. ಅಸತ್ಯವಾದ ಸಂಗತಿ ಸತ್ಯವಾದದ್ದೇ ಎಂದು ಅವರು ಎಂದೂ ನುಡಿಯದಂತೆ ಮಾಡಬೇಕು. ಪ್ಪುಲ್ಲಕತನ, ವಂಚಕತನ, ಪುಸಿತನ ಇವುಗಳ ಗಾಳಿಗೆ ಸಹ ಅವರು ನಿಲ್ಲದಂತೆ ಮಾಡಬೇಕು. ಬಂದು ಬೇಳೆ ಅವರು ಅವುಗಳಿಗೆ ಆಶ್ರಯ ಕೊಟ್ಟರೆ, ತಾಯಿ ತಂದೆಗಳು ತಮ್ಮ ಅಸಂತೋಷವನ್ನೂ ದುಃಖವನ್ನೂ ಹೊರಗೆಡಹತಕ್ಕದ್ದು.

೬. ವಂಚನೆಯಿಂದಾಗುವ ಕೆಟ್ಟಪರಿಣಾಮಗಳನ್ನು ಅವರಿಗೆ ತಿಳಿಸಿ ಹೇಳತಕ್ಕದ್ದು. ಸುಳ್ಳು, ಬಂದಿಲ್ಲ ಬಂದು ದಿವಸ ಕೊರ ಬೀಳುವದು. ಚೀನ ಭಾಷೆಯಲ್ಲಿ "ಸುಳ್ಳಿಗೆ ಕಾಲುಗಳಿಲ್ಲ, ಆದವ್ದರಿಂದ ಅದು ನಿಲ್ಲಲಾರದು. ಸತ್ಯವು ಶಾಶ್ವತವಾದದ್ದು. ಸುಳ್ಳಿನ ನಾಲಿಗೆಯು ಬೇಗನೆ ಬಿದ್ದು ಹೋಗುವದು." ಎಂಬ ಗಾದೆಯು ಇರುತ್ತವೆ. ಸುಳ್ಳುಗಾರನು

ಬಂದು ಮೇಳೆ ಸತ್ಯವನ್ನು ಹೇಳಿದರೂ ಜನರು ಅವನ ಮಾತು ನಂಬುವದಿಲ್ಲ. ಅವನು ತನ್ನ ಸುಳ್ಳು ಎಲ್ಲಿ ಹೊರ ಬೀಳುವದೋ ಎಂಬ ಹೆದರಿಕೆಯಲ್ಲಿಯೇ ಯಾವಾಗಲೂ ಇರುತ್ತಾನೆ. ಅವನ ಮನೋ ಸಾಕ್ಷಿಯು ನಿರಂತರ ಅವನನ್ನು ದೂಷಿಸುತ್ತಿರುತ್ತದೆ. ಮಕ್ಕಳು ಸುಳ್ಳಾಡಿದ್ದು ಜನರಿಗೆ ತಿಳಿಯದಿದ್ದರೂ ಸೃಷ್ಟಿ ಕರ್ತನಾದ ದೇವರಿಗೆ ಅದು ತಿಳಿಯುತ್ತದೆಂದು ಅವರಿಗೆ ತಿಳಿಸಿ ಹೇಳತಕ್ಕದ್ದು. ದೇವರಿಗೆ ಸತ್ಯವು ಸೇರುತ್ತದೆ, ಸತ್ಯವಂತರಿಗೆ ಅವನು ಮೆಚ್ಚುವನು. ಶಾಶ್ವತವಾದ ಪರಲೋಕದ ಸೌಖ್ಯಗಳನ್ನು ಕೊಡುವನು. ಸತ್ಯವಂತರಿಗೆ ಪರಲೋಕದ ಬಾಗಿಲುಗಳು ತೆರೆದಿರುವವು. ಅಸತ್ಯವಂತರಿಗೆ ಅದರ ದರ್ಶನವು ಸಹ ಆಗದು ಎಂಬ ಸಂಗತಿಗಳನ್ನು ಮಕ್ಕಳಿಗೆ ತಿಳಿಸಿ ಹೇಳತಕ್ಕದ್ದು.

ನ್ಯಾಯವೂ ಪ್ರಾಮಾಣಿಕತನವೂ: — ಪ್ರತಿ ಬಬ್ಬನಿಗೆ ಅವನ ಹಕ್ಕನ್ನು ಮುಟ್ಟಿಸುವದೇ ನ್ಯಾಯವು. ಚಿಕ್ಕ ಮಕ್ಕಳು ತಮ್ಮದಾಗಲಿ ಹಿರಿಯರದಾಗಲಿ ಕಂಡದ್ದೆಲ್ಲ ತನಗಿರಬೇಕೆಂದು ಬಯಸುವರು. ಆದದ್ದರಿಂದ ಚಿಕ್ಕಂದಿನಲ್ಲಿಯೇ ನ್ಯಾಯದಿಂದ ನಡೆಯುಲಿಕ್ಕೆ ಅಂದರೆ ಹಿರಿಯರ ಪದಾರ್ಥವನ್ನು ಬಯಸದೆ ಇರಲಿಕ್ಕೆ ಕಲಿಸಬೇಕು. ಅವರ ಪದಾರ್ಥಗಳನ್ನು ಯಾರಾದರೂ ತೆಗೆದುಕೊಂಡರೆ, ಅದು ನ್ಯಾಯವಾದದ್ದಲ್ಲೆಂದು ಅವರು ಸಹಜವಾಗಿಯೇ ನೆನಿಸುವರು. ಇದೇ ಮೇರೆಗೆ ಅವರಾದರೂ ಮತ್ತೊಬ್ಬರ ಬತವೆಗಳನ್ನು ತೆಗೆದುಕೊಳ್ಳುವದು ತಕ್ಕದ್ದಲ್ಲೆಂಬದನ್ನು ಕುರಿತು ಅವರನ್ನು ಮನಗಾಣಿಸಬೇಕು. ಕಳವು ಮಾಡುವದು ದೇವರ ದೃಷ್ಟಿಯಲ್ಲಿ ಬಂದು ದೊಡ್ಡ ಪಾಪವಿರುತ್ತದೆಂದು ಅವರಿಗೆ ತಿಳಿಸಿ ಕೊಡತಕ್ಕದ್ದು.

ಮಕ್ಕಳ ಕೈಯಲ್ಲಿರುವ ಬಡವೆಯನ್ನು ಜಾಲಿಮೆಯಿಂದ ಅನ್ಯರಿಗೆ ಕೊಡಿಸಬಾರದು. ಇಲ್ಲವೆ ಕಸುಕೊಳ್ಳಬಾರದು. ಈ ಮೂದರಿಯು ತಪ್ಪುಗಳು ಬಾರಿ ಬಾರಿಗೆ ವರ್ತಿಸುತ್ತವೆ. ಹುಡುಗನು ಕಜ್ಜಾಯವನ್ನು ತಿನ್ನುತ್ತಲಿದ್ದರೆ, ಚಿಕ್ಕ ಮಗುವು ಅದನ್ನು ಕೊಡು ತನಗೆ ಬೇಕೆಂದು ಅಳಹತ್ತುವದು. ತಾಯಿಯು ಇವನ್ನು ನೋಡಿ, ತಮ್ಮನಿಗೆ ಅದರೊಳಗಿನ ತುಸು ಚೂರನ್ನು ಕೊಡು ಎಂದು ಎಷ್ಟು ಹೇಳಿದರೂ ಅವನು ಕೊಡುವದಿಲ್ಲ. ಬಬ್ಬನ ನಿರ್ದಯವನ್ನೂ ಮತ್ತೊಬ್ಬನ ಪಲಬುವಿಕೆಯನ್ನೂ ತಾಯಿಯು ನೋಡಿ ಕಳವಳಗೊಂಡು ಹಿರಿಯುವನ ಕೈಯೊಳಗಿನ ಪದಾರ್ಥವನ್ನು ಅವನ ಅನುಮತಿ ಇಲ್ಲದಿದ್ದರೂ, ತುಸು ಮುರಿದು ಚಿಕ್ಕವನಿಗೆ ಕೊಡುವಳು. ಇವಕ್ಕೆ ಹಿರಿಯುವನು ತನ್ನ ಪದಾರ್ಥವನ್ನು ಬತ್ತಾಸುದಿಂದ ತಾಯಿ ಕಸುಕೊಂಡು ತನಗೆ ಅನ್ಯಾಯ ಮಾಡಿದಳೆಂದು ಅವಳ ಮೇಲೆ ಸಿಟ್ಟಾಗುವದಲ್ಲದೆ ತಮ್ಮನ ಮೇಲಿನ್ದ ಅವನ ಪ್ರೀತಿಯು ಕಡಿಮೆಯಾಗುವದು. ಅತ್ತರೆ ತನಗೆ ಬೇಡಿದ್ದು ಸಿಗುತ್ತದೆಂದು ಚಿಕ್ಕವನು ತಿಳುಕೊಳ್ಳುವನು.

ಮಕ್ಕಳು ತಮ್ಮ ಪದಾರ್ಥಗಳನ್ನು ಮತ್ತೊಬ್ಬರಿಗೆ ದೊಡ್ಡ ಮನಸಿನಿಂದ ಕೈಗಡವಾಗಲಿ, ಅತ್ತೀಯಾಗಲಿ ಕೊಡುವಂತೆ ಅವರ ಮನಸು ಬಲಿಸುತ್ತಿರಬೇಕು. ಅನ್ಯರಿಂದ ಕಡತಂದ ಪದಾರ್ಥಗಳನ್ನು ಲಕ್ಷಪೂರ್ವಕವಾಗಿ ಜೋಕೆಯಿಂದ ಉಪಯೋಗಿಸಲಿಕ್ಕೆ ಕಲಿಸಬೇಕು. ಅಣ್ಣನ ಪುಸ್ತಕವಾಗಲಿ ತಂಗಿಯ ಚಿತ್ರವಾಗಲಿ ಬೇಕಾಗಿದ್ದರೆ, ಅಣ್ಣಾ, ನಿನ್ನ ಪುಸ್ತಕವನ್ನು ದಯವಾಡಿ ನನಗೆ ಬಂದಿಷ್ಟು ಕೊಡುವಿಯಾ? ತಂಗೀ, ನಿನ್ನ ಚಿತ್ರವನ್ನು ಬಂದಿಷ್ಟು ನೋಡಲಾ? ಎಂದು ಕೇಳಿ ಅವರಿಂದ ಇಸುಕೊಳ್ಳಬೇಕು; ತಮ್ಮ ಕೆಲಸ ತೀರಿ

ದಕೂಡಲೇ ಅವುಗಳನ್ನು ತಕ್ಕ ಸ್ಥಳದಲ್ಲಿ ಜಾಗ್ರತೆಯಿಂದ ಇಡಬೇಕು. ತಮ್ಮ ಸ್ವಂತ ಒಡವೆಗಳಿಗಾಗಿ ಅಜಾಗ್ರತೆ ಪಡುವದರಿಂದುಂಟಾಗುವ ತಪ್ಪಿಗಿಂತ ಅನ್ಯರ ಒಡವೆಗಳಿಗೆ ಅಜಾಗ್ರತೆ ತೋರಿಸುವದು ಹೆಚ್ಚು ದೋಷಾರ್ಹವಾದದ್ದಿಂ ದು ಅವರಿಗೆ ತಿಳಿಸಿ ಹೇಳಬೇಕು. ಕೂಡಿದ ಪಕ್ಷಕ್ಕೆ ಅವರು ಕಳೆದ ಒಡವೆಗಳ ಬದಲು ಹೊಸ ಒಡವೆಗಳನ್ನು ಅವರ ಕೈಯಿಂದಲೇ ಭರ್ತಿ ಮಾಡಿಸಬೇಕು. ತಾಯಿ ತಂದೆಗಳು ಸ್ವತಃ ಉತ್ತಮ ರೀತಿಯಿಂದ ನಡಿದು ಮಕ್ಕಳಿಗೂ ಅದೇ ಮೇರೆಗೆ ನಡಿಯಲಿಕ್ಕೆ ಹಚ್ಚಬೇಕು. ಅವರು ನೆರೆ ಮನೆ ಯವರಿಂದ ಏನಾದರೂ ಕಡ ತಂದಿದ್ದರೆ, ಅದರ ವಿಷಯವಾಗಿ ಬಹಳ ಲಕ್ಷಕೊಡಲಿಕ್ಕೂ ಕೆಲಸ ತೀರಿದ ಕೂಡಲೇ, ಕೇಳಿ ಸಿಕೊಳ್ಳದೆಯೂ, ಅದರೊಳಗಿಂದ ತುಸುವಾದರೂ ತೆಗೆದುಕೊ ಳ್ಳದೆಯೂ ಅದನ್ನು ಇದ್ದಕ್ಕಿದ್ದ ಹಾಗೆಯೇ ತಿರುಗಿ ಮೈದು ಕೊ ಡಲಿಕ್ಕೂ ಮಕ್ಕಳಿಗೆ ಆಗ್ರಹ ಪೂರ್ವಕವಾಗಿ ಕಲಿಸಬೇಕು.

ಈ ಪದಾರ್ಥವು ತೀರ ಸಣ್ಣದು ಇದನ್ನು ತೆಗೆದುಕೊಂ ಡರೆ ಯಾರಿಗೂ ತಿಳಿಯಲಿಕ್ಕಿಲ್ಲೆಂದು ಮಕ್ಕಳು ಗ್ರಹಿಸುವ ದು ಎಷ್ಟು ಮಾತ್ರವೂ ಸರಿಯಲ್ಲ. ಬಂದು ಮೂವಿನ ಹಣ್ಣು ನ್ನು ಕಳವು ಮಾಡಿದ್ದಕ್ಕೂ ಬೂದು ಚಿನ್ನದ ಆಭರಣವನ್ನು ಕದ್ದು ಕೊಂಡದ್ದಕ್ಕೂ ಹಚ್ಚಿ ನೋಡಿದರೆ ಅಪರಾಧದ ಸಂ ಭಂಧದಿಂದ ಇವೆರಡೂ ಕೃತ್ಯಗಳು ಸರಿಯಾಗಿರುತ್ತವೆ. ಸಣ್ಣ ಸಣ್ಣ ಪದಾರ್ಥಗಳನ್ನು ಮೊದಲು ಕದಿಯುತ್ತ ಇದ್ದ ವರೇ ಮುಂದೆ ದೊಡ್ಡ ದೊಡ್ಡ ಕಳವುಗಳನ್ನು ಮಾಡಹೆ ತ್ತುತ್ತಾರೆ. ಆದದ್ದರಿಂದ ಮನೆಯೊಳಗಿನ ಯಾವದೊಂದು ಪದಾರ್ಥವನ್ನು ತಂದೆ ತಾಯಿಗಳನ್ನು ಕೇಳದೆ ತೆಗೆದುಕೊ ಳ್ಳದಂತೆ ಅವರಿಗೆ ಕಲಿಸಬೇಕು. ಬಂದು ಬಗೆಯಿಂದ ವಿಚಾ

ರ ಮಾಡಿದರೆ, ಹೆರವರ ಒಡವೆಗಳನ್ನು ಕಳವು ಮಾಡುವದ
ಕ್ಕಿಂತ ಮನೆಯೊಳಗಿನ ಒಡವೆಗಳನ್ನು ಕಳವು ಮಾಡುವ
ದು ಹೆಚ್ಚು ಕೆಟ್ಟದ್ದಿರುತ್ತದೆ. ದಾರಿಯಲ್ಲಿ ಸಿಕ್ಕಂಥ ಪದಾ
ರ್ಥಗಳನ್ನು ತಾವು ತೆಗೆದುಕೊಂಡರೆ ಏನೂ ದೋಷವಿಲ್ಲೆಂ
ದು ಮಕ್ಕಳು ಬಮ್ಮೊಮ್ಮೆ ಎಣಿಸುವರು. ಈ ತಿಳುವಳಿಕೆ
ಯು ಸರಿಯಾದದ್ದಲ್ಲೆಂದು ಅವರಿಗೆ ತಿಳಿಸಿ ಕೊಡತಕ್ಕದ್ದು.
ಅವರು ಕಳಕೊಂಡಂಥ ರೂಪಾಯಿಯು ಮತ್ತೊಬ್ಬ ಹುಡು
ಗನಿಗೆ ಸಿಕ್ಕದ್ದು ತಿಳಿದರೆ ಅವರು ಸುಮ್ಮನಿರುವರೋ?
ಇಲ್ಲ. ಇದೇ ಮಾತು ತಮ್ಮ ವಿಷಯದಲ್ಲಿಯೂ ಇರುತ್ತ
ದೆಂದು ಅವರು ತಿಳುಕೊಳ್ಳತಕ್ಕದ್ದು. ಅನ್ಯರ ಪದಾರ್ಥಗ
ಳು ಅಕಸ್ಮಾತ್ತಾಗಿ ಸಿಕ್ಕರೆ, ಅವುಗಳನ್ನು ತಮ್ಮ ಬಳಿಯ
ಲ್ಲಿ ಇಟ್ಟುಕೊಳ್ಳದೆ, ಕಳಕೊಂಡವರನ್ನು ಗೊತ್ತು ಹಚ್ಚಿ
ಅವರಿಗೆ ತಿರುಗಿ ಕೊಡಬೇಕು. ಮರವಿನಿಂದ ಯಾದಾದರೂ
ಪಣ ಕೊಟ್ಟರೆ, ಅದನ್ನು ಅವರಿಗೆ ಬಯ್ದು ಕೊಡಬೇಕು.
ಆಟನೋಟಗಳಲ್ಲಾದರೂ ಹುಡುಗರು ಪುಸಿ ವಂಚನೆಗಳ
ನ್ನು ಮಾಡಬಾರದು. ಒಬ್ಬನು ಬರೆದದ್ದನ್ನು ನಕಲು ಮಾ
ಡಿಕೊಂಡು ನಾನೇ ಬರೆದಿದ್ದೇನೆಂದು ಹೇಳುವದು ಅಪ್ರಾ
ಣಿಕತನದ ಕೃತ್ಯವು. ಮತ್ತೊಬ್ಬನದು ತನ್ನದೆಂದು ಹೇ
ಳುವದು ಕಳ್ಳತನವೇ ಸರಿ.

ಮಕ್ಕಳು ಸೂಲ ಮಾಡತಕ್ಕದ್ದಲ್ಲವೆಂದು ಅವರಿಗೆ ತಿಳ
ಹೇಳಬೇಕು. ಅವರು ಸೂಲಬಡಕರಾದರೆಂದರೆ, ಸುಳ್ಳಾ
ಡಲಿಕ್ಕೂ ವಂಚನೆ ಮಾಡಲಿಕ್ಕೂ ಹತ್ತುತ್ತಾರೆ. ಸೂಲ
ಕೊಟ್ಟವರು ಹಣದದೆಸೆಯಿಂದ ತಗಾದೆ ಹಚ್ಚಿದರೆ ತೀರಿತು
ಸುಳ್ಳಾಡಲಿಕ್ಕೂ ಕಳ್ಳತನಕ್ಕೂ ಅವರ ಮನಸು ಹರಿಯಹ
ತ್ತುವದು.

ಮಕ್ಕಳ ನಡುವೆ ಆಗಾಗ್ಗೆ ಸಣ್ಣ ಪುಟ್ಟ ಜಗಳಗಳೂ ವಾಗ್ವಾದಗಳೂ ಆಗುತ್ತಿರುತ್ತವೆ. ಇಂಥ ಪ್ರಸಂಗದಲ್ಲಿ ಅವರು ತಮ್ಮ ಜಗಳಗಳನ್ನು ತೀರಿಸಬೇಕೆಂದು ತಾಯಿ ತಂದೆಗಳ ಬಳಿಗೆ ಹೋಗುವರು. ಈ ಹೊತ್ತಿಗೆ ಮಕ್ಕಳು ತಮ್ಮ ತಮ್ಮ ದೂರುಗಳನ್ನು ಇದ್ದಕ್ಕಿದ್ದಹಾಗೆಯೇ ಹೇಳಲಿಕ್ಕೆ ಅವರಿಗೆ ಉತ್ತೇಜನ ಕೊಡಬೇಕು ಅವರು ಹೇಳಿದ್ದನ್ನು ಕೇಳಿಕೊಂಡು ತಾಯಿ ತಂದೆಗಳು ನಿಷ್ಪಕ್ಷಪಾತದಿಂದ ಅವರ ತಂಟೆಗಳನ್ನು ಬಗೆಹರಿಸಬೇಕು. ಒಬ್ಬರಿಗೊಂದು ಬಬ್ಬರಿಗೊಂದು ಮಾಡಬಾರದು. ಬಂದುವೇಳೆ ಪಕ್ಷಪಾತ ಮಾಡಿದರೆ, ಅದರಿಂದ ಬಹಳ ಕೆಟ್ಟ ಪರಿಣಾಮವಾಗುವದು. ಸಾಧಾರಣವಾಗಿ ತಾಯಿ ತಂದೆಗಳು ಎಲ್ಲಕ್ಕೂ ಚಿಕ್ಕವನಿಗೂ, ಬಮ್ಮೊಮ್ಮೆ ಮಗಳಿಗಿಂತ ಮಗನಿಗೂ ಅನುಗ್ರಹ ತೋರಿಸುವರು. ಇದರಿಂದ ಸ್ವತಃ ಆ ಚಿಕ್ಕವನಿಗೆ ಕೇಡಾಗುವದಲ್ಲದೆ ಮಕ್ಕಳಲ್ಲಿ ತಾಯಿ ತಂದೆಗಳ ವಿಷಯವಾಗಿಯೂ ಪರಸ್ಪರರ ವಿಷಯವಾಗಿಯೂ ವೈಮನಸ್ಯವುಂಟಾಗುವದು.

DHARWAR TRAINING COLLEGE CERTIFICATE EXAMINATION1894.—

ಕಾಲೇಜಿನ ಸರ್ಟಿಫಿಕೇಟ ಪರೀಕ್ಷೆಯ ಪ್ರಶ್ನೆಗಳು.

ಹಿನ್ನೇ ವರ್ಷದ ವರ್ಗ.

ಶಿಕ್ಷಣ ಶಾಸ್ತ್ರ.

(ಬಲಕ್ಕೆ ಬರೆದ ಅಂಕಿಗಳು ಪ್ರಶ್ನೆಗಳ ಪೂರ್ಣ ಗುಣಗಳು.)

೧. ಶಿಕ್ಷಣದ ಪ್ರಕಾರಗಳೆಷ್ಟು? ಯಾವವು? ಎಲ್ಲ ಪ್ರಕಾರದ ಶಿಕ್ಷಣವನ್ನು ಶಾಲೆಯಲ್ಲಿ ಕೊಡಬಹುದೋ? ನಿಮ್ಮ ಉತ್ತರವನ್ನು ಪೂರ್ಣವಾಗಿ ಬರೆಯಿರಿ.

೨. ಬುದ್ಧಿಶಿಕ್ಷಣಕ್ಕೂ ನೀತಿಶಿಕ್ಷಣಕ್ಕೂ ಸಂಬಂಧ ಉಂಟೋ? ನಿಮ್ಮ ಉತ್ತರವನ್ನು ಸಪ್ರಮಾಣವಾಗಿ ಬರೆಯಿರಿ.

೩. ಆರು ವರ್ಷಕ್ಕಿಂತ ಕಡಿಮೆ ವಯಸ್ಸಿನ ಹುಡುಗರಿಗೆ ಕಲಿಸಬೇಕಾದರೆ ಹ್ಯಾಗೆ ಕಲಿಸುವಿರಿ.

೪. ಸದ್ಯದ ಶಿಕ್ಷಣ ಕ್ರಮವು ವಿದ್ಯಾರ್ಥಿಗಳ ಪಠಣ ಶಕ್ತಿ ೧೦
ವನ್ನು ವಿಶೇಷವಾಗಿ ಅವಲಂಬಿಸಿರುತ್ತದೆಂದು ಲೋಕ ಪ್ರವಾದ ಉಂಟು. ಇದಕ್ಕೆ ಆಧಾರವುಂಟೋ ಇಲ್ಲೋ ಎಂಬುದನ್ನು ವಿವರಿಸಿ, ಈ ಪ್ರವಾದವನ್ನು ತಪ್ಪಿಸಲಿಕ್ಕೆ ನೀವು ನಿಮ್ಮ ಶಿಕ್ಷಣ ಕ್ರಮವನ್ನು ಹ್ಯಾಗೆ ಇಡುವಿರೆಂಬುದನ್ನು ಹೇಳಿರಿ.

೫. ಪ್ರಾಣಿವಿಷಯಕ ಪಾಠದ ಮುಖ್ಯಭಾಗಗಳು ಯಾವವು? "ಸಿಂಹದ" ಪಾಠದ ಟಿಪ್ಪಣಿಗಳನ್ನು ಬರೆಯಿರಿ. ೧೦

೬. ಶಾಲೆಯಲ್ಲಿ ಹಲವು ಬಿಳಕುಗಳ ಸಂಬಂಧದಿಂದ ನ್ಯೂನ ಸ್ಥಿತಿ ಹ್ಯಾಗಿರತಕ್ಕದ್ದು.

೭. ಉಕ್ತಲೇಖನದ ಪ್ರಯೋಜನವೇನು? ಇದನ್ನು ೧೦
ಯಾವಾಗ ಆರಂಭಿಸುವಿರಿ? ಉಕ್ತಲೇಖನವನ್ನು ಯಾವಾಗಲೂ ಸ್ಲೇಟಿನ ಮೇಲೆ ಬರೆಯಿಸುವಿರೋ? ಉತ್ತರವನ್ನು ಕಾರಣ ಸಹಿತವಾಗಿ ಬರೆಯಿರಿ.

೮. "ಲಘುತಮ ಸಾಧಾರಣಭಾಜ್ಯ" ಈ ಪಾಠದ ಸಂ ೧೦
ಬಂಧದಿಂದ ಕಲಿಸುವ ಟಿಪ್ಪಣಿಗಳನ್ನು ಬರೆಯಿರಿ.

೯. ನೀತಿಯ ಪ್ರವೃತ್ತಿಗಳೆಂದರೇನು? ವಿದ್ಯಾರ್ಥಿಗಳಲ್ಲಿ ೧೦
ಅವಶ್ಯವಾಗಿ ಹುಟ್ಟಿಸತಕ್ಕ ನೀತಿಯ ಗುಣಗಳು ಯಾವವು? ಅವುಗಳಲ್ಲೊಂದನ್ನು ಹುಟ್ಟಿಸುವ ಉಪಾಯಗಳನ್ನು ಹೇಳಿರಿ.

೧೦. ಶಾಬ್ದಿಕ ಮತ್ತು ತಾತ್ವಿಕ ಸ್ಮರಣಶಕ್ತಿಗಳಲ್ಲಿ ಭೇ ೧೦
ದವೇನು? ಶಾಬ್ದಿಕ ಸ್ಮರಣಶಕ್ತಿಯನ್ನು ಎಷ್ಟರ ಮಟ್ಟಿಗೆ ಬೆಳಿಸತಕ್ಕದ್ದು?

ಜಾಹೀರಾತು.

ಶಾಸ್ತ್ರೀಯ ಶಿಕ್ಷಣದ ಬಗ್ಗೆ ಉಪಕರಣಗಳು.

ಕೆಳಗೆ ಕೊಟ್ಟ ಉಪಕರಣಗಳು ನಮ್ಮ ಕಾರಖಾನೆಯಲ್ಲಿ ತಯಾರಾಗಿವೆ. ನಮ್ಮ ಕಾರ್ಯಾಲಯದ ವಿಳಾಸಕ್ಕೆ ಬರೆದಲ್ಲಿ, ನಾವು ನಮ್ಮ ಗಳಿಗೆ ಅವನ್ನು ತಲಿಸಿಕೊಡುವೆವು.—

ಗಾರ್ಡ್ ಮೂಲೆಯನ್ನೂ ಹಗಲುರಾತ್ರಿಗಳನ್ನೂ ಋತುಗಳ ಕಾರಣವನ್ನು ತೋರಿಸುವ ಯಂತ್ರಗಳು. ಗ್ರಹಗಳ ಗುಂಪು, ಬೇರೆ ಬೇರೆ ಗಳುಳ್ಳ ಪೃಥ್ವಿಯ ಗ್ಲೋಬುಗಳು, ಸೂಸ್ನೆ, ಗಡಗಡೆ, ರಾಟೆ, ಜಿಣ್ಣೆ, ಚಲು, ನಕಾಶಗಳು, ಭೂಗೋಲದೊಳಗಿನ ವ್ಯಾಪ್ತಿಗಳನ್ನು ಸೂಚಿಸುವ ರಿಲೀಫ್ ನಕಾಶಗಳು, ಕೆಂಡರಗಾರ್ಟನ್ ಬಡವೆಗಳು, ಕಾರಂಜಿ, ಬೇರೆ ಕಾರಖಾನೆಗಳಲ್ಲಿ ಉಪಯೋಗಿಸಲ್ಪಡುವ ಯಂತ್ರಗಳುಳ್ಳ ಪೆಟ್ಟಿಗೆ ಕಿರಣ ಪರಾವರ್ತನಯಂತ್ರ, ಸೈಫನ್ (ನಲಿಕಾಯಂತ್ರ), ನೀರಿನ ಸೆಳವಿಂದ ತಿರುಗುವ ಯಂತ್ರ, ವಿದ್ಯುದ್ಯಂತ್ರ, ಉಷ್ಣತೆಯ ಪ್ರಸರಣವನ್ನು ತೋರಿಸುವ ಬಳಿ-ಗುಂಡು, ಕಲ್ಲಿದ್ದಲಿಯ ಗ್ಯಾಸ್, ಚಿಕ್ಕಮಕ್ಕಳಿಗಾಗಿ ಮಾಡಿದ ಹಲಿಗೆಗಳು, ಕಬ್ಬಿನ ಜಾಲನ್ನು ತೆಗೆಯುವ ಯಂತ್ರ, ಕ್ಯಾಟಲಾಗ್ಗಳು, ಬುದ್ಧಿಕಲಿಸುತ್ತ್ಕತಿಗಳುಳ್ಳ ಪೆಟ್ಟಿಗೆ, ಪಿತ್ತಾಳೆಯ ಗುಂಡು ಕಬ್ಬಿಣದ ಬಂಗರುಗಳು ಸಹಿತವಾಗಿ, ಬೇರೆ ಬೇರೆ ಬಣ್ಣಗಳುಳ್ಳ ಪೆಟ್ಟಿಗೆ, ಗುರುತ್ವಾಕರ್ಷಣ ಬಿಂದುವನ್ನು ತೋರಿಸುವ ಯಂತ್ರ, ವರ್ಣಮಾಲೆಯ ಅಕ್ಷರಗಳುಳ್ಳ ಅವರಿಗಳು, ಜಿವಲ್ಲದೆ, ಜ್ಯೋತಿಷ, ರಸಾಯನ, ಗಣಿತ ಮೊದಲಾದ ವಿಷಯಗಳನ್ನು ತಿಳಿಸುವದಕ್ಕೆ ಉಚಿತಯುಕ್ತವಾದ ಉಪಕರಣಗಳು ಸ್ಟಾಕ್ಲಿ ದೊರೆಯುವವು.

ಇದಕ್ಕಾಗಿ ಹೆಚ್ಚಿನ ವಿವರಣೆಯ ಬಗ್ಗೆ ನಮ್ಮ ಕ್ರಯದ ಪಟ್ಟಿಯನ್ನು ಕಳಿಸುವದಕ್ಕೆ ನಮಗೆ ಬರೆದರೆ ಅದನ್ನು ಬೇಷ್ಟಾಗಿ ತಲಿಸುವೆವು. ವ್ಯವಹಾರವನ್ನು ಇಂಗ್ಲಿಷದಲ್ಲಿ ಮಾಡಬೇಕು.

ನಮ್ಮ ವಿಳಾಸ:—

ಪಟೇಲ ಕಾರ್ಖಾನೆ ಭಗವಾಡಾ

ವಿಶ್ವವಿದ್ಯಾಲಯ ಶಿಕ್ಷಣಸಂಸ್ಥೆ ಕಾರ್ಯಾಲಯ